₹ 6 @vishwavaninews epaper.vishwavani.news vishwavani.news ಬೆಂಗಳೂರು | ಹುಬ್ಬಳ್ಳಿ | ಮಂಗಳೂರು | ದಾವಣಗೆರೆ | ಕಲಬುರಗಿ | ಬೆಳಗಾವಿ ಭಾನುವಾರ 09.02.2025 ಸಂಪುಟ: 10 ಸಂಚಿಕೆ: 26 ಪುಟಗಳು: 10+4 ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್

ವಿಶ್ವವಾಣಿ

ವಿಶ್ವಾಸವೇ ವಿಶ್ವ

ರಣಜಿಯಲ್ಲೂ ಮಿಂಚಿದ ಕರುಣ್ ನಾಯರ್

ನಾಯರ್ ಶತಕದಾಟ: ದೇಶಿ ಟೂರ್ನಿಯಲ್ಲಿ 9ನೇ ಶತಕ ಸಿಡಿಸಿದ ಕನ್ನಡಿಗ. ರಣಜಿ ಟ್ರೋಫಿ ಕ್ವಾಟರ್ ಫೈನಲ್‌ನಲ್ಲಿ ತಮಿಳುನಾಡು ವಿರುದ್ಧ ಅಜೇಯ ಶತಕ.

26 ವರ್ಷಗಳ ಬಳಿಕ ಕೇಸರಿ ಪಕ್ಷಕ್ಕೆ ದಿಲ್ಲಿ ಗದ್ದುಗೆ | ಆಪ್‌ಗೆ ತಪ್ಪಿದ ಹ್ಯಾಟ್ರಿಕ್, ಕೇಜ್ರಿ ಕ್ರೇಜ್ ಅಂತ್ಯ

ಜೈಲು ಸೇರಿದ ನಾಯಕರಿಗೆ ಪೊರಕೆ ಸೇವೆ | ಕೈಗೆ ಹ್ಯಾಟ್ರಿಕ್ ಸೋಲು, 3ನೇ ಬಾರಿ ಶೂನ್ಯ ಸಾಧನೆ

ದಿಲ್ಲಿಯಲ್ಲಿ ಕಮಲ ಕಮಾಲ್

ದೆಹಲಿ: ರಾಷ್ಟ್ರ ರಾಜಧಾನಿಯ ವಿಧಾನಸಭೆ ಚುನಾ ವಣೆಯಲ್ಲಿ ಪೂರ್ಣ ಬಹುಮತ ದೊಂದಿಗೆ ಬಿಜೆಪಿ ಭರ್ಜರಿ ಜಯ ಸಾಧಿಸಿದೆ. ಈ ಮೂಲಕ ಮೂರನೇ ಬಾರಿಗೆ ಗದ್ದುಗೆ ಏರುವ ಆಮ್ ಆದ್ಮಿ ಪಕ್ಷದ ಹ್ಯಾಟ್ರಿಕ್ ಕನಸು ಭಗ್ನವಾಗಿದೆ. ಕಳೆದ ಎರಡು ಚುನಾವಣೆಗಳಲ್ಲಿ ಒಂದೂ ಸ್ಥಾನ ಗೆಲ್ಲದ ಕಾಂಗ್ರೆಸ್ ಮೂರನೆ ಬಾರಿಯೂ ಸೋತು ಮರ್ಮಾಘಾತ ಅನುಭವಿಸಿದೆ. ಬರೋಬ್ಬರಿ 26 ವರ್ಷ ಎರಡು ತಿಂಗಳ ಬಳಿಕ ರಾಷ್ಟ್ರ ರಾಜ ಧಾನಿಯಲ್ಲಿ ಕಮಲ ಅರಳಿರುವುದು ಕೇಸರಿ ಪಡೆಗೆ ಮತ್ತಷ್ಟು ಬಲ ಬಂದಂತಾಗಿದೆ.

70 ಸದಸ್ಯ ಬಲದ ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಬಿಜೆಪಿ 48 ಕ್ಷೇತ್ರಗಳಲ್ಲಿ ಜಯಭೇರಿ ಬಾರಿಸಿದೆ. ಈ ಮೂಲಕ ಹಿಂದೊಮ್ಮೆ ಭದ್ರಕೋಟೆಯಾಗಿದ್ದ ದಿಲ್ಲಿ ಯಲ್ಲಿ ಎರಡೂವರೆ ದಶಕಗಳ ಬಳಿಕ ಗದ್ದುಗೆ ಏರಲು ಸಜ್ಜಾಗಿದೆ. ಆಡಳಿತಾರೂಢ ಆಮ್ ಆದ್ಮಿ ಪಕ್ಷ 22 ಕ್ಷೇತ್ರಗಳಲ್ಲಿ ಗೆದ್ದಿದೆ. ಕಾಂಗ್ರೆಸ್ ಬಿರುಸಿನ ಪ್ರಚಾರದ ಹೊರತಾಗಿಯೂ ಒಂದೇ ಒಂದು ಸ್ಥಾನ ಗೆಲ್ಲಲು ವಿಫಲವಾಗಿದೆ.

ಸತತ ಎರಡು ಅವಧಿಗೆ (2015ರಿಂದ 2025ರವರೆಗೆ) ಅಧಿಕಾರ ನಡೆಸಿದ್ದ ಆಮ್ ಆದ್ಮಿ ಪಕ್ಷದ ಹ್ಯಾಟ್ರಿಕ್ ಕನಸು ಭಗ್ನವಾಗಿದೆ. ಭ್ರಷ್ಟಾಚಾರದ ಕಳಂಕ ಹೊತ್ತು ಜೈಲಿಗೆ ಹೋಗಿದ್ದ ಆಮ್ ಆದ್ಮಿ ಪಕ್ಷದ ಮುಖ್ಯಸ್ಥ ಹಾಗೂ ಮಾಜಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಹಾಗೂ ಮಾಜಿ ಉಪಮುಖ್ಯ ಮಂತ್ರಿ ಮನೀಶ್ ಸಿಸೋಡಿಯ ಇವರನ್ನು ಮತದಾರರು ತಿರಸ್ಕರಿಸಿದ್ದು, ಇವರಿಬ್ಬರು ಚುನಾವಣೆಯಲ್ಲಿ ಸೋತಿದ್ದಾರೆ. ದೆಹಲಿಯ ಹಾಲಿ ಮುಖ್ಯಮಂತ್ರಿ ಆತಿಶಿ ಮರ್ಲೇನಾ ಪ್ರಯಾಸದ ಗೆಲುವು ಸಾಧಿಸಿದ್ದು, ಮುಂದಿನ ಮುಖ್ಯಮಂತ್ರಿ ರೇಸ್‌ನಲ್ಲಿದ್ದ ರಮೇಶ್ ಬಿಧೂರಿ ಅವರನ್ನು ಸೋಲಿಸಿದ್ದಾರೆ.

26 ವರ್ಷಗಳ ನಂತರ ದೆಹಲಿಯಲ್ಲಿ ಬಿಜೆಪಿ ಮತ್ತೆ ಅಧಿಕಾರ ಹಿಡಿಯುವಲ್ಲಿ ಯಶಸ್ವಿಯಾಗಿರುವುದು ಬಿಜೆಪಿ ನಾಯಕರಲ್ಲಿ ಸಂಭ್ರಮ ಮನೆ ಮಾಡಿದೆ. ಕೇವಲ 10 ವರ್ಷಗಳ ಮುನ್ನ 15 ವರ್ಷ ಆಡಳಿತ ನಡೆಸಿದ್ದ ಕಾಂಗ್ರೆಸ್ ಮೂರನೇ ಬಾರಿ ಧೂಳೀಪಟವಾಗಿದೆ. ದೆಹಲಿ ಚುನಾವಣೆಯಲ್ಲಿ ಈ ಬಾರಿ ಕಮಲ ಅರಳಲಿದೆ ಎಂದು ಬಹುತೇಕ ಮತಗಟ್ಟೆ ಸಮೀಕ್ಷೆಗಳು ಹೇಳಿದ್ದು ನಿಜವಾಗಿದೆ. ಚುನಾವಣೆಯಲ್ಲಿ ಉಚಿತ ಯೋಜನೆಗಳನ್ನು ಜಾರಿ ಮಾಡುವ ಭರವಸೆಯನ್ನು ಪೈಪೋಟಿಗೆ ಬಿದ್ದವರಂತೆ ಮೂರು ಪಕ್ಷಗಳು ಘೋಷಣೆ ಮಾಡಿದ್ದವಾದರೂ ದೆಹಲಿಯ ಮತದಾರರು ಅಂತಿಮವಾಗಿ ಬಿಜೆಪಿಗೆ ಆಶೀರ್ವಾದ ಮಾಡಿದ್ದಾರೆ.

2015, ಮತ್ತು 2020ರಲ್ಲಿ ಬಹುಮತ ಪಡೆದಿದ್ದ ಆಮ್ ಆದ್ಮಿ ಪಕ್ಷ 2025ರ ಚುನಾವಣೆಯಲ್ಲೂ ಗೆಲ್ಲುವ ವಿಶ್ವಾಸ ಹೊಂದಿತ್ತು. ಆದರೆ ಭ್ರಷ್ಟಾಚಾರದ ವಿರುದ್ಧ ಹೋರಾಟ ನಡೆಸಿ ಜನರ ಮನೆ ಸೂರೆಗೊಂಡ ಪಕ್ಷ ಇದೀಗ ಅದೇ ಕಳಂಕದಲ್ಲಿ ಜನರಿಂದ ತಿರಸ್ಕೃತವಾಗಿದೆ. → 8

ಮುಂದಿನ ಸಿಎಂ ಯಾರು..?

ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಪ್ರಚಂಡ ಜಯ ಗಳಿಸಿದ ಬಿಜೆಪಿಯಲ್ಲಿ ಮುಂದಿನ ಮುಖ್ಯಮಂತ್ರಿ ಸ್ಥಾನಕ್ಕೆ ಹಲವು ಆಕಾಂಕ್ಷಿಗಳಿದ್ದಾರೆ. ರಾಜ್ಯ ಘಟಕದ ಅಧ್ಯಕ್ಷ ವೀರೇಂದ್ರ ಸಚ್‌ದೇವ, ಆಪ್ ವಿರುದ್ಧ ವ್ಯಾಪಕ ಪ್ರಚಾರ ಕೈಗೊಂಡು ಗಮನ ಸೆಳೆದ ಪರ್ವೇಶ್ ಸಿಂಗ್, ವಿಜೇಂದ್ರ ಗುಪ್ತ, ಕೈಲಾಶ್ ಗೆಹ್ಲೋಟ್ ಅವರಲ್ಲಿ ಪೈಪೋಟಿ ಇದೆ. ಪಕ್ಷದ ಶಾಸಕರ ಅಭಿಪ್ರಾಯ ಪಡೆದು ಮುಂದಿನ ಸಿಎಂ ಅಭ್ಯರ್ಥಿಯನ್ನು ಬಿಜೆಪಿ ನಿರ್ಧರಿಸಲಿದೆ. ಆದರೆ ಪ್ರಧಾನಿ ಮೋದಿ, ಗೃಹ ಸಚಿವ ಅಮಿತ್ ಶಾ ಮತ್ತು ರಾಷ್ಟ್ರೀಯ ಅಧ್ಯಕ್ಷ ಜೆ.ಪಿ ನಡ್ಡಾ ಈ ಬಗ್ಗೆ ಕೈಗೊಳ್ಳುವ ನಿರ್ಣಯವೇ ಅಂತಿಮವಾಗಲಿದೆ.

ಎರಡೂವರೆ ದಶಕಗಳ ಬಳಿ ದಿಲ್ಲಿಯಲ್ಲಿ ಗದ್ದುಗೆ ಹಿಡಿದ ಸಂಭ್ರಮದಲ್ಲಿ ಬಿಜೆಪಿ ಕಾರ್ಯಕರ್ತರು ಪ್ರಧಾನಿ ನರೇಂದ್ರ ಮೋದಿ ಅವರಿಗೆ ಹಾರ ಹಾಕಿ ಸನ್ಮಾನಿಸಿದರು.

ಗೆದ್ದ ಪ್ರಮುಖರು

ಪರ್ವೇಶ್ ವರ್ಮಾ, ಕೈಲಾಶ್ ಗೆಹ್ಲೋಟ್, ತರ್ವಿಂದರ್ ಸಿಂಗ್ ಮಾರ್ವಾ(ಬಿಜೆಪಿ)

ಆತಿಶಿ ಮರ್ಲೇನಾ(ಆಪ್)

ಅರವಿಂದರ್ ಸಿಂಗ್ ಲವ್ಲಿ (ಬಿಜೆಪಿ)

ಸೋತ ಪ್ರಮುಖರು

ಅರವಿಂದ ಕೇಜ್ರಿವಾಲ್, ಮನೀಶ್ ಸಿಸೋಡಿಯಾ, ಸೌರಭ ಭಾರದ್ವಾಜ್, ದುರ್ಗೇಶ್ ಪಾಠಕ್, ಸತ್ಯೇಂದ್ರ ಜೈನ್(ಆಪ್)

ರಮೇಶ್ ಬಿಧೂರಿ(ಬಿಜೆಪಿ)

ಅಲ್ಕಾ ಲಂಬಾ (ಕಾಂಗ್ರೆಸ್)

> ದೆಹಲಿ ವಿಧಾನಸಭೆ ಚುನಾವಣೆಯಲ್ಲಿ ಅಭೂತಪೂರ್ವ ಗೆಲುವು ದೊರಕಿಸಿ ಕೊಟ್ಟಿದ್ದಕ್ಕಾಗಿ ದೆಹಲಿ ಜನತೆಗೆ ಧನ್ಯವಾದ. ಜತೆಗೆ, ದೆಹಲಿಯ ಬಿಜೆಪಿ ಕಾರ್ಯಕರ್ತರಿಗೆ ಅಭಿನಂದನೆ. ಜನಶಕ್ತಿಯೇ ಸರ್ವಶ್ರೇಷ್ಠ. ಅಭಿವೃದ್ಧಿ ಗೆಲ್ಲುತ್ತದೆ, ಉತ್ತಮ ಆಡಳಿತ ಜಯ ಗಳಿಸುತ್ತದೆ. ಈ ಜನಾದೇಶದಿಂದ ನಾವು ಮತ್ತಷ್ಟು ವಿನೀತರಾಗಿದ್ದೇವೆ. ಜನರ ತೀರ್ಪು ಗೌರವಿಸುತ್ತೇವೆ. ದೆಹಲಿಯನ್ನು ಸಮಗ್ರವಾಗಿ ಅಭಿವೃದ್ಧಿಪಡಿಸುವ, ಜನರ ಒಟ್ಟಾರೆ ಜೀವನ ಗುಣಮಟ್ಟ ಸುಧಾರಿಸುವುದೇ ನಮ್ಮ ಗ್ಯಾರಂಟಿ. ವಿಕಸಿತ ಭಾರತ ನಿರ್ಮಾಣದಲ್ಲಿ ದೆಹಲಿ ಪ್ರಧಾನ ಪಾತ್ರ ವಹಿಸಲಿದೆ. ಈ ಬಗ್ಗೆ ಖಾತರಿ ನೀಡುತ್ತೇವೆ. ಇದುವೇ ನಮ್ಮ ಭರವಸೆ.
>
> – **ನರೇಂದ್ರ ಮೋದಿ,** ಪ್ರಧಾನ ಮಂತ್ರಿ

> ಚುನಾವಣೆಯಲ್ಲಿ ದೆಹಲಿ ಜನತೆ ನೀಡಿದ ತೀರ್ಪನ್ನು ವಿನಮ್ರವಾಗಿ ಒಪ್ಪಿಕೊಳ್ಳುತ್ತಿದ್ದೇವೆ. ಈ ಜಯಕ್ಕಾಗಿ ಬಿಜೆಪಿಯನ್ನು ನಾನು ಅಭಿನಂದಿಸುತ್ತೇನೆ. ತಮಗೆ ಮತನೀಡಿ ಅಧಿಕಾರಕ್ಕೆ ತಂದ ಜನತೆಗೆ ನೀಡಿದ ಭರವಸೆಗಳನ್ನು ಬಿಜೆಪಿ ಈಡೇರಿಸುತ್ತದೆಂಬ ವಿಶ್ವಾಸ ನನಗಿದೆ. ಆಮ್ ಆದ್ಮಿ ಪಕ್ಷ ಪ್ರತಿಪಕ್ಷವಾಗಿ ತನ್ನ ಹೊಣೆಯನ್ನು ನಿರ್ವಹಿಸಲಿದೆ.
>
> – **ಅರವಿಂದ ಕೇಜ್ರಿವಾಲ್,** ಮಾಜಿ ಸಿಎಂ



ಮುಸ್ಲಿಂ ಮತ ವಿಭಜನೆ

ದೆಹಲಿಯ ವಿಧಾನಸಭಾ ವ್ಯಾಪ್ತಿಯ ಮುಸ್ಲಿಂ ಪ್ರಾಬಲ್ಯದ ಕ್ಷೇತ್ರಗಳಲ್ಲಿಯೂ ಬಿಜೆಪಿ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ. 2015 ಮತ್ತು 2020ರ ಚುನಾವಣೆಯಲ್ಲಿ ಮುಸ್ಲಿಂ ಮತಗಳೆಲ್ಲವೂ ಒಟ್ಟಾಗಿ ಆಮ್ ಆದ್ಮಿ ಪಕ್ಷದ ಅಭ್ಯರ್ಥಿಗಳಿಗೇ ಚಲಾವಣೆ ಆಗಿದ್ದವು. ಆದರೆ, ಈ ಬಾರಿಯ ಚುನಾವಣೆಯಲ್ಲಿ ಎಎಪಿ ಪಾಲಿನ ಮುಸ್ಲಿಂ ಮತಗಳ ಬುಟ್ಟಿಗೆ ಕಾಂಗ್ರೆಸ್ ಕೈ ಹಾಕಿದೆ. ಕಾಂಗ್ರೆಸ್ ಈ ಬಾರಿ ವಿಧಾನಸಭೆ ಚುನಾವಣೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮುಸ್ಲಿಂ ಅಭ್ಯರ್ಥಿಗಳನ್ನೇ ಕಣಕ್ಕಿಳಿಸಿದೆ. ಆ ತಂತ್ರದಿಂದಾಗಿ ಮುಸ್ಲಿಂ ಮತಗಳು ಕಾಂಗ್ರೆಸ್ ಮತ್ತು ಎಎಪಿ ನಡುವೆ ಹಂಚಿ ಹೋಗುವಂತಾಗಿದೆ. ಇದೂ ಕೂಡಾ ಎಎಪಿ ಸೋಲಿಗೆ ಕಾರಣವಾಗಿದೆ.

ಬಿಜೆಪಿಯ ಪ್ರಚಂಡ ಗೆಲುವಿಗೆ ಕಾರಣ

1. ಪ್ರಧಾನಿ ಮೋದಿ, ಅಮಿತ್ ಶಾ ಸೇರಿದಂತೆ ಪ್ರಮುಖ ನಾಯಕರ ವ್ಯಾಪಕ ಪ್ರಚಾರ,
2. ಮತದಾರರನ್ನು ತಲುಪಿದ ಬಿಜೆಪಿ ಡಬಲ್ ಇಂಜಿನ್ ಘೋಷಣೆ, ಅಭಿವೃದ್ಧಿಗೆ ಕೇಂದ್ರದ ನೆರವು ಅತ್ಯಗತ್ಯ ಎಂದು ಬಿಂಬಿಸುವಲ್ಲಿ ಕಮಲ ತಂತ್ರದ ಮೇಲುಗೈ..
3. ಸರಣಿ ಸಭೆಗಳ ಮೂಲಕ ಕೇಜ್ರಿವಾಲ್ ನಿರ್ಲಕ್ಷಿಸಿದ್ದ ಮಧ್ಯಮ ವರ್ಗದವರ ತಲುಪಲು ಬಿಜೆಪಿ ಯಶಸ್ವಿ. ಆಪ್ ಸರಕಾರ ಕೇವಲ ಬಡವರಿಗೆ ಮಾತ್ರ ವಿದ್ಯುತ್ , ನೀರು ಪೂರೈಕೆ ಸೇರಿದಂತೆ ಉಚಿತ
4. ಉಚಿತ ಕೊಡುಗೆ ಸೇರಿದಂತೆ ಆಪ್ ಸರಕಾರದ ಯೋಜನೆಗಳು ನಿಲ್ಲದೆಂದು ದೆಹಲಿ ಜನತೆಗೆ ಮನವರಿಕೆ ಮಾಡುವಲ್ಲಿ ಸಫಲ
5. ರಸ್ತೆ, ನಾಗರಿಕ ಸಮಸ್ಯೆಗಳ ಕಾರಣ ಆಪ್ ಮಧ್ಯಮ ವರ್ಗದವರ ವಿಶ್ವಾಸ ಕಳೆದುಕೊಂಡಿದ್ದು..

ಆಮ್ ಆದ್ಮಿ ಸೋಲಿಗೆ ಪ್ರಮುಖ ಕಾರಣ

1. ಮೊದಲು ಅಭಿವೃದ್ಧಿ ಕಾರ್ಯಗಳಿಗಾಗಿ ಮೆಚ್ಚುಗೆ ಪಡೆದಿದ್ದ ಆಪ್ ಸರಕಾರ ನಂತರ ಆಶ್ವಾಸನೆಗಳ ಅಸಮರ್ಪಕ ಜಾರಿಯಿಂದ ಆಡಳಿತ ವಿರೋಧಿ ಅಲೆ..
2. ವಿಶ್ವಾದ್ಯಂತ ಗಮನಸೆಳೆದ ರಾಜಧಾನಿಯ ಹದಗೆಟ್ಟ ವಾಯು ಪರಿಸ್ಥಿತಿ ನಿರ್ವಹಿಸುವಲ್ಲಿ ಆಪ್ ಸರಕಾರ ವಿಫಲ
3. ಅಬಕಾರಿ, ಶೀಷ್‌ಮಹಲ್ ಸೇರಿದಂತೆ ಹಗರಣಗಳ ಸರಮಾಲೆ: ಕೇಜ್ರಿವಾಲ್ ಸಹಿತ ಪ್ರಮುಖ ನಾಯಕರು ಜೈಲಿನಲ್ಲಿ ಹೆಚ್ಚಿನ ಸಮಯ ಕಳೆದಿದ್ದರಿಂದ ಅಭಿವೃದ್ಧಿ ಕುಂಠಿತ, ಮೂಲಸೌಕರ್ಯ ಒದಗಿಸುವಲ್ಲಿ ವಿಫಲ
4. ಕೇಜ್ರಿವಾಲ್ ಸಿಎಂ ಸ್ಥಾನದಿಂದ ಕೆಳಗಿಳಿದ ನಂತರ ಆಡಳಿತದ ಮೇಲೆ ಹಿಡಿತ ಕಳೆದುಕೊಂಡ ಆತಿಶಿ, ಪ್ರಮುಖ ನಾಯಕರ ಅನುಪಸ್ಥಿತಿ.
5. ಕಾಂಗ್ರೆಸ್ ಜತೆ ಮೈತ್ರಿ ಮಾಡಿಕೊಳ್ಳದೆ ಏಕಾಂಗಿಯಾಗಿ ಚುನಾವಣೆಗೆ ಸ್ಪರ್ಧಿಸಿದ್ದು. ಆಪ್‌ನ ಮತ ಕಸಿದ ಕಾಂಗ್ರೆಸ್‌ನಿಂದ ಬಿಜೆಪಿಗೆ ಗೆಲುವು ಸುಲಭ.

ಸೊಂಪಾದ ಪುಟಗಳು

ಬಸ್ ಚಲಿಸುತ್ತಿರುವಾಗ ಚಾಲಕನೊಂದಿಗೆ ಮಾತಾಡುವುದು ಅಲ್ಲಿ ಅಪರಾಧ!
ಇದೇ ಅಂತರಂಗ ಸುದ್ದಿ ವಿಶ್ವೇಶ್ವರ ಭಟ್ 6


ಭಾರತದಲ್ಲಿ ಆದಾಯ ತೆರಿಗೆ: ಸಿಂಹಾವಲೋಕನ
ವಿದ್ಯಮಾನ ವಿನಾಯಕ ವೆಂ.ಭಟ್ಟ ಅಂಬ್ಲಿಹೊಂಡ 7

ದಾರಿದೀಪೋಕ್ತಿ

ಆತ್ಮವಿಶ್ವಾಸ ಅಂದ್ರೆ, ನಾನು ಉಳಿದವರೆಲ್ಲರಿಗಿಂತ ಶ್ರೇಷ್ಠ ಎಂದು ಭಾವಿಸುವುದಲ್ಲ. ಆದರೆ ಬೇರೆಯವರನ್ನು ನನ್ನ ಜತೆ ಹೋಲಿಸಿಕೊಳ್ಳಬೇಕಿಲ್ಲ ಮತ್ತು ಯಾರನ್ನಾದರೂ ಎದುರಿಸಬಲ್ಲೆ ಎಂಬುದನ್ನು ಮನನ ಮಾಡಿಕೊಳ್ಳುವುದು. ಆತ್ಮವಿಶ್ವಾಸಕ್ಕಿಂತ ದೊಡ್ಡ ಶಕ್ತಿ ಇನ್ನೊಂದಿಲ್ಲ.

ವಕ್ರತುಂಡೋಕ್ತಿ

ಯಾವತ್ತೂ ಸೈಜ್ ಮುಖ್ಯವಾಗುತ್ತದೆ. ಗ್ಲಾಸ್ ಮತ್ತು ಬಾಟಲಿ ಮಧ್ಯೆ ಸಾಕಷ್ಟು ವ್ಯತ್ಯಾಸವಿದೆ.

ತೊಗರಿಗೆ ಬೆಂಬಲ ಬೆಲೆ

ಬೆಂಗಳೂರು: ರಾಜ್ಯದಲ್ಲಿ ರೈತರು ಬೆಳೆಯುವ ಪ್ರತಿಯೊಂದು ಬೆಳೆಗೂ ಬೆಂಬಲ ಬೆಲೆ ನೀಡಲಾಗುತ್ತದೆ. ಇದರ ಪ್ರಕಾರ ತೊಗರಿ ಬೆಳೆಗಾರರಿಗೆ ಬೆಂಬಲ ಬೆಲೆ ಜತೆಗೆ 450 ರು. ಬೋನಸ್ ನೀಡುವುದಾಗಿ ರಾಜ್ಯ ಸರಕಾರ ಘೋಷಿಸಿದೆ. ಕೇಂದ್ರ ಸರ್ಕಾರದ ನಿಗದಿತ ಬೆಂಬಲ ಬೆಲೆ ಜತೆಗೆ 450 ರೂ ಬೋನಸ್ ನೀಡಲು ರಾಜ್ಯ ಸರಕಾರ ನಿರ್ಧರಿಸಿದೆ. ಇದುವರೆಗೆ ತೊಗರಿ ಬೆಳೆಗಾರರಿಗೆ 7,600 ರು. ಕೇಂದ್ರ ಬೆಂಬಲ ಬೆಲೆ ನೀಡುತ್ತಿದೆ. ಇದೀಗ ರಾಜ್ಯ ಸರಕಾರ ಕೂಡ ಪ್ರತಿ ಕ್ವಿಂಟಾಲ್ ತೊಗರಿಗೆ ಹೆಚ್ಚುವರಿಯಾಗಿ 450 ರುಪಾಯಿ ಸಹಾಯಧನ ನೀಡುವುದಾಗಿ ಹೇಳಿದ್ದು, ಈ ಬಗ್ಗೆ ಆಡಳಿತ ಇಲಾಖೆಯ ಪ್ರಸ್ತಾವನೆಗೆ ಆರ್ಥಿಕ ಇಲಾಖೆ ಅನುಮೋದನೆ ನೀಡಿದೆ.

ಮಾತಂದ್ರೆ ಮಾತು

ಹಗರಣಗಳು ಹಾಗೂ ಕೆಟ್ಟ ನಡತೆಯಿಂದಾಗಿ ಎಎಪಿಗೆ ಸೋಲಾಗಿದೆ. ಚುನಾವಣೆಯಲ್ಲಿ ಸ್ಪರ್ಧಿಸುವಾಗ ಅಭ್ಯರ್ಥಿಯ ವರ್ಚಸ್ಸು ಮುಖ್ಯ. ಒಳ್ಳೆಯ ಗುಣ-ನಡತೆ ಹೊಂದಿರಬೇಕು ಎಂದು ಬಹಳ ಹಿಂದೆಯೇ ಹೇಳಿದ್ದೆ. ಆದರೆ, ಅವರಲ್ಲಿ(ಎಎಪಿ) ಅಂತಹ ಗುಣಗಳೇ ಇರಲಿಲ್ಲ. ಹಾಗಾಗಿಯೆ ನಾನು ದೂರ ಉಳಿದೆ. ಅವರು(ಅರವಿಂದ್ ಕೇಜ್ರಿವಾಲ್) ಅಬಕಾರಿ ಹಗರಣದಲ್ಲಿ ಸಿಕ್ಕಿಕೊಂಡರು. ಪರಿಣಾಮ ಚುನಾವಣೆಯಲ್ಲಿ ಸೋತರು. ರಾಜಕೀಯದಲ್ಲಿ ಆರೋಪಗಳು ಎದುರಾದಾಗ ತಾನು ತಪ್ಪಿತಸ್ಥನಲ್ಲ ಎಂದು ಸಾಬೀತು ಪಡಿಸಬೇಕು.

– **ಅಣ್ಣಾ ಹಜಾರೆ** ಸಾಮಾಜಿಕ ಹೋರಾಟಗಾರ

ಫನ್‌ತರಂಗ

\- ರಘುಪತಿ ಶೃಂಗೇರಿ -



ಕನಿಷ್ಠ ಪ್ರಯಾಣ ದರ 10 ರು., ಗರಿಷ್ಠ ಪ್ರಯಾಣ ದರ 90 ರು. | ಸಾರ್ವಜನಿಕರಿಂದ ವ್ಯಾಪಕ ವಿರೋಧ | ಪಾಸ್ ದರದಲ್ಲೂ ಏರಿಕೆ, ಸ್ಮಾರ್ಟ್ ಕಾರ್ಡ್‌ಗೆ ಹೊಸ ನಿಯಮ | ಸ್ಮಾರ್ಟ್ ಕಾರ್ಡ್ ಮೇಲಿನ ಶೇ. 5, ರಜಾದಿನದ ಶೇ. 10 ರಷ್ಟು ರಿಯಾಯಿತಿ ಮುಂದುವರಿಕೆ

ಟಿಕೆಟ್ ದರ ಶೇ.46 ರಷ್ಟು ಹೆಚ್ಚಳ

ಮೆಟ್ರೋ ದುಬಾರಿ

ಬೆಂಗಳೂರು: ಬಿಎಂಟಿಸಿ, ಕೆಎಸ್‌ಆರ್‌ಟಿಸಿ ಬಸ್ ಪ್ರಯಾಣದ ದರ ಹೆಚ್ಚಳದ ಬೆನ್ನಲ್ಲೇ ಬೆಂಗಳೂರು ನಗರದ ಸಾರ್ವಜನಿಕ ಸಾರಿಗೆಗಳಲ್ಲಿ ಪ್ರಮುಖ ಸಾರಿಗೆ ಸಂಸ್ಥೆಯಾದ ನಮ್ಮ ಮೆಟ್ರೋ ಪ್ರಯಾಣ ದರ ಪರಿಷ್ಕರಣೆ ಮಾಡಲಾಗಿದೆ. ಮೆಟ್ರೋ ಟಿಕೆಟ್ ದರ ಶೇ.46 ರಷ್ಟು ಏರಿಕೆಯಾಗಿದ್ದು, ಇಂದಿನಿಂದ (ಭಾನುವಾರ) ಜಾರಿಯಾಗಲಿದೆ. ದರ ಹೆಚ್ಚಳಕ್ಕೆ ಸಾರ್ವಜನಿಕರಿಂದ ವಿರೋಧ ವ್ಯಕ್ತವಾಗಿದೆ.

ಕಳೆದ 8 ವರ್ಷಗಳಿಂದ ಮೆಟ್ರೋ ದರದಲ್ಲಿ ಯಾವುದೇ ರೀತಿಯ ಬದಲಾವಣೆ ಮಾಡಿರಲಿಲ್ಲ. ಆದ್ರೆ ಇದೀಗ ಮೆಟ್ರೋ ದರದಲ್ಲಿ, ಪಾಸ್ ದರದಲ್ಲಿ ಏರಿಕೆ ಮತ್ತು ಸ್ಮಾರ್ಟ್ ಕಾರ್ಡಿಗೆ ಹೊಸ ನಿಯಮವನ್ನು ಜಾರಿಗೆ ತಂದಿದೆ. ಮೆಟ್ರೋ ರೈಲ್ವೆ (ಕಾರ್ಯಾಚರಣೆ ಮತ್ತು ನಿರ್ವಹಣೆ) 2002ರ ಸೆಕ್ಷನ್ 37ರ ಕಾಯ್ದೆ ಪ್ರಕಾರ ದರ ಪರಿಷ್ಕರಣೆ ಸಮಿತಿಯು ಮಾಡಿದ ಶಿಫಾರಸುಗಳು ಮೆಟ್ರೋ ರೈಲ್ವೆ ಆಡಳಿತದ ಮೇಲೆ ಬದ್ಧವಾಗಿದೆ.

ದರ ಪರಿಷ್ಕರಣೆಗೆ ಸಮಿತಿ ರಚನೆ

ಮೆಟ್ರೋ ರೈಲ್ವೆ 2002ರ ಸೆಕ್ಷನ್ 34 ಕಾಯಿದೆ ಅಡಿಯಲ್ಲಿ, ಕೇಂದ್ರ ಸರಕಾರ 2024 ಅಕ್ಟೋಬರ್ 7ರಂದು ಹೈಕೋರ್ಟ್ ಮಾಜಿ ನ್ಯಾಯಾಧೀಶರ ಅಧ್ಯಕ್ಷತೆಯಲ್ಲಿ ದರ ಪರಿಷ್ಕರಣೆಗಾಗಿ ಸಮಿತಿಯನ್ನು ರಚಿಸಲಾಗಿತ್ತು. ದರ ಪರಿಷ್ಕರಣೆ ಸಮಿತಿಯು ಪರಿಷ್ಕೃತ ದರದ ಶಿಫಾರಸು ವರದಿಯನ್ನು ಡಿ.16ರಂದು ಸಲ್ಲಿಸಲಾಗಿತ್ತು. ಶಿಫಾರಸುಗಳ ಪ್ರಕಾರ ಈ ದರ ನಿಗದಿಪಡಿಸಲಾಗಿದೆ. ದರ ಪರಿಷ್ಕರಣೆಯನ್ನು ಮೆಟ್ರೋ ಸಂಸ್ಥೆಯ ಆರ್ಥಿಕ ಸುಸ್ಥಿರತೆ ಮತ್ತು ಪ್ರಯಾಣಿಕರಿಗೆ ಬೆಲೆ ಕೈಗೆಟುಕುವಂತಿರಬೇಕೆನ್ನುವ ದೃಷ್ಟಿಯಲ್ಲಿ ಸಮತೋಲನ ಕಾಯ್ದುಕೊಂಡು ಟಿಕೆಟ್ ಬೆಲೆ ಹೆಚ್ಚಳ ಮಾಡಲಾಗಿದೆ. ಸ್ಮಾರ್ಟ್‌ಕಾರ್ಡುಗಳಿಗೆ ನೀಡುತ್ತಿರುವ ಶೇ.5 ರಷ್ಟು ರಿಯಾಯಿತಿ ಮುಂದುವರಿಸಲಾಗಿದೆ.

ಆಫ್-ಪೀಕ್ ಸಮಯ

ವಾರದ ದಿನಗಳಲ್ಲಿ, ಬೆಳಗೆ ಕಾರ್ಯಾಚರಣೆ ಆರಂಭದಿಂದ 8 ಗಂಟೆಯವರೆಗೆ, ಮಧ್ಯಾಹ್ನ 12 ಗಂಟೆಯಿಂದ 4 ಗಂಟೆಯವರೆಗೆ ಮತ್ತು ರಾತ್ರಿ 9 ಗಂಟೆಯಿಂದ ಕಾರ್ಯಾಚರಣೆ ಮುಕ್ತಾಯದವರೆಗೆ. ಆದರೆ ಸ್ಮಾರ್ಟ್‌ಕಾರ್ಡ್‌ನಲ್ಲಿ ಕನಿಷ್ಠ ಹಣವನ್ನು 90 ರುಪಾಯಿಗಳಿಗೆ ನಿಗದಿಪಡಿಸಲಾಗಿದೆ. ಪ್ರತಿ ಭಾನುವಾರ ಮತ್ತು ರಾಷ್ಟ್ರೀಯ ರಜಾದಿನಗಳಂದು ಸ್ಮಾರ್ಟ್ ಕಾರ್ಡ್‌ಗಳ ಮೇಲೆ ಶೇ.10 ರಷ್ಟು ರಿಯಾಯಿತಿ ನೀಡಲಾಗುತ್ತದೆ. ಈ ಮೊದಲು ಕನಿಷ್ಠ 10 ರಿಂದ ಗರಿಷ್ಠ 60 ರು. ವರೆಗೆ ಟಿಕೆಟ್ ದರ ಇತ್ತು. ಈಗ ದರ ಪರಿಷ್ಕರಣೆಯಿಂದ ಕನಿಷ್ಠ 10 ರಿಂದ 90 ರು. ವರೆಗೆ ಏರಿಸಲಾಗಿದೆ.

ಪರಿಷ್ಕೃತ ಟಿಕೆಟ್ ದರ

ಕಿ.ಮೀ	ದರ ಏರಿಕೆ
0-2	10 ರು.
2-4	20 ರು.
4-6	30 ರು.
6-8	40 ರು.
8-10	50 ರು.
10-15	60 ರು.
15-20	70 ರು.
20-25	80 ರು.
25-30	90 ರು.
30 ಕ್ಕಿಂತ ಹೆಚ್ಚು	90 ರು.

ಸಣ್ಣಪುಟ್ಟ ತಿದ್ದುಪಡಿಗಳೊಂದಿಗೆ ವಿಧೇಯಕಕ್ಕೆ ಅಂಕಿತ ಕೋರಿ ರಾಜ್ಯಪಾಲರಿಗೆ ರವಾನೆ | ಬ್ಯಾಂಕಿಂಗೇತರ ಕಂಪನಿಗಳ ನಿಯಂತ್ರಣ ರಾಜ್ಯ ಸರಕಾರದ ವ್ಯಾಪ್ತಿಗೆ ಬರದು | ರಾಜ್ಯಪಾಲರ ನಿರ್ಧಾರದ ನೋಡಿ ಮುಂದಿನ ಕ್ರಮ: ಸಚಿವ ರಾಜಣ್ಣ

ಮೈಕ್ರೋ ಫೈನಾನ್ಸ್‌ಬಿಲ್ ಮತ್ತೆ ಗವರ್ನರ್ ಅಂಗಳಕ್ಕೆ

ವಿಶ್ವವಾಣಿ ಸುದ್ದಿಮನೆ

ಬೆಂಗಳೂರು/ ಕೊಪ್ಪಳ: ಮೈಕ್ರೋ ಫೈನಾನ್ಸ್ ಮೇಲೆ ನಿಯಂತ್ರಣ ಸಾಧಿಸಲು ರಾಜ್ಯ ಸರಕಾರಕ್ಕೆ ಅವಕಾಶ ಇಲ್ಲವೆಂಬ ಕಾರಣಕ್ಕೆ ಸುಗ್ರಿವಾಜ್ಞೆ ರೂಪಿಸಲಾಗಿತ್ತು. ರಾಜ್ಯಪಾಲರು ಸ್ಪಷ್ಟನೆ ಕೇಳಿ ವಾಪಸ್ ಕಳುಹಿಸಿದ್ದರು, ಸೂಕ್ತ ವಿವರಣೆಯೊಂದಿಗೆ ಮತ್ತೆ ಮಸೂದೆ ಯನ್ನು ರಾಜಭವನಕ್ಕೆ ರವಾನಿಸಲಾಗಿದೆ ಎಂದು ಸಹಕಾರ ಸಚಿವ ಕೆ.ಎನ್.ರಾಜಣ್ಣ ತಿಳಿಸಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಮೈಕ್ರೊ ಫೈನಾನ್ಸ್ ವಲಯದಲ್ಲಿ ಉತ್ತಮವಾಗಿ ಕೆಲಸ ಮಾಡುವ ಸಂಸ್ಥೆಗಳಿವೆ. ಅದೇ ರೀತಿ ಕೆಟ್ಟದಾಗಿ ಕೆಲಸ ಮಾಡುವ ಸಂಸ್ಥೆಗಳು ಇವೆ. ನಾನ್ ಬ್ಯಾಂಕಿಂಗ್ ಫೈನಾನ್ಸ್ ಕಂಪನಿಗಳು ಬ್ಯಾಂಕಿಂಗ್ ರೆಗ್ಯುಲೇಷನ್ ಆ್ಯಕ್ಟ್ ನಲ್ಲಿ ನೋಂದಣಿಯಾಗಿರುತ್ತವೆ. ಅವುಗಳನ್ನು ನಿಯಂತ್ರಿಸಲು ರಾಜ್ಯ ಸರಕಾರಗಳಿಗೆ ಅಧಿಕಾರ ಇರುವುದಿಲ್ಲ. ನೇರವಾಗಿ ಆರ್‌ಬಿಐ ನಿಯಂತ್ರಣ ಮಾಡಬೇಕಾಗುತ್ತದೆ ಎಂದರು.

ಕೃಷಿಕರಿಗೆ ಸಾಲ ಸಿಗುತ್ತಿಲ್ಲ: ಚಿನ್ನಾಭರಣದ ಸಾಲವನ್ನು ಕೃಷಿ ಸಾಲ ಎಂದು ಪರಿಗಣಿಸಲಾಗಿದೆ. ಇದನ್ನು ಆಧರಿಸಿ ಕೇಂದ್ರ ಹಣಕಾಸು ಇಲಾಖೆ ಮತ್ತು ನಬಾರ್ಡ್ ಕೃಷಿ ವಲಯಕ್ಕೆ ಈಗಾಗಲೇ ಹೆಚ್ಚಿನ ಸಾಲ ನೀಡಲಾಗಿದೆ ಎಂದು ಭಾವಿಸಿ ನಬಾರ್ಡ್ ನಿಂದ ರಾಜ್ಯಕ್ಕೆ ನೀಡಲಾಗುತ್ತಿದ್ದ ಸಾಲದ ಪ್ರಮಾಣ ಕಡಿತ ಮಾಡಲಾಗಿದೆ. ಇದರ ಪರಿಣಾಮ ಕೃಷಿಕರಿಗೆ ಬ್ಯಾಂಕ್‌ಗಳಿಂದ ಸಾಲ ಸಿಗುತ್ತಿಲ್ಲ. ಖಾಸಗಿ ಫೈನಾನ್ಸ್ ಸಂಸ್ಥೆಗಳ ಮೊರೆ ಹೋಗುತ್ತಿದ್ದಾರೆ ಎಂದು ಸಚಿವ ರಾಜಣ್ಣ ವಿವರಿಸಿದರು. ಡಿಸಿಸಿ ಬ್ಯಾಂಕುಗಳು ನಬಾರ್ಡ್ ಮತ್ತು ಅಪೆಕ್ಸ್ ಬ್ಯಾಂಕ್‌ಗಳಿಂದ ಸಾಲ ಪಡೆದು ಸಾಲ ನೀಡುತ್ತವೆ. ಇದಕ್ಕೆ ಸರಕಾರದ ಅನುದಾನ ಇರುವುದಿಲ್ಲ. ಸಾಲದ ಮೊತ್ತವನ್ನು ಠೇವಣಿ ಹಣದಿಂದ ಕೊಡಲಾಗುತ್ತಿದ್ದು, ಹಣಕಾಸಿನ ಲಭ್ಯತೆಯಿಂದಾಗಿ ಸಾಲ ನೀಡುವುದರಲ್ಲಿ ಸಮಸ್ಯೆ ಆಗುತ್ತಿದೆ. ಗೃಹಲಕ್ಷ್ಮಿ ಯೋಜನೆಯಡಿ ಹಣ ಸಂದಾಯವಾಗಲಿದೆ. ಇದರಲ್ಲಿ ಯಾವುದೇ ಗೊಂದಲವಿಲ್ಲ. ತಾಂತ್ರಿಕ ಕಾರಣಗಳಿಗಾಗಿ ಒಂದು ತಿಂಗಳು ತಡ ಆಗಿರಬಹುದು. ಆದರೆ ಗ್ಯಾರಂಟಿ ಯೋಜನೆಗಳ ಪೂರ್ಣ ಹಣ ಫಲಾನುಭವಿಗಳಿಗೆ ಸಂದಾಯವಾಗುತ್ತದೆ. ಯಾವುದೇ ಯೋಜನೆಗಳನ್ನು ನಿಲ್ಲಿಸುವುದಿಲ್ಲ ಎಂದರು.

ಸುಗ್ರೀವಾಜ್ಞೆ ತಿರಸ್ಕರಿಸಿಲ್ಲ

ರಾಜ್ಯಪಾಲರು ಮೈಕ್ರೊ ಫೈನಾನ್ಸ್ ಸುಗ್ರಿವಾಜ್ಞೆ ತಿರಸ್ಕರಿಸಲಿಲ್ಲ, ಇದರಲ್ಲಿ ಶಿಕ್ಷೆಯ ಪ್ರಮಾಣ ಹೆಚ್ಚಿದೆ. ಹೀಗಿದ್ದರೆ ಸಾಲ ನೀಡಲು ಯಾರು ಮುಂದೆ ಬರುತ್ತಾರೆ, ಇದರಿಂದ ಬಡ ಜನರಿಗೆ ತೊಂದರೆ ಆಗುತ್ತದೆ ಎಂದು ಕೆಲ ಸ್ಪಷ್ಟನೆ ಕೇಳಿದ್ದರು. ಅದಕ್ಕೆ ಸೂಕ್ತ ವಿವರಣೆಯೊಂದಿಗೆ ಮತ್ತೆ ರಾಜಭವನಕ್ಕೆ ಎರಡನೇ ಬಾರಿ ರವಾನಿಸಲಾಗಿದೆ. ರಾಜ್ಯಪಾಲರ ಯಾವ ನಿರ್ಧಾರ ತೆಗೆದುಕೊಳ್ಳುತ್ತಾರೆ. ಮನಿ ಲ್ಯಾಂಡರಿಂಗ್ ಆ್ಯಕ್ಟ್ ಅನ್ನು ಸಹಕಾರ ಇಲಾಖೆ ಬಳಕೆ ಮಾಡಿ ಅಧಿಕ ಬಡ್ಡಿ ವಸೂಲಿ ಮಾಡುವ ಸಂಸ್ಥೆಗಳ ಮೇಲೆ ಕ್ರಮ ಕೈಗೊಳ್ಳಲು ಸಾಧ್ಯವಿದೆ. 2004ರಲ್ಲಿ ಕಾಯ್ದೆಗೆ ತಿದ್ದುಪಡಿ ಮೂಲಕ ಇದಕ್ಕೆ ಅವಕಾಶ ಮಾಡಿಕೊಡಲಾಗಿದೆ. ಹಣಕಾಸು ಸಂಸ್ಥೆಗಳು ಸಾಲ ನೀಡಿ, ವಸೂಲಿಯ ಪ್ರಕ್ರಿಯೆಯನ್ನು ಹೊರಗುತ್ತಿಗೆಗೆ ನೀಡುತ್ತಿವೆ. ಇದಕ್ಕೆ ಕಡಿವಾಣ ಹಾಕಲು ರಾಜ್ಯಸರಕಾರ ಸುಗ್ರಿವಾಜ್ಞೆ ರೂಪಿಸಿದೆ ಎಂದು ರಾಜಣ್ಣ ಹೇಳಿದರು.

ಸಿಎಂ ಸಿದ್ದು ಇನ್ನಷ್ಟು ಬಲಿಷ್ಟ | ಬದಲಾವಣೆ ಕಷ್ಟ, ವರಿಷ್ಠರಿಗೆ ಡಿಸಿಎಂ ಅನಿವಾರ್ಯ

ಹೈಕಮಾಂಡ್ ಕರ್ನಾಟಕದ ಕೈ ವಶ

ಶಿವಕುಮಾರ್ ಬೆಳ್ಳಿತಟ್ಟೆ

ಬೆಂಗಳೂರು: ಐತಿಹಾಸಿಕ ರಾಷ್ಟ್ರೀಯ ಪಕ್ಷ ಕಾಂಗ್ರೆಸ್ ದಿಲ್ಲಿ ಚುನಾವಣೆಯಲ್ಲಿ ಮಾಡಿದ ಶೂನ್ಯ ಸಂಪಾದನೆ ಪಕ್ಷದ ಅನಿವಾರ್ಯಗಳು, ಅವಲಂಬನೆಗಳು ಹಾಗೂ ಅಪಾಯಗಳನ್ನು ಹೆಚ್ಚಿಸುವಂತೆ ಕಾಣುತ್ತಿದೆ. ದೇಶದ ರಾಜಧಾನಿ ದೆಹಲಿಯಿಂದಲೇ ಎಲ್ಲವನ್ನೂ ನಿಯಂತ್ರಿಸುತ್ತಿದ್ದ ಪಕ್ಷದ ಹೈಕಮಾಂಡ್ ಒಂದು ರೀತಿಯಲ್ಲಿ ಪರೋಕ್ಷವಾಗಿ ದಕ್ಷಿಣ ಭಾರತಕ್ಕೆ ಸ್ಥಳಾಂತರಗೊಂಡಂತಾಗಿದೆ.

ಅದರಲ್ಲೂ ಪಕ್ಷವನ್ನು ಮುನ್ನಡೆಸುವ ಜವಾಬ್ದಾರಿ ರಾಜ್ಯದ ನಾಯಕರ ಹೆಗಲಿಗೆ ಶಿಫ್ಟ್ ಆಗುವಂತೆ ಗೋಚರಿಸುತ್ತಿದೆ. ಇದು ಪ್ರತಿಪಕ್ಷ ಬಿಜೆಪಿಯವರು ಮಾಡುತ್ತಿರುವ ವ್ಯಂಗದ ಮಾತಲ್ಲ. ಬದಲಾಗಿ ಕಾಂಗ್ರೆಸ್ ನಾಯಕರ ವಲಯದಲ್ಲೇ ಚರ್ಚೆಯಾಗುತ್ತಿರುವ ಸಂಗತಿ.

ಕಳೆದೊಂದು ವರ್ಷದಲ್ಲಿ ಕಾಂಗ್ರೆಸ್ ದೇಶದಲ್ಲೇ ಸತತ ಸೋಲುಗಳಿಂದ ಹೆಸರು ಮಾಡಿದೆ. ಲೋಕಸಭಾ ಚುನಾವಣೆಗೂ ಮುನ್ನ ಮಹತ್ವದ ಉತ್ತರ ಪ್ರದೇಶ ರಾಜ್ಯದ ದೊಡ್ಡ ಸೋಲಿನ ನಂತರ ಹರಿಯಾಣ, ಮಹಾರಾಷ್ಟ್ರ, ಅರುಣಾಚಲ ಪ್ರದೇಶದಲ್ಲಿ ಕಾಂಗ್ರೆಸ್ ಕೆಟ್ಟದಾಗಿ ಸೋಲುಗಳನ್ನು ಉಂಡಿದೆ. ಇದರೊಂದಿಗೆ ಕಾಂಗ್ರೆಸ್‌ನ ಎಲ್ಲಾ ಚುನಾವಣಾ ರಣನೀತಿಗಳೂ ವಿಫಲವಾದಂತಾಗಿದ್ದು, ಇವರನ್ನು ನಂಬಿ ಚುನಾವಣೆ ಸಮರಕ್ಕೆ ಇಳಿಯಲು ರಾಜ್ಯಗಳ ನಾಯಕರು ಮರು ಚಿಂತನೆಗಳನ್ನು ಮಾಡಬೇಕಾದ ಸ್ಥಿತಿ ಇವೆ.

ಪಕ್ಷದ ಹೈಕಮಾಂಡ್ ಪ್ರತಿ ಸೋಲಿನಲ್ಲೂ ರಾಜ್ಯಗಳ ನಾಯಕರ ಮೇಲೆ ತನ್ನ ಹಿಡಿತ ಕಳೆದುಕೊಳ್ಳುವ ಆತಂಕ ಎದ್ದುಕಾಣುತ್ತಿದೆ. ಇಂಥ ಸ್ಥಿತಿಯಲ್ಲಿ ಪಕ್ಷವನ್ನು ಉಳಿಸಿ, ಬೆಳೆಸಬೇಕಾದ ದೊಡ್ಡ ಜವಾಬ್ದಾರಿ ಈಗ ಕರ್ನಾಟಕದ ಹೆಗಲ ಮೇಲಿದೆ. ಅದರಲ್ಲೂ ಮುಖ್ಯಮಂತ್ರಿ ಸಿದ್ದರಾಮಯ್ಯ ಹಾಗೂ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರಿಗೆ ಪರೋಕ್ಷ ವಾಗಿ ಹಸ್ತಾಂತರಿಸುವಂತಾಗಿದೆ. ಹೇಗೆಂದರೆ, ಕಾಂಗ್ರೆಸ್ ಆಡಳಿತ ಇರುವ ಏಕೈಕ ರಾಜ್ಯ ಕರ್ನಾಟಕ, ನಂತರ ತೆಲಂಗಾಣ ಮಾತ್ರ. → 8

ಸಿಎಂ, ಡಿಸಿಎಂ ಇನ್ನಷ್ಟು ಬಲಿಷ್ಟ

ಇತ್ತೀಚೆಗೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ತಮ್ಮ ವಿರುದ್ಧ ಅನೇಕ ಪ್ರಕರಣಗಳನ್ನು ಕೋರ್ಟ್ ನಲ್ಲಿ ಗೆಲ್ಲುವ ಮೂಲಕ ಪಕ್ಷ ಮತ್ತು ಸರಕಾರದಲ್ಲಿ ಇನ್ನಷ್ಟು ಬಲಗೊಳ್ಳುತ್ತಿದ್ದಾರೆ. ಹಾಗೆಯೇ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಎದರಾಗಿದ್ದ ಮುಡಾ ಪ್ರಕರಣ ತೂಗುಕತ್ತಿ ಕೂಡ ದೂರವಾಗಿದೆ. ಅಂದರೆ, ಸಿದ್ದರಾಮಯ್ಯ ಅವರು ಆರೋಪಿಯಾಗಿರುವ ಮುಡಾ ನಿವೇಶನ ಅಕ್ರಮ ಪ್ರಕರಣವನ್ನು ಸಿಬಿಐಗೆ ವಹಿಸಬೇಕೆನ್ನುವ ಕೋರಿಕೆಯನ್ನು ಹೈಕೋರ್ಟ್ ನಿರಾಕರಿಸಿದೆ. ಇದರೊಂದಿಗೆ ಸರಕಾರ ಹಾಗೂ ಪಕ್ಷದಲ್ಲಿ ಸಿದ್ದರಾಮಯ್ಯ ಅವರು ಇನ್ನೂ ಬಲಿಷ್ಟವಾದಂತಾಗಿದೆ. ಹೀಗಾಗಿ ಮುಖ್ಯಮಂತ್ರಿ ಬದಲಾವಣೆಯ ಸೊಲ್ಲು ಸದ್ಯಕ್ಕೆ ಅಡಗಿದೆ ಎನ್ನುತ್ತವೆ ಪಕ್ಷದ ಮೂಲಗಳು. ಅಷ್ಟಕ್ಕೂ ಸತತ ಸೋಲಿನಿಂದ ಬೆಂದಿರುವ ಈ ಸ್ಥಿತಿಯಲ್ಲಿ ಕಾಂಗ್ರೆಸ್ ಮುಖ್ಯಮಂತ್ರಿ ಬದಲಾಯಿಸುವ ತಪ್ಪನ್ನು ಮಾಡುವುದಿಲ್ಲ. ಮಾಡಿದರೆ ಪರಿಣಾಮ ಗೊಂದಲ ಉಂಟಾಗಿ ಸರಕಾರಕ್ಕೆ ಅಪಾಯವಾಗಬಹುದು ಆತಂಕವೂ ಇದೆ ರಾಜಕೀಯ ಪಂಡಿತರು ವಿಶ್ಲೇಷಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ನಾರಾಯಣಸ್ವಾಮಿಗೆ ಪಿಎಚ್.ಡಿ ಪ್ರದಾನ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಸಂಶೋಧನಾ ವಿದ್ಯಾರ್ಥಿಯಾಗಿರುವ ನಾರಾಯಣ ಸ್ವಾಮಿ ಬಿ.ವಿ. ರವರು ಗ್ರಂಥಾಲಯ ಮತ್ತು ಮಾಹಿತಿ ವಿಜ್ಞಾನ ವಿಭಾಗದ ಹಿರಿಯ ಪ್ರಾಧ್ಯಾಪಕರಾದ ಪ್ರೊ.ರಮೇಶ್ ರವರ ಮಾರ್ಗದರ್ಶನದಲ್ಲಿ ಮಂಡಿಸಿದ ಅವೇರ್ನೆಸ್ ಅಂಡ್ ಯುಟಿಲೈಜೇಷನ್ ಆಫ್ ಐಸಿಟಿ ಇನಿಶಿಯೇಟಿವ್ ಆಫ್ ಮಿನಿಸ್ಟ್ರಿ ಆಫ್ ಎಜುಕೇಶನ್, ಗವರ್ನಮೆಂಟ್ ಆಫ್ ಇಂಡಿಯಾ ಬೈ ದ ಯೂನಿವರ್ಸಿಟಿ ಲೈಬ್ರರೀಸ್ ಇನ್ ಕರ್ನಾಟಕ ಸ್ಟೇಟ್, ಆನ್ ಯೂಸರ್ ಅಸೆಸ್ಮೆಂಟ್ ಸ್ಟಡಿ ಎಂಬ ಸಂಶೋಧನಾ ಮಹಾಪ್ರಬಂಧಕ್ಕೆ ಪಿಎಚ್.ಡಿ ಪದವಿ ಪ್ರದಾನ ಮಾಡಲಾಗಿದೆ ಎಂದು ಬೆಂಗಳೂರು ವಿಶ್ವವಿದ್ಯಾಲಯವು ಪ್ರಕಟಣೆಯಲ್ಲಿ ತಿಳಿಸಿದೆ.

ರೌಡಿಗಳ ಮನೆ ಮೇಲೆ ಪೊಲೀಸರ ದಾಳಿ

ಬೆಂಗಳೂರು: ರಾಜಧಾನಿಯ ಉತ್ತರ ವಿಭಾಗದ ಪೊಲೀಸರು ಸುಮಾರು 400 ರೌಡಿಗಳ ಹಾಗೂ ಹಳೆ ಆರೋಪಿಗಳ ಮನೆ ಮೇಲೆ ದಾಳಿ ಮಾಡಿ 11 ಮಂದಿ ವಿರುದ್ಧ ಎಫ್ಐಆರ್ ದಾಖಲಿಸಿಕೊಂಡು ತನಿಖೆ ಕೈಗೊಂಡಿದ್ದಾರೆ. ಮಧ್ಯರಾತ್ರಿ 12 ಗಂಟೆಯಿಂದ ಬೆಳಗಿನ ಜಾವದವರೆಗೂ ಡಿಸಿಪಿ ಸೈದುಲು ಅಡವಾತ್ ಅವರ ನೇತೃತ್ವದಲ್ಲಿ ಉತ್ತರ ವಿಭಾಗದ ಎಸಿಪಿಗಳು, ಇನ್ಸ್‌ಪೆಕ್ಟರ್, ಸಬ್ ಇನ್ಸ್‌ಪೆಕ್ಟರ್‌ಗಳು ಹಾಗೂ ಸಿಬ್ಬಂದಿಗಳು ಈ ದಾಳಿ ನಡೆಸಿದ್ದಾರೆ.

ವಾರಂಟ್ ಜಾರಿಯಾಗಿದ್ದರೂ ನ್ಯಾಯಾಲಯಕ್ಕೆ ಹಾಜರಾಗದ 15 ಮಂದಿಯನ್ನು ಇದೇ ವೇಳೆ ವಶಕ್ಕೆ ಪಡೆದು ನ್ಯಾಯಾಲಯದ ಮುಂದೆ ಹಾಜರು ಪಡಿಸಲಾಯಿತು. ದಾಳಿ ಸಂದರ್ಭದಲ್ಲಿ ಕೆಲವು ರೌಡಿಗಳ ಮನೆಗಳಲ್ಲಿ ಮಾರಕಾಸ್ತ್ರಗಳು ಸಿಕ್ಕಿವೆ. ನಂತರ ಪೊಲೀಸರು ರೌಡಿಗಳ ಮಾಹಿತಿಯನ್ನು ಪಡೆದುಕೊಂಡಿದ್ದಾರೆ.

ಪ್ರಸ್ತುತ ಮಾಡುತ್ತಿರುವ ಉದ್ಯೋಗ, ಮೊಬೈಲ್ ನಂಬರ್‌ಗಳನ್ನು ನಮೂದಿಸಿಕೊಂಡು ಬಾಲ ಬಿಚ್ಚದಂತೆ ರೌಡಿಗಳಿಗೆ ಪೊಲೀಸ್ ಅಧಿಕಾರಿಗಳು ಎಚ್ಚರಿಕೆ ನೀಡಿದ್ದಾರೆ.

ಇಂದು ಕರಾಟೆ ಪಂದ್ಯಾವಳಿ

ಬೆಂಗಳೂರು: ಅರವಿಂದ್ ಯೂನಿವರ್ಸ್ ಕರಾಟೆ ತರಬೇತಿ ಶಾಲೆಯು ಕರಾಟೆ ಪಂದ್ಯಾವಳಿಯನ್ನು ಫೆ.9 ರಂದು ಪದ್ಮನಾಭ ನಗರ ವಾರ್ಡ್‌ನ ಬಿಎಸ್‌ಸಿಎಸ್ ಲೇಔಟ್‌ನಲ್ಲಿ ಆಯೋಜಿಸಿದೆ. ಬಿಬಿಎಂಪಿ ಮಾಜಿ ಸದಸ್ಯೆ ಶೋಭಾ ಆಂಜನಪ್ಪ, ಸಮಾಜ ಸೇವಕ ಆಂಜನಪ್ಪ, ಆರ್‌ಡಿಪಿಆರ್ ನಿಶೇಷ ಕಾರ್ಯದರ್ಶಿ ಚಂದ್ರಶೇಖರ್, ಎಸ್ಐಟಿ ಸಹಾಯಕ ಆಯುಕ್ತ ರಾಜೇಶ್ ಭಾಗವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಫೆ.11 ರಿಂದ 14ರ ತನಕ ಹೂಡಿಕೆದಾರರ ಸಮಾವೇಶ | ರಾಜನಾಥ್ ಸಿಂಗ್ ಚಾಲನೆ

ರಾಜ್ಯಕ್ಕೆ 10 ಲಕ್ಷ ಕೋಟಿ ರು. ಹೂಡಿಕೆ ನಿರೀಕ್ಷೆ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ 10 ಲಕ್ಷ ಕೋಟಿ ರು. ಬಂಡವಾಳ ಹೂಡಿಕೆಯ ನಿರೀಕ್ಷಿಸಲಾಗುತ್ತಿದೆ ಎಂದು ಎಂದು ಬೃಹತ್ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ್ ಹೇಳಿದ್ದಾರೆ. ಶನಿವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಫೆ. 11ರಿಂದ 14 ರವರೆಗೆ ಅರಮನೆ ಮೈದಾನದಲ್ಲಿ ನಡೆಯಲಿರುವ ಈ ಬಾರಿಯ ಹೂಡಿಕೆ ಸಮಾವೇಶದಲ್ಲಿ ಆಗುವ ಒಪ್ಪಂದಗಳಲ್ಲಿ ಶೇ.75 ರಷ್ಟು ಕಾರ್ಯಗತವಾಗಬೇಕು ಎಂಬುದು ನಮ್ಮ ಉದ್ದೇಶ. ಫೆ.11 ರಂದು ಸಂಜೆ 4 ಗಂಟೆಗೆ ರಾಜ್ಯಪಾಲ ಥಾವರ್‌ಚಂದ್ ಗೆಹ್ಲೋಟ್ ಉಪಸ್ಥಿತಿಯಲ್ಲಿ ರಕ್ಷಣಾ ಸಚಿವ ರಾಜನಾಥ ಸಿಂಗ್ ಹೂಡಿಕೆದಾರರ ಸಮಾವೇಶ ಉದ್ಘಾಟಿಸಲಿದ್ದಾರೆ ಎಂದರು.

ಹಲವು ಗಣ್ಯರು ಭಾಗಿ: ಮುಖ್ಯಮಂತ್ರಿ ಸಿದ್ದರಾಮಯ್ಯ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದು, ರಾಜ್ಯ ಪ್ರತಿನಿಧಿಸುವ ಹಾಗೂ ಕೈಗಾರಿಕೆ ಇಲಾಖೆಗೆ ಸಂಬಂಧಿಸಿದ ಎಲ್ಲ ಸಚಿವರಿಗೂ ಸಮಾವೇಶದಲ್ಲಿ ಭಾಗವಹಿಸುವಂತೆ ಆಹ್ವಾನ ನೀಡಿದ್ದು, ಅವರೂ ಕೂಡ ಭರವಸೆ ನೀಡಿದ್ದಾರೆ. ಕೇಂದ್ರ ಸಚಿವರಾದ ಪ್ರಹ್ಲಾದ್ ಜೋಷಿ ಹಾಗೂ ಎಚ್.ಡಿ.ಕುಮಾರಸ್ವಾಮಿ ಉದ್ಘಾಟನಾ ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ.

ಲೋಕಸಭೆ ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಕೂಡ ಸಮಾವೇಶಕ್ಕೆ ಆಗಮಿಸುತ್ತಿದ್ದಾರೆ ಎಂದು ಪಾಟೀಲ್ ತಿಳಿಸಿದರು. ಕೇಂದ್ರ ಸಚಿವರಾದ ನಿರ್ಮಲಾ ಸೀತಾರಾಮನ್, ಅಶ್ವಿನಿ ವೈಷ್ಣವ್, ಪಿಯೂಷ್ ಗೋಯಲ್‌ಗೂ ಆಹ್ವಾನ ನೀಡಲಾಗಿದೆ. ಕರ್ನಾಟಕದ ಪ್ರಗತಿಗೆ ಕಾರಣರಾದವರನ್ನು ಗುರುತಿಸಿ ಫೆ.12 ರಂದು ಪ್ರಶಸ್ತಿ ನೀಡಿ ಗೌರವಿಸಲಾಗುವುದು. ಅಂದು ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಆಗಮಿಸುವ ನಿರೀಕ್ಷೆಯಿದೆ.

ರಾಜ್ಯಸಭೆ ವಿರೋಧಪಕ್ಷದ ನಾಯಕ ಮಲ್ಲಿಕಾರ್ಜುನ ಖರ್ಗೆ, ಕೇಂದ್ರ ಸಚಿವ ವಿ.ಸೋಮಣ್ಣ ಅವರು ಸಮಾರೋಪ ಸಮಾರಂಭದಲ್ಲಿ ಪಾಲ್ಗೊಳ್ಳಲಿದ್ದಾರೆ. ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ವಿಧಾನಸಭೆಯ ಸ್ಪೀಕರ್ ಯು.ಟಿ.ಖಾದರ್, ವಿಧಾನ ಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ, ಉಪ ಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್, ಸಚಿವರು, ಸ್ಥಳೀಯ ಶಾಸಕರು, ಸಂಸದರು, ಉಭಯ ಸದನದ ವಿರೋಧ ಪಕ್ಷಗಳ ನಾಯಕರು ಭಾಗವಹಿಸಲಿದ್ದಾರೆ ಸಚಿವರು ವಿವರಿಸಿದರು.

ಅರಮನೆ ಮೈದಾನದಲ್ಲಿ ಜಾಗತಿಕ ಹೂಡಿಕೆದಾರರ ಸಮಾವೇಶಕ್ಕಾಗಿ ನಡೆದಿರುವ ಸಿದ್ಧತೆಗಳನ್ನು ಸಚಿವ ಎಂ.ಬಿ.ಪಾಟೀಲ ವೀಕ್ಷಿಸಿದರು.

- ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ವಿವಿಧ ಕೇಂದ್ರ ಸಚಿವರು ಭಾಗಿ
- ಮಲ್ಲಿಕಾರ್ಜುನ ಖರ್ಗೆ, ರಾಹುಲ್ ಗಾಂಧಿ ಆಗಮನ: ಎಂ.ಬಿ.ಪಾಟೀಲ್
- ಕರ್ನಾಟಕದ ಅಭಿವೃದ್ಧಿಗೆ ಕಾರಣರಾದವರಿಗೆ ಫೆ.12 ರಂದು ಸನ್ಮಾನ
- ಕಿರಣ್ ಮಜುಂದಾರ್ ಸೇರಿದಂತೆ ದೇಶದ ಪ್ರತಿಷ್ಠಿತ ಉದ್ಯಮಿಗಳು ಭಾಗಿ
- ಕ್ವಿನ್ ಸಿಟಿ ಯೋಜನೆ ಸಂಬಂಧ ದೇಶ-ವಿದೇಶಗಳ ವಿ.ವಿ.ಗಳ ಜತೆ ಒಡಂಬಡಿಕೆ

ಉದ್ಯಮಿಗಳಿಗೂ ಆಹ್ವಾನ

ಖ್ಯಾತ ಉದ್ಯಮಿಗಳಾದ ಆನಂದ್ ಮಹೀಂದ್ರ, ಸಜ್ಜನ್ ಜಿಂದಾಲ್, ಕಿರಣ್ ಮಜುಂದಾರ್ ಸೇರಿದಂತೆ ಹಲವರು ಉದ್ಯಮಿಗಳು ಭಾಗವಹಿಸಲಿದ್ದಾ ರೆ. ಈ ಸಂದರ್ಭದಲ್ಲಿ ಹೊಸ ಕೈಗಾರಿಕಾ ನೀತಿ, ಏಕಗವಾಕ್ಷಿ ಪೋರ್ಟಲ್, ಕ್ಲಿನ್ ಮೊಬಿಲಿಟಿ ನೀತಿಯನ್ನು ಬಿಡುಗಡೆ ಮಾಡಲಾಗುವುದು.

ಹೆಚ್ಚು ಗೋಷ್ಠಿಗಳು

ಹೆಚ್ಚು ಗೋಷ್ಠಿಗಳನ್ನು ಏರ್ಪಡಿಸಲಾಗಿದ್ದು, ಗೂಗಲ್ ಎಕ್ಸ್ ಸಂಸ್ಥಾಪಕ ಸೆಬಾಸ್ಟಿಯನ್ ತ್ರನ್, ಲ್ಯಾಮ್ ರಿಸರ್ಚ್‌ನ ಪ್ಯಾಟ್ರಿಕ್ ಲಾಡರ್, ಜನರಲ್ ಅಟಾಮಿಕ್ಸ್ ಗ್ಲೋಬಲ್‌ನ ಸಿಇಒ ವಿವೇಕ್ ಲಾಲ್, ಟಿವಿಎಸ್ ಮೋಟಾರ್ಸ್‌ನ ಸುದರ್ಶನ್ ವೇಣು, ಬೋಯಿಂಗ್ ಕಂಪನಿಯ ಉನ್ನತಾಧಿಕಾರಿ ರಾಬ್ ಬಾಯ್ಡ್, ನಥಿಂಗ್ ಕಂಪನಿಯ ಸಹ ಸಂಸ್ಥಾಪಕ ಅಕಿಸ್ ಇವ್ಯಾಂಜಿಲೈಡಿಸ್, ಗ್ರೀಸ್ ದೇಶದ ಮಾಜಿ ಪ್ರಧಾನಿ ಜಾರ್ಜ್ ಪಪೆಂಡ್ರಿಯೊ ಮುಂತಾದವರು ಮಾತನಾಡಲಿದ್ದಾರೆ ಎಂದರು.

ಕ್ವಿನ್‌ಸಿಟಿ ಒಡಂಬಡಿಕೆ

ಸಮಾವೇಶದಲ್ಲಿ ಮಹತ್ವಾಕಾಂಕ್ಷಿ ಕ್ವಿನ್‌ಸಿಟಿ ಯೋಜನೆ ಸಂಬಂಧ ದೇಶ-ವಿದೇಶಗಳ ಕೆಲವು ವಿಶ್ವವಿದ್ಯಾ ಲಯಗಳ ಜತೆ ಒಡಂಬಡಿಕೆ ಮಾಡಿಕೊಳ್ಳಲಾಗು ವುದು. ಆರ್ಥಿಕ ಬೆಳವಣಿಗೆ ಕುರಿತು ಮಾಂಟೆಕ್‌ಸಿಂಗ್ ಅಹ್ಲುವಾಲಿಯಾ, ಲಾಜಿಸ್ಟಿಕ್ಸ್ ವಲಯದಲ್ಲಿ ನಡೆಯುತ್ತಿರುವ ಆವಿಷ್ಕಾರಗಳನ್ನು ಕುರಿತು ವೋಲ್ವೊ ಸಮೂಹದ ಮುಖ್ಯಸ್ಥ ಮಾರ್ಟಿನ್ ಲುಂಡ್ ಸ್ಟೆಡ್, ಸಂದೀಪ್ ದೇಶಮುಖ್ ಮತ್ತು ಚಾಣಕ್ಯ ಹೃದಯ, ಯುವ ಸಂಶೋಧಕರನ್ನು ಕುರಿತು ಝೆರೋದಾ ಸಂಸ್ಥಾಪಕ ನಿಖಿಲ್ ಕಾಮತ್ ಅವರು ಉದ್ಯಮಿ ಗಳಾದ ಪಾರ್ಥ ಜಿಂದಾಲ್ ಹಾಗೂ ಸುರ್ಭಾನಾ ಮುತ್ತೂಟ್ ಅವರೊಂದಿಗೆ ಮಾತುಕತೆ ನಡೆಸಲಿದ್ದಾರೆ ಎಂದು ಕೈಗಾರಿಕಾ ಸಚಿವರು ಹೇಳಿದರು.

ಡಿಸಿಎಂ ಡಿ.ಕೆ.ಶಿವಕುಮಾರ್ ಅವರು ನಟ ಶಿವರಾಜ್ ಕುಮಾರ್ ಅವರನ್ನು ಅವರ ನಿವಾಸದಲ್ಲಿ ಭೇಟಿ ಮಾಡಿ ಆರೋಗ್ಯ ವಿಚಾರಿಸಿದರು. ಗೀತಾ ಶಿವರಾಜ್ ಕುಮಾರ್ ಇದ್ದರು.

ಐಶ್ವರ್ಯಾ ಗೌಡ ವಿರುದ್ಧ ಮತ್ತೊಂದು ಎಫ್ಐಆರ್

ಬೆಂಗಳೂರು: ಮಾಜಿ ಸಂಸದ ಡಿ.ಕೆ.ಸುರೇಶ್ ಅವರ ಸಹೋದರಿ ಎಂದು ಕೋಟ್ಯಂತರ ರು.ವಂಚಿಸಿದ ಆರೋಪ ಎದುರಿಸುತ್ತಿರುವ ಐಶ್ವರ್ಯಾ ಗೌಡ ವಿರುದ್ಧ ಮತ್ತೊಂದು ಎಫ್ಐಆರ್ ದಾಖಲಾಗಿದೆ. ಅಕ್ರಮವಾಗಿ ಹಲವು ವ್ಯಕ್ತಿಗಳ ಫೋನ್ ಕರೆ ದಾಖಲೆಗಳನ್ನು ಪಡೆದು ಕೊಂಡಿರುವ ಆರೋಪ ಐಶ್ವರ್ಯಾ ಗೌಡ ವಿರುದ್ಧ ಕೇಳಿ ಬಂದಿದ್ದು, ಖುದ್ದು ಪ್ರಕರಣದ ತನಿಖಾಧಿಕಾರಿಯಾಗಿ ರುವ ಎಸಿಪಿ ಭರತ್ ರೆಡ್ಡಿ ಅವರು ನೀಡಿರುವ ದೂರಿನ ಮೇರೆಗೆ ಬ್ಯಾಟರಾಯನಪುರ ಠಾಣೆಯಲ್ಲಿ ಎಫ್ಐಆರ್ ದಾಖಲಾಗಿದೆ. ವಂಚನೆ ಪ್ರಕರಣ ದಾಖಲಾಗುತ್ತಿದ್ದಂತೆ ಐಶ್ವರ್ಯಾ ಗೌಡ ಅವರ 5 ಹಾಗೂ ಅವರ ಪತಿಯ 2 ಮೊಬೈಲ್ ಫೋನ್‌ಗಳನ್ನು ವಶಕ್ಕೆ ಪಡೆದಿದ್ದ ಪೊಲೀಸರು, ಅವುಗಳಲ್ಲಿದ್ದ ಡೇಟಾ ಸಂಗ್ರಹಣೆಗಾಗಿ ನ್ಯಾಯಾಲಯದ ಅನುಮತಿ ಪಡೆದು ಪಶ್ಚಿಮ ವಿಭಾಗದ ಸಿಇಎನ್ ಠಾಣೆಗೆ ರವಾನಿಸಿದ್ದರು. ಆ ಫೋನ್‌ಗಳಲ್ಲಿರುವ ಡೇಟಾವನ್ನು ಸಂಗ್ರಹಿಸಿದಾಗ ಅದರಲ್ಲಿ ಹಲವು ವ್ಯಕ್ತಿಗಳ ಸಿಡಿಆರ್ ವಿವರಗಳು ಪತ್ತೆಯಾಗಿವೆ. ಸಾಮಾನ್ಯವಾಗಿ ಅಪರಾಧ ಪ್ರಕರಣಗಳ ತನಿಖೆ ನಡೆಸುವಾಗ ತನಿಖಾ ಸಂಸ್ಥೆ ಅಥವಾ ತನಿಖಾಧಿಕಾರಿಗಳು ಮಾತ್ರವೇ ಅಗತ್ಯತೆ ಅನುಸಾರ ಅವುಗಳನ್ನು ಪಡೆದು ಕೊಳ್ಳುವ ಅವಕಾಶ ಹೊಂದಿರುತ್ತಾರೆ ಎಂದು ಎಫ್ಐಆರ್ ದಾಖಲಾಗಿದೆ. ಆದರೆ ಆರೋಪಿ ಐಶ್ವರ್ಯಾ ಗೌಡ ಅಕ್ರಮವಾಗಿ ಅನೇಕ ವ್ಯಕ್ತಿಗಳ ಸಿಡಿಆರ್ ಪಡೆದುಕೊಂಡಿರುವುದು ಬಯಲಾಗಿದೆ.

ಕ್ಯಾಸಿನೋ, ಬಿಟ್ ಕಾಯಿನ್ ವ್ಯವಹಾರದಲ್ಲಿ ಹಣ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭಾಂಶದ ಆಮಿಷ | ಐವರ ವಿರುದ್ಧ ಪ್ರಕರಣ ದಾಖಲು

ಹೂಡಿಕೆ ನೆಪದಲ್ಲಿ 25 ಕೋಟಿ ವಂಚನೆ ಆರೋಪ: ಖದೀಮ ಬಂಧನ

ಬೆಂಗಳೂರು: ಸ್ಯಾಂಡಲ್ ವುಡ್ ಡ್ರಗ್ಸ್ ಪ್ರಕರಣದಲ್ಲಿ ಸಿಸಿಬಿ ಪೊಲೀಸರಿಂದ ಐದು ವರ್ಷದ ಹಿಂದೆ ಬಂಧಿತನಾಗಿದ್ದ ಆರೋಪಿ ರಾಹುಲ್ ತೋನ್ಸೆ ವಿರುದ್ಧ ಬಹುಕೋಟಿ ವಂಚನೆ ಆರೋಪ ಕೇಳಿಬಂದಿದೆ. ಕ್ಯಾಸಿನೋ, ಬಿಟ್ ಕಾಯಿನ್ ವ್ಯವಹಾರದಲ್ಲಿ ಹಣ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭಾಂಶ ಹಾಗೂ ಬಡ್ಡಿ ನೀಡುವುದಾಗಿ ನಂಬಿಸಿ ಉದ್ಯಮಿಯಿಂದ ಸುಮಾರು 25 ಕೋಟಿ ರು. ಪಡೆದು, ವಂಚಿಸಿದ ಆರೋಪದಡಿ ಐವರ ವಿರುದ್ಧ ಪ್ರಕರಣ ದಾಖಲಿಸಲಾಗಿದ್ದು, ಈ ಪೈಕಿ ಓರ್ವನನ್ನು ಬಂಧಿಸಲಾಗಿದೆ.

ವಂಚನೆಗೊಳಗಾದ ವಿವೇಕ್ ಪಿ. ಹೆಗ್ಗಡೆ ಎಂಬುವರು ನೀಡಿದ ದೂರಿನ ಮೇರೆಗೆ ರಾಮಕೃಷ್ಣರಾವ್, ಪತ್ನಿ ರಾಜೇಶ್ವರಿ ರಾವ್, ಮಗ ರಾಹುಲ್ ತೋನ್ಸೆ, ಪುತ್ರಿ ರಕ್ಷಾ ತೋನ್ಸೆ ಹಾಗೂ ಅಳಿಯ ಚೇತನ್ ನಾರಾಯಣ್ ವಿರುದ್ಧ ವಂಚನೆ

ಹಾಗೂ ಅನಿಯಂತ್ರಿತ ಠೇವಣಿ ನಿಷೇಧ ಕಾಯ್ದೆಯಡಿ (ಬಡ್ಸ್) ಪ್ರಕರಣ ದಾಖಲಾಗಿದೆ. ರಾಮಕೃಷ್ಣ ಬಂಧಿತರಾಗಿ ದ್ದಾರೆ. ಇನ್ನುಳಿದ ಆರೋಪಿ ಗಳು ವಿದೇಶದಲ್ಲಿ ತಲೆ ಮರೆಸಿಕೊಂಡಿದ್ದು, ತನಿಖೆ ಮುಂದುವರಿದಿದೆ ಎಂದು ಪೊಲೀಸರು ತಿಳಿಸಿದ್ದಾರೆ.

ಲಾಜೆಸ್ಟಿಕ್ ಕಂಪೆನಿಯೊಂದರ ಮಾಲೀಕನಾಗಿದ್ದ ದೂರುದಾರ ವಿವೇಕ್ ಎಂಬುವರಿಗೆ ಸ್ನೇಹಿತರ ಮುಖಾಂತರ 2023ರಲ್ಲಿ ರಾಮಕೃಷ್ಣರಾವ್ ಪರಿಚಯವಾಗಿತ್ತು. ಮಗ ರಾಹುಲ್ ಹಾಗೂ ಅಳಿಯ ಶ್ರೀಲಂಕಾ ಹಾಗೂ ದುಬೈನಲ್ಲಿ ಕ್ಯಾಸಿನೋ ವ್ಯವಹಾರದಲ್ಲಿ ತೊಡಗಿಸಿಕೊಂಡಿದ್ದಾರೆ. ಉದ್ಯಮ ವಿಸ್ತರಣೆಗೆ ಹಣದ ಅಗತ್ಯವಿದ್ದು, ಸಾಲ ನೀಡುವಂತೆ

ತನಗೆ ಮನವಿ ಮಾಡಿದ್ದರು. ನಂತರ, ರಾಮಕೃಷ್ಣರಾವ್ ಅವರು ವಿವೇಕ್‌ಗೆ ನಂಬಿಕೆ ಮೂಡಿಸಲು ಶ್ರೀಲಂಕಾದಲ್ಲಿರುವ ಕ್ಯಾಸಿ ನೋಗೆ ಕರೆದೊಯ್ದು ಮಗ ರಾಹುಲ್‌ನನ್ನು ಪರಿಚಯಿಸಿದ್ದರು. ಬಳಿಕ ದುಬೈ ನಲ್ಲಿದ್ದ ಮಗಳು ಹಾಗೂ ಅಳಿಯನನ್ನು ಕರೆಯಿಸಿ ದೂರುದಾರರೊಂದಿಗೆ ಹೂಡಿಕೆ ಮಾಡುವಂತೆ ಮಾತುಕತೆ ನಡೆಸಿದ್ದರು. ಕ್ಯಾಸಿನೋ ಹಾಗೂ ಬಿಟ್ ಕಾಯಿನ್‌ನಲ್ಲಿ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭ ಗಳಿಸಬಹುದು ಎಂದು ಹಂತ-ಹಂತವಾಗಿ ರಾಮಕೃಷ್ಣ ಕುಟುಂಬ ಆಮಿಷ ವೊಡ್ಡಿತ್ತು ಎಂದು ದೂರಿನಲ್ಲಿ ವಿವೇಕ್ ಆರೋಪಿಸಿದ್ದಾರೆ. ದುಬೈ ಹಾಗೂ ಶ್ರೀಲಂಕಾದಲ್ಲಿ ಕ್ಯಾಸಿನೋ ನಡೆಸ ಲಾಗುತ್ತಿದ್ದು, ಭವಿಷ್ಯದಲ್ಲಿ ಉದ್ಯಮವನ್ನ ವಿಸ್ತರಣೆ ಮಾಡಿದರೆ ಹೆಚ್ಚು ಹಣ ಸಂಪಾದಿಸಬಹುದು. ಹೀಗಾಗಿ ಹಣದ ಅಗತ್ಯವಿದೆ. ಶ್ರೀಲಂಕಾದಲ್ಲಿ ಸಿಟಿ ಆಫ್ ಡ್ರೀಮ್ಸ್ ಹೆಸರಿನಲ್ಲಿ ಕ್ಯಾಸಿನೋ ತೆರೆಯಲಿದ್ದು, ಇಲ್ಲಿ ಹೂಡಿಕೆ ಮಾಡಿದರೆ ಹೆಚ್ಚಿನ ಲಾಭಾಂಶ ನೀಡುವುದಾಗಿ ಹೇಳಿದ್ದರು.

ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು: ಕೋಟ್ಯಂತರ ರೂಪಾಯಿ ಹಣವನ್ನು ಸಾಲದ ರೂಪದಲ್ಲಿ ನೀಡಿದ್ದೆ. ಇದಕ್ಕೆ ಪ್ರತಿಯಾಗಿ ಅವರು ಪ್ರತಿ ತಿಂಗಳು ಬಡ್ಡಿ ನೀಡುವುದಾಗಿ ಭರವಸೆ ನೀಡಿದ್ದರು. 2023ರಿಂದ ಈವರೆಗೆ ಸುಮಾರು 25 ಕೋಟಿ ರು. ಸಾಲ ಕೊಟ್ಟಿದ್ದೆ. ಕಾಲಕ್ರಮೇಣ ಬಡ್ಡಿ ನೀಡದಿರುವ ಬಗ್ಗೆ ಅನುಮಾನ ಬಂದು ಪ್ರಶ್ನಿಸಿದಾಗ ಆರೋಪಿಗಳು ಅವಾಚ್ಯ ಶಬ್ದಗಳಿಂದ ನಿಂದಿಸಿದ್ದರು. ಅಲ್ಲದೇ, ಹೆಚ್ಚಿನ ಲಾಭಾಂಶ ಹಾಗೂ ಬಡ್ಡಿ ಆಸೆ ತೋರಿಸಿ ಹಣ ಪಡೆದು ವಂಚಿಸಿದ್ದಾರೆ ಎಂದು ದೂರಿನಲ್ಲಿ ವಿವೇಕ್ ಉಲ್ಲೇಖಿಸಿದ್ದಾರೆ.

ರಾಹುಲ್ ತೋನ್ಸೆ ಯಾರು?

25 ಕೋಟಿ ರು.ವಂಚನೆ ಆರೋಪ ಪ್ರಕರಣದ ಆರೋಪಿ ರಾಹುಲ್ ತೋನ್ಸೆ 5 ವರ್ಷಗಳ ಹಿಂದೆ ಡ್ರಗ್ಸ್ ಪ್ರಕರಣವೊಂದರಲ್ಲಿ ಭಾಗಿಯಾಗಿದ್ದ. ಈತನನ್ನು ಸಿಸಿಬಿ ಪೊಲೀಸರು ಬಂಧಿಸಿದ್ದರು. 45 ಲಕ್ಷ ರು. ವಂಚನೆ ಸಂಬಂಧ ಇಂದಿರಾನಗರ ಠಾಣೆಯಲ್ಲಿ ರಾಹುಲ್ ತಂದೆ ರಾಮಕೃಷ್ಣರಾವ್ ಸೇರಿದಂತೆ ಮೂವರ ವಿರುದ್ಧ ನಟಿ ಸಂಜನಾ ಗಲ್ರಾನಿ ದೂರು ದಾಖಲಿಸಿದ್ದರು. ರಾಹುಲ್ ಶ್ರೀಲಂಕಾದಲ್ಲಿ ಕ್ಯಾಸಿನೋ ವ್ಯವಹಾರ ನಡೆಸುತ್ತಿದ್ದ.

OLA ELECTRIC
OLA Electric Mobility Limited
(formerly known as OLA Electric Mobility Private Limited)
CIN: L74999KA2017PLC099619
Registered Office: Wing C, Prestige RMZ Startech, Hosur Road, Municipal Ward No.67, Municipal No. 140, Koramangala VI Bk, Bangalore, Bangalore South, Karnataka 560095 India Tel: 080-35440050, Email Id: companysecretary@olaelectric.com

STATEMENT OF UNAUDITED STANDALONE AND CONSOLIDATED FINANCIAL RESULTS FOR THE QUARTER AND NINE MONTHS ENDED DECEMBER 31, 2024

The unaudited standalone and consolidated financial results for the quarter and nine months ended December 31, 2024 have been reviewed by the Audit Committee and approved by Board of Directors at their meetings held on 06 February 2025 and 07 February 2025 respectively.
The full format of the quarter and nine months ended financial results are available on the Stock Exchange websites at www.nseindia.com and www.bseindia.com and also on the Company's website at www.olaelectric.com and can be accessed by scanning the QR code

For Ola Electric Mobility Limited
(formerly known as Ola Electric Mobility Private Limited)
Sd/-
Bhavish Aggarwal
Chairman and Managing Director
(DIN: 03287473)

Place: Bangalore
Date: 07 February 2025

CONCEPT

1854 ಕೋಟಿ ವಹಿವಾಟು ಸಾಧನೆ, 86 ಲಕ್ಷ ಮಂದಿಗೆ ಸ್ವಯಂ ಉದ್ಯೋಗ

ನೇರ ಮಾರುಕಟ್ಟೆಯಲ್ಲಿ ಈಶಾನ್ಯ ಭಾರತ ಹೊಸ ಪರ್ವ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಭಾರತ ಜಾಗತಿಕ ಮಾರುಕಟ್ಟೆಯಲ್ಲಿ ಪ್ರಾಬಲ್ಯ ಸಾಧಿಸುವತ್ತ ಹೆಜ್ಜೆಯಿಡುವ ಜತೆ ಜತೆಗೆ ಆಂತರಿಕವಾಗಿ ಸಹ ನೇರ ಮಾರುಕಟ್ಟೆಯಲ್ಲಿ ವಿಶಿಷ್ಟ ಛಾಪು ಮೂಡಿಸುತ್ತಿದೆ. 86 ಲಕ್ಷ ಭಾರತೀಯರಿಗೆ ಸ್ವಯಂ ಉದ್ಯೋಗ ಕೊಟ್ಟಿದೆ. ಈ ಮೂಲಕ ಈಶಾನ್ಯ ಭಾರತ ನೇರ ಮಾರಾಟದ ಉದ್ಯಮದಲ್ಲಿ ಹೊಸದಿಗಂತಕ್ಕೆ ನಾಂದಿ ಹಾಡಿದೆ.

ನೇರ ಮಾರಾಟದಲ್ಲಿ ಪ್ರಸ್ತುತ 1854 ಕೋಟಿ ರು. ಅಧಿಕ ವಹಿವಾಟು ನಡೆಸುವ ಮೂಲಕ ಒಟ್ಟಾರೆ ಶೇ.16ರಷ್ಟು ಬೆಳವಣಿಗೆ ಸಾಧಿಸಿದೆ. ಕೇಂದ್ರ ಸರಕಾರ ಮತ್ತು ಗ್ರಾಹಕ ವ್ಯವಹಾರಗಳ ಇಲಾಖೆ ಬೆಂಬಲಿತ ಯೋಜನೆಗಳ ಬಲದಿಂದ ಮತ್ತಷ್ಟು ಹೆಚ್ಚಿನ ಬೆಳವಣಿಗೆ ಸಾಧಿಸುವ ಸಾಧ್ಯತೆ ನಿಚ್ಚಳವಾಗಿದೆ. ಉದ್ಯಮದ 21,282 ಕೋಟಿ ರು. ರಾಷ್ಟ್ರೀಯ ವಹಿವಾಟಿನಲ್ಲಿ ಶೇ.8.7ರಷ್ಟು ಪಾಲನ್ನು ಈಶಾನ್ಯ ಭಾರತ ಹೊಂದಿದ್ದು, 4.2 ಲಕ್ಷಕ್ಕೂ ಹೆಚ್ಚು ನೇರ ಮಾರಾಟಗಾರರಿಗೆ ಸ್ವಯಂ ಆದಾಯದ ಅವಕಾಶ ಕಲ್ಪಿಸಿದೆ ಎಂದು ಐಡಿಎಸ್ಎ ಬಹಿರಂಗಪಡಿಸಿದೆ.

ಬೊಕ್ಕಸಕ್ಕೆ ವಾರ್ಷಿಕ 300 ಕೋಟಿ ರು. ಆದಾಯದ ಕೊಡುಗೆ

ಈಶಾನ್ಯ ರಾಜ್ಯಗಳ ಬೊಕ್ಕಸಕ್ಕೆ ನೇರ ಮಾರಾಟ ಉದ್ಯಮ ವಾರ್ಷಿಕವಾಗಿ ಸುಮಾರು 300 ಕೋಟಿ ರು. ಕೊಡುಗೆ ನೀಡುತ್ತಿದೆ. ಇದು ಆಯಾ ಪ್ರದೇಶಗಳ ಅಭಿವೃದ್ಧಿಯಲ್ಲಿ ಪ್ರಮುಖ ಪಾತ್ರ ಸಹ ಬಲಪಡಿಸುತ್ತದೆ ಎಂದು ಐಡಿಎಸ್ಎ ವರದಿಯಲ್ಲಿ ಉಲ್ಲೇಖಿಸಿದೆ.

ಭಾರತೀಯ ನೇರ ಮಾರುಕಟ್ಟೆಯಲ್ಲಿ ನಮ್ಮ ಉತ್ಪನ್ನಗಳನ್ನು ಮಾರಾಟ ಮಾಡುವ ನಿಟ್ಟಿನಲ್ಲಿ ಇ-ಕಾಮರ್ಸ್ ವೇದಿಕೆಗಳನ್ನು ತಡೆಯಲು ನಾವು ಸರಕಾರಗಳ ಸಹಾಯ ಕೋರಿದ್ದೇವೆ. ಇದು ನಮಗೆ ಒಂದು ಸವಾಲಾಗಿದೆ.

– **ವಿವೇಕ್ ಕಟೋಚ್**, ಐಡಿಎಸ್ಎ ಅಧ್ಯಕ್ಷ

ದೇಶದಲ್ಲೇ 9ನೇ ಅತಿದೊಡ್ಡ ಮಾರುಕಟ್ಟೆ ಅಸ್ಸಾಂ : ಅಸ್ಸಾಂ 1,009 ಕೋಟಿ ರು. ನೇರ ವಹಿವಾಟು ನಡೆಸಿ ವರ್ಷಕ್ಕೆ ಶೇ.13ರಷ್ಟು ಬೆಳವಣಿಗೆ ದಾಖಲಿಸಿದೆ. ಅಲ್ಲದೇ, ಶೇ.4.7ರಷ್ಟು ರಾಷ್ಟ್ರೀಯ ಮಾರುಕಟ್ಟೆ ಪಾಲನ್ನು ಹೊಂದಿದೆ. 2.4 ಲಕ್ಷಕ್ಕೂ ಅಧಿಕ ನೇರ ಮಾರಾಟಗಾರರು ಅಸ್ಸಾಂ ಅನ್ನು ಬೆಂಬಲಿಸುವ ಮೂಲಕ ದೇಶದಲ್ಲಿ 9ನೇ ಅತಿದೊಡ್ಡ ನೇರ ಮಾರಾಟ ಮಾರುಕಟ್ಟೆಯಾಗಿದೆ.

ಏಳು ರಾಜ್ಯಗಳ ಕೊಡುಗೆ: ಅಸ್ಸಾಂ ಹೊರತುಪಡಿಸಿ ಈಶಾನ್ಯ ಭಾರತದ ಇತರ ಏಳು ರಾಜ್ಯಗಳು ನೇರ ಮಾರುಕಟ್ಟೆ ವಹಿವಾಟಿನಲ್ಲಿ 845 ಕೋಟಿ ರು. ಕೊಡುಗೆ ನೀಡುತ್ತವೆ. ನಾಗಾಲ್ಯಾಂಡ್ 227 ಕೋಟಿ ರು., ಮಿಜೋರಾಂ 156 ಕೋಟಿ ರು., ಅರುಣಾಚಲ ಪ್ರದೇಶ 78 ಕೋಟಿ ರು., ತ್ರಿಪುರ 72 ಕೋಟಿ ರು., ಮೇಘಾಲಯ 19 ಕೋಟಿ ರು. ಮತ್ತು ಸಿಕ್ಕಿಂ 5 ಕೋಟಿ ರು. ವಹಿವಾಟು ದಾಖಲಿಸಿವೆ. ನೇರ ಮಾರುಕಟ್ಟೆಯಲ್ಲಿ ಮಿಜೋರಾಂ ಶೇ.31, ಸಿಕ್ಕಿಂ ಶೇ.25, ನಾಗಾಲ್ಯಾಂಡ್ ಶೇ.22.7 ಮತ್ತು ಮಣಿಪುರ ಶೇ.20ರಷ್ಟು ಗಮನಾರ್ಹ ಬೆಳವಣಿಗೆ ಸಾಧಿಸಿವೆ.

ಮಾನ್ಯ ಪ್ರಧಾನ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್. ನಂ:864/ 2024

ಅರ್ಜಿದಾರರು: 1. ಶ್ರೀ.ಮರಿಗೌಡ ಬಿನ್ ಲೇಟ್ ಅಂಕೇಗೌಡ ವಯಸ್ಸು 86 ವರ್ಷ, ವಾಸ:- ಹುಯಿಲಪ್ಪನಹಳ್ಳಿ ಗ್ರಾಮ, ಮರಳವಾಡಿ ಹೋಬಳಿ, ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇತರರು

ವಿರುದ್ದ

ಪ್ರತಿಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಹಾರೋಹಳ್ಳಿ ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇನ್ನೊಬ್ಬರು

ಪತ್ರಿಕಾ ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ರಿಂದ 4ನೇ ಅರ್ಜಿದಾರರ ತಂದೆಯವರಾದ , ಶ್ರೀ.ಅಂಕೇಗೌಡ ಬಿನ್ ತಗಡೇಗೌಡ ರವರು ರಾಮನಗರ ಜಿಲ್ಲೆ, ಹಾರೋಹಳ್ಳಿ ತಾಲ್ಲೂಕು, ಮರಳವಾಡಿ ಹೋಬಳಿ, ಹುಯಿಲಪ್ಪನಹಳ್ಳಿ ಗ್ರಾಮದಲ್ಲಿ ದಿನಾಂಕ:06.03.1996 ರಂದು ಮರಣ ಹೊಂದಿರುತ್ತಾರೆ, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ 20.03.2025 ರ ಬೆಳಿಗ್ಗೆ ಸರಿಯಾಗಿ 11-00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರಿಸಿ ಇತ್ಯರ್ಥಗೊಳಿಸಲಾಗುವುದು.

2025 ರ ಫೆಬ್ರವರಿ 05ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಲಯದ ಮೊಹರಿನಿಂದ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಕನಕಪುರ

ಅರ್ಜಿದಾರರ ಪರ ವಕೀಲರು
ಬಿ.ಎಸ್.ನಾರಾಯಣಗೌಡ
ವಕೀಲರು
ದಿನಾಂಕ:05.02.2025
ಸ್ಥಳ: ಕನಕಪುರ.

ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್. ನಂ:775/ 2024

ಅರ್ಜಿದಾರರು: 1. ಶ್ರೀ.ದುರ್ಗೆಗೌಡ ದೊಡ್ಡಣ್ಣ ಬಿನ್ ಲೇಟ್ ಕಬ್ಬಾಳೇಗೌಡ, ವಯಸ್ಸು 79 ವರ್ಷ, ವಾಸ:- ಕಚುವನಹಳ್ಳಿ ಗ್ರಾಮ, ಸಾತನೂರು ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇತರರು

ವಿರುದ್ದ

ಪ್ರತಿಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ , ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. 2. ಗ್ರಾಮ ಲೆಕ್ಕಾಧಿಕಾರಿಗಳು, ಕಚುವನಹಳ್ಳಿ ವೃತ್ತ, ಸಾತನೂರು ಹೋಬಳಿ ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ಪತ್ರಿಕಾ ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ,2 ಮತ್ತು 4ನೇ ಅರ್ಜಿದಾರರ ತಾಯಿ , 3ನೇ ಅರ್ಜಿದಾರರ ಅತ್ತೆಯವರಾದ ಮಾರಮ್ಮ ಕೋಂ ಲೇಟ್ ಕಬ್ಬಾಳೇಗೌಡ ರವರು ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಸಾತನೂರು ಹೋಬಳಿ, ಕಚುವನಹಳ್ಳಿ ಗ್ರಾಮದಲ್ಲಿ ದಿನಾಂಕ:17.11.2001 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ : 28.03.2025 ರ ಬೆಳಿಗ್ಗೆ ಸರಿಯಾಗಿ 11-00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರಿಸಿ ಇತ್ಯರ್ಥಗೊಳಿಸಲಾಗುವುದು.

2025 ರ ಜನವರಿ 31ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಲಯದ ಮೊಹರಿನಿಂದ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಕನಕಪುರ

ಅರ್ಜಿದಾರರ ಪರ ವಕೀಲರು
ವಿಜಯ್‌ಕುಮಾರ್.ಹೆಚ್.ಪಿ
ವಕೀಲರು, ಕನಕಪುರ
ದಿನಾಂಕ:31.01.2025
ಸ್ಥಳ: ಕನಕಪುರ

ಮಾನ್ಯ 3ನೇ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್. ನಂ:774/ 2024

ಅರ್ಜಿದಾರರು: 1. ಶ್ರೀ.ದುರ್ಗೆಗೌಡ ದೊಡ್ಡಣ್ಣ ಬಿನ್ ಲೇಟ್ ಕಬ್ಬಾಳೇಗೌಡ, ವಯಸ್ಸು 79 ವರ್ಷ, ವಾಸ:- ಕಚುವನಹಳ್ಳಿ ಗ್ರಾಮ, ಸಾತನೂರು ಹೋಬಳಿ, ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. ಮತ್ತು ಇತರರು

ವಿರುದ್ದ

ಪ್ರತಿಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ , ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ. 2. ಗ್ರಾಮ ಲೆಕ್ಕಾಧಿಕಾರಿಗಳು, ಕಚುವನಹಳ್ಳಿ ವೃತ್ತ, ಸಾತನೂರು ಹೋಬಳಿ ಕನಕಪುರ ತಾಲ್ಲೂಕು, ರಾಮನಗರ ಜಿಲ್ಲೆ.

ಪತ್ರಿಕಾ ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, 1 ,2 ಮತ್ತು 4ನೇ ಅರ್ಜಿದಾರರ ತಂದೆ , 3ನೇ ಅರ್ಜಿದಾರರ ಮಾವನವರಾದ ಶ್ರೀ.ಕಬ್ಬಾಳೇಗೌಡ ಬಿನ್ ಲೇಟ್ ದುರ್ಗೆಗೌಡ ರವರು ರಾಮನಗರ ಜಿಲ್ಲೆ, ಕನಕಪುರ ತಾಲ್ಲೂಕು, ಸಾತನೂರು ಹೋಬಳಿ, ಕಚುವನಹಳ್ಳಿ ಗ್ರಾಮದಲ್ಲಿ ದಿನಾಂಕ:23.02.1971 ರಂದು ಮರಣ ಹೊಂದಿದ್ದು, ಇವರ ಮರಣ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದ್ದು, ಇವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ : 28.03.2025 ರ ಬೆಳಿಗ್ಗೆ ಸರಿಯಾಗಿ 11-00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರಿಸಿ ಇತ್ಯರ್ಥ ಗೊಳಿಸಲಾಗುವುದು.

2025 ರ ಜನವರಿ 31ನೇ ತಾರೀಖು ಈ ದಿವಸ ನನ್ನ ಸಹಿ ಮತ್ತು ನ್ಯಾಯಲಯದ ಮೊಹರಿನಿಂದ ಹೊರಡಿಸಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಕನಕಪುರ

ಅರ್ಜಿದಾರರ ಪರ ವಕೀಲರು
ವಿಜಯ್‌ಕುಮಾರ್.ಹೆಚ್.ಪಿ
ವಕೀಲರು, ಕನಕಪುರ
ದಿನಾಂಕ:31.01.2025
ಸ್ಥಳ: ಕನಕಪುರ.

ಮಾನ್ಯ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್. ನಂ:454/ 2023

ಅರ್ಜಿದಾರರು: 1. ಶ್ರೀಮತಿ.ಸಣ್ಣಮ್ಮ ಕೋಂ ಲೇಟ್ ರಾಮಣ್ಣ ವಯಸ್ಸು 71 ವರ್ಷ, ವಾಸ:- # 29 ಕಗ್ಗಲಹಳ್ಳಿ ಗ್ರಾಮ,ಮೇಗಳಬೀದಿ, ಹಾರೋಹಳ್ಳಿ ಹೋಬಳಿ, ಕನಕಪುರ (ಹಾಲಿಹಾರೋಹಳ್ಳಿ) ತಾಲ್ಲೂಕು, ರಾಮನಗರ ಜಿಲ್ಲೆ.

ವಿರುದ್ದ

ಪ್ರತಿಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು,ಕನಕಪುರ

ಪತ್ರಿಕಾ ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ ಮೈದುನನಾದ ಕೃಷ್ಣಪ್ಪ ಬಿನ್ ಲೇಟ್ ಯಾಲಕ್ಕಯ್ಯ, ರವರು ಕಗ್ಗಲಹಳ್ಳಿ ಗ್ರಾಮ, ಹಾರೋಹಳ್ಳಿ ಹೋಬಳಿ, ಕನಕಪುರ (ಹಾರೋಹಳ್ಳಿ) ತಾಲ್ಲೂಕು, ರಾಮನಗರ ಜಿಲ್ಲೆ, ಈ ವಿಳಾಸದಲ್ಲಿ ವಾಸವಾಗಿದ್ದು ದಿನಾಂಕ:19.04.2018 ರಂದು ಸದರಿ ಮೇಲ್ಕಂಡ ವಿಳಾಸದಲ್ಲಿ ಮರಣ ಹೊಂದಿದ್ದು, ಅವರ ಮರಣ ಸಮರ್ಥನಾ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದು ಕೃಷ್ಣಪ್ಪ ಬಿನ್ ಲೇಟ್ ಯಾಲಕ್ಕಯ್ಯ , ರವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ 20.03.2025 ರ ಬೆಳಿಗ್ಗೆ ಸರಿಯಾಗಿ 11-00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರಿಸಿ ಇತ್ಯರ್ಥ ಗೊಳಿಸಲಾಗುವುದು.

ದಿನಾಂಕ: 03.02.2025 ರಂದು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಕನಕಪುರ

ಅರ್ಜಿದಾರರ ಪರ ವಕೀಲರು
ಜಿ.ರಾಘವೇಂದ್ರ
ವಕೀಲರು,ರಾಮನಗರ
ದಿನಾಂಕ:03.02.2025
ಸ್ಥಳ: ಕನಕಪುರ

ಮಾನ್ಯ ಅಪರ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಜೆ.ಎಂ.ಎಫ್.ಸಿ ಕನಕಪುರ
ಸಿ.ಮಿಸ್. ನಂ:449/ 2023

ಅರ್ಜಿದಾರರು: 1. ಶ್ರೀಮತಿ.ಸಣ್ಣಮ್ಮ ಕೋಂ ಲೇಟ್ ರಾಮಣ್ಣ ವಯಸ್ಸು 71 ವರ್ಷ, ವಾಸ:- # 29 ಕಗ್ಗಲಹಳ್ಳಿ ಗ್ರಾಮ,ಮೇಗಳಬೀದಿ, ಹಾರೋಹಳ್ಳಿ ಹೋಬಳಿ, ಕನಕಪುರ (ಹಾಲಿಹಾರೋಹಳ್ಳಿ) ತಾಲ್ಲೂಕು, ರಾಮನಗರ ಜಿಲ್ಲೆ.

ವಿರುದ್ದ

ಪ್ರತಿಅರ್ಜಿದಾರರು: 1. ಜನನ ಮತ್ತು ಮರಣ ನೊಂದಣಿ ಅಧಿಕಾರಿಗಳು, ತಹಶೀಲ್ದಾರ್ ಕನಕಪುರ ತಾಲ್ಲೂಕು,ಕನಕಪುರ

ಪತ್ರಿಕಾ ಪ್ರಕಟಣೆ

ಮೇಲ್ಕಾಣಿಸಿರುವ ಅರ್ಜಿದಾರರು ಈ ಮೂಲಕ ತಿಳಿಯಪಡಿಸುವುದೇನೆಂದರೆ, ಅರ್ಜಿದಾರರ ನಾದಿನಿಯಾದ ಸಿದ್ದಮ್ಮ ಬಿನ್ ಲೇಟ್ ಯಾಲಕ್ಕಯ್ಯ ರವರು ಕಗ್ಗಲಹಳ್ಳಿ ಗ್ರಾಮ, ಹಾರೋಹಳ್ಳಿ ಹೋಬಳಿ, ಕನಕಪುರ (ಹಾರೋಹಳ್ಳಿ) ತಾಲ್ಲೂಕು, ರಾಮನಗರ ಜಿಲ್ಲೆ, ಈ ವಿಳಾಸದಲ್ಲಿ ವಾಸವಾಗಿದ್ದು ದಿನಾಂಕ:06.03.2010 ರಂದು ಸದರಿ ಮೇಲ್ಕಂಡ ವಿಳಾಸದಲ್ಲಿ ಮರಣ ಹೊಂದಿದ್ದು, ಅವರ ಮರಣ ಸಮರ್ಥನಾ ಪ್ರಮಾಣ ಪತ್ರವನ್ನು ನೀಡುವಂತೆ ಎದುರುದಾರರಿಗೆ ನಿರ್ದೇಶನ ನೀಡುವಂತೆ ಕೋರಿ ಈ ಪ್ರಕರಣವನ್ನು ಸಲ್ಲಿಸಿದು ಸಿದ್ದಮ್ಮ ಬಿನ್ ಲೇಟ್ ಯಾಲಕ್ಕಯ್ಯ ರವರ ಮರಣ ದಿನಾಂಕದ ಬಗ್ಗೆ ಯಾರದಾದರೂ ತಕರಾರು ಇದ್ದರೆ ಖುದ್ದಾಗಿ ಆಗಲಿ ಅಥವಾ ಅಧಿಕಾರ ಕೊಟ್ಟ ವಕೀಲರ ಮುಖಾಂತರವಾಗಲೀ ನ್ಯಾಯಾಲಯ ನಿಗಧಿಪಡಿಸಿದ ದಿನಾಂಕದಂದು ಅಂದರೆ, ದಿನಾಂಕ 20.03.2025 ರ ಬೆಳಿಗ್ಗೆ ಸರಿಯಾಗಿ 11-00 ಘಂಟೆಗೆ ನ್ಯಾಯಾಲಯದ ಮುಂದೆ ಹಾಜರಾಗಿ ತಕರಾರು ಸಲ್ಲಿಸತಕ್ಕದು, ತಪ್ಪಿದಲ್ಲಿ ಯಾರದ್ದೂ ತಕರಾರು ಇಲ್ಲವೆಂದು ಪರಿಗಣಿಸಿ ಉಲ್ಲೇಖಿತ ಪ್ರಕರಣವನ್ನು ಮುಂದುವರಿಸಿ ಇತ್ಯರ್ಥ ಗೊಳಿಸಲಾಗುವುದು.

ದಿನಾಂಕ: 03.02.2025 ರಂದು ನನ್ನ ಸಹಿಯೊಡನೆ ಮತ್ತು ನ್ಯಾಯಾಲಯದ ಮೊಹರಿನೊಡನೆ ನೀಡಲಾಗಿದೆ.

ಮಾನ್ಯ ನ್ಯಾಯಾಲಯದ ಆದೇಶದ ಮೇರೆಗೆ
ಶಿರಸ್ತೆದಾರರು,
ಮಾನ್ಯ ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಲಯ ಕನಕಪುರ

ಅರ್ಜಿದಾರರ ಪರ ವಕೀಲರು
ಜಿ.ರಾಘವೇಂದ್ರ
ವಕೀಲರು,ರಾಮನಗರ
ದಿನಾಂಕ:03.02.2025
ಸ್ಥಳ: ಕನಕಪುರ.

ರಾಜ್ಯ ಸರಕಾರ ಕೆಡವಲು ಮಹಾನ್ ನಾಯಕನ ಸಂಚು

1000 ಕೋಟಿ ಆರೋಪ ಯತ್ನಾಳ್ ಪ್ರಕರಣ ವಜಾ



ಬೆಂಗಳೂರು: ರಾಜ್ಯದಲ್ಲಿ ಸರಕಾರ ಕೆಡವಲು 1,000 ಕೋಟಿ ರು. ಗಳ ವೆಚ್ಚದಲ್ಲಿ ಯೋಜನೆ ಸಿದ್ಧವಾಗುತ್ತಿದೆ ಎಂಬುದಾಗಿ ಹೇಳಿಕೆ ನೀಡುವ ಮೂಲಕ ಗಲಭೆಗೆ ಪ್ರಚೋದನೆ ನೀಡಿದ್ದಾರೆ ಎಂಬ ಆರೋಪದಲ್ಲಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಅವರ ವಿರುದ್ಧ ದಾಖಲಾಗಿದ್ದ ಪ್ರಕರಣವನ್ನು ಹೈಕೋರ್ಟ್ ರದ್ದುಪಡಿಸಿದೆ.

ತಮ್ಮ ವಿರುದ್ಧದ ಪ್ರಕರಣ ರದ್ದುಕೋರಿ ಬಸನಗೌಡ ಪಾಟೀಲ್ ಯತ್ನಾಳ್ ಸಲ್ಲಿಸಿದ್ದ ಅರ್ಜಿಯ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಂ. ನಾಗಪ್ರಸನ್ನ ಅವರಿದ್ದ ನ್ಯಾಯಪೀಠ ಈ ಆದೇಶ ನೀಡಿದೆ.

ಆರೋಪವನ್ನು ಪುಷ್ಟೀಕರಿಸುವ ಯಾವುದೇ ಅಂಶಗಳನ್ನು ಹೊಂದಿರದ ಅಪರಾಧಗಳ ಬಗ್ಗೆ ಹೆಚ್ಚಿನ ತನಿಖೆಗೆ ಅನುಮತಿ ನೀಡುವುದು ಅಜಾಗರೂಕ ಪ್ರಕರಣ ದಾಖಲಿಸಲು ಅನುಮತಿ ನೀಡಿದಂತಾಗುತ್ತದೆ ಎಂದು ನ್ಯಾಯಾಲಯ ಹೇಳಿದೆ. ಅಲ್ಲದೆ, ಮುಂದಿನ ಪ್ರಕ್ರಿಯೆಗೆ ಅನುಮತಿ ನೀಡುವುದು ಕಾನೂನಿನ ಪ್ರಕ್ರಿಯೆಯ ದುರುಪಯೋಗ ಎಂದು ಮತ್ತು ನ್ಯಾಯದಾನ ತಪ್ಪಿದಂತಾಗಲಿದೆ ಎಂದು ಪೀಠ ತಿಳಿಸಿದೆ.

ಪ್ರಕರಣದ ಹಿನ್ನೆಲೆ

ದಾವಣಗೆರೆಯಲ್ಲಿ ಮಾತನಾಡಿದ್ದ ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್, ಮಹಾನ್ ನಾಯಕರೊಬ್ಬರು ರಾಜ್ಯದಲ್ಲಿ ಸರಕಾರ ಕೆಡವಲು 1000 ಕೋಟಿ ರು. ಯೋಜನೆ ರೂಪಿಸಿದ್ದಾರೆ. ಆ ಮಹಾನ್ ನಾಯಕ ಯಾರು ಎಂಬುದು ನಿಮಗೆ ಗೊತ್ತಿದೆ. ಅವರ ಹೆಸರನ್ನು ಬಹಿರಂಗಪಡಿಸುವುದಿಲ್ಲ ಎಂದು ತಿಳಿಸಿದ್ದರು. ಈ ಸಂಬಂಧ ಕೆಪಿಸಿಸಿ ಪ್ರಧಾನ ಕಾರ್ಯದರ್ಶಿ ಎಸ್. ಮನೋಹರ್ ಅವರು 2024 ರ ಸೆಪ್ಟೆಂಬರ್ 1 ರಂದು ದಾವಣಗೆರೆಯ ಗಾಂಧಿನಗರ ಪೊಲೀಸ್ ಠಾಣೆಗೆ ದೂರು ನೀಡಿದ್ದರು. ಈ ಸಂಬಂಧ ಪೊಲೀಸರು ಎಫ್ಐಆರ್ ದಾಖಲಿಸಲಾಗಿತ್ತು. ಇದನ್ನು ಪ್ರಶ್ನಿಸಿ ಯತ್ನಾಳ್ ಹೈಕೋರ್ಟ್ ಮೆಟ್ಟಿಲೇರಿದ್ದರು.

ಸಮಾಚಾರ ಸಣ್ಣದಲ್ಲ

ಇಂದು ಹಿಂದೂಸ್ತಾನಿ ಸಂಗೀತೋತ್ಸವ

ಬೆಂಗಳೂರು: ಹಿಂದೂಸ್ತಾನಿ ಸಂಗೀತೋತ್ಸವ ಕಾರ್ಯಕ್ರಮವನ್ನು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಶ್ರೀ ಗುರು ಸಮರ್ಥ ಸಂಗೀತ ವಿದ್ಯಾಲಯ ಭಾನುವಾರ ಆಯೋಜಿಸಿದೆ.

ಕಾರ್ಯಕ್ರಮ ದಲ್ಲಿ ತ್ಯಾಗರಾಜ ಕೋಆಪ ರೇಟಿವ್ ಬ್ಯಾಂಕ್ ಲಿಮಿಟೆಡ್ ಅಧ್ಯಕ್ಷ ಡಾ. ವೆಂಕಟೇಶ್ ಅವರಿಗೆ ಸೇವಾ ಕಾಯಕ ಪುರಸ್ಕಾರ ನೀಡಿ ಗೌರವಿಸಲಾಗುವುದು. ಅತಿಥಿ ಗಾಯಕ ಅಶ್ವಿನ್ ಬಾಳಿಗಾ, ಆಶೀಶ್ ನಾಯಕ್, ಉಮಾ ಕುಲ ಕರ್ಣಿ, ಚಿ.ವೆಂಕಟ್ ನಿತಿನ್ ಹಾಗೂ ವಿದ್ಯಾಲಯದ ವಿದ್ಯಾರ್ಥಿಗಳಿಂದ ತಬಲ ಹಾಗೂ ಹಿಂದೂಸ್ಥಾನಿ ಶಾಸ್ತ್ರೀಯ ಗಾಯನ, ವಾದನ ಕಾರ್ಯಕ್ರಮ ಏರ್ಪಡಿಸಲಾಗಿದೆ. ಡಾ.ಶರತ್ ಹೆಗಡೆ, ಪಂಡಿತ್ ಡಾ.ಸತೀಶ್ ಹಂಪಿಹೊಳಿ, ಡಾ.ಕಿರಣ ಅಭಿಜಿತ್ ಕುಲಕರ್ಣಿ ಹಾಗೂ ಜೆಎಸ್‌ಡಬ್ಲ್ಯು ಕಂಪನಿಯ ಸಹಾಯಕ ವೆಂಕಟರಮಣ.ಎಂ. ಉಪಸ್ಥಿತ ರಿರಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ವಿರಾಮ
ಪ್ರತಿ ಭಾನುವಾರ

ಕರ್ನಾಟಕ ರಾಜ್ಯದಲ್ಲಿ ರಕ್ತ ವರ್ಗಾವಣೆ ಸೇವೆಗಳಿಗೆ ರಾಷ್ಟ್ರೀಯಮಟ್ಟದ ಮಾನ್ಯತೆ

ನಗರದ ಇಂದಿರಾ ಗಾಂಧಿ ಮಕ್ಕಳ ಆಸ್ಪತ್ರೆ ರಕ್ತ ಕೇಂದ್ರಕ್ಕೆ ಪ್ರಶಂಸೆ

ಬೆಂಗಳೂರು: ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ ರಕ್ತ ಕೇಂದ್ರದ ಅಮೋಘ ಸೇವೆಗೆ ರಾಷ್ಟ್ರೀಯಮಟ್ಟದ ಮಾನ್ಯತೆ ದೊರೆತಿದೆ.

ಕರ್ನಾಟಕ ರಾಜ್ಯದಲ್ಲಿ ರಕ್ತ ವರ್ಗಾವಣೆ ಸೇವೆಗಳಿಗೆ ತನ್ನ ಅಮೂಲ್ಯ ಕೊಡುಗೆಗಾಗಿ ಕೇಂದ್ರ ಸರಕಾರ ಶ್ಲಾಘನೀಯ ವ್ಯಕ್ತಪಡಿಸಿದ್ದು, ಪ್ರಶಸ್ತಿ ಜತೆಗೆ ಶ್ಲಾಘನೀಯ ಪ್ರಮಾಣಪತ್ರ ನೀಡಿ ಗೌರವಿಸಲಾಗಿದೆ. ಫೆಬ್ರವರಿ 5 ಮತ್ತು 6 ರಂದು ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವಾಲಯ ಕೊಚ್ಚಿಯಲ್ಲಿ ನಡೆದ ರಕ್ತ ವರ್ಗಾವಣೆ ಸೇವೆಗಳ ರಾಷ್ಟ್ರೀಯ ಸಮಾವೇಶದಲ್ಲಿ ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ ರಕ್ತ ಕೇಂದ್ರದ ಸೇವೆ ಗುರುತಿಸಿದೆ.

ಪ್ರಶಸ್ತಿ ಹಾಗೂಪ್ರಮಾಣಪತ್ರವನ್ನು ಆರೋಗ್ಯ ಸೇವೆಗಳ ನಿರ್ದೇಶನಾಲಯ ಮತ್ತು ರಾಷ್ಟ್ರೀಯ ರಕ್ತ ವರ್ಗಾವಣೆ ಕೌನ್ಸಿಲ್ ಅಧಿಕಾರಿಗಳು ನೀಡಿದ್ದಾರೆ. ಆಸ್ಪತ್ರೆಯ ರಕ್ತ ಕೇಂದ್ರವು ರಕ್ತ ಕೇಂದ್ರವು ಒದಗಿಸಿದ ಗುಣಮಟ್ಟದ ಸೇವೆಗಳಿಗಾಗಿ ಕರ್ನಾಟಕ ರಾಜ್ಯ ರಕ್ತ ವರ್ಗಾವಣೆ ಕೌನ್ಸಿಲ್ (ಕೆಎಸ್‌ಬಿಟಿಸಿ) ಈ ಪ್ರಶಸ್ತಿಗೆ ನಾಮ ನಿರ್ದೇಶನ ಮಾಡಿದೆ. ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ ನಿರ್ದೇಶಕ ಡಾ.ಸಂಜಯ್ ಕೆ.ಎಸ್. ಅವರ ಸಮರ್ಥ ನಾಯಕತ್ವದಲ್ಲಿ ರಕ್ತ ಕೇಂದ್ರವು ಸ್ವಯಂಪ್ರೇರಿತ ರಕ್ತದಾನ ಶಿಬಿರಗಳನ್ನು ನಡೆಸುತ್ತಿದೆ. ಆಸ್ಪತ್ರೆಯಲ್ಲಿ ದಾಖಲಾದ ಮಕ್ಕಳಿಗೆ ಪ್ರತ್ಯೇಕವಾದ ರಕ್ತದಾನ ಮಾಡಲಾಗುತ್ತಿದೆ. ರಕ್ತ ಕೇಂದ್ರವು ಪ್ರತಿ ವರ್ಷ 5000 ಕ್ಕೂ ಹೆಚ್ಚು ಯೂನಿಟ್ ರಕ್ತ ಸಂಗ್ರಹಿಸುತ್ತದೆ ಮತ್ತು ರೋಗಿಗಳಿಗೆ 14000 ಕ್ಕೂ ಹೆಚ್ಚು ಯೂನಿಟ್ ರಕ್ತ ನೀಡುತ್ತದೆ. ಆಸ್ಪತ್ರೆಯು ಮಾನ್ಯತೆ ಪಡೆದ ಥಲಸ್ಸೆಮಿಯಾ ನೋಡಲ್ ಕೇಂದ್ರವಾಗಿದೆ. ಇದು ಥಲಸ್ಸೆಮಿಯಾ ಮೇಜರ್ ಹೊಂದಿರುವ ಮಕ್ಕಳಿಗೆ ರೋಗನಿರ್ಣಯ ಮತ್ತು ಚಿಕಿತ್ಸೆ ನೀಡುತ್ತದೆ.

ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯ ರಕ್ತ ಕೇಂದ್ರಕ್ಕೆ ನೀಡಿರುವ ಶ್ಲಾಘನೀಯ ಪ್ರಮಾಣಪತ್ರ ವಿತರಿಸಲಾಯಿತು. ನಿರ್ದೇಶಕರಾದ ಡಾ.ಕೆ.ಎಸ್. ಸಂಜಯ್, ಆಸ್ಪತ್ರೆಯ ಡಾ.ಆರ್. ಪ್ರದೀಪ್ ಇದ್ದರು.

> ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯು ಮಕ್ಕಳ ಆರೈಕೆ ಹಾಗೂ ಚಿಕಿತ್ಸೆಯಲ್ಲಿ ಮುಂಚೂಣಿಯಲ್ಲಿದೆ. ಆಸ್ಪತ್ರೆಯ ರಕ್ತ ಕೇಂದ್ರದ ಸಾಧನೆ ಪರಿಗಣಿಸಿ ಕೇಂದ್ರ ಸರಕಾರವು ಶ್ಲಾಘನೀಯ ಪ್ರಮಾಣಪತ್ರ ನೀಡಿದೆ. ಆಸ್ಪತ್ರೆ ಪ್ರಗತಿಗೆ ಸಹಕಾರಿಯಾಗಲಿದೆ.
> -ಡಾ.ಕೆ.ಎಸ್.ಸಂಜಯ್, ನಿರ್ದೇಶಕರು, ಇಂದಿರಾ ಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆ

ಆಸ್ಪತ್ರೆಯ ಆವರಣದಲ್ಲಿ ಅಸ್ಥಿಮಜ್ಜೆ ಕಸಿ ಘಟಕ

ಇಂದಿರಾಗಾಂಧಿ ಮಕ್ಕಳ ಆರೋಗ್ಯ ಸಂಸ್ಥೆಯಲ್ಲಿ ಥಲಸ್ಸೆಮಿಯಾ ಚಿಕಿತ್ಸೆಗೆ ಒಳಗಾದ 230 ಕ್ಕೂ ಹೆಚ್ಚು ಮಕ್ಕಳು ಪ್ರತಿ ತಿಂಗಳು ಆಸ್ಪತ್ರೆಗೆ ರಕ್ತ ವರ್ಗಾವಣೆಗಾಗಿ ಬರುತ್ತಾರೆ. ಅವರಿಗೆ ಲ್ಯುಕೋರೆಡ್ಯೂಸ್ಡ್ ರಕ್ತವನ್ನು ನೀಡಲಾಗುತ್ತದೆ, ಇದನ್ನು ಕಬ್ಬಿಣದ ಚೆಲೇಟಿಂಗ್ ಔಷಧಿಗಳೊಂದಿಗೆ ಉಚಿತವಾಗಿ ನೀಡಲಾಗುತ್ತದೆ. ಮುಂದಿನ ಕ್ರಮಕ್ಕಾಗಿ ಪೋಷಕರಿಗೆ ಕೌನ್ಸೆಲಿಂಗ್ ಕೂಡ ನೀಡಲಾಗುತ್ತದೆ. ರಕ್ತ ಕೇಂದ್ರವು ರಕ್ತ ವರ್ಗಾವಣೆಗೆ ಅಗತ್ಯವಿರುವ ಎನ್ ಐಸಿಯುನಲ್ಲಿರುವ ರೋಗಿಗಳಿಗೆ ರಕ್ತದ ಘಟಕಗಳನ್ನು ಸಹ ಸಿದ್ಧಪಡಿಸುತ್ತದೆ. ಒ ಪಾಸಿಟೀವ್ ಪ್ಯಾಕ್ ಮಾಡಲಾದ ಕೆಂಪು ರಕ್ತ ಕಣಗಳನ್ನು ಎಬಿ ಪ್ಲಾಸ್ಮಾದಲ್ಲಿ ಪರಿಚಯನಗೊಳಿಸಲಾಗುತ್ತದೆ. ಸದ್ಯದಲ್ಲೆ ಆಸ್ಪತ್ರೆಯ ಆವರಣದಲ್ಲಿ ಹೊಸ ಒಪಿಡಿ ಘಟಕ ಹಾಗೂ ಅಸ್ಥಿಮಜ್ಜೆ ಕಸಿ ಘಟಕ ತೆರಯಲಾಗುತ್ತದೆ ಎಂದು ಆಸ್ಪತ್ರೆಯ ಮೂಲಗಳು ತಿಳಿಸಿವೆ.

ದೆಹಲಿ ಫಲಿತಾಂಶ: ರಾಜ್ಯ ಬಿಜೆಪಿ ಕಚೇರಿ ಮುಂದೆ ಸಂಭ್ರಮಾಚರಣೆ

ಬೆಂಗಳೂರು: ದೆಹಲಿ ವಿಧಾನಸಭಾ ಚುನಾವಣಾಯಲ್ಲಿ ಬಿಜೆಪಿ ಬಹುಮತ ಸಾಧಿಸುತ್ತಿದ್ದಂತೆ ಮಲ್ಲೇಶ್ವರದ ಬಿಜೆಪಿ ರಾಜ್ಯ ಕಾರ್ಯಾಲಯದ ಮುಂಭಾಗದಲ್ಲಿ ಬಿಜೆಪಿ ಮುಖಂಡರು ಮತ್ತು ಕಾರ್ಯಕರ್ತರು ವಿಜಯೋತ್ಸವ ಆಚರಿಸಿದರು. ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ, ವಿಪಕ್ಷ ನಾಯಕ ಆರ್.ಅಶೋಕ, ವಿಧಾನಪರಿಷತ್ ವಿಪಕ್ಷ ನಾಯಕ ಛಲವಾದಿ ನಾರಾಯ ಣಸ್ವಾಮಿ, ಮಾಜಿ ಸಚಿವರು ಹಾಗೂ ಶಾಸ ಕರು, ವಿಧಾನ ಪರಿಷತ್ತಿನ ಸದಸ್ಯರು, ಬೆಂಗ ಳೂರು ನಗರ ಜಿಲ್ಲಾಧ್ಯಕ್ಷರು, ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರು ಪರಸ್ಪರ ಸಿಹಿ ತಿನ್ನಿಸಿ, ಪಟಾಕಿ ಸಿಡಿಸಿ ವಿಜಯೋತ್ಸವ ಆಚರಿಸಿದರು.

ಮೋದಿಯವರ ಕೈ ಬಲಪಡಿಸಲು, ಅಭಿವೃದ್ಧಿಗಾಗಿ ಮತದಾನ

ಕಳಚಿಬಿದ್ದ ಕೇಜ್ರಿವಾಲ್ ಮುಖವಾಡ

ಬೆಂಗಳೂರು: ಪ್ರಬುದ್ಧ ಮತದಾರರು ದೆಹಲಿ ರಾಜ್ಯದ ಅಭಿವೃದ್ಧಿಯ ದೃಷ್ಟಿಯಿಂದ ಬಿಜೆಪಿಯನ್ನು ಗೆಲ್ಲಿಸಿದ್ದಾರೆ. ನರೇಂದ್ರ ಮೋದಿ ಅವರ ಕೈ ಬಲಪಡಿಸಲು ಮತದಾರರು ಮತ್ತೊಮ್ಮೆ ನಮಗೆ ಆಶೀರ್ವಾದ ಮಾಡಿದ್ದಾರೆ ಎಂದು ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ. ವಿಜಯೇಂದ್ರ ಹೇಳಿದ್ದಾರೆ.

ಮಲ್ಲೇಶ್ವರದ ಬಿಜೆಪಿ ಕಾರ್ಯಾಲಯದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿ, ದೆಹಲಿ ರಾಜ್ಯದಲ್ಲಿ 27 ವರ್ಷಗಳ ನಂತರ ಬಿಜೆಪಿಗೆ ಅಭೂತಪೂರ್ವ ಗೆಲುವು ಲಭಿಸಿದೆ. ಭ್ರಷ್ಟಾಚಾರದ ವಿರುದ್ಧ ಆಂದೋಲನ ಮಾಡಿ ದೆಹಲಿಯಲ್ಲಿ ಅಧಿಕಾರಕ್ಕೆ ಬಂದಿದ್ದ ಆಮ್ ಆದ್ಮಿ ಪಕ್ಷದ ಅರವಿಂದ ಕೇಜ್ರಿವಾಲ್ ಅವರ ಮುಖವಾಡ ಕಳಚಿಬಿದ್ದಿದೆ. ಲಿಕ್ಕರ್ ಗೇಟ್, ಶೀಷ್ ಮಹಲ್ ಹಗರಣದ ಹಿನ್ನೆಲೆಯಲ್ಲಿ ದೆಹಲಿಯಲ್ಲಿ ಆಪ್ ಬಣ್ಣ ಬಯಲಾಗಿದೆ. ದೆಹಲಿ ಮತದಾರರು, ಕಾರ್ಯಕರ್ತರಿಗೆ ಅಭಿನಂದನೆಗಳು ಎಂದರು.

ದೆಹಲಿಯಲ್ಲಿ ಕಾಂಗ್ರೆಸ್ ಪಕ್ಷ ಸತತ 3ನೇ ಬಾರಿಗೆ ಶೂನ್ಯ ಸಂಪಾದನೆ ಮಾಡಿದೆ. ಲೋಕಸಭಾ ಚುನಾವಣೆಯಲ್ಲೂ ಅದು ಶೂನ್ಯ ಸಂಪಾದನೆ ಮಾಡಿತ್ತು. ಗ್ಯಾರಂಟಿಗಳೆಲ್ಲ ತಾತ್ಕಾಲಿಕ. ತಾತ್ಕಾಲಿಕ ಗ್ಯಾರಂಟಿಗಿಂತ ದೃಢ ನಾಯಕತ್ವ ಕೊಡುವ ನರೇಂದ್ರ ಮೋದಿ ನೇತೃತ್ವದ ಬಿಜೆಪಿಯಿಂದ ಮಾತ್ರ ಅಭಿವೃದ್ಧಿ ಸಾಧ್ಯ ಎಂಬುದನ್ನು ದೆಹಲಿ ಮತದಾರರು ಮತ್ತೊಮ್ಮೆ ರುಜುವಾತು ಮಾಡಿದ್ದಾರೆ ಎಂದರು.

> ಕೇಜ್ರಿವಾಲ್ ಪ್ರಾಮಾಣಿಕ ಅಲ್ಲ, ಭ್ರಷ್ಟ ಎಂಬುದು ಜನರಿಗೆ ಮನವರಿಕೆ ಆಗಿದೆ. ಸುಳ್ಳಿನ ಮುಖವಾಡ ಕಳಚಿಬಿದ್ದಿದೆ. ಕಾಂಗ್ರೆಸ್ ಅವಲೋಕನ ಮಾಡಿಕೊಳ್ಳಬೇಕಿದೆ. ಕೇವಲ ನಕಾರಾತ್ಮಕ ಪ್ರಚಾರದಿಂದ ಚುನಾವಣೆ ಗೆಲ್ಲಲು ಅಸಾಧ್ಯ. ಅಂಬೇಡ್ಕರರ ಸಂವಿಧಾನ, ಜನತೆಯ ಸಂವಿಧಾನ ಗೆದ್ದಿದೆ.
> ಸಿ.ಟಿ.ರವಿ, ವಿಧಾನಪರಿಷತ್ ಸದಸ್ಯ

> ಅರವಿಂದ ಕೇಜ್ರಿವಾಲ್ ಅವರ ದೆಹಲಿ ಸರಕಾರ ಭ್ರಷ್ಟಾಚಾರಕ್ಕೆ ಬಲಿಯಾಗಿದೆ. ಬಿಜೆಪಿ ಇಡೀ ದೇಶದಲ್ಲಿ ಭ್ರಷ್ಟಾಚಾರದ ವಿಚಾರದಲ್ಲಿ ಒಂದೇ ಒಂದು ಆಪಾದನೆ ಹೊತ್ತಿಲ್ಲ. ಕರ್ನಾಟಕದಲ್ಲಿ ನಮ್ಮ ವಿರುದ್ಧ ಶೇ.40 ಕಮಿಷನ್, ಪೇ ಸಿಎಂ ಮತ್ತಿತರ ಆರೋಪ ಮಾಡಿ ಚುನಾವಣಾ ತಂತ್ರ ಹೆಣೆದಿದ್ದ ಕಾಂಗ್ರೆಸಿದ್ದು ದೆಹಲಿಯಲ್ಲಿ ಶೂನ್ಯ ಸಂಪಾದನೆ. ಖಾತೆ ತೆರೆದಿಲ್ಲ. ಆದರೆ ಕ್ಯಾತೆ ತೆಗೆಯುವುದನ್ನು ಅವರು ಬಿಡುವುದಿಲ್ಲ.
> ಛಲವಾದಿ ನಾರಾಯಣಸ್ವಾಮಿ, ವಿಧಾನಪರಿಷತ್ ವಿಪಕ್ಷ ನಾಯಕ

ವಾರಾಂತ್ಯ ಬಿಟ್ಟು ಪ್ರತಿದಿನ 90 ನಿಮಿಷ ಆನ್‌ಲೈನ್ ಪಾಠ

ಹಿಂದಿ ಕಲಿಯೋಕೆ ಮುಂದಾದ ಎಚ್‌ಡಿಕೆ

ನವದೆಹಲಿ: ದಕ್ಷಿಣ ಭಾರತದ ರಾಜ್ಯಗಳ ಮೇಲೆ ಹಿಂದಿ ಹೇರಿಕೆಯ ಬಗ್ಗೆ ಚರ್ಚೆ ನಡೆಯುತ್ತಿರುವಾಗಲೇ ಕೇಂದ್ರ ಸಚಿವ ಎಚ್.ಡಿ ಕುಮಾರಸ್ವಾಮಿ ಅವರು ಮಹತ್ವದ ನಿರ್ಧಾರವನ್ನು ಕೈಗೊಂಡಿದ್ದಾರೆ. ಇನ್ನು ಮುಂದೆ ಸಚಿವರು ಹಿಂದಿ ಕಲಿಯುವ ನಿರ್ಧಾರವನ್ನು ಮಾಡಿದ್ದಾರೆ.

ಅವರು ವಾರಾಂತ್ಯದಲ್ಲಿ ಬಿಟ್ಟು ದಿನಾಲೂ 90 ನಿಮಿಷಗಳ ಕಾಲ ಹಿಂದಿ ಕಲಿಕೆಯಲ್ಲಿ ತೊಡಗಿಕೊಳ್ಳಲಿದ್ದಾರೆ ಎಂದು ತಿಳಿದು ಬಂದಿದೆ. ಸಚಿವರು ಇನ್ನುಮುಂದೆ ಆನ್‌ಲೈನ್ ಮೂಲಕ ಹಿಂದಿಯನ್ನು ಕಲಿಯಲಿದ್ದಾರೆ.

ಬೋಧಕರ ನೇಮಕ: ಹಿಂದಿ ಕಲಿಕೆಗಾಗಿಯೇ ಬೋಧಕರನ್ನು ನೇಮಿಸಿ ಕೊಂಡಿದ್ದು, ಹಿಂದಿ ಬರವಣಿಗೆ ಹಾಗೂ ಸುಲಭವಾಗಿ ಹಿಂದಿಯಲ್ಲಿ ಮಾತನಾಡುವುದನ್ನು ಅವರು ಹೇಳಿಕೊಡಲಿದ್ದಾರೆ. ಲೋಕ ಸಭೆಯಲ್ಲಿ ಹಿಂದಿಯಲ್ಲಿ ಮಾತನಾಡಲು ಹಾಗೂ ತಮ್ಮ ವಿಚಾರಗಳನ್ನು ಮಂಡಿಸಲು ಕಷ್ಟವಾಗುತ್ತಿರುವುದರಿಂದ ಕುಮಾರಸ್ವಾಮಿಯವರು ಹಿಂದಿ ಕಲಿಯುವ ನಿರ್ಧಾರ ಕೈಗೊಂಡಿದ್ದಾರೆ ಎಂದು ಹೇಳಲಾಗಿದೆ.

ಹಿಂದಿ ಕಲಿಕೆಯ ಬಗ್ಗೆ ಮಾತ ನಾಡಿದ ಎಚ್‌ಡಿಕೆ, ಉತ್ತರ ಭಾರತದಲ್ಲಿ ಎಲ್ಲರೂ ಹಿಂದಿಯಲ್ಲಿ ಮಾತನಾಡುತ್ತಾರೆ, ಹೆಚ್ಚಿನ ಸಂಸದರು ಹಿಂದಿಯಲ್ಲಿ ಮಾತನಾಡುತ್ತಾರೆ. ನನ್ನ ಸಚಿವಾಲಯದ ಎಲ್ಲ ಅಧಿಕಾರಿಗಳು ಹಿಂದಿಯಲ್ಲಿ ಮಾತನಾಡುತ್ತಾರೆ.

ಹೀಗಾಗಿ ಹಿಂದಿ ಕಲಿಕೆ ಕಲಿಕೆ ನನಗೆ ಅನಿವಾರ್ಯವಾಗಿದೆ, ಬೇರೆ ದಾರಿಯಿಲ್ಲ ಎಂದು ಹೇಳಿದ್ದಾರೆ. ಕುಮಾರಸ್ವಾಮಿಯವರ ಕಲಿಕಾ ಪ್ರಯತ್ನಗಳಿಗೆ ಅವರ ಪುತ್ರ ನಿಖಿಲ್ ಕುಮಾರಸ್ವಾಮಿ ಅವರೂ ಕೂಡ ಸಾಥ್ ನೀಡಿದ್ದಾರೆ. ಬೆಳಗ್ಗೆ 6. 30 ರಿಂದ ಕಲಿಕಾ ತರಬೇತಿ ಪ್ರಾರಂಭವಾಗುತ್ತದೆ ಎಂದು ತಿಳಿದು ಬಂದಿದೆ.

ಇಂಡಿಯಾ ಎನರ್ಜಿ ನೆಟ್‌ವರ್ಕ್ ಹಾಗೂ ಎಂ.ಎಸ್.ರಾಮಯ್ಯ ವಿಶ್ವವಿದ್ಯಾಲಯದ ಸಹಯೋಗದಲ್ಲಿ ಭಾರತದ ಶಕ್ತಿ ಪರಿವರ್ತನೆಯಲ್ಲಿ ಪರಮಾಣು ಶಕ್ತಿಯ ಪಾತ್ರ ವಿಚಾರ ಸಂಕಿರಣ ನಡೆಯಿತು. ಈ ವೇಳೆ ಭಾರತ ಸರಕಾರ ಪರಮಾಣು ಶಕ್ತಿ ಇಲಾಖೆ ಮುಖ್ಯಸ್ಥ ಡಾ.ಎ.ಕೆ.ನಾಯಕ್, ಪ್ರೊ.ಶ್ರೀಕಾಂತ್, ಪ್ರೊ.ಗೋಪಾಲನ್ ಜಗದೀಶ, ಬಾರ್ಕ್ ನಿರ್ದೇಶಕ ಕೈಲಾಶ್ ಅಗರ್‌ವಾಲ್, ಇಂಡಿಯಾ ಎನರ್ಜಿ ನೆಟ್‌ವರ್ಕ್ ಉಮೇಶ್‌ಚಂದ್ರ, ಗಡಿ ಪ್ರಾಧಿಕಾರ ಕಾರ್ಯದರ್ಶಿ ಪ್ರಕಾಶ್ ಮತ್ತಿಹಳ್ಳಿ, ಕುಲಪತಿ ಕುಲದೀಪ್ ಕುಮಾರ್ ರೈನಾ, ಅದಮ್ಯ ಚೇತನದ ತೇಜಸ್ವಿನಿ ಅನಂತ್‌ಕುಮಾರ್, ಡಾ.ಶಾಮಸುಂದರ್ ಕನ್ನಡಕ್ಕೆ ಅನುವಾದಿಸಿರುವ ವಿಕಿರಣದ ಅಕಾರಣ ಭಯ ಕೃತಿ ಬಿಡುಗಡೆಗೊಳಿಸಿದರು.

ಯಲಹಂಕದ ಸಶಸ್ತ್ರ ಮೀಸಲು ಪೊಲೀಸ್ ತರಬೇತಿ ಶಾಲೆಯಲ್ಲಿ ಸಸಿ ನೆಡುವ ಕಾರ್ಯಕ್ರಮ

ಜೈವಿಕ ಇಂಧನ ಸಸಿ ನೆಟ್ಟು ಬೆಳೆಸಲು ಸುಧೀಂದ್ರ ಕರೆ

ಬೆಂಗಳೂರು: ಜೈವಿಕ ಇಂಧನ ಸಸಿ ನೆಟ್ಟು ಬೆಳೆಸುವಂತೆ ಸಶಸ್ತ್ರ ಮೀಸಲು ಪೊಲೀಸ್ ಪಡೆ ತರಬೇತಿ ನಿರತರಾಗಿರುವ ಪೊಲೀಸರಿಗೆ ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಸ್.ಈ.ಸುಧೀಂದ್ರ ಕರೆ ನೀಡಿದರು.

ಯಲಹಂಕದ ಸಶಸ್ತ್ರ ಮೀಸಲು ಪೊಲೀಸ್ ತರಬೇತಿ ಶಾಲೆಯಲ್ಲಿ ಸಸಿ ನೆಡುವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ತರಬೇತಿ ಶಾಲೆಯಲ್ಲಿ 530 ಪೊಲೀಸ್ ಸಿಬ್ಬಂದಿ ತರಬೇತಿ ನಿರತರಾಗಿದ್ದು, ಪ್ರತಿಯೊಬ್ಬರೂ ತಮ್ಮ ತರಬೇತಿ ಅವಧಿಯಲ್ಲಿ ಕನಿಷ್ಠ 1 ಗಿಡ ನೆಟ್ಟು ಪೋಷಿಸಬೇಕು. ಮುಖ್ಯವಾಗಿ ಹೊಂಗೆ, ಬೇವು ಇತ್ಯಾದಿ ಜೈವಿಕ ಇಂಧನ ಸಸಿಗಳ ನೆಡುವಿಕೆಗೆ ಒತ್ತು ನೀಡಬೇಕೆಂದರು.

ಬ್ರೆಜಿಲ್ ಬಯೋಡೀಸೆಲ್ ಉತ್ಪಾದನೆಯಲ್ಲಿ ಮೊದಲ ಸ್ಥಾನದಲ್ಲಿದ್ದು ಭಾರತವೂ ಆ ನಿಟ್ಟಿನಲ್ಲಿ ಮುಂದೆ ಸಾಗುತ್ತಿದೆ. ಈ ಗುರಿ ಸಾಧಿಸುವ ನಿಟ್ಟಿನಲ್ಲಿ ಎಲ್ಲರ ಪರಿಶ್ರಮ ಮುಖ್ಯ, ಜೈವಿಕ ಇಂಧನ ಮಂಡಳಿಯೂ ಈ ನಿಟ್ಟಿನಲ್ಲಿ ಕಾರ್ಯೋನ್ಮುಖವಾಗಿದ್ದು, ರಾಜ್ಯಾದ್ಯಂತ ಸರಕಾರಿ ಭೂಮಿಯಲ್ಲಿ ಮಳೆಗಾಲದ ಆರಂಭದಲ್ಲಿ ಹೊಂಗೆ, ಬೇವು, ಸೀಮರೂಬದಂತಹ ಸಸ್ಯಗಳ ನೆಡುವಿಕೆಗೆ ಉದ್ದೇಶಿಸಲಾಗಿದೆ. ರಾಜ್ಯದ ಮುಖ್ಯಮಂತ್ರಿಗಳು ಜೈವಿಕ ಇಂಧನ ಕ್ಷೇತ್ರದ ಅಭಿವೃದ್ಧಿಗೆ ಪೂರಕ ಕಾರ್ಯಯೋಜನೆ ರೂಪಿಸಿ ಅನುಷ್ಠಾನಗೊಳಿಸಲು ಆಸಕ್ತರಾಗಿದ್ದಾರೆ. ಮಂಡಳಿಯು ಸಹ ಮುಂದಿನ ದಿನಗಳಲ್ಲಿ ಅವರ ಮಾರ್ಗದರ್ಶನದಲ್ಲಿ ಜೈವಿಕ ಇಂಧನ ಕಾರ್ಯಕ್ರಮ ರೂಪಿಸಲಿದೆ ಎಂದು ತಿಳಿಸಿದರು.

ಜೈವಿಕ ಇಂಧನ ಸಸಿ ನಡುವ ಕಾರ್ಯಕ್ರಮಕ್ಕೆ ಗಿಡ ನೆಡುವ ಮೂಲಕ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಅಧ್ಯಕ್ಷ ಎಸ್.ಈ.ಸುಧೀಂದ್ರ ಚಾಲನೆ ನೀಡಿದರು.

ತರಬೇತಿ ನಿರತರಾಗಿರುವ 500 ಪೊಲೀಸ್ ಸಿಬ್ಬಂದಿಗೆ ಪರಿಸರ ಪ್ರಜ್ಞೆ ಬೆಳೆಸಿಕೊಳ್ಳುವಂತೆ ಹಾಗೂ ಮುಂದಿನ ಸೇವಾವಧಿಯಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಗಿಡನೆಡುವಿಕೆ ಮತ್ತು ಪೋಷಣೆಗೆ ಬದ್ಧರಾಗಿರಬೇಕು ಎಂದು ಪ್ರತಿಜ್ಞಾವಿಧಿ ಬೋಧಿಸಿದರು.

ಕಾರ್ಯಕ್ರಮದಲ್ಲಿ ಸಶಸ್ತ್ರ ಪೊಲೀಸ್ ತರಬೇತಿ ಶಾಲೆ ಪ್ರಾಂಶುಪಾಲ ಎ.ಸಿ.ಮಂಜುನಾಥ್, ರಿಸರ್ವ್ ಪೊಲೀಸ್ ಇನ್ಸ್‌ಪೆಕ್ಟರ್ ಸಿದ್ದೇಶ್ ಎಚ್.ಆರ್,, ಪ್ರಕೃತಿ ಪ್ರಸನ್ನ ಹಾಗೂ ಬಿ.ಪ್ಯಾಕ್ ಸಂಸ್ತೆಯ ಮಂಜುನಾಥ್ ಉಪಸ್ಥತರಿದ್ದರು.

> ಜೈವಿಕ ಇಂಧನ ಸಸಿಗಳಿಂದ ದೊರಕುವ ಹೊಂಗೆ , ಬೇವು, ಹಿಪ್ಪೆ ಬೀಜಗಳಿಂದ ಬಯೋಡೀಸೆಲ್ ಉತ್ಪಾದನೆ ಮಾಡಬಹುದಾಗಿದ್ದು , ಈ ಜೈವಿಕ ಇಂಧನವು ಹೊರದೇಶಗಳಿಂದ ರಫ್ತು ಮಾಡಿಕೊಳ್ಳಲಾಗುತ್ತಿರುವ ಪಳೆಯುಳಿಕೆ ಇಂಧನಗಳಾದ ಡೀಸೆಲ್, ಪೆಟ್ರೋಲ್ ಮುಂತಾದವುಗಳ ಆಮದು ತಗ್ಗಿಸುವಲ್ಲಿ ನೆರವಾಗಲಿದೆ.
> -ಎಸ್.ಈ.ಸುಧೀಂದ್ರ, ರಾಜ್ಯ ಜೈವಿಕ ಇಂಧನ ಅಭಿವೃದ್ಧಿ ಮಂಡಳಿ ಅಧ್ಯಕ್ಷ

ಕಾವೇರಿ ತಂತ್ರಾಂಶಕ್ಕೆ ಕನ್ನ ಎಫ್‌ಐಆರ್ ದಾಖಲು

ಬೆಂಗಳೂರು: ಆಸ್ತಿ ಖರೀದಿ, ಮಾರಾಟ ಸೇರಿ ನೋಂದಣಿ ಪ್ರಕ್ರಿಯೆಗೆ ಬಳಸುವ ಕಾವೇರಿ 2.0 ಸಾಫ್ಟ್‌ವೇರ್ ಅನ್ನು ಅಪರಿಚಿತರು ಹ್ಯಾಕ್ ಮಾಡಿರುವ ಪ್ರಕರಣ ಬೆಳಕಿಗೆ ಬಂದಿದೆ. ಈ ಬಗ್ಗೆ ನೊಂದಣಿ ಮಹಾ ನಿರೀಕ್ಷಕ (ಐಜಿಆರ್) ಕೆ.ಎ.ದಯಾನಂದ ಅವರು ನೀಡಿದ ದೂರಿನ ಮೇರೆಗೆ ಅಪರಿಚಿತ ವ್ಯಕ್ತಿಗಳ ವಿರುದ್ಧ ಕೇಂದ್ರ ಸಿಇಎನ್ ಠಾಣೆ ಪೊಲೀಸರು ಎಫ್‌ಐಆರ್ ದಾಖಲಿಸಿಕೊಂಡು ತನಿಖೆ ಮುಂದುವರಿಸಿದ್ದಾರೆ.

ಸರ್ವರ್ ಸಮಸ್ಯೆಯಿಂದ ಕಳೆದ ಕೆಲ ದಿನಗಳಿಂದ ರಾಜ್ಯದ ಉಪನೋಂದಣಾಧಿಕಾರಿಗಳ ಕಚೇರಿಯಲ್ಲಿ ರಿಜಿಸ್ಟ್ರೇಷನ್ ಕಾರ್ಯ ಸ್ಥಗಿತಗೊಂಡಿತ್ತು. ಈ ಹಿನ್ನೆಲೆಯಲ್ಲಿ ಐಜಿಆರ್ ಪರಿಶೀಲಿಸಿದಾಗ ದುರುದ್ದೇಶದಿಂದ ಅಪರಿಚಿತರು ಕಾವೇರಿ 2.0 ಸಾಫ್ಟ್‌ವೇರ್ ಅನ್ನು ಹ್ಯಾಕ್ ಮಾಡಿ, ವೆಬ್‌ಸೈಟ್ ಪ್ರವೇಶಿಸಿ ಅದರಲ್ಲಿರುವ ಡೇಟಾಗಳನ್ನು ಕಳವು ಮಾಡಲು ನಕಲಿ ಖಾತೆಗಳನ್ನು ತೆರೆದಿರುವುದು ಪತ್ತೆಯಾಗಿದೆ. ಈ ಕುರಿತು ಸ್ಮಾರ್ಟ್ ಗವರ್ನನ್ಸ್ ಸೆಂಟರ್ (ಸಿಎಸ್ಜಿ) ಈ ರೀತಿಯ 62 ಇ-ಮೇಲ್ ಖಾತೆಗಳು ಹಾಗೂ ಅವುಗಳ ಐಪಿ ವಿಳಾಸಗಳ ಪಟ್ಟಿಯನ್ನು ನೀಡಿದೆ.

ಕಳೆದ ತಿಂಗಳು ಸೈಬರ್ ದಾಳಿಕೋರರು ಹ್ಯಾಕ್ ಮಾಡಿದ್ದು, ಕಾವೇರಿ ವೆಬ್‌ಸೈಟ್‌ನಲ್ಲಿ ಸರ್ವರ್ ಸಮಸ್ಯೆ ಉಂಟಾಗಿತ್ತು. ಆಗ ಸಾಮಾನ್ಯ ದಿನಗಳಿಗಿಂತ 8 ಪಟ್ಟು ಹೆಚ್ಚಾಗಿತ್ತು. ಕೆಲವು ಹಂತಗಳಲ್ಲಿ ಕೇವಲ ಎರಡು ಗಂಟೆಗಳ ಅವಧಿಯಲ್ಲಿ ದುರುದ್ದೇಶಪೂರಿತ ಬಳಕೆದಾರರಿಂದ 6.2 ಲಕ್ಷ ವಿನಂತಿಗಳನ್ನು ಸ್ವೀಕರಿಸಲಾಗಿದೆ ಎಂದು ಸಿಎಸ್‌ಜಿ ವರದಿ ನೀಡಿತ್ತು. ಸರಕಾರಿ ವೆಬ್‌ಸೈಟ್‌ಗಳನ್ನು ಗುರಿಯಾಗಿಕೊಂಡು ಸೈಬರ್ ದಾಳಿ ನಡೆದಿದೆ. ಹೀಗಾಗಿ, ಸರಕಾರ ವೆಬ್‌ಸೈಟ್ ಹ್ಯಾಕ್ ಮಾಡಿದ ಅಪರಿಚಿತರ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವಂತೆ ದಯಾನಂದ್ ದೂರಿನಲ್ಲಿ ಕೋರಿದ್ದಾರೆ.

ಕೆಐಒಸಿಎಲ್ ಲಿಮಿಟೆಡ್‌ಗೆ ಉತ್ತಮ ಅಧಿಕೃತ ಭಾಷಾ ಅನುಷ್ಠಾನ ಪ್ರಶಸ್ತಿ

ಪಟ್ಟಣದ ಅಧಿಕೃತ ಭಾಷಾ ಅನುಷ್ಠಾನ ಸಮಿತಿಯ 75ನೇ ಅರ್ಧವಾರ್ಷಿಕ ಸಭೆಯಲ್ಲಿ ಕೆಐಒಸಿಎಲ್‌ಗೆ ನೀಡಲಾದ ಉತ್ತಮ ಅಧಿಕೃತ ಭಾಷಾ ಅನುಷ್ಠಾನ ಪ್ರಶಸ್ತಿಯನ್ನು ಮಂಗಳೂರಿನ ಪ್ರಭಾರ ಮುಖ್ಯ ಪ್ರಧಾನ ವ್ಯವಸ್ಥಾಪಕ ಪಿ.ಪಳನಿ ಸ್ವೀಕರಿಸಿದರು.

ಬೆಂಗಳೂರು: ಉತ್ತಮ ಅಧಿಕೃತ ಭಾಷಾ ಅನುಷ್ಠಾನ ಪ್ರಶಸ್ತಿಯನ್ನು ಕೆಐಒಸಿಎಲ್ ಲಿಮಿಟೆಡ್ ಇತ್ತೀಚೆಗೆ ಯೂನಿಯನ್ ಬ್ಯಾಂಕ್, ವಲಯ ಕಚೇರಿಯಲ್ಲಿ ನಡೆದ ಪಟ್ಟಣದ ಅಧಿಕೃತ ಭಾಷಾ ಅನುಷ್ಠಾನ ಸಮಿತಿ, ಮಂಗಳೂರು ಇದರ 75ನೇ ಅರ್ಧವಾರ್ಷಿಕ ಸಭೆ ಮತ್ತು ಬಹುಮಾನ ವಿತರಣಾ ಸಮಾರಂಭದಲ್ಲಿ ಪಡೆದುಕೊಂಡಿತು.

ಸಮಾರಂಭದಲ್ಲಿ ರೇಣು ಕೆ ನಾಯರ್, ಅಧಿಕೃತ ಭಾಷಾ ಇಲಾಖೆ ಉಪನಿರ್ದೇಶಕ ಅನಿರ್ಬನ್ ಕುಮಾರ್ ಬಿಸ್ವಾಸ್, ಯೂನಿಯನ್ ಬ್ಯಾಂಕ್ ಆಫ್ ಇಂಡಿಯಾ ಮುಖ್ಯ ವ್ಯವಸ್ಥಾಪಕ ಕೃಷ್ಣ ಯಾದವ್, ಅಸಿಸ್ಟೆಂಟ್ ಜನರಲ್ ಮ್ಯಾನೇಜರ್ ಚೇತನ್ ಕುಮಾರ್ ಶೆಟ್ಟಿ ಮತ್ತು ಪ್ರಶಸ್ತಿ ವಿಜೇತ ತಂಡವಾಗಿ ಕೆಐಒಸಿಎಲ್ ಲಿಮಿಟೆಡ್ ಅಧಿಕೃತ ಭಾಷಾ ಸಂಯೋಜಕ ರೂಪೇಶ್ ಕುಮಾರ್, ಮ್ಯಾನೇಜರ್ ಗೌರವ್ ಕುಮಾರ್, ಸಹಾಯಕ ವ್ಯವಸ್ಥಾಪಕ ಅಂಕಿತ್ ಕುಮಾರ್ ಉಪಸ್ಥಿತರಿದ್ದರು.

ನಮ್ಮ ಮೆಟ್ರೋ namma metro

ಬೆಂಗಳೂರು ಮೆಟ್ರೋ ರೈಲು ನಿಗಮ ನಿಯಮಿತ

ಸಾರ್ವಜನಿಕ ಪ್ರಕಟಣೆ

ಪರಿಷ್ಕೃತ ಮೆಟ್ರೋ ದರಗಳು

ದೂರ ವಲಯ (ಕಿಮೀ)	ದಿ: 09/02/2025 ರಿಂದ ಜಾರಿಗೆ (ರೂ. ಗಳಲ್ಲಿ)	
0-2	10	
2-4	20	
4-6	30	
6-8	40	
8-10	50	
10-15	60	
15-20	70	
20-25	80	
25-30	90	
>30	90	
	ದಿನದ ಪಾಸ್‌ಗಳು	
ಮಾನ್ಯತೆ	ಪರಿಷ್ಕೃತ ದರ (ರೂ.)	
ಒಂದು ದಿನ	300	
ಮೂರು ದಿನಗಳು	600	
ಐದು ದಿನಗಳು	800	
	ಗ್ರೂಪ್ ಟಿಕೆಟ್	
ಗಾತ್ರ	ಒಂದೇ ನಿಲ್ದಾಣವನ್ನು ಪ್ರವೇಶಿಸಿ ಮತ್ತು ಒಂದೇ ನಿಲ್ದಾಣದಿಂದ ನಿರ್ಗಮಿಸಲು ಅನ್ವಯವಾಗುವ ದರದಲ್ಲಿ (%) ರಿಯಾಯಿತಿ	ವಿವಿಧ ನಿಲ್ದಾಣಗಳಿಂದ ಪ್ರವೇಶಿಸಿ ಮತ್ತು ಒಂದೇ ನಿಲ್ದಾಣದಲ್ಲಿ ನಿರ್ಗಮಿಸಲು ಅಥವಾ ಅದೇ ನಿಲ್ದಾಣಗಳಿಂದ ಪ್ರವೇಶಿಸಿ ಮತ್ತು ವಿವಿಧ ನಿಲ್ದಾಣಗಳಲ್ಲಿ ನಿರ್ಗಮಿಸಲು, ಫ್ಲಾಟ್ ದರ ಪ್ರತಿ ವ್ಯಕ್ತಿಗೆ
	ಪರಿಷ್ಕೃತ	ಪರಿಷ್ಕೃತ ದರ
25 to 99	15	ರಿಯಾಯಿತಿ ಇಲ್ಲ
100 to 1000	20	ರೂ. 60/-
>1000	25	ರೂ. 50/-

ಸ್ಮಾರ್ಟ್ ಕಾರ್ಡ್‌ಗಳ ಮೇಲೆ ಮಾತ್ರ ವಿಶೇಷ ಸೌಲಭ್ಯಗಳು

ಪ್ರಯಾಣಕ್ಕೆ ಬಳಸುವ ಸ್ಮಾರ್ಟ್ ಕಾರ್ಡಿನಲ್ಲಿ ಕನಿಷ್ಠ ಮೊತ್ತ ರೂ. 90 ಹೊಂದಿರಬೇಕು.

ಪೀಕ್ ಅವರ್

- ಪ್ರತಿ ಪ್ರಯಾಣಕ್ಕೆ ಶೇ. 5 ರಿಯಾಯಿತಿ.

ಆಫ್ ಪೀಕ್ ಅವರ್

- ಹೆಚ್ಚುವರಿ ಶೇ. 5 ರಿಯಾಯಿತಿ ಮೆಟ್ರೋ ವ್ಯವಸ್ಥೆಗೆ ಪ್ರವೇಶಿಸುವ ಕೆಳಗಿನ ಸಮಯವನ್ನು ಆಧರಿಸಿ:
- ವಾರದ ದಿನಗಳಲ್ಲಿ, ಬೆಳಗ್ಗೆ ಕಾರ್ಯಾಚರಣೆ ಆರಂಭದಿಂದ 8 ಗಂಟೆಯವರೆಗೆ.
- ಮಧ್ಯಾಹ್ನ 12 ರಿಂದ 4 ಗಂಟೆಯವರೆಗೆ.
- ರಾತ್ರಿ 9 ಗಂಟೆಯಿಂದ ಕಾರ್ಯಾಚರಣೆ ಮುಕ್ತಾಯದವರೆಗೆ.

ಭಾನುವಾರ ಮತ್ತು ರಾಷ್ಟ್ರೀಯ ರಜಾ ದಿನಗಳು

- ಎಲ್ಲಾ ಭಾನುವಾರ ಮತ್ತು ರಾಷ್ಟ್ರೀಯ ರಜಾದಿನಗಳಲ್ಲಿ (ಜನವರಿ 26, ಆಗಸ್ಟ್ 15, ಅಕ್ಟೋಬರ್ 02) ದಿನವಿಡೀ ಏಕರೂಪವಾಗಿ ಶೇ. 10 ರಿಯಾಯಿತಿ.

ದಿಲ್ಲಿಯಲ್ಲಿ ಅ(ಮ)ರಳಿದ ಕಮಲ



ಕಲ್ಕಾಜಿ ಕ್ಷೇತ್ರದ ಜನರು ವಿಶ್ವಾಸ ತೋರಿದ್ದಕ್ಕಾಗಿ ಧನ್ಯವಾದ ಅರ್ಪಿಸುವೆ. ದೆಹಲಿ ವಿಧಾನಸಭೆ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷಕ್ಕೆ(ಎಎಪಿಗೆ) ಹಿನ್ನಡೆಯಾಗಿದೆ, ನಿಜ. ಜನರ ಆದೇಶವನ್ನು ಒಪ್ಪಿಕೊಳ್ಳುತ್ತೇವೆ. ನಾನು ಗೆದ್ದಿದ್ದೇನೆ. ಆದರೆ ಇದು ಸಂಭ್ರಮಿಸುವ ಸಮಯವಲ್ಲ. ಬಿಜೆಪಿ ಸರ್ವಾಧಿಕಾರದ ವಿರುದ್ಧ 'ಯುದ್ಧ' ಮುಂದುವರಿಸುವ ಸಮಯ. ಎರಡೂವರೆ ದಶಕಗಳ ನಂತರ ರಾಷ್ಟ್ರ ರಾಜಧಾನಿಯಲ್ಲಿ ಬಿಜೆಪಿ ಗೆಲುವು ಸಾಧಿಸಿದೆ. ಬಿಜೆಪಿ ವಿರುದ್ಧ ಯುದ್ಧ ಮುಂದುವರಿಸುತ್ತೇವೆ.

– **ಆತಿಶಿ** ದೆಹಲಿ ನಿರ್ಗಮಿತ ಸಿಎಂ

ಎಎಪಿ ಸೋಲಿಗೆ ಆಡಳಿತ ವಿರೋಧಿ ಅಲೆ, ಅಪಖ್ಯಾತಿ, ಸೆರೆವಾಸ ಕಾರಣ! | ಬಿಜೆಪಿ ಗೆಲುವಿಗೆ 'ಡಬಲ್ ಎಂಜಿನ್' ಆಡಳಿತ, ಅಭಿವೃದ್ಧಿಯ ಭರವಸೆ

ಎಎಪಿ ಮಾಡಿದ್ದಂತೆಯೇ ಬಿಜೆಪಿಯಿಂದಲೂ ಹಲವು 'ಉಚಿತ' ಕೊಡುಗೆ | ಮುಸ್ಲಿಂ ಬಾಹುಳ್ಯದ ಕೆಲ ಕ್ಷೇತ್ರಗಳಲ್ಲಿ ಕಾಂಗ್ರೆಸ್‌ನಿಂದಾಗಿ ಮತ ವಿಭಜನೆ

26 ವರ್ಷ ಬಳಿಕ ಕಮಲ ನಗು

ದೆಹಲಿ: ಸತತ ಎರಡು ಅವಧಿಗೆ (2015ರಿಂದ 2025ರವರೆಗೆ) ಅಧಿಕಾರ ನಡೆಸಿದ್ದ ಆಮ್ ಆದ್ಮಿ ಪಕ್ಷದ ಹ್ಯಾಟ್ರಿಕ್ ಕನಸು ಭಗ್ನವಾಗಿದೆ. 26 ವರ್ಷಗಳಿಂದ ದೆಹಲಿ ವಿಧಾನಸಭೆ ಅಧಿಕಾರದಿಂದ ದೂರವಾಗಿದ್ದ ಬಿಜೆಪಿಗೆ ಕಡೆಗೂ ಅಧಿಕಾರ ದಕ್ಕಿದೆ. ಕಾಂಗ್ರೆಸ್ ಸತತ ಮೂರು ಚುನಾವಣೆಗಳಿಂದಲೂ ಸೋಲಿನ ಮೇಲೆ ಸೋಲು ಕಂಡು 'ಶೂನ್ಯ ಸಂಪಾದನೆ' ಮಾಡಿ ಜನರ ಮನಸ್ಸಿನಿಂದಲೇ ದೂರವಾಗಿದೆ. 2015 ಮತ್ತು 2020ರ ಚುನಾವಣೆಯಲ್ಲಿ ಸ್ಪಷ್ಟ ಬಹುಮತ ಪಡೆದಿದ್ದ ಆಮ್ ಆದ್ಮಿ ಪಕ್ಷ(ಎಎಪಿ), ಹ್ಯಾಟ್ರಿಕ್ ಗೆಲುವಿನ ವಿಶ್ವಾಸದಲ್ಲಿದ್ದ ಎಎಪಿ ನಾಯಕರು 2025ರ ಚುನಾವಣೆಯಲ್ಲಿ ಸೋಲಲು ಕಾರಣವೇನು? ಅದಕ್ಕೆ ಪಕ್ಷದ ಗುರುತೇ(ಪೊರಕೆ) ಉತ್ತರ ಹೇಳುತ್ತಿದೆ.

ಹಗರಣಗಳ ಮೇಲೆ ಹಗರಣ, ಸರಣಿಯೋಪಾದಿ ಯಲ್ಲಿ ಸಚಿವರು, ಸಂಸದರ ಬಂಧನ-ಸೆರೆವಾಸ. ಜೈಲಿಗೆ ಹೋದರೂ ಅಧಿಕಾರ ಬಿಟ್ಟುಕೊಡದ ಅರವಿಂದ್ ಕೇಜ್ರಿವಾಲ್ ಹಠ, ದೆಹಲಿಯ ವಿಷಗಾಳಿ, ಕಲುಷಿತ ಯಮುನೆ ಮೊದಲಾದ ಹತ್ತು ಹಲವು ಅಂಶಗಳು ಎಎಪಿ ಬಗ್ಗೆ ಜನರು ಹತಾಶೆಗೊಳ್ಳುವಂತೆ ಮಾಡಿವೆ. ಪರಿಣಾಮ ಮತಗಟ್ಟೆಗೆ ತೆರಳಿದ ಮತದಾರರು ಎಎಪಿ ನಾಯಕರಿಗೆ ಅವರದೇ ಪಕ್ಷದ ಚಿಹ್ನೆ ಬಳಸಿ ಗುಡಿಸಿ ಹಾಕಿದ್ದಾರೆ. 'ಡಬಲ್ ಎಂಜಿನ್'ಗೆ ಬದಲಾವಣೆ ಮಾಡಿ ನೋಡೋಣ ಎಂದು ಕಮಲವನ್ನು ಕೈಗೆತ್ತಿಕೊಂಡಿದ್ದಾರೆ.

ಮೊದಲ ಅವಧಿಯಲ್ಲಿ(2015-20) ಜನರು ಎಎಪಿ ಸರಕಾರವನ್ನು, ವಿಭಿನ್ನ ರೀತಿಯ ಅದರ ಕೆಲಸ-ಕಾರ್ಯಗಳನ್ನು ಮೆಚ್ಚಿಕೊಂಡಿದ್ದರು. ಹಾಗಾಗಿಯೇ 2020ರ ಚುನಾವಣೆಯಲ್ಲಿ 70 ಕ್ಷೇತ್ರಗಳಲ್ಲಿ 62 ಸ್ಥಾನಗಳನ್ನು ಗೆಲ್ಲಿಸಿ ಭಾರೀ ಬಹುಮತ ನೀಡಿದರು. ಆದರೆ, ವಿವಾದಿತ ಅಬಕಾರಿ ನೀತಿ, ಅಕ್ರಮ ಹಣ ಸಂಪಾದನೆ, ಸಿಎಂ ನಿವಾಸದ ದುಬಾರಿ ನವೀಕರಣ-ಅಲಂಕಾರ ಮೊದಲಾದ ಹಗರಣಗಳು ಎಎಪಿ ನಾಯಕರ ವರ್ಚಸ್ಸಿಗೆ ಮಸಿ ಬಳಿದವು. ಎಎಪಿ ನಾಯಕರ ವರ್ತನೆಯೂ ಮೊದಲ ಅವಧಿಯಲ್ಲಿದ್ದುದಕ್ಕಿಂತ ಬದಲಾಗಿತ್ತು. ಜನರು ಅದನ್ನೆಲ್ಲಾ ಗುರುತಿಸಿದ್ದರು. ಅಲ್ಲದೇ, ಎರಡನೇ (2020-25) ಅವಧಿಯಲ್ಲಿ ಎಎಪಿ ಸರಕಾರ ಹೇಳಿಕೊಳ್ಳುವಂತಹ ಒಳ್ಳೆಯ ಕೆಲಸಗಳನ್ನೇನೂ ಮಾಡಲಿಲ್ಲ.

ಅದಲ್ಲದೇ, ದೆಹಲಿಯ ವಿಷಮಯ ಗಾಳಿಯಲ್ಲಿ ಜನ ಉಸಿರುಗಟ್ಟಿದರು. ಯಮುನೆಯ ನೊರೆಗಟ್ಟಿದ, ಕಲುಷಿತ ನೀರಿನ ವಾಸನೆಯೂ ಜನರ ಮೂಗು ಮುಚ್ಚಿಕೊಳ್ಳುವಂತೆ ಮಾಡಿತು. ಜನರ ತೆರಿಗೆ ದುಡ್ಡನ್ನು ಅಭಿವೃದ್ಧಿಗೆ ಬದಲಾಗಿ 'ಸಿಎಂ ಅಧಿಕೃತ ನಿವಾಸ'ದ ಐಶಾರಾಮಿ ನವೀಕರಣಕ್ಕೆ ಬಳಸಿದ್ದಾರೆ ಎಂಬ ಅನುಮಾನವೂ ಬಲವಾಯಿತು. ಇನ್ನೊಂದೆಡೆ, ಸತತ 6 ತಿಂಗಳ ಕಾಲ ಸೆರೆಮನೆ ಸೇರಿದರೂ ಅರವಿಂದ್ ಕೇಜ್ರಿವಾಲ್ ಪದವಿ ತ್ಯಾಗ ಮಾಡಲಿಲ್ಲ. ಹಠಕ್ಕೆ ಬಿದ್ದವರಂತೆ ಜೈಲಿನಿಂದಲೇ ಆಡಳಿತ ನಡೆಸುವೆ ಎಂದರು. ಪರಿಣಾಮ, ಅಭಿವೃದ್ಧಿ ಮರೀಚಿಕೆಯಾಯಿತು. ಬದಲಾಗಿ, ದೆಹಲಿಯ ಆಕಾಶ ತುಂಬೆಲ್ಲಾ ವಿಷಗಾಳಿ ತುಂಬಿತು. ಜನರು ದಿನ- ವಾರಗಟ್ಟಲೇ ಮನೆಯಿಂದ ಹೊರಬರದಂತಾ ಯಿತು. ಯಮುನೆಯಲ್ಲಿ ನೊರೆ ತುಂಬಿತು. ಇದೆಲ್ಲದರಿಂದ ಬೇಸರಗೊಂಡ ಜನತೆ, ಕಡೆಗೆ ಪಕ್ಷದ ಗುರುತು 'ಪೊರಕೆ'ಯನ್ನು ಕೈಗೆತ್ತಿಕೊಂಡರು. 2 ಬಾರಿಯ ಸಿಎಂ ಅರವಿಂದ್ ಕೇಜ್ರಿವಾಲ್, ಮಾಜಿ ಡಿಸಿಎಂ ಮನೀಶ್ ಸಿಸೋಡಿಯ ಮತ್ತಿತರ ದಿಗ್ಗಜ ರನ್ನೂ ಲೆಕ್ಕಕ್ಕಿಡದೇ ಪಕ್ಷದ ಬಹಳಷ್ಟು ಅಭ್ಯರ್ಥಿಗಳನ್ನು ಕಸದಂತೆ ಗುಡಿಸಿ ಪಕ್ಕಕ್ಕೆ ದೂಡಿದರು. ಕಸ ತೆಗೆದು ಸ್ವಚ್ಛಗೊಳಿಸಿದ ಜಾಗದಲ್ಲಿ ಈ ಬಾರಿ ಕಮಲದ ಹೂ ಅರಳುವಂತೆ ಮಾಡಿದ್ದಾರೆ.

ದೆಹಲಿ ವಿಧಾನಸಭೆ ಚುನಾವಣೆಯಲ್ಲಿ ಬಿಜೆಪಿ ಭರ್ಜರಿ ಗೆಲುವು ಸಾಧಿಸಿದ ಬಳಿಕ ಕಾರ್ಯಕರ್ತರು ರಾಜಧಾನಿಯಲ್ಲಿ ಪಕ್ಷ ಕಚೇರಿ ಬಳಿ ಶನಿವಾರ ಬಣ್ಣ ಎರಚಿ, ಸಿಹಿ ಹಂಚಿ ಸಂಭ್ರಮಾಚರಣೆ ನಡೆಸಿದರು.

ಬಿಜೆಪಿ ಗೆಲುವಿಗೆ ಹಲವು ಕಾರಣ

27 ವರ್ಷಗಳಿಂದ ಅಧಿಕಾರ ವಂಚಿತ ಬಿಜೆಪಿ ಎಲ್ಲಾ ಶಕ್ತಿಯನ್ನೂ ವ್ಯಯಿಸಿ ಈ ಬಾರಿಯ ದೆಹಲಿ ವಿಧಾನಸಭೆ ಚುನಾವಣೆಯಲ್ಲಿ ಗೆಲುವು ಸಾಧಿಸಿದ. ಸ್ಪಷ್ಟ ಬಹುಮತ ಗಳಿಸಿದೆ. ಅಧಿಕಾರಕ್ಕೇರುವುದು ಖಚಿತವಾಗಿದೆ. ಬಿಜೆಪಿಯ ಈ ಗೆಲುವಿಗೆ ಮುಖ್ಯವಾಗಿ ಕಾರಣವಾಗಿದ್ದು, ಆಡಳಿತ ವಿರೋಧಿ ಅಲೆ. ಸತತ 10 ವರ್ಷಗಳ ಎಎಪಿ ಆಡಳಿತದಲ್ಲಿ ಕೊನೆ ಕೊನೆಗೆ ಜನತೆ ಅರವಿಂದ್ ಕೇಜ್ರಿವಾಲ್ ಮತ್ತು ಅವರ ತಂಡದ ಬಗ್ಗೆ ಬೇಸರಗೊಂಡಿದ್ದರು. ಮತದಾರರಲ್ಲಿದ್ದ ಆ ಭಾವನೆಯನ್ನು ಗುರುತಿಸಿದ ಬಿಜೆಪಿ, ಎಎಪಿ ವಿರುದ್ಧ ಮತ್ತಷ್ಟು ಆರೋಪಗಳನ್ನು ಹೊರಿಸುತ್ತಾ ಮತದಾರರ ಮನದಲ್ಲಿ ಎಎಪಿ ವಿರೋಧಿ ಮನೋಭಾವ ಗಟ್ಟಿಯಾಗುವಂತೆ ಮಾಡಿತು. ಬದಲಾವಣೆ ಅನಿವಾರ್ಯ ಎಂಬ ಮನಸ್ಥಿತಿ ಸೃಷ್ಟಿಯಾಗುವಂತೆ ಮಾಡಿತು.

ಜತೆಗೆ, ಎಎಪಿ ಘೋಷಿಸಿರುವ 'ಉಚಿತ' ಕೊಡುಗೆಗಳನ್ನೂ ಬಿಜೆಪಿ ಘೋಷಿಸಿತು. ಉಚಿತ ಕೊಡುಗೆ ಮೆಚ್ಚುವವರಿಗೆ ಬಿಜೆಪಿಯತ್ತ ತಿರುಗಿ ನೋಡುವಂತೆ ಮಾಡಿತು. ಜತೆಗೆ, ಪ್ರಧಾನಿ ನರೇಂದ್ರ ಮೋದಿ ಅವರ ವರ್ಚಸ್ಸು, ಆರ್‌ಎಸ್‌ಎಸ್ ಕಾರ್ಯಕರ್ತರು ಮತದಾರರ ಬಳಿಗೆ ತೆರಳಿ ತಳಮಟ್ಟದಲ್ಲಿ ಕೆಲಸ ಮಾಡಿ 50 ಸಾವಿರ ಸಭೆಗಳನ್ನು ಜನರೊಟ್ಟಿಗೆ ನಡೆಸಿರುವುದು, ಹಿಂದುತ್ವ ಮತ್ತು ರಾಷ್ಟ್ರೀಯತೆ ವಿಷಯಗಳು, ಇದೆಲ್ಲದರಿಂದಾಗಿ ಮತದಾರರು ಬಿಜೆಪಿಯತ್ತ ವಾಲುವಂತೆ ಮಾಡಿತು. ಈ ಬಾರಿಯ ಚುನಾವಣೆಯಲ್ಲಿ ಬಿಜೆಪಿ ಮತ ಗಳಿಕೆ ಪ್ರಮಾಣ ಹೆಚ್ಚಿತು. ಗೆಲುವು ಸರಾಗವಾಯಿತು. ಜಾಟ್ ಸಮುದಾಯದ ಮತಬ್ಯಾಂಕ್ ಕೂಡಾ ಬಿಜೆಪಿ ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದೆ. ಗೆಲುವು ಕಂಡಿರುವ ಬಿಜೆಪಿ ಅಭ್ಯರ್ಥಿಗಳಲ್ಲಿ 10 ಮಂದಿ ಜಾಟ್ ಸಮುದಾಯದವರೇ ಆಗಿದ್ದಾರೆ ಎಂಬುದು ಗಮನಾರ್ಹ ಅಂಶ.

ಕೇಜ್ರಿವಾಲ್ ಜನಪ್ರಿಯತೆ ಕುಸಿತ

2015ರಲ್ಲಿ ಸಾಮಾನ್ಯ ಜನರ ನಾಯಕರಾಗಿದ್ದ ಅರವಿಂದ್ ಕೇಜ್ರಿವಾಲ್, ಇತ್ತೀಚಿನ ವರ್ಷಗಳಲ್ಲಿ ವರ್ಚಸ್ಸು ಕಳೆದುಕೊಂಡರು. ಸರಕಾರ ನಡೆಸುವ ಬದಲು ಬಿಜೆಪಿ, ಕಾಂಗ್ರೆಸ್ ಬಗ್ಗೆ ಆರೋಪ ಮಾಡುತ್ತಾ ಸುದ್ದಿಗೋಷ್ಠಿ



ನಡೆಸುವುದರಲ್ಲೇ ಕಾಲ ಕಳೆದರು. ಜನ ಭ್ರಮನಿರಸನ ಗೊಂಡರು. ಕೇಜ್ರಿವಾಲ್ ಜನಪ್ರಿಯತೆ ಕುಸಿಯುತ್ತಾ ಹೋಯಿತು. ಅಬಕಾರಿ ನೀತಿಯಲ್ಲಿನ ಭ್ರಷ್ಟಾಚಾರ ಆರೋಪ, ಅಕ್ರಮ ಹಣ ವರ್ಗದ ಪ್ರಕರಣ ದಡಿ ಜಾರಿ ನಿರ್ದೇಶನಾಲಯ (ಇ.ಡಿ)ದಿಂದ ಬಂಧನ, ಸರಳ ಜೀವನ ಎಂದು ಹೇಳುತ್ತಲೇ ಸಿಎಂ ನಿವಾಸವನ್ನು ಜನರ ತೆರಿಗೆ ದುಡ್ಡು ವ್ಯಯಿಸಿ ಐಶಾರಾಮಿ ಯಾಗಿ ನವೀಕರಿಸಿದ್ದಾರೆ ಎಂಬ ಆರೋಪಗಳು ವರ್ಚಸ್ಸಿಗೆ ಹಾನಿ ಮಾಡಿದವು.

ಸರಣಿ ಬಂಧನ

ಎಎಪಿ ಸರಕಾರದ ಸಚಿವರಾದ ಸತ್ಯೇಂದ್ರ ಜೈನ್ ಮತ್ತು ಡಿಸಿಎಂ ಮನೀಶ್ ಸಿಸೋಡಿಯ ಬಂಧನವಾಗಿದ್ದು ಕೂಡ ಪಕ್ಷದ ಹೆಸರು ಹಾಳಾಗುವಂತೆ ಮಾಡಿತು. ಪಕ್ಷದ ಇಬ್ಬರು ಪ್ರಮುಖ ನಾಯಕರು ಜೈಲಿನಲ್ಲಿದ್ದಾರೆ. ಇದು ಪಕ್ಷದ ಸ್ವಚ್ಛ ಇಮೇಜ್‌ಗೆ ದೊಡ್ಡ ಹೊಡೆತ ನೀಡಿತು. ಪಕ್ಷದ ಮೇಲಿನ ಜನರ ನಂಬಿಕೆಗೆ ಧಕ್ಕೆ ತಂದಿತು. ಎಎಪಿ ಸರಕಾರದ ಮೊದಲ ಆಡಳಿತ ಅವಧಿಯಲ್ಲಿ ಜಾರಿಗೆ ತಂದ ಉಚಿತ ವಿದ್ಯುತ್-ನೀರು ನೀತಿ ಆರಂಭದ ದಿಸೆಯಲ್ಲಿ ಜನತೆಗೆ ಖುಷಿ ಕೊಟ್ಟಿತು. ಇತ್ತೀಚೆಗೆ ಗುಣಮಟ್ಟ ಕುಸಿತ, ವಿತರಣೆಯಲ್ಲಿ ಸಮಸ್ಯೆ ಆಗಿದ್ದು ಜನರು ಪ್ರಶ್ನೆ ಮಾಡುವಂತಾಯಿತು. ಎಎಪಿ ಪಂಜಾಬ್ ರಾಜ್ಯದಲ್ಲಿ ಗೆದ್ದ ನಂತರ ದೆಹಲಿಯತ್ತ ಆದ್ಯತೆ ಕಡಿಮೆ ಮಾಡಿದೆ ಎಂಬ ಭಾವವೂ ದೆಹಲಿ ಮತದಾರರ ಮನದಲ್ಲಿ ಮೂಡಿತು.

ಮುಸ್ಲಿಂ ಮತ ವಿಭಜನೆ

ಮುಸ್ಲಿಂ ಪ್ರಾಬಲ್ಯದ ಹಲವು ಕ್ಷೇತ್ರಗಳಲ್ಲಿಯೂ ಕೆಲವೆಡೆ ಬಿಜೆಪಿ ಅಭ್ಯರ್ಥಿಗಳು ಗೆಲುವು ಸಾಧಿಸಿದ್ದಾರೆ. ಅದಕ್ಕೆ ಕಾರಣವಾಗಿರುವುದು ಮುಸ್ಲಿಂ ಮತಗಳ ವಿಭಜನೆ. 2015 ಮತ್ತು 2020ರ ಚುನಾವಣೆಯಲ್ಲಿ ಮುಸ್ಲಿಂ ಮತಗಳೆಲ್ಲವೂ ಒಟ್ಟಾಗಿ ಆಮ್ ಆದ್ಮಿ ಪಕ್ಷದ ಅಭ್ಯರ್ಥಿಗಳಿಗೇ ಚಲಾವಣೆ ಆಗಿದ್ದವು. ಹಾಗಾಗಿ ಎಎಪಿ ಸತತ 2 ಬಾರಿ ಗೆಲುವು ಸಾಧಿಸಿತ್ತು. ಆದರೆ, ಈ ಬಾರಿಯ ಚುನಾವಣೆಯಲ್ಲಿ ಎಎಪಿ ಪಾಲಿನ ಮುಸ್ಲಿಂ ಮತಗಳ ಬುಟ್ಟಿಗೆ ಕೈ ಹಾಕಿದ್ದು ಕಾಂಗ್ರೆಸ್. ಕಾಂಗ್ರೆಸ್ ಈ ಬಾರಿ ವಿಧಾನಸಭೆ ಚುನಾವಣೆಯಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಮುಸ್ಲಿಂ ಅಭ್ಯರ್ಥಿಗಳನ್ನೇ ಕಣಕ್ಕಿಳಿಸಿದೆ. ಆ ತಂತ್ರದಿಂದಾಗಿ ಮುಸ್ಲಿಂ ಮತಗಳು ಕಾಂಗ್ರೆಸ್ ಮತ್ತು ಎಎಪಿ ನಡುವೆ ಹಂಚಿ ಹೋಗುವಂತಾಗಿದೆ. ಇದೂ ಕೂಡಾ ಎಎಪಿ ಸೋಲಿಗೆ ಕಾರಣವಾಗಿದೆ.

ಬಿಜೆಪಿಗೆ ಮೂರನೇ 2ರಷ್ಟು ಸದಸ್ಯ ಬಲ

ದೆಹಲಿ: 70 ಸದಸ್ಯ ಬಲದ ದೆಹಲಿ ವಿಧಾನಸಭೆ ಚುನಾವಣೆಯಲ್ಲಿ 48 ಕ್ಷೇತ್ರಗಳಲ್ಲಿ ಭರ್ಜರಿ ವಿಜಯ ಸಾಧಿಸಿರುವ ಭಾರತೀಯ ಜನತಾ ಪಕ್ಷ(ಬಿಜೆಪಿ) ವಿಧಾನಸಭೆಯ ಮೂರನೇ ಎರಡಕ್ಕಿಂತಲೂ ಅಧಿಕ ಶಾಸಕರನ್ನು ಹೊಂದಿದಂತಾಗಿದೆ. ಇನ್ನೊಂದೆಡೆ, ನಿರ್ಗಮಿತ ಆಡಳಿತ ಪಕ್ಷವಾದ ಆಮ್ ಆದ್ಮಿ ಪಕ್ಷ(ಎಎಪಿ) ಮೂರನೇ ಒಂದಕ್ಕಿಂತ ತುಸುವೇ ಕಡಿಮೆ (22) ಶಾಸಕರನ್ನು ಪಡೆದುಕೊಂಡಿದೆ. ಮೂರನೇ ಎರಡರಷ್ಟು ಬಹುಮತ ಪ್ರಾಪ್ತವಾಗಿರುವುದರಿಂದ ಮಹತ್ವದ ಶಾಸನಗಳ ರಚನೆಗೆ ಬಿಜೆಪಿ ಸರಕಾರಕ್ಕೆ ಅವಕಾಶವಾಗಲಿದೆ.

ಖಾತೆ ತೆರೆಯದ ಕಾಂಗ್ರೆಸ್ ಹ್ಯಾಟ್ರಿಕ್!

ದೆಹಲಿ: ದೆಹಲಿ ವಿಧಾನಸಭೆ-2025ರ ಚುನಾವಣೆಯಲ್ಲಿಯೂ ಕಾಂಗ್ರೆಸ್ ಶೂನ್ಯ ಸಂಪಾದನೆ ಮಾಡಿದೆ. 2015 ಮತ್ತು 2020ರ ದೆಹಲಿ ವಿಧಾನ ಸಭೆ ಚುನಾವಣೆಗಳಲ್ಲಿ ಒಂದೂ ಸ್ಥಾನವನ್ನೂ ಗೆಲ್ಲದೇ ಹೋಗಿದ್ದ ಕಾಂಗ್ರೆಸ್, 2025ರ ಚುನಾವಣೆಯಲ್ಲಿಯೂ ಖಾತೆ ತೆರೆಯಲಾಗದೇ ಸೋತು ಸುಣ್ಣವಾಗಿದೆ. ಕರ್ನಾಟಕ, ತೆಲಂಗಾಣದಲ್ಲಿ ಮಹಿಳೆಯರಿಗೆ ಮಾಸಿಕ ಆರ್ಥಿಕ ನೆರವು, ಉಚಿತ ಬಸ್ ಪ್ರಯಾಣ, ಗ್ಯಾಸ್ ಸಿಲಿಂಡರ್ ಸೇರಿದಂತೆ ಉಚಿತ ಕೊಡುಗೆಗಳ ಗ್ಯಾರಂಟಿಗಳನ್ನು ಘೋಷಿಸಿ ಅಧಿಕಾರಕ್ಕೇರಿರುವ ಕಾಂಗ್ರೆಸ್ ಪಕ್ಷ, ಅದೇ ಚುನಾವಣಾ ತಂತ್ರವನ್ನೇ ದೆಹಲಿ ವಿಧಾನಸಭೆ ಚುನಾವಣೆಯಲ್ಲಿಯೂ ನಡೆಸಿತ್ತು. ಆದರೆ, ಫಲಿತಾಂಶ ಪ್ರಕಟವಾದಾಗ ಒಂದೇ ಒಂದು ಕ್ಷೇತ್ರದಲ್ಲಿಯೂ ಗೆಲ್ಲಲಾಗದೇ ಭಾರೀ ಮುಖಭಂಗ ಅನುಭವಿಸಿದೆ. ಒಂದೂವರೆ ಶತಮಾನಗಳ ಇತಿಹಾಸದ ಗರಿಮೆ ಹೊಂದಿರುವ ದೇಶದ ಹಿರಿಯ ಪಕ್ಷಕ್ಕೆ ರಾಷ್ಟ್ರ ರಾಜಧಾನಿ ದೆಹಲಿ ವಿಧಾನಸಭೆ ಚುನಾವಣೆಯಲ್ಲಿ ಒಂದು ಸ್ಥಾನವನ್ನೂ ಗೆಲ್ಲಲಾಗಿಲ್ಲ ಎಂಬುದು ಗಮನಾರ್ಹ.



ದೆಹಲಿ ವಿಧಾನಸಭೆ ಭರ್ಜರಿ ಗೆಲುವಿನ ಸಂಭ್ರಮಾಚರಣೆಗೆ ಪಕ್ಷದ ಪ್ರಧಾನ ಕಚೇರಿಗೆ ಧಾವಿಸಿದ ಕಾರ್ಯಕರ್ತರು, ಜತೆಗೆ ಮೋದಿ, ಅಮಿತ್ ಶಾ ಕಟೌಟ್‌ಗಳನ್ನೂ ತಂದರು.

ಜನಾದೇಶ ಸ್ವೀಕೃತ: ರಾಹುಲ್ ಗಾಂಧಿ



ದೆಹಲಿ: ದೆಹಲಿ ವಿಧಾನಸಭೆ ಚುನಾವಣೆಯಲ್ಲಿ ರಾಜಧಾನಿಯ ಮತದಾರರು ನೀಡಿರುವ ಜನಾದೇಶವನ್ನು ನಮ್ರವಾಗಿ ಸ್ವೀಕರಿಸುತ್ತೇವೆ ಎಂದು ಕಾಂಗ್ರೆಸ್ ನಾಯಕ ಶನಿವಾರ ಹೇಳಿದ್ದಾರೆ. ಹಾಗೆಂದು ಸುಮ್ಮನೇ ಕೂರುವುದಿಲ್ಲ. ದೆಹಲಿಯ ಪ್ರಗತಿ ಮತ್ತು ಜನರ ಹಕ್ಕುಗಳಿಗಾಗಿ ಕಾಂಗ್ರೆಸ್ ಹೋರಾಟ ಮುಂದುವರೆಸಲಿದೆ ಎಂದು 'ಎಕ್ಸ್' ಸಂದೇಶ ರವಾನಿಸಿದ್ದಾರೆ. ಬೆಲೆ ಏರಿಕೆ ಮತ್ತು ಭ್ರಷ್ಟಾಚಾರದ ವಿರುದ್ಧ ಹೋರಾಟ ಮುಂದುವರೆಯುತ್ತದೆ ಎಂದಿದ್ದಾರೆ. 70 ಸದಸ್ಯ ಬಲದ ವಿಧಾನಸಭೆಗೆ ನಡೆದ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಒಂದೂ ಸ್ಥಾನ ಗಳಿಸದೇ ಹೀನಾಯ ಸೋಲನುಭವಿಸಿದೆ.

ಕೇಜ್ರಿ-ಸಿಸೋಡಿಯ ಜೋಡಿ ಸೋಲು!



ದೆಹಲಿ: 2015 ಮತ್ತು 2020ರಲ್ಲಿ ಆಮ್ ಆದ್ಮಿ ಸರಕಾರ ರಚನೆ ಆದಾಗ ಅರವಿಂದ್ ಕೇಜ್ರಿವಾಲ್ ಮುಖ್ಯಮಂತ್ರಿಯಾದರೆ, ಅವರ ಆಪ್ತಮಿತ್ರ ಮನೀಷ್ ಸಿಸೊಡಿಯ ಉಪ ಮುಖ್ಯ ಮಂತ್ರಿಯಾದರು. ಆ ನಂತರದಲ್ಲಿ ಅಬಕಾರಿ ನೀತಿ ಹಗರಣದಲ್ಲಿ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಒಬ್ಬರಾದ ಮೇಲೊಬ್ಬರಂತೆ ಜಾರಿ ನಿರ್ದೇಶನಾಲಯದಿಂದ ಬಂಧನಕ್ಕೊಳಗಾಗಿ ಜೈಲಿಗೂ ಹೋದರು. ಈಗ ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಕೇಜ್ರಿವಾಲ್, ಸಿಸೊಡಿಯ ಇಬ್ಬರೂ ಜತೆಯಾಗಿ ಸೋಲುಂಡಿದ್ದಾರೆ. ಹೊಸದಿಲ್ಲಿ ಕ್ಷೇತ್ರದಿಂದ ಕೇಜ್ರಿವಾಲ್ ಸೋಲು ಕಂಡರೆ, ಮನೀಶ್ ಸಿಸೊಡಿಯ ಜಂಗಪುರ ಕ್ಷೇತ್ರದಿಂದ ಪರಾಜಿತರಾಗಿದ್ದಾರೆ.

ಕಾರ್ಯಕರ್ತನಿಗಾಗಿ ಭಾಷಣ ನಿಲ್ಲಿಸಿದರು

ದೆಹಲಿ: ಬಿಜೆಪಿ ಗೆಲುವಿನ ಸಂಭ್ರಮಾಚರಣೆಗೆ ಪಕ್ಷದ ಪ್ರಧಾನ ಕಚೇರಿಗೆ ಶನಿವಾರ ಸಂಜೆ ಆಗಮಿಸಿದ ಪ್ರಧಾನಿ ನರೇಂದ್ರ ಮೋದಿ ನೆರೆದಿದ್ದ ಸಾವಿರಾರು ಕಾರ್ಯಕರ್ತರನ್ನು ಉದ್ದೇಶಿಸಿ ಮಾತನಾಡುತ್ತಿದ್ದಾಗ ಸಭಿಕರ ಸಾಲಿನಲ್ಲಿದ್ದ ಬಿಜೆಪಿ ಕಾರ್ಯಕರ್ತರೊಬ್ಬರು ಅಸ್ವಸ್ಥಗೊಂಡಿದ್ದನ್ನು ಗಮನಿಸಿ ಭಾಷಣವನ್ನು ತಕ್ಷಣ ನಿಲ್ಲಿಸಿದರು. ಕಾರ್ಯಕರ್ತರನ್ನು ಉದ್ದೇಶಿಸಿ ಅಸ್ವಸ್ತಗೊಂಡವರನ್ನು ತಕ್ಷಣ ಉಪಚರಿಸುವಂತೆ, ಸ್ವಲ್ಪ ನೀರು ಕುಡಿಸುವಂತೆ ಮನವಿ ಮಾಡಿದರು. 'ನೋಡಿ ಅವರೇಕೋ ಬಹಳ ಸುಸ್ತಾದವರಂತೆ ಕಾಣುತ್ತಿದ್ದಾರೆ. ಅನಾರೋಗ್ಯದಿಂದ ಬಳಲುತ್ತಿದ್ದಾರಾ? ಡಾಕ್ಟರ್ ಯಾರಾದರೂ ಇದ್ದರೆ ತಕ್ಷಣ ಅವರನ್ನು ಪರೀಕ್ಷಿಸಿ. ಅವರಿಗೆ ಸ್ವಲ್ಪ ನೀರು ಕೊಡಿ. ಅವರನ್ನು ಸ್ವಲ್ಪ ಗಮನಿಸಿ ಎಂದು ಪಕ್ಕದಲ್ಲಿದ್ದವರಿಗೆ ಸೂಚಿಸಿದರು. ಬಳಿಕ ಕಾರ್ಯಕರ್ತ, ನೀರು ಕುಡಿದ ಸುಧಾರಿಸಿಕೊಂಡಿರು ವುದಾಗಿ ತಿಳಿಸಿದ ಬಳಿಕ ಮೋದಿ ಮಾತು ಮುಂದುವರಿಸಿದರು.

ಸುಳ್ಳಿನ ಜಾಲ ನಾಶ, ಇನ್ನೇನಿದ್ದರೂ ದೆಹಲಿ ಅಭಿವೃದ್ಧಿಯ ಹೊಸಶಕೆ

ದೆಹಲಿ: ದೆಹಲಿಯಲ್ಲಿ 10 ವರ್ಷಗಳಿಂದ ಇದ್ದ ಸುಳ್ಳಿನ ಆಳ್ವಿಕೆ ಇದೀಗ ಕೊನೆಗೊಂಡಿದೆ. ರಾಷ್ಟ್ರ ರಾಜಧಾನಿಯಲ್ಲಿ ಇನ್ನೇನಿದ್ದರೂ ಅಭಿವೃದ್ಧಿಯ ಹಾಗೂ ನಂಬಿಕೆಯ ಹೊಸ ಯುಗ ಆರಂಭವಾಗಲಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಶನಿವಾರ ಹೇಳಿದ್ದಾರೆ. ಚುನಾವಣೆ ಫಲಿತಾಂಶ ಪ್ರಕಟಗೊಂಡ ಬಳಿಕ 'ದೆಹಲಿ ಕೆ ದಿಲ್ ಮೇ ಮೋದಿ'(ದೆಹಲಿಯ ಹೃದಯದಲ್ಲಿ ಮೋದಿ) ಎಂದು ಅಮಿತ್ ಶಾ 'ಎಕ್ಸ್' ಸಂದೇಶದಲ್ಲಿ ಬರೆದಿದ್ದಾರೆ. 27 ವರ್ಷಗಳ ನಂತರ ರಾಷ್ಟ್ರ ರಾಜಧಾನಿ ದೆಹಲಿಯಲ್ಲಿ ಭಾರತೀಯ ಜನತಾ ಪಕ್ಷದ ಸರಕಾರ ರಚಿಸಲು ಸಜ್ಜಾಗುತ್ತಿದೆ.

ದೆಹಲಿಯ ಮತದಾರರು ಬದಲಾವಣೆ ಬಯಸಿ ಸುಳ್ಳು, ವಂಚನೆ, ಭ್ರಷ್ಟಾಚಾರದ 'ಶೀಷ್ ಮಹಲ್'ಅನ್ನು ತಮ್ಮ ಒಂದೊಂದು ಮತಗಳಿಂದ ಒಡೆದುಹಾಕಿದ್ದಾರೆ. ರಾಜಧಾನಿಯನ್ನು 'ಎಎಪಿ'ಯಿಂದ ಮುಕ್ತಗೊಳಿಸಿದ್ದಾರೆ. ದೇಶದ ಬೇರೆ ಕಡೆಗೂ ಮತದಾರರಿಗೆ ಸುಳ್ಳು ಭರವಸೆ ನೀಡುವ ರಾಜಕೀಯ ಪಕ್ಷಗಳಿಗೆ ದೆಹಲಿಯ ಈ ಫಲಿತಾಂಶ ಪಾಠವಾಗಲಿದೆ ಎಂದಿದ್ದಾರೆ.

ಇದು 'ಮೋದಿ ಗ್ಯಾರಂಟಿ'ಯ ಗೆಲುವು ಮತ್ತು ಮೋದಿ ಜಿ ಅಭಿವೃದ್ಧಿಯ ದೃಷ್ಟಿಕೋನದ ಬಗ್ಗೆ ದೆಹಲಿ ಜನತೆ ನಂಬಿಕೆ ಇರಿಸಿದ್ದಾರೆ. ಬಿಜೆಪಿಗೆ ಬೆಂಬಲ ನೀಡಿದ್ದಕ್ಕೆ ದೆಹಲಿ ಜನತೆಗೆ ಕೃತಜ್ಞತೆ ಸಲ್ಲಿಸುವೆ. ಬಿಜೆಪಿ ಚುನಾವಣೆ ಸಂದರ್ಭ ನೀಡಿರುವ ಎಲ್ಲಾ ಭರವಸೆಗಳನ್ನು ಈಡೇರಿಸಲಿದೆ. ದೆಹಲಿಯನ್ನು ವಿಶ್ವದ ನಂ.1 ರಾಜಧಾನಿಯನ್ನಾಗಿ ಮಾಡಲು ದೃಢನಿಶ್ಚಯ ಮಾಡಿದೆ ಎಂದು ಶಾ ಹೇಳಿದ್ದಾರೆ.

ದೆಹಲಿ ವಿಧಾನಸಭೆ ಚುನಾವಣೆ-2025



ಪಕ್ಷಗಳ	ಮತ ಗಳಿಕೆ (ಶೇ.)
ಎಎಪಿ	43.55
ಬಿಜೆಪಿ	45.81
ಕಾಂಗ್ರೆಸ್	6.36
ಬಿಎಸ್‌ಪಿ	0.58
ಎಐಎಂಐಎಂ	0.78
ಸಿಪಿಐ	0.02
ಸಿಪಿಐ-ಎಂ	0.01
ಜೆಡಿಯು	0.82
ಎಲ್‌ಜೆಪಿ	0.54
ಎನ್‌ಸಿಪಿ	0.05
ನೋಟಾ	0.56
ಇತರೆ	0.92

ದೆಹಲಿ ಹೊಸ ಸಿಎಂ ಯಾರು?

ಪರ್ವೇಶ್ ವರ್ಮಾ, ದುಷ್ಯಂತ್ ಗೌತಮ್ ಮುಂಚೂಣಿಯಲ್ಲಿ

ಹರೀಶ್ ಖುರಾನಾ, ಬಾನ್ಸುರಿ ಸ್ವರಾಜ್ ಹೆಸರೂ ಚಾಲ್ತಿಯಲ್ಲಿ

ದೆಹಲಿ: ದೆಹಲಿ ವಿಧಾನಸಭೆ ಚುನಾವ ಣೆಯ 70 ಕ್ಷೇತ್ರಗಳ ಮತ ಎಣಿಕೆ ಕಾರ್ಯ ಮುಗಿದಿದೆ. ಬಿಜೆಪಿ 48 ಕ್ಷೇತ್ರಗಳಲ್ಲಿ, ಎಎಪಿ 22 ಕ್ಷೇತ್ರಗಳಲ್ಲಿ ಜಯ ಗಳಿಸಿದ್ದಾಗಿದೆ. ಹರಿಯಾಣ ಮತ್ತು ಮಹಾರಾಷ್ಟ್ರ ರಾಜ್ಯಗಳ ಬಳಿಕ ಇದೀಗ ದೆಹಲಿಯಲ್ಲಿ ಆಡಳಿತ ಚುಕ್ಕಾಣಿ ಹಿಡಿಯಲು ಬಿಜೆಪಿ ಸಜ್ಜಾಗಿದೆ. 26 ವರ್ಷಗಳ ಬಳಿಕ ಬಿಜೆಪಿಗೆ ದೆಹಲಿ ಅಧಿಕಾರದ ಗದ್ದುಗೆ ಏರುವ ಅವಕಾಶ ಒಲಿದುಬಂದಿದೆ. ಆದರೆ, ಮುಖ್ಯಮಂತ್ರಿ ಪೀಠದಲ್ಲಿ ಕೂರುವ ಅದೃಷ್ಟ ವಂತರು ಯಾರು? ಎಂಬುದೇ ಸದ್ಯದ ಬಹು ಮುಖ್ಯ ಪ್ರಶ್ನೆಯಾಗಿದೆ.

ಪರ್ವೇಶ್ ವರ್ಮಾ

ದೆಹಲಿಯ ಮಾಜಿ ಮುಖ್ಯಮಂತ್ರಿ ಸಾಹಿಬ್ ಸಿಂಗ್ ವರ್ಮಾ ಅವರ ಪುತ್ರ ಪರ್ವೇಶ್ ವರ್ಮಾ, ಈ ಬಾರಿಯ ಚುನಾವಣೆಯುಲ್ಲಿ 'ಜೈಂಟ್ ಕಿಲ್ಲರ್'(ದಿಗ್ಗಜರನ್ನು ಸೋಲಿಸಿದ ಹುರಿಯಾಳು) ಎನಿಸಿಕೊಂಡಿದ್ದಾರೆ. ವಿಧಾನಸಭಾ ಕ್ಷೇತ್ರದಲ್ಲಿ ಎಎಪಿ ಮುಖ್ಯಸ್ಥ ಕೇಜ್ರಿವಾಲ್ ಅವರನ್ನು ಪರಾಜಯಗೊಳಿ ಸಿದ್ದಾರೆ. ಪ್ರಮುಖ ಅಭ್ಯರ್ಥಿಗೆ ಸೋಲುಣಿಸಿದ್ದು ಮತ್ತು ಕುಟುಂಬದ ಹಿನ್ನೆಲೆ ಎಂಬ ಎರಡು ಕಾರಣಗಳಿಂದ ಅವರು ಸಿಎಂ ರೇಸ್‌ನಲ್ಲಿ ಮುಂಚೂಣಿಯಲ್ಲಿದ್ದಾರೆ. ರಾಜಕೀಯ ಅನುಭವ ಮತ್ತು ಕುಟುಂಬದ ಪರಂಪರೆ ಅವರನ್ನು ಪ್ರಮುಖ ಅಭ್ಯರ್ಥಿಯನ್ನಾಗಿಸಿದೆ.

ದುಷ್ಯಂತ್ ಗೌತಮ್

ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಮತ್ತು ಪ್ರಮುಖ ದಲಿತ ನಾಯಕ ದುಷ್ಯಂತ್ ಗೌತಮ್, ಈ ಬಾರಿ ಕರೋಲ್‌ಬಾಗ್ ವಿಧಾನಸಭೆ ಕ್ಷೇತ್ರದಿಂದ ಸ್ಪರ್ಧಿಸಿ ಎಎಪಿಯ ವಿಶೇಷ್ ರವಿ ವಿರುದ್ಧ ಗೆದ್ದಿದ್ದಾರೆ. ಅವರಿಗೆ ದೆಹಲಿ ರಾಜಕೀಯದಲ್ಲಿ ಸಾಕಷ್ಟು ಅನುಭವವಿದೆ. ಇವರೂ ಕೂಡ ಸಿಎಂ ಹುದ್ದೆಯ ರೇಸ್‌ನಲ್ಲಿದ್ದಾರೆ. ಹಿಂದೆ ರಾಜ್ಯಸಭಾ ಸಂಸದರಾಗಿದದ ದುಷ್ಯಂತ್ ವಿದ್ಯಾರ್ಥಿ ಜೀವನದಿಂದಲೂ ರಾಜಕೀಯದಲ್ಲಿ ಸಕ್ರಿಯರಾಗಿದ್ದವರು.

ಬಾನ್ಸುರಿ ಸ್ವರಾಜ್:

ವಿದೇಶಾಂಗ ಸಚಿವೆಯಾಗಿ ಬಹಳ ಜನಪ್ರಿಯರಾಗಿದ್ದವರು ಸುಷ್ಮಾ ಸ್ವರಾಜ್. ಈಗ ಅವರ ಪುತ್ರಿ ಬಾನ್ಸುರಿ ಸ್ವರಾಜ್ ನವದೆಹಲಿಯಿಂದ ಮೊದಲ ಬಾರಿಗೆ ಸಂಸದೆಯಾಗಿ ಆಯ್ಕೆಯಾಗಿದ್ದಾರೆ. ರಾಜಕೀಯ ಹಿನ್ನಲೆಯಿಂದ ಬಂದಿರುವ ಇವರು ಕೂಡ ಸಿಎಂ ರೇಸ್‌ನಲ್ಲಿ ಇದ್ದಾರೆ ಎನ್ನಲಾಗಿದೆ.

ಹರೀಶ್ ಖುರಾನಾ

ರಾಜಕೀಯ ಪರಂಪರೆಯನ್ನು ಹೊಂದಿರುವ ಮತ್ತೊಬ್ಬ ಅಭ್ಯರ್ಥಿ, ಖುರಾನಾ ದೆಹಲಿಯ ಮಾಜಿ ಮುಖ್ಯಮಂತ್ರಿ ಮದನ್ ಲಾಲ್ ಖುರಾನಾ ಅವರ ಪುತ್ರ. ಅವರು ಮೋತಿ ನಗರದಿಂದ ಸ್ಪರ್ಧಿಸಿದ್ದು, ಮುನ್ನಡೆಯನ್ನು ಗಳಿಸಿದ್ದಾರೆ.

ಕೇಜ್ರಿವಾಲ್ ಸೋಲಿಸಿದ ಪರ್ವೇಶ್ ಯಾರು?

ದೆಹಲಿ: ರಾಷ್ಟ್ರ ರಾಜಧಾನಿ ದೆಹಲಿ ವಿಧಾನಸಭಾ ಚುನಾವಣೆಯ ಫಲಿತಾಂಶ ಹೊರ ಬಿದ್ದಿದ್ದು, 8 ಸಂಸ್ಥೆಗಳ ಸಮೀಕ್ಷೆಗಳ ಭವಿಷ್ಯ ಬಹುತೇಕ ನಿಜವಾಗಿದೆ. ಬಿಜೆಪಿ ಮೂರನೇ ಎರಡರಷ್ಟು ಬಹುಮತ ಪಡೆದು ಅಧಿಕಾರಕ್ಕೇರಲು ಸಜ್ಜಾಗಿದೆ.

ಹೊಸದಿಲ್ಲಿ ಕ್ಷೇತ್ರದಲ್ಲಿ ಸ್ಪರ್ಧಿಸಿದ್ದ ಆಮ್ ಆದ್ಮಿ ಪಕ್ಷ ಮುಖಂಡ, ಸತತ 2 ಅವಧಿಗೆ ದೆಹಲಿ ಮುಖ್ಯಮಂತ್ರಿಯಾಗಿದ್ದ, ಮಾಜಿ ಐಆರ್‌ಎಸ್ ಅಧಿಕಾರಿ ಅರವಿಂದ್ ಕೇಜ್ರಿವಾಲ್ ಅವರಂತಹ ದಿಗ್ಗಜ ಅಭ್ಯರ್ಥಿಯನು ಬಿಜೆಪಿಯ ಪರ್ವೇಶ್ ವರ್ಮಾ ಸೋಲಿಸಿದ್ದಾರೆ. ಇದು ಅರವಿಂದ್ ಕೇಜ್ರಿವಾಲ್‌ಗೆ ಮಾತ್ರವಲ್ಲ, ಇಡೀ ಆಮ್ ಆದ್ಮಿ ಪಕ್ಷಕ್ಕೇ ಭಾರೀ ಆಘಾತ ಉಂಟು ಮಾಡಿದೆ. ನಿರಂತರ 2 ಚುನಾವಣೆಗಳಲ್ಲಿಯೂ ಗೆಲುವು ಸಾಧಿಸಿದ್ದ ಕೇಜ್ರಿವಾಲ್‌ಗೆ ಮೊದಲ ಬಾರಿ ಸೋಲಿನ ಕಹಿ ಕಾಣುವಂತಾಗಿದೆ. ಬಿಜೆಪಿ ಅಭ್ಯರ್ಥಿ ಪರ್ವೇಶ್ ವರ್ಮಾ, ಕೇಜ್ರಿವಾಲ್‌ಗೆ ಸೋಲಿನ ರುಚಿ ತೋರಿಸಿ ದೇಶದ ಜನರ ಗಮನ ಸೆಳೆದಿದ್ದಾರೆ. ಬಿಜೆಪಿಯಿಂದ ಈಗಾಗಲೇ ಎರಡು ಬಾರಿ ಸಂಸದರಾಗಿದ್ದ ಪರ್ವೇಶ್ ವರ್ಮಾ, ಹೊಸದಿಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ ಅರವಿಂದ್ ಕೇಜ್ರಿವಾಲ್ ವಿರುದ್ಧ ಕಣಕ್ಕಿಳಿಯುವ ಮೂಲಕ ದೇಶದ ಗಮನ ಸೆಳೆದಿದ್ದರು. ಈಗ ಮಾಜಿ ಸಿಎಂಗೆ ಸೋಲುಣಿಸಿ ಮತ್ತೊಮ್ಮೆ ಸುದ್ದಿಯಾಗಿದ್ದಾರೆ.

ಸಿಎಂ ರೇಸ್‌ನಲ್ಲಿ..

ಸಿಎಂ ಸಂಭಾವ್ಯ ಅಭ್ಯರ್ಥಿಗಳಲ್ಲಿಯು ಪರ್ವೇಶ್ ಹೆಸರು ಕೇಳಿಬರುತ್ತಿದೆ. ಹಾಗಾಗಿ ಯಾರು ಈ ಪರ್ವೇಶ್ ವರ್ಮಾ? ಎಂದು ಜನರು ವಿವರ ಶೋಧಿಸಲು ಶುರು ಮಾಡಿದ್ದಾರೆ.

ರಾಜಕೀಯ ಹಿನ್ನೆಲೆ

ಪರ್ವೇಶ್, ಜಾಟ್ ಸಮುದಾಯದ ಪ್ರಭಾವಿ ನಾಯಕ. ರಾಜಕೀಯ ಹಿನ್ನೆಲೆಯ ಕುಟುಂಬದಿಂದ ಬಂದವರು. ಇವರ ತಂದೆ ಸಾಹಿಬ್ ಸಿಂಗ್ ವರ್ಮಾ ಬಿಜೆಪಿಯಲ್ಲಿ ಪ್ರಭಾವಿ ನಾಯಕರಾಗಿದ್ದರು. ದೆಹಲಿ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಿದ್ದರು. ಪರ್ವೇಶ್ ಅವರ ಮಾವ ಅಝಾದ್ ಸಿಂಗ್ ಉತ್ತರ ದೆಹಲಿಯ ಮಾಜಿ ಮೇಯರ್.

ಕೋಟ್ಯಾಧೀಶ...

ಪರ್ವೇಶ್ ವರ್ಮಾ 89 ಕೋಟಿ ರು. ಆಸ್ತಿ ಹೊಂದಿರುವುದಾಗಿ ನಾಮಪತ್ರ ಜತೆ ಸಲ್ಲಿಸಿರುವ ಪ್ರಮಾಣಪತ್ರದಲ್ಲಿ ಘೋಷಿಸಿದ್ದರು. ಪತ್ನಿ ಸ್ವಾತಿ ಸಿಂಗ್ ಅವರ ನಿವ್ವಳ ಆಸ್ತಿ ಮೌಲ್ಯ 24.4 ಕೋಟಿ ರು. ಹಾಗೂ ದಂಪತಿಯ ಒಟ್ಟು ಆಸ್ತಿ ಮೌಲ್ಯ 113 ಕೋಟಿ ರು.ಗಳು. ಅಲ್ಲದೇ, ತಮ್ಮ ಬಳಿ 2.2 ಲಕ್ಷ ರು. ಮತ್ತು ಪತ್ನಿ ಸ್ವಾತಿ ಬಳಿ 50,000 ರು. ನಗದು ಹಾಗೂ 8.25 ಲಕ್ಷ ರೂ. ಮೌಲ್ಯದ 200 ಗ್ರಾಂ ಚಿನ್ನ ಇರುವುದಾಗಿ ಪರ್ವೇಶ್ ತಿಳಿಸಿದ್ದರು. ಷೇರುಪೇಟೆಯಲ್ಲಿ 52.75 ಕೋಟಿ ರು. ಹೂಡಿಕೆ ಇದೆ. ಪರ್ವೇಶ್ 17 ಲಕ್ಷ ರು. ಮತ್ತು ಪತ್ನಿ 5.5 ಲಕ್ಷ ರು. ಮೌಲ್ಯದ ವಿಮಾ ಹೂಡಿಕೆ ಹೊಂದಿದ್ದಾರೆ. ಪರ್ವೇಶ್ ಬಳಿ 9 ಲಕ್ಷ ರು. ಮೌಲ್ಯದ ಟೊಯೊಟಾ ಫಾರ್ಚೂನರ್, 36 ಲಕ್ಷ ರು. ಮೌಲ್ಯದ ಟೊಯೊಟಾ ಇನ್ನೋವಾ ಮತ್ತು 11.8 ಲಕ್ಷ ರು. ಮೌಲ್ಯದ ಎಕ್ಸ್‌ಯುವಿ ಕಾರುಗಳಿವೆ.

ಎಎಪಿ ಸೋಲಿಗೆ ಕೈ ಹೊಣೆಯಲ್ಲ

ದೆಹಲಿ: ದೆಹಲಿ ವಿಧಾನಸಭೆ ಚುನಾವಣೆಯಲ್ಲಿ 'ಆಮ್ ಆದ್ಮಿ ಪಕ್ಷ'ದ(ಎಎಪಿ) ಸೋಲಿಗೆ ಕಾಂಗ್ರೆಸ್ ಪಕ್ಷ ಜವಾಬ್ದಾರಿಯಲ್ಲ. ಆ ಪಕ್ಷವನ್ನು ಗೆಲ್ಲಿಸುವುದೇ ನಮ್ಮ ಕೆಲಸ ಅಲ್ಲ ಎಂದು ಕಾಂಗ್ರೆಸ್ ಹೇಳಿದೆ.

ಕಾಂಗ್ರೆಸ್ ನೇತೃತ್ವದ 'ಇಂಡಿಯ' ಒಕ್ಕೂಟದ ಮಿತ್ರಪಕ್ಷವಾದ 'ಎಎಪಿ'ಗೆ ದೆಹಲಿ ವಿಧಾನಸಭೆ ಚುನಾವಣೆ ಯಲ್ಲಿ ಹ್ಯಾಟ್ರಿಕ್ ಕನಸು ಭಗ್ನವಾಗಿದೆ. 'ಎಎಪಿ'ಯ ಈ ಬಾರಿಯ ಸೋಲಿಗೆ ಕಾಂಗ್ರೆಸ್ ಪಕ್ಷವೇ ಕಾರಣ ಎಂಬ ಟೀಕೆಗಳು ಕೇಳಿಬಂದಿವೆ.

ಈ ಬಗ್ಗೆ ಖಾರವಾಗಿ ಪ್ರತಿಕ್ರಿಯೆ ನೀಡಿರುವ ಕಾಂಗ್ರೆಸ್ ವಕ್ತಾರೆ ಸುಪ್ರಿಯಾ ಶ್ರೀನಾಥೆ, ಎಎಪಿ ಪಕ್ಷದ ಸೋಲಿಗೆ ನಾವು ಹೇಗೆ ಕಾರಣವಾಗುತ್ತೇವೆ? ಆ ಪಕ್ಷದವರ ಭ್ರಷ್ಟಾಚಾರವೇ ಅವರ ಸೋಲಿಗೆ ಕಾರಣ' ಎಂದು ಹೇಳಿದ್ದಾರೆ.

'ದೆಹಲಿ ವಿಧಾನಸಭೆ ಚುನಾವಣೆಯಲ್ಲಿ ಆಮ್ ಆದ್ಮಿ ಪಕ್ಷವನ್ನು ಗೆಲ್ಲಿಸುವುದು ಕಾಂಗ್ರೆಸ್‌ನ ಜವಾಬ್ದಾರಿ ಅಲ್ಲ. ನಮ್ಮ ಜವಾಬ್ದಾರಿ ಪರಿಣಾಮಕಾರಿಯಾಗಿ ಪ್ರಚಾರ ನಡೆಸುವು ದಾಗಿದೆ. ನಾವೇನಿದ್ದರೂ ರಾಜಕೀಯ ಸ್ಪರ್ಧೆಗೆ ಬಲಿಷ್ಠವಾದ ರಾಜ್ಯಗಳನ್ನು ಹುಡುಕುತ್ತೇವೆ ಮತ್ತು ಅವನ್ನು ಗೆಲ್ಲಲು ಯತ್ನಿಸುತ್ತೇವೆ. ದೆಹಲಿ ವಿಧಾನಸಭೆಯಲ್ಲಿ ಈ ಹಿಂದೆ ಕಾಂಗ್ರೆಸ್ 15 ವರ್ಷಗಳ ಕಾಲ ಆಡಳಿತ ನಡೆಸಿತ್ತು ಎಂಬುದನ್ನು ಯಾರೂ ಮರೆಯಬಾರದು. ಇಲ್ಲಿ ಯಾವುದೇ ಪಕ್ಷದ ಮೇಲೂ ಕಾಂಗ್ರೆಸ್ ಅವಲಂಬಿತವಾಗಿಲ್ಲ' ಎಂದು ಸಿಟ್ಟಿನಿಂದಲೇ ಪ್ರತಿಕ್ರಿಯಿಸಿದರು.

ಎಎಪಿ ಕಾರಣ ಎನ್ನಲಾದೀತೆ?: ಕೇಜ್ರಿವಾಲ್ ಗೋವಾ, ಹರಿಯಾಣ, ಗುಜರಾತ್, ಉತ್ತರಾಖಂಡ ರಾಜ್ಯಗಳಿಗೂ ಚುನಾವಣೆ ಸ್ಪರ್ಧೆಗೆ ಹೋಗಿದ್ದರು. ಆ ಪೈಕಿ ಗೋವಾ ಮತ್ತು ಉತ್ತರಾಖಂಡ ಚುನಾವಣೆಗಳಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವಿನ ಮತಗಳಿಕೆ ಪ್ರಮಾಣದ ವ್ಯತ್ಯಾಸ ಎಎಪಿ ಪಡೆದಿರುವ ಮತಗಳಷ್ಟೇ ಇದೆ. ಹಾಗಾಗಿ, ಆ ಎರಡೂ ಚುನಾವಣೆಗಳಲ್ಲಿ ಕಾಂಗ್ರೆಸ್ ಸೋಲಿಗೆ ಎಎಪಿ ಕಾರಣ ಎನ್ನಲಾದೀತೆ? ಎಂದೂ ಸುಪ್ರಿಯಾ ಪ್ರಶ್ನಿಸಿದರು.

ದಿಲ್ಲಿಯಲ್ಲಿ ಅ(ಮ)ರಳಿದ ಕಮಲ

ದೆಹಲಿಯ ಜನ ಬದಲಾವಣೆ ಬಯಸಿದ್ದರು ಮತ್ತು ಬದಲಾವಣೆಗಾಗಿಯೇ ಮತ ಚಲಾಯಿಸಿದ್ದಾರೆ. ಚುನಾವಣೆ ಸಮಯದಲ್ಲಿ ಕಾಂಗ್ರೆಸ್ ನಡೆಸುತ್ತಿದ್ದ ಸಭೆಗಳಲ್ಲಿ ಈ ಅಂಶ ಗೊತ್ತಾಗಿತ್ತು. ಚುನಾವಣೆಯಲ್ಲಿ ಗೆದ್ದವರಿಗೆಲ್ಲ ಅಭಿನಂದನೆಗಳು.

-ಪ್ರಿಯಾಂಕಾ ವಾದ್ರಾ, ಕಾಂಗ್ರೆಸ್ ಸಂಸದೆ

ಇದು ಭಾರತ ವಿಕಾಸ, ಪ್ರಗತಿಯ ಗೆಲುವು: ಮೋದಿ ವ್ಯಾಖ್ಯಾನ | ರಾಜಕೀಯದಲ್ಲಿ ಸುಳ್ಳು ಮತ್ತು ಮೋಸಕ್ಕೆ ಸ್ಥಳವಿಲ್ಲ

ಶಾರ್ಟ್‌ಕಟ್ ರಾಜಕೀಯಕ್ಕೆ ಶಾರ್ಟ್ ಸರ್ಕಿಟ್

ದೆಹಲಿ: ಶಾರ್ಟ್‌ಕಟ್ ರಾಜಕೀಯಕ್ಕೆ ದೆಹಲಿಯ ಜನರು 'ಶಾರ್ಟ್ ಸರ್ಕಿಟ್' ನೀಡಿದ್ದಾರೆ. ದೇಶದ ರಾಜಧಾನಿ ದೆಹಲಿಗೇ ಮಾಲೀಕರಾಗಲು ಹೊರಟವರಿಗೆ ಮತದಾರರು ಈ ಬಾರಿ ಬುದ್ಧಿ ಕಲಿಸಿದ್ದಾರೆ. ದೆಹಲಿಯ ಅಸಲಿ ಮಾಲೀಕರು ದೆಹಲಿ ಜನರು ಎಂಬುದನ್ನು ಸಾಬೀತು ಮಾಡಿದ್ದಾರೆ ಎಂದು ಪ್ರಧಾನಿ ನರೇಂದ್ರ ಮೋದಿ ಪರೋಕ್ಷವಾಗಿ ಆಮ್ ಆದ್ಮಿ ಪಕ್ಷದ ವಿರುದ್ಧ ವಾಗ್ದಾಳಿ ನಡೆಸಿದರು.

ದೆಹಲಿಯಲ್ಲಿನ ಬಿಜೆಪಿ ಪ್ರಧಾನ ಕಚೇರಿಗೆ ಆಗಮಿಸಿ ಕಾರ್ಯಕರ್ತರ ಜತೆ 'ದೆಹಲಿ ವಿಧಾನಸಭೆ ಚುನಾವಣೆ ವಿಜಯ'ದ ಸಂಭ್ರಮಾಚರಣೆಯಲ್ಲಿ ಭಾಗಿಯಾದರು. ಇದೇ ವೇಳೆ ಕಾರ್ಯಕರ್ತರನ್ನುದ್ದೇಶಿಸಿ ಮಾತನಾಡಿದ ಮೋದಿ, ದೆಹಲಿಯ ಜನರು ನನಗೆ ಈ ಬಾರಿ ನಿರಾಶೆ ಮಾಡುವುದಿಲ್ಲ ಎಂಬುದು ಗೊತ್ತಿತ್ತು. ಲೋಕಸಭೆ ಚುನಾವಣೆಯಲ್ಲೂ ಏಳಕ್ಕೆ ಏಳೂ ಸ್ಥಾನಗಳನ್ನು ನನಗೆ ಉಡುಗೊರೆಯಾಗಿ ನೀಡಿದರು. ಈ ಬಾರಿ ದೆಹಲಿ ವಿಧಾನಸಭೆ ಚುನಾವಣೆಯಲ್ಲಿಯೂ ಮೂರನೇ ಎರಡರಷ್ಟು ಬಹುಮತವನ್ನು ನೀಡಿ 5 ವರ್ಷ ನಿರಾತಂಕ ಆಡಳಿತ ನಡೆಸುವುದಂತೆ ಆದೇಶ ನೀಡಿದ್ದಾರೆ ಎಂದು ಹೇಳಿದರು.

ಜನಾದೇಶ ಸ್ಪಷ್ಟವಾಗಿದೆ. ರಾಜಕೀಯದಲ್ಲಿ ಸುಳ್ಳು ಮತ್ತು ಮೋಸಕ್ಕೆ ಸ್ಥಳವಿಲ್ಲ ಎಂದು ಈ ಜನಾದೇಶ ಹೇಳಿದೆ. ದೆಹಲಿ ಮತದಾರರು ಅಭಿವೃದ್ಧಿ, ದೂರದೃಷ್ಟಿ ಮತ್ತು ವಿಕಾಸಕ್ಕೆ ಜಯ ದೊರಕಿಸಿಕೊಟ್ಟಿದ್ದಾರೆ ಎಂದು ವ್ಯಾಖ್ಯಾನಿಸಿದರು.

ದೆಹಲಿಯಲ್ಲಿನ ಬಿಜೆಪಿ ಪ್ರಧಾನ ಕಚೇರಿಯಲ್ಲಿ ಪ್ರಧಾನಿ ಮೋದಿ ವಿಜಯೋತ್ಸವ ಭಾಷಣ.

ಒಂದು ದಶಕದ ಬಳಿಕ ಆಮ್ ಆದ್ಮಿ ಪಕ್ಷದಿಂದ ದೆಹಲಿ ಈಗ ಮುಕ್ತವಾಗಿದೆ. ಈ ಗೆಲುವಿಗೆ ಪಕ್ಷದ ಎಲ್ಲಾ ಕಾರ್ಯಕರ್ತರು ಹಕ್ಕುದಾರರು. ಅದಕ್ಕಾಗಿ ಬಿಜೆಪಿ ಕಾರ್ಯಕರ್ತರಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದು ಹೇಳಿದರು.

ದೆಹಲಿಯಲ್ಲಿ ಸೇವೆಯ ಅವಕಾಶ ನೀಡುವಂತೆ ದೆಹಲಿ ಜನರಿಗೆ ನಾನು ಒಂದು ಪತ್ರ ಕಳುಹಿಸಿದ್ದೆ. ಜನರು ಈಗ ನಮಗೆ ಅಭಿವೃದ್ಧಿ ಮಾಡಲು ಅವಕಾಶ ನೀಡಿದ್ದಾರೆ. ಇದಕ್ಕಾಗಿ ನಾನು ತಲೆ ಬಾಗಿ ಕೃತಜ್ಞತೆ ಸಲ್ಲಿಸುತ್ತೇವೆ ಎಂದರು.

ಹೃದಯತುಂಬಿ ಜನರು ಪ್ರೀತಿ ನೀಡಿದ್ದಾರೆ. ಈ ಪ್ರೀತಿಯನ್ನು ನೂರು ಪಟ್ಟು ಸೇರಿಸಿ ಅಭಿವೃದ್ಧಿ ಮೂಲಕ ವಾಪಸ್ ನೀಡುತ್ತೇವೆ. ಡಬಲ್ ಎಂಜಿನ್ ದೆಹಲಿ ಜನರ ಆಯ್ಕೆಯಾಗಿದೆ. ವೇಗವಾಗಿ ಅಭಿವೃದ್ಧಿ ಕಾರ್ಯಗಳನ್ನು ನಡೆಸಿ ಜನರ ಋಣ ತೀರಿಸುತ್ತೇವೆ ಎಂದು ವಚನ ನೀಡಿದರು.

ದೆಹಲಿಯಲ್ಲಿ ಗೆಲ್ಲುವುದು ಕೋಟ್ಯಂತರ ಕಾರ್ಯಕರ್ತರ ಕನಸಾಗಿತ್ತು. ವಿಕಾಸ, ವಿಶ್ವಾಸ, ವಿಶನ್‌ಗೆ ಸಿಕ್ಕ ಗೆಲುವಿದು. ನಿಮ್ಮೆಲ್ಲರ ವಿಶ್ವಾಸಕ್ಕೆ ಧಕ್ಕೆಯಾಗದಂತೆ ಆಡಳಿತ ನಡೆಸುವ ಭರವಸೆ ನೀಡುತ್ತೇವೆ ಎಂದು ಭರವಸೆ ನೀಡಿದರು.

ದೆಹಲಿ ಎಎಪಿ ಮುಕ್ತ

ದೆಹಲಿಯಲ್ಲಿ ಕಳೆದ 10 ವರ್ಷಗಳಿಂದ ತಲೆದೋರಿದ್ದ ಸಂಕಷ್ಟ ಇಂದಿಗೆ ಮುಗಿದಿದೆ. ಬಿಜೆಪಿಗೆ ಅವಕಾಶ ನೀಡಿದ್ದಕ್ಕೆ ಮತದಾರರಿಗೆ ಅನಂತ ಅನಂತ ಧನ್ಯವಾದ. ವಿಕಸಿತ ರಾಜಧಾನಿ ಮಾಡುವ ಅವಕಾಶ ನಮಗೆ ಸಿಕ್ಕಿದೆ ಎಂದು ಮೋದಿ ಹೇಳಿದ್ದಾರೆ. ಎಎಪಿಯ ದುರಾಡಳಿತ ಅಂತ್ಯವಾಗಿದೆ. ಜನಾದೇಶ ಸ್ಪಷ್ಟವಾಗಿದೆ. ಬಿಜೆಪಿಗೆ ಜೈಕಾರ ಹಾಕಿದ್ದಾರೆ. ಈ ಚುನಾವಣೆ ಎಎಪಿ ಮುಕ್ತ ದೆಹಲಿಯನ್ನು ರೂಪಿಸಿದೆ ಎಂದರು.

ಭ್ರಷ್ಟಾಚಾರದಿಂದಲೇ ಆರಂಭ-ಅಂತ್ಯ!

ದೆಹಲಿ: ಅರವಿಂದ ಕೇಜ್ರಿವಾಲ್ ಹೊಸದಿಲ್ಲಿ ವಿಧಾನ ಸಭಾ ಕ್ಷೇತ್ರದಿಂದ ಸ್ಪರ್ಧಿಸಿ ಬಿಜೆಪಿಯ ಪರ್ವೇಶ್ ವರ್ಮಾ ಅವರಿಂದ ಸೋಲುಂಡಿದ್ದಾರೆ. ಭ್ರಷ್ಟಾಚಾರದ ವಿರುದ್ಧ ದನಿ ಎತ್ತಿ, ಸಾಮಾಜಿಕ ಹೋರಾಟಗಾರ ಅಣ್ಣಾ ಹಜಾರೆ ಅವರ ನೇತೃತ್ವದಲ್ಲಿ 'ಹೋರಾಟ ಸಂಘಟನೆ' ಮಾಡುವ ಮೂಲಕವೇ ರಾಜಕೀಯಕ್ಕೆ ಪ್ರವೇಶ ಪಡೆದ ಅರವಿಂದ ಕೇಜ್ರಿವಾಲ್, ಎರಡು ಬಾರಿ ಮುಖ್ಯಮಂತ್ರಿಯಾ ದರು. ಆ ಬಳಿಕ ಭ್ರಷ್ಟಾಚಾರ ಕೂಪದಲ್ಲಿ ಸ್ವತಃ ಮುಳುಗಿ ಜೈಲು ಪಾಲಾದರು. ಅದೇ ಕಾರಣವಾಗಿ ರಾಜಕೀಯ ಅಧಃಪತನ ಕಂಡರು.

ಇಂಡಿಯನ್ ರೆವಿನ್ಯೂ ಸರ್ವಿಸ್(ಐಆರ್‌ಎಸ್) ಅಧಿಕಾರಿಯಾಗಿದ್ದ ಅರವಿಂದ ಕೇಜ್ರಿವಾಲ್, ಸರಕಾರದ ನೌಕರಿ ತೊರೆದು ರಾಜಕೀಯ ಜೀವನ ಶುರು ಮಾಡಿದ್ದೇ ಒಂದು ಆಸಕ್ತಿದಾಯಕ ವಿಷಯ.

ದಶಕದ ಹಿಂದೆ ಅಪಾರವಾದ ಸಾಮಾಜಿಕ ಕಳಕಳಿ ಹೊಂದಿದ್ದ ಅರವಿಂದ್ ಕೇಜ್ರಿವಾಲ್ ಪ್ರವರ್ಧಮಾನಕ್ಕೆ ಬಂದಿದ್ದೇ ಭ್ರಷ್ಟಾಚಾರ ವಿರುದ್ಧ ಸಾಮಾಜಿಕ ಹೋರಾಟಗಾರ ಅಣ್ಣಾ ಹಜಾರೆ ಅವರು ಉಪವಾಸ ಕುಳಿತ ಸಂದರ್ಭ. ಆ ಹೋರಾಟವನ್ನು ಸಮರ್ಪಕವಾಗಿ ಸಂಘಟಿಸಿ ಅನುಭವ ಹಾಗೂ ಪ್ರಮುಖ ಹೋರಾಟಗಾರರ ಸಂಪರ್ಕ ಪಡೆದ ಅರವಿಂದ್ ಕೇಜ್ರಿವಾಲ್ ಮನದಲ್ಲಿ ಅಧಿಕಾರದ ಆಸೆ ಗರಿಗೆದರಿತು. ಅದರಿಂದಾಗಿಯೇ ಚುನಾವಣಾ ರಾಜಕಾರಣಕ್ಕೆ ಪ್ರವೇಶ ಪಡೆದು 'ಆಮ್ ಆದ್ಮಿ ಪಾರ್ಟಿ' ಸ್ಥಾಪಿಸಿದರು. ಕಸಪೊರಕೆಯನ್ನೇ ಪಕ್ಷದ ಚಿನ್ಹೆಯಾಗಿಸಿಕೊಂಡು, ಭ್ರಷ್ಟಾಚಾರವನ್ನು ಗುಡಿಸಿ ಹೊರಹಾಕುವೆ ಎಂದು ಘರ್ಜಿಸಿದರು. ಜನರಿಗೆ ಅದು ಬಹಳ ಆಕರ್ಷವಾಗಿ ಕಂಡಿತು. ರಾಜಕೀಯದಲ್ಲಿ ಜಯ ಸಿಕ್ಕಿತು. ಬಿಜೆಪಿ ಮತ್ತು ಕಾಂಗ್ರೆಸ್ ಪಕ್ಷವನ್ನು ಸೋಲಿಸಿ ದೆಹಲಿ ಮುಖ್ಯಮಂತ್ರಿಯಾದರು.

ಆರಂಭದ ಜೀವನ: ಗೋಬಿಂದ್ ರಣ್ ಕೇಜ್ರಿವಾಲ್ ಹಾಗೂ ಗೀತಾದೇವಿ ದಂಪತಿ ಪುತ್ರ ಅರವಿಂದ್ ಕೇಜ್ರಿವಾಲ್ 1968ರ ಜೂನ್ 16ರಲ್ಲಿ ಹರಿಯಾಣದಲ್ಲಿ ಜನಿಸಿದರು. ಜನ್ಮಸ್ಥಳದಲ್ಲೇ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಪೂರ್ಣಗೊಳಿಸಿದರು. ಬಳಿಕ ಖರಗ್‌ಪುರದ ಪ್ರತಿಷ್ಠಿತ 'ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ(ಐಐಟಿ)ಯಲ್ಲಿ 1989ರಲ್ಲಿ ಮೆಕಾನಿಕಲ್ ಇಂಜಿನಿಯರಿಂಗ್ ಪದವಿ ಪಡೆದರು.

ಬಳಿಕ ಟಾಟಾ ಸ್ಟೀಲ್ಸ್ ಕಂಪನಿಯಲ್ಲಿ 1989ರಲ್ಲಿ ವಾರ್ಷಿಕ 5ರಿಂದ 8 ಲಕ್ಷದ ಪ್ಯಾಕೇಜ್‌ನ ನೌಕರಿ ಪಡೆದರು. 1992ರಲ್ಲಿ ಕೆಲಸ ಬಿಟ್ಟು ಸ್ಪರ್ಧಾತ್ಮಕ ಪರೀಕ್ಷೆ ಬರೆದು ಐಆರ್‌ಎಸ್ ಅಧಿಕಾರಿಯಾದರು. 1995ರಲ್ಲಿ ಕಂದಾಯ ಇಲಾಖೆ ಸೇರಿ ಸರಕಾರಿ ಸೇವೆ ಆರಂಭಿಸಿದರು.

ಸಮಾಜ ಸೇವೆಯಲ್ಲಿ ಅಪಾರ ಆಸಕ್ತಿ ಹೊಂದಿದ್ದ ಅರವಿಂದ್ ಕೇಜ್ರಿವಾಲ್, ಕೋಲ್ಕತ್ತದ ಮದರ್ ಥೆರೇಸಾ ಮಿಷನರಿ ಆಫ್ ಚಾರಿಟಿ, ರಾಮಕೃಷ್ಣ ಮಿಷನ್, ನೆಹರೂ ಯುವ ಕೇಂದ್ರ, ಮುಂತಾದ ಸಂಸ್ಥೆಗಳ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡರು. ಸರಕಾರಿ ಕಚೇರಿಯಲ್ಲಿನ ಅವ್ಯವಹಾರ, ಮಿತಿಮೀರಿದ ಭ್ರಷ್ಟಾಚಾರ ವಿರುದ್ಧ ಅರವಿಂದ್ ಕೇಜ್ರಿವಾಲ್ ದನಿ ಎತ್ತತೊಡಗಿದರು. 2006ರಲ್ಲಿ ಆದಾಯ ತೆರಿಗೆ ಇಲಾಖೆ ಜಂಟಿ ಆಯುಕ್ತ ಹುದ್ದೆಗೆ ರಾಜೀನಾಮೆ ನೀಡಿ ಪೂರ್ಣ ಪ್ರಮಾಣದಲ್ಲಿ ಹೋರಾಟಕ್ಕಿಳಿದರು.

ರಾಜಕೀಯ ರಂಗ ಪ್ರವೇಶ

ಹೊಸ ರಾಜಕೀಯ ಪಕ್ಷ ಸ್ಥಾಪನೆ ಮಾಡುವ ನಿರ್ಧಾರವನ್ನು ಅರವಿಂದ್ ಕೇಜ್ರಿವಾಲ್ ಘೋಷಣೆ ಮಾಡಿದಾಗ ರಾಜಕೀಯದಲ್ಲಿ ಆಸಕ್ತಿ ಇಲ್ಲದ ಅಣ್ಣಾ ಹಜಾರೆ, ನ್ಯಾ.ಸಂತೋಷ್ ಹೆಗ್ಡೆ, ಕಿರಣ್ ಬೇಡಿ ಮತ್ತಿತರ ಹೋರಾಟಗಾರರು ದೂರ ಉಳಿದರು. 2012ರ ನವೆಂಬರ್‌ನಲ್ಲಿ 'ಆಮ್ ಆದ್ಮಿ ಪಕ್ಷ'ವನ್ನು ಅರವಿಂದ್ ಕೇಜ್ರಿವಾಲ್ ಆರಂಭಿಸಿದರು. 2013ರಲ್ಲಿ ಮೊದಲ ಪ್ರಯತ್ನದಲ್ಲೇ ದೆಹಲಿ ವಿಧಾನಸಭೆ ಚುನಾವಣೆಯಲ್ಲಿ ಭರ್ಜರಿ ಗೆಲುವು ಸಾಧಿಸುವ ಮೂಲಕ ಅಧಿಕಾರ ಪರ್ವ ಆರಂಭಿಸಿದರು. ದೆಹಲಿ ಮುಖ್ಯಮಂತ್ರಿಯೂ ಆದರು. ಅಲ್ಲಿಗೆ, ದೆಹಲಿಯಲ್ಲಿನ ಕಾಂಗ್ರೆಸ್ ಪಕ್ಷದ ಸತತ 15 ವರ್ಷಗಳ ಆಡಳಿತ ಅಂತ್ಯಗೊಂಡಿತು. ಜನಲೋಕಪಾಲ್ ಮಸೂದೆ ಮಂಡನೆ ಆಗದೇ ಇದ್ದರೆ ರಾಜೀನಾಮೆ ನೀಡುವುದಾಗಿ ಹೇಳಿದ್ದ ಅರವಿಂದ್ ಕೇಜ್ರಿವಾಲ್, ಅಧಿಕಾರಕ್ಕೇರಿದ 48 ದಿನಗಳಲ್ಲೇ ಮುಖ್ಯಮಂತ್ರಿ ಸ್ಥಾನಕ್ಕೆ ರಾಜೀನಾಮೆ ನೀಡಿದರು. ಸರಕಾರ ಪತನಗೊಂಡು ಮತ್ತೆ ಚುನಾವಣೆ ಎದುರಾಯಿತು. 2015ರಲ್ಲಿ ನಡೆದ ಚುನಾವಣೆಯಲ್ಲಿ ರಾಷ್ಟ್ರೀಯ ಪಕ್ಷಗಳ ಲೆಕ್ಕಾಚಾರ ತಲೆಕೆಳಗಾಯಿತು. 70 ಸದಸ್ಯ ಬಲದ ದೆಹಲಿ ವಿಧಾನಸಭೆಯಲ್ಲಿ ಆಮ್ ಆದ್ಮಿ ಪಕ್ಷ 67 ಸ್ಥಾನಗಳಲ್ಲಿ ಜಯ ಗಳಿಸುವ ಮೂಲಕ ಅಪಾರ ಜನ ಬೆಂಬಲ ಪಡೆಯಿತು.

ಬದಲಾದ ಬದುಕು- ಹೋರಾಟದ ಕೂಗು

ಭ್ರಷ್ಟಾಚಾರ ಬಗ್ಗೆ ಜನರಲ್ಲಿ ಅರಿವು ಮೂಡಿಸಲು, ಹೋರಾಟ ಮಾಡಲು 'ಪರಿವರ್ತನ' ಎಂಬ ಸಂಘಟನೆ ಆರಂಭಿಸಿದರು. 2006ರ ಡಿಸೆಂಬರ್‌ನಲ್ಲಿ ಮನೀಷ್ ಸಿಸೋಡಿಯ ಜತೆಗೂಡಿ 'ಪಬ್ಲಿಕ್ ಕಾಸ್ ಫಾರ್ ರಿಸರ್ಚ್ ಫೌಂಡೇಷನ್' ಸಂಸ್ಥೆ ಸ್ಥಾಪಿಸಿದರು. ಮಾಹಿತಿ ಹಕ್ಕು ಕಾಯಿದೆ ಬಗ್ಗೆ ಜನರಲ್ಲಿ ಅರಿವು ಮೂಡಿಸಲು ಆರಂಭಿಸಿದರು. ಪಾರದರ್ಶಕ-ನ್ಯಾಯ ಸಮ್ಮತ ಆಡಳಿತ ನಡೆಸುವಂತೆ ಸರಕಾರವನ್ನು ಒತ್ತಾಯಿಸಲು ಆರಂಭಿಸಿದರು. ಕೇಜ್ರಿವಾಲ್ ಜನಪರ ಕಾಳಜಿಗಾಗಿ ರಾಮನ್ ಮ್ಯಾಗ್ಸೆಸ್ಸೆ ಪ್ರಶಸ್ತಿ ಲಭಿಸಿತು. ಆ ಬಳಿಕ ಅವರ ಜನಪ್ರಿಯತೆ ಮತ್ತಷ್ಟು ಹೆಚ್ಚಿತು. ಮುಂದೆ ಕೇಜ್ರಿವಾಲ್, ನ್ಯಾ. ಸಂತೋಷ್ ಹೆಗ್ಡೆ, ಮಾಜಿ ಐಪಿಎಸ್ ಅಧಿಕಾರಿ ಕಿರಣ್ ಬೇಡಿ, ಸುಪ್ರೀಂ ಕೋರ್ಟ್ ವಕೀಲ ಶಾಂತಿ ಭೂಷಣ್, ಪ್ರಶಾಂತ್ ಭೂಷಣ್ ಮೊದಲಾದ ಸಾಮಾಜಿಕ ಕಳಕಳಿ ಹೊಂದಿರುವ ಪ್ರಮುಖರ ಜತೆ ಸೇರಿ, ಭ್ರಷ್ಟರ ಶಿಕ್ಷಿಸಲು ಜನ ಲೋಕಪಾಲ ಮಸೂದೆ ಜಾರಿಗೆ ಆಗ್ರಹಿಸಿ ಜನಾಭಿಪ್ರಾಯ ಸಂಗ್ರಹ ಆಂದೋಲನ ಆರಂಭಿಸಿದರು. ಆಗಲೇ 'ಭ್ರಷ್ಟಾಚಾರ ವಿರುದ್ಧ ಭಾರತ' ಎಂಬ ಸಂಘ ಸ್ಥಾಪನೆಯಾಯಿತು. 2011ರ ಏಪ್ರಿಲ್‌ನಲ್ಲಿ ಜನಾಂದೋಲನಕ್ಕೆ ಚಾಲನೆ ನೀಡಿ ಅಣ್ಣಾ ಹಜಾರೆ ನೇತೃತ್ವದಲ್ಲಿ ದೆಹಲಿಯ ಜಂತರ್ ಮಂತರ್‌ನಲ್ಲಿ ಸುದೀರ್ಘ ಹೋರಾಟ ಆರಂಭಿಸಲಾಯಿತು. ಬಳಿಕ ಅದು ದೇಶವ್ಯಾಪಿ ವಿಸ್ತರಿಸಿತು.

ಜೈಲು: ಪತನ ಕಾಲದ ಆರಂಭ

ಬಹುಕೋಟಿ ರು.ಗಳ ಅಬಕಾರಿ ನೀತಿ ವಿವಾದ ಸಂಬಂಧ ಅಕ್ರಮ ಹಣ ವರ್ಗಾವಣೆ ಪ್ರಕರಣದಲ್ಲಿ ಕೇಜ್ರಿವಾಲ್‌ರನ್ನು 2024ರ ಜುಲೈ 12ರಂದು ಜಾರಿ ನಿರ್ದೇಶನಾಲಯದ(ಇ.ಡಿ) ಅಧಿಕಾರಿಗಳು ಬಂಧಿಸಿದರು. ಅದಕ್ಕೂ ಮೊದಲು ಕೇಜ್ರಿವಾಲ್‌ಗೆ ಇ.ಡಿ.ಯಿಂದ 8 ಬಾರಿ ಸಮನ್ಸ್ ಜಾರಿಯಾಗಿತ್ತು. ಆದರೆ ಇ.ಡಿ ಎದುರು ವಿಚಾರಣೆಗೆ ಹಾಜರಾಗದೆ ಮೊಂಡುತನ ಪ್ರದರ್ಶಿಸಿದ ಕೇಜ್ರಿವಾಲ್ ಅವರನ್ನು ಅಂತಿಮವಾಗಿ ಬಂಧಿಸಿ ಜೈಲಿಗೆ ಕಳುಹಿಸಲಾಯಿತು. ಮುಂದೆ 5 ತಿಂಗಳು ಜೈಲಿನಲ್ಲಿದ್ದ ಕೇಜ್ರಿವಾಲ್ ಹಠಕ್ಕೆ ಬಿದ್ದು ಸಿಎಂ ಹುದ್ದೆಯಲ್ಲೇ ಮುಂದುವರಿದರು. ಜಾಮೀನಿನ ಮೇಲೆ ಹೊರಬಂದ ಬಳಿಕವಷ್ಟೇ ಸಿಎಂ ಹುದ್ದೆಗೆ ರಾಜೀನಾಮೆ ನೀಡಿದರು. ಅವರ ರಾಜಕೀಯ ಅಧಃಪತನ ಹೀಗೆ ಆರಂಭವಾಗಿ 2025ರ ದೆಹಲಿ ಚುನಾವಣೆಯಲ್ಲಿ ಸೋಲು ಕಾಣುವಂತೆ ಮಾಡಿದೆ. ಭ್ರಷ್ಟಾಚಾರವನ್ನು ತೀವ್ರವಾಗಿ ವಿರೋಧಿಸಿ ಹೋರಾಟ-ರಾಜಕೀಯ ಪ್ರವೇಶ ಪಡೆದು ದೇಶದ ಪ್ರಭಾವಿ ರಾಜಕಾರಣಿಯಾಗಿ ಮೆರೆದಿದ್ದ ಅರವಿಂದ್ ಕೇಜ್ರಿವಾಲ್ ಅವರನ್ನು ಈಗ ಭ್ರಷ್ಟಾಚಾರವೇ ಮುಳುಗಿಸಿರುವುದು ವಿಪರ್ಯಾಸ!

ಕೇಜ್ರಿ ಸೋಲಿಗೆ ಸ್ವಾತಿ ಮಾರ್ಮಿಕ ಕುಟುಕು

ದೆಹಲಿ: ಮಾಜಿ ಮುಖ್ಯಮಂತ್ರಿ, ಎಎಪಿ ಸಂಚಾಲಕ

ಅರವಿಂದ್ ಕೇಜ್ರಿವಾಲ್ ಹೊಸದಿಲ್ಲಿ ವಿಧಾನಸಭಾ ಕ್ಷೇತ್ರದಲ್ಲಿ ಸೋಲು ಕಂಡ ಸುದ್ದಿ ಹೊರಬಿದ್ದ ಬೆನ್ನಲ್ಲೇ ಆಮ್ ಆದ್ಮಿ ಪಕ್ಷದ(ಎಎಪಿ) ರಾಜ್ಯಸಭಾ ಸದಸ್ಯೆ ಸ್ವಾತಿ ಮಲಿವಾಲ್, ತಮ್ಮ ಇನ್‌ಸ್ಟಾಗ್ರಾಂ ಖಾತೆಯಲ್ಲಿ 'ದ್ರೌಪದಿ ವಸ್ತ್ರಾಪಹರಣ' ಚಿತ್ರವನ್ನು ಹಂಚಿಕೊಂಡರು. ಆ ಮೂಲಕ, ಕೇಜ್ರಿವಾಲ್‌ಗೆ ಕುಟಕಿದ್ದಾರೆ. 'ಕೇಜ್ರಿವಾಲ್ ಸಿಎಂ ಆಗಿದ್ದಾಗ ಅವರ ಅಧಿಕೃತ ನಿವಾಸದಲ್ಲಿ ತಮ್ಮ ಮೇಲೆ ಹಲ್ಲೆಯಾಗಿದ್ದರಿಂದಲೇ ಕೇಜ್ರಿವಾಲ್‌ಗೆ ಸೋಲಾಗಿದೆ' ಎಂಬ ಅರ್ಥ ಬರುವಂತೆ ಸ್ವಾತಿ ಮಲಿವಾಲ್ ಪೋಸ್ಟ್ ಮಾಡಿದ್ದಾರೆ ಎಂದೇ ಅರ್ಥೈಸಲಾಗಿದೆ. ಸ್ವಾತಿ ಪೋಸ್ಟ್ ವೈರಲ್ ಆಗಿದ್ದು, ಬಹಳಷ್ಟು ಚರ್ಚೆಗೂ ಕಾರಣವಾಗಿದೆ. ಈ ಹಿಂದೆ ದೆಹಲಿ ಮಹಿಳಾ ಆಯೋಗದ ಅಧ್ಯಕ್ಷೆಯಾಗಿದ್ದ ಸ್ವಾತಿ ಮಲಿವಾಲ್, ಆಗ ಸಿಎಂ ಆಗಿದ್ದ ಕೇಜ್ರಿವಾಲ್ ಅವರ ನಿಕಟವರ್ತಿಯಾಗಿದ್ದರು. ಅದೇ ಕಾರಣವಾಗಿ ಆಮ್ ಆದ್ಮಿ ಪಕ್ಷದಿಂದ ರಾಜ್ಯಸಭೆಗೆ ನೇಮಕಗೊಂಡರು. ಆದರೆ, ಇತ್ತೀಚೆಗೆ ಭಿನ್ನಾಭಿಪ್ರಾಯ ಮೂಡಿದ್ದರಿಂದ ಕೇಜ್ರಿವಾಲ್ ವಿರುದ್ಧ ಟೀಕಾಸ್ತ್ರ ಪ್ರಯೋಗಿಸಲಾರಂಭಿಸಿದ್ದಾರೆ.

ಕೇಜ್ರಿ ಸಿಬ್ಬಂದಿ ಹಲ್ಲೆ: ಈ ಹಿಂದೆ ಕೇಜ್ರಿವಾಲ್ ಸಿಎಂ ಆಗಿದ್ದಾಗ ಅವರ ಆಪ್ತ ಸಹಾಯಕ ಬಿಭವ್ ಕುಮಾರ್, ಸಿಎಂ ಅಧಿಕೃತ ನಿವಾಸಕ್ಕೆ ಭೇಟಿ ನೀಡಿದ್ದ ಸಂಸದೆ ಸ್ವಾತಿ ಮೇಲೆ ಹಲ್ಲೆ ಮಾಡಿದ್ದ. ಆ ಬಳಿಕ ಸ್ವಾತಿ ತಮ್ಮದೇ ಪಕ್ಷದ ವಿರುದ್ಧ ಸಿಟ್ಟಿಗೆದ್ದು, ಬಹಿರಂಗವಾಗಿಯೇ ಕೇಜ್ರಿ ವಾಲ್ ಮತ್ತು ಎಎಪಿ ಸರಕಾರದ ವಿರುದ್ಧ ವಾಗ್ದಾಳಿ ನಡೆಸಲಾರಂಭಿಸಿದ್ದಾರೆ.

ಬಿಜೆಪಿ ಮತ ಶೇ.7 ವೃದ್ಧಿ, ಎಎಪಿಗೆ ಶೇ.10ರ ಕುಸಿತ

ದೆಹಲಿ: ದೆಹಲಿ ವಿಧಾನಸಭೆ ಚುನಾವಣೆಯಲ್ಲಿ 40 ಸ್ಥಾನಗಳನ್ನು ಕಳೆದುಕೊಂಡ ಆಮ್ ಆದ್ಮಿ ಪಕ್ಷ (ಎಎಪಿ)ದ ಮತ ಗಳಿಕೆ ಪ್ರಮಾಣ ಶೇ.10ರಷ್ಟು ಕುಸಿದಿದ್ದರೆ, ಒಟ್ಟು 48 ಕ್ಷೇತ್ರಗಳಲ್ಲಿ(40 ಸ್ಥಾನ ಹೆಚ್ಚಳ) ಗೆದ್ದ ಬಿಜೆಪಿ ಮತ ಗಳಿಕೆ ಗಣನೀಯವಾಗಿ ಹೆಚ್ಚಳವಾಗಿದೆ. ರಾಷ್ಟ್ರ ರಾಜಧಾನಿಯಲ್ಲಿ 26 ವರ್ಷಗಳ ಕಾಲ ಅಧಿಕಾರ ವಂಚಿತವಾಗಿದ್ದ ಬಿಜೆಪಿ ಈ ಬಾರಿಯ ಚುನಾವಣೆಯಲ್ಲಿ ಹೆಚ್ಚಿನ ಶಕ್ತಿ ಪಡೆದುಕೊಂಡು ಅಧಿಕಾರಕ್ಕೆ ಮರಳಿದೆ. 2020ರ ಚುನಾವಣೆಯಲ್ಲಿ ಶೇ. 53.57ರಷ್ಟು ಮತಗಳನ್ನು ಪಡೆದಿದ್ದ ಎಎಪಿ, ಈ ಬಾರಿ ಶೇ.43.57 ಮತ ಪ್ರಮಾಣಕ್ಕೆ ಕುಸಿತ ಕಂಡಿದೆ. 2020ರ ಚುನಾವಣೆಯಲ್ಲಿ ಕೇಸರಿ ಪಕ್ಷದ ಮತ ಗಳಿಕೆ ಪ್ರಮಾಣ ಶೇ. 38.51ರಷ್ಟಿತ್ತು. ಈಗ ಅಧಿಕಾರಕ್ಕೆ ಮರಳಿರುವ ಬಿಜೆಪಿ ಶೇ.45.56ರಷ್ಟು ಮತ ಗಳಿಸಿದೆ. ಕಾಂಗ್ರೆಸ್ ಒಂದು ಸ್ಥಾನ ಗೆಲ್ಲದಿದ್ದರೂ ಮತ ಗಳಿಕೆ ಪ್ರಮಾಣದಲ್ಲಿ ಸ್ವಲ್ಪ ಸುಧಾರಣೆಯಾಗಿದೆ. ಈ ಬಾರಿ ಕಾಂಗ್ರೆಸ್ ಮತ ಗಳಿಕೆ ಪ್ರಮಾಣ ಶೇ. 6.34ಕ್ಕೇರಿದೆ. 2020ರ ಅವಧಿಗಿಂತ ಶೇ. 2.1ರಷ್ಟು ಹೆಚ್ಚಳವಾಗಿದೆ.

ಸರಕಾರ ರಚನೆ ಬಳಿಕ ಬಿಜೆಪಿಗೆ ಪ್ರಣಾಳಿಕೆ ಈಡೇರಿಕೆ ಹೊಣೆ!

ದೆಹಲಿ: ಬಿಜೆಪಿ ದೆಹಲಿ ವಿಧಾನಸಭೆ ಚುನಾವಣೆಯನ್ನೇನೋ ಗೆದ್ದಾಗಿದೆ. ಇನ್ನು ಮುಖ್ಯಮಂತ್ರಿ ಆಯ್ಕೆ, ಸರಕಾರ ರಚನೆ ಬಾಕಿ ಇದೆ. ಸರಕಾರ ರಚನೆ ಬಳಿಕ ದೆಹಲಿ ಮತದಾರರಿಗೆ ಚುನಾವಣೆ ಪ್ರಚಾರ ವೇಳೆ ನೀಡಿದ ಭರವಸೆಗಳು, ಪ್ರಣಾಳಿಕೆಗಳಲ್ಲಿನ ಅಂಶಗಳನ್ನು ಈಡೇರಿಸಬೇಕಾದ ದೊಡ್ಡ ಜವಾಬ್ದಾರಿ ಇದೆ. ಬಿಜೆಪಿ ಬಿಡುಗಡೆ ಮಾಡಿದ ಪ್ರಣಾಳಿಕೆಯಲ್ಲಿ ಗರ್ಭಿಣಿಯರಿಗೆ 21,000 ರು. ಒಂದು ಬಾರಿಯ ನಗದು ನೆರವು ಮತ್ತು ಆರು ಪೌಷ್ಟಿಕ ಆಹಾರದ ಕಿಟ್‌ಗಳು, ಮೊದಲ ಮಗುವಿಗೆ 5,000 ರು. ಮತ್ತು ಎರಡನೇ ಮಗುವಿಗೆ 6,000 ರು. ನೀಡುವ ಭರವಸೆ. ಬಡುಕುಟುಂಬದ ಮಹಿಳೆಯರಿಗೆ ಮಾಸಿಕ 2,500 ರು., ಬಡ ಕುಟುಂಬಗಳಿಗೆ ಸಿಲಿಂಡರ್‌ಗೆ 500 ರು. ಸಬ್ಸಿಡಿ, ಹೋಳಿ-ದೀಪಾವಳಿ ಸಂದರ್ಭ ಉಚಿತ ಸಿಲಿಂಡರ್, ತಿಂಗಳಿಗೆ 200 ಯುನಿಟ್ ಉಚಿತ ವಿದ್ಯುತ್, 20,000 ಲೀ. ನೀರು ಮತ್ತು ಮಹಿಳೆಯರಿಗೆ ಉಚಿತ ಪ್ರಯಾಣದ ಪಾಸ್. 60 ರಿಂದ 70 ವರ್ಷದ ವೃದ್ಧರ ಪಿಂಚಣಿ ಮೊತ್ತ 2,500 ರು.ಗೆ ಏರಿಕೆ, 70 ವರ್ಷ ಮೇಲ್ಪಟ್ಟವರು, ವಿಧವೆಯರು ಮತ್ತು ಅಂಗವಿಕಲರ ಪಿಂಚಣಿ 3,000 ರುಗೆ. ಏರಿಕೆ. ಸ್ಪರ್ಧಾತ್ಮಕ ಪರೀಕ್ಷೆ ಗಳಿಗೆ ತಯಾರಾ ಗಲು ದೆಹಲಿ ಯುವಜನರಿಗೆ ಒಮ್ಮೆ 15,000 ರು. ಆರ್ಥಿಕ ನೆರವು. ನಿರ್ಗತಿಕ ವಿದ್ಯಾರ್ಥಿ ಗಳಿಗೆ ದೆಹಲಿ ಸರಕಾರಿ ಶಿಕ್ಷಣ ಸಂಸ್ಥೆಗಳಲ್ಲಿ ಕೆಜಿಯಿಂದ ಪಿಜಿವರೆಗೆ ಉಚಿತ ಶಿಕ್ಷಣ, ದೆಹಲಿಯ ಗಿಗ್ ಕಾರ್ಯಕರ್ತರಿಗೆ 10 ಲಕ್ಷ ರು. ಜೀವವಿಮೆ ಮತ್ತು 5 ಲಕ್ಷ ರು. ಅಪಘಾತ ವಿಮೆ. ಈಡೇರಿಸಬೇಕಾದ ಹೊಣೆಗಾರಿಕೆ ಇದೆ.

ಬಿಜೆಪಿ ನಿಯಂತ್ರಿಸುವಲ್ಲಿ ಇಂಡಿ ಒಕ್ಕೂಟ ವಿಫಲ | 13 ವಿಧಾನಸಭೆ ಚುನಾವಣೆಯಲ್ಲಿ ಎನ್‌ಡಿಎಗೇ ಗೆಲುವು

ಎನ್‌ಡಿಎ ವರ್ಸಸ್ ಇಂಡಿ ಒಕ್ಕೂಟ

ದೆಹಲಿ: 'ಐಎನ್‌ಡಿಐಎ'(ಇಂಡಿಯ) ಒಕ್ಕೂಟದ ಪಾಲುದಾರ ಪಕ್ಷಗಳಾಗಿರುವ 'ಆಮ್ ಆದ್ಮಿ ಪಕ್ಷ' ಮತ್ತು ಕಾಂಗ್ರೆಸ್ ದೆಹಲಿ ಚುನಾವಣೆಯಲ್ಲಿ ಸೀಟು ಹಂಚಿಕೆಗೆ ಒಪ್ಪದೇ ಪ್ರತ್ಯೇಕವಾಗಿ ಸ್ಪರ್ಧೆ ಮಾಡಿದ್ದರ ಪರಿಣಾಮ, ಎರಡೂ ಪಕ್ಷಗಳಿಗೂ ಸೋಲಾಗಿದೆ. ಬದಲಾಗಿ ಬಿಜೆಪಿಗೆ ಭರ್ಜರಿ ಗೆಲುವು ಸಿಗುವಂತಾಗಿದೆ.

ಲೋಕಸಭೆ ಚುನಾವಣೆಯಲ್ಲಿ ಮೈತ್ರಿ ಸಾಧಿಸಿದ್ದ ಮಿತ್ರ ಪಕ್ಷಗಳು ವಿಧಾನಸಭೆ ಚುನಾವಣೆಯಲ್ಲಿ ಮೈತ್ರಿ ಮುಂದುವರಿಸದೇ ಬಿಜೆಪಿ ಗೆಲುವಿಗೆ ಕಾರಣವಾದ ವಿಚಾರವಾಗಿ ಇಂಡಿ ಒಕ್ಕೂಟದ ಪಕ್ಷಗಳಲ್ಲೇ ಚರ್ಚೆ ನಡೆದಿದೆ.

ದೆಹಲಿ ವಿಧಾನಸಭೆ ಚುನಾವಣೆಯಲ್ಲಿ ಎಎಪಿ ಶೇ.43.57ರಷ್ಟು ಮತ ಗಳಿಸಿದ್ದರೆ, ಕಾಂಗ್ರೆಸ್ ಮತ ಗಳಿಕೆ ಪ್ರಮಾಣ ಶೇ.6.34 ರಷ್ಟಿದೆ. ಎರಡೂ ಸೇರಿದರೆ ಶೇ.49.91ರಷ್ಟಾಗುತ್ತದೆ. 48 ಕ್ಷೇತ್ರಗಳಲ್ಲಿ ಗೆಲುವು ಕಂಡಿರುವ ಬಿಜೆಪಿ ಮತ ಗಳಿಕೆ ಪ್ರಮಾಣ ಶೇ.45.56 ರಷ್ಟಿದೆ. ಈ ಹೋಲಿಕೆ ಮುಂದಿಟ್ಟು ಕಾಂಗ್ರೆಸ್ ಮತ್ತು ಎಎಪಿ ವಿರುದ್ಧ ಇತರೆ ಮಿತ್ರ ಪಕ್ಷಗಳೇ ಟೀಕೆ ಮಾಡುತ್ತಿವೆ. 2015ಕ್ಕೂ ಮುನ್ನ ದೆಹಲಿಯಲ್ಲಿ ಸತತ 15 ವರ್ಷಗಳ ಕಾಲ ಆಡಳಿತ ನಡೆಸಿದ್ದ ಕಾಂಗ್ರೆಸ್ 3ನೇ ಬಾರಿ ಶೂನ್ಯ ಸಾಧನೆ ಮಾಡಿರುವುದನ್ನೂ ಮಿತ್ರ ಪಕ್ಷಗಳು ಗಂಭೀರವಾಗಿ ಚರ್ಚಿಸುತ್ತಿವೆ ಎಂದು ತಿಳಿದುಬಂದಿದೆ.

ಚುನಾವಣಾ ಕಣದಲ್ಲಿ ಬಿಜೆಪಿಯ ನಾಗಾಲೋಟವನ್ನು ನಿಯಂತ್ರಿಸಬೇಕು ಎಂಬ ಏಕೈಕ ಗುರಿಯೊಂದಿಗೆ 2023ರ ಜೂನ್‌ನಲ್ಲಿ 26 ಸಮಾನ ಮನಸ್ಕ ಪಕ್ಷಗಳ ಒಗ್ಗೂಡುವಿಕೆಯೊಂದಿಗೆ 'ಇಂಡಿಯ' ಒಕ್ಕೂಟ ರಚನೆಯಾಯಿತು. ಆಗ ಅದು ಸಾಧ್ಯವಾಗುವಂತೆ ಮಾಡಿದ್ದು, ಜೆಡಿಯು ಪಕ್ಷದ ಮುಖಂಡ,



ಬಿಹಾರ ಮುಖ್ಯಮಂತ್ರಿ ನಿತೀಶ್ ಕುಮಾರ್. ಆ ಬಳಿಕ ಇಂಡಿಯ ಒಕ್ಕೂಟದ ಸಂಚಾಲಕ ಹುದ್ದೆ ಕೊಡಲಿಲ್ಲ ಎಂಬ ಕಾರಣಕ್ಕೆ ನಿತೀಶ್ 'ಇಂಡಿ' ಒಕ್ಕೂಟ ತೊರೆದರು. ಮರಳಿ ಎನ್‌ಡಿಎ ತೆಕ್ಕೆಗೆ ಸೇರಿದರು.

ಆ ಬಳಿಕ ಇಂಡಿ ಒಕ್ಕೂಟದ ನಾಯಕತ್ವವನ್ನು ಕಾಂಗ್ರೆಸ್ ಪಕ್ಷ ವಹಿಸಿಕೊಂಡಿತು. ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರೇ ಇಂಡಿ ಒಕ್ಕೂಟದ ನೇತಾರರಾದರು.

ಆನಂತರ ನಡೆದ 13 ರಾಜ್ಯಗಳ ವಿಧಾನಸಭಾ ಚುನಾವಣೆಗಳಲ್ಲಿ, ಲೋಕಸಭಾ ಚುನಾವಣೆಯಲ್ಲಿ ಬಿಜೆಪಿ ನೇತೃತ್ವದ 'ಎನ್‌ಡಿಎ' ಮೈತ್ರಿಕೂಟವನ್ನು ನಿಯಂತ್ರಿಸುವಲ್ಲಿ ಕಾಂಗ್ರೆಸ್ ನೇತೃತ್ವದ ಇಂಡಿ ಒಕ್ಕೂಟ ವಿಫಲವಾಗಿದೆ. 2024ರ ವರ್ಷಾಂತ್ಯ ನಡೆದ ಹರಿಯಾಣ ಮತ್ತು ಮಹಾರಾಷ್ಟ್ರ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತು ಮಿತ್ರಪಕ್ಷಗಳು ಆಂತರಿಕ ಕಲಹದಿಂದಾಗಿ ಸೋಲುಂಡವು. ದೆಹಲಿಯಲ್ಲೂ ಸೀಟು ಹಂಚಿಕೆ ವಿಚಾರವಾಗಿ ನಡೆದ ಗೊಂದಲ ಎಎಪಿ ಮತ್ತು ಕಾಂಗ್ರೆಸ್ ಪ್ರತ್ಯೇಕವಾಗಿ ಸ್ಪರ್ಧಿಸುವಂತೆ ಮಾಡಿತು. ಅಲ್ಲದೆ ಕೇಜ್ರಿವಾಲ್ ಮತ್ತು ರಾಹುಲ್ ಗಾಂಧಿ ಬಹಿರಂಗವಾಗಿಯೇ ಟೀಕಿಸುತ್ತಾ ಬಿಜೆಪಿಗೆ ಅನುಕೂಲ ಮಾಡಿಕೊಟ್ಟರು ಎಂದು ಮಿತ್ರಪಕ್ಷಗಳ ನಾಯಕರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

ಗೆಲುವಿನ ಸಮೀಪಕ್ಕೆ ಬಂದು ಸೋತ ಬಿಜೆಪಿ

ಸಿಎಂ ಆತಿಶಿಗೆ ಪ್ರಯಾಸದ ಗೆಲುವು

ದೆಹಲಿ: ಬದಲಾದ ರಾಜಕೀಯ ಸನ್ನಿವೇಶದಲ್ಲಿ ಮುಖ್ಯಮಂತ್ರಿ ಗದ್ದುಗೆ

ಏರಿದ್ದ ಅತಿಶಿ ಅವರು ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ಕಲ್ಕಾಜಿ ಕ್ಷೇತ್ರದಿಂದ ಪ್ರಯಾಸದ ಗೆಲುವು ಕಂಡಿದ್ದಾರೆ. ಬಿಜೆಪಿ ನಾಯಕ ರಮೇಶ್ ಬಿಧುರಿ ವಿರುದ್ಧ ಕೇವಲ 3500 ಮತಗಳ ಅಂತರದಿಂದ ಗೆದ್ದಿದ್ದಾರೆ.ಮಾಜಿ ಐಆರ್‌ಎಸ್ ಅಧಿಕಾರಿ, ಆಮ್ ಆದ್ಮಿ ಪಕ್ಷದ(ಎಎಪಿ) ಸಂಸ್ಥಾಪಕ, ರಾಷ್ಟ್ರೀಯ ಸಂಚಾ ಲಕ, 2 ಬಾರಿ ಮುಖ್ಯಮಂತ್ರಿ ಆಗಿದ್ದ ಅರವಿಂದ್ ಕೇಜ್ರಿವಾಲ್ ಹಾಗೂ ಮಾಜಿ ಡಿಸಿಎಂ ಮನೀಶ್ ಸಿಸೋಡಿಯ ಅವರಂತಹವರೇ ಸೋಲು ಕಂಡು ಆಮ್ ಆದ್ಮಿ ಪಕ್ಷ ಆಘಾತಕ್ಕೆ ಒಳಗಾಗಿರುವಾಗ ಹಾಲಿ ಮುಖ್ಯಮಂತ್ರಿ ಆತಿಶಿ ಅವರು ಗೆದ್ದಿದ್ದಾರೆ. ಅನಿವಾರ್ಯ ಪರಿಸ್ಥಿತಿಯಲ್ಲಿ ಮುಖ್ಯಮಂತ್ರಿ ಹುದ್ದೆಗೇರಿದ ಆತಿಶಿ ಅವರ ಈ ಗೆಲುವು, ಎಎಪಿ ಪಕ್ಷಕ್ಕೆ ತುಸುವಾದರೂ ಚೈತನ್ಯ ನೀಡಿದೆ.

ಸಂಭ್ರಮಿಸಲಾಗದ ಆತಿಶಿ: ಕಲ್ಕಾಜಿ ವಿಧಾನಸಭಾ ಕ್ಷೇತ್ರದಿಂದ ಗೆಲುವು ಕಂಡಿದ್ದರೂ ಹಾಲಿ ಮುಖ್ಯಮಂತ್ರಿ ಆತಿಶಿ ಅವರ ಮುಖದಲ್ಲಿ ಗೆದ್ದ ಖುಷಿ ಸ್ವಲ್ಪವೂ ಇರಲಿಲ್ಲ. 3ನೇ ಬಾರಿ ಗೆಲುವು ಸಾಧಿಸಿ ಅಧಿಕಾರ ಹಿಡಿದು ಹ್ಯಾಟ್ರಿಕ್ ಸಾಧಿಸುವ ಕನಸು ಕಾಣುತ್ತಿದ್ದ ಆಮ್ ಆದ್ಮಿ ಪಕ್ಷ ಸೋತಿರುವುದು ಅವರಿಗೆ ಆಘಾತ ಉಂಟು ಮಾಡಿತ್ತು. ಮುಖ್ಯವಾಗಿ ಅವರ ರಾಜಕೀಯ ಗುರು ಕೇಜ್ರಿವಾಲ್ ಅವರಿಗೆ ಸೋಲಾಗಿರುವುದು ಆತಿಶಿ ಅವರನ್ನು ಕಂಗೆಡಿ ಸಿದೆ. ತಮ್ಮ ಗೆಲುವನ್ನೂ ಸಂಭ್ರಮಿಸಲಾಗದಷ್ಟು ಹತಾಶೆಯಲ್ಲಿದ್ದರು.

ಇಂಡಿ ಒಕ್ಕೂಟದಲ್ಲಿ ಸಹಮತ ಸಾಧ್ಯವಾಗುತ್ತಿಲ್ಲ. ಹಾಗೆ ಆಗುವಂತಿದ್ದರೆ ದೆಹಲಿ ಚುನಾವಣೆಯಲ್ಲಿ ಕಾಂಗ್ರೆಸ್-ಎಎಪಿ ಪರಸ್ಪರರ ಸೋಲಿಗೆ ಕಾರಣವಾಗುತ್ತಿರಲಿಲ್ಲ. ಒಕ್ಕೂಟದ ಈ ಪಕ್ಷಗಳು ಇನ್ನಷ್ಟು ಜಗಳ ಮಾಡಿಕೊಳ್ಳುತ್ತಲೇ ಇರಲಿ. ಎದುರಾಳಿಗಳಿಗೆ ಚುನಾವಣೆ ಗೆಲ್ಲಲು ಅವಕಾಶ ಮಾಡಿಕೊಟ್ಟಂತಾಗುತ್ತದೆ. ಇನ್ನೊಂದೆಡೆ, ಇಂಡಿ ಒಕ್ಕೂಟದ ನಾಯಕತ್ವದ ವಿಚಾರದಲ್ಲೂ ಸ್ಪಷ್ಟತೆ ಇಲ್ಲವಾಗಿದೆ.

- ಫಾರೂಕ್ ಅಬ್ದುಲ್ಲಾ ಜಮ್ಮು-ಕಾಶ್ಮೀರ ಸಿಎಂ

ಬಸ್ ಚಲಿಸುತ್ತಿರುವಾಗ ಚಾಲಕನೊಂದಿಗೆ ಮಾತಾಡುವುದು ಅಲ್ಲಿ ಅಪರಾಧ!

ಇದೇ ಅಂತರಂಗ ಸುದ್ದಿ

ವಿಶ್ವೇಶ್ವರ ಭಟ್
vbhat@me.com

ಜಪಾನಿನ ಬಗ್ಗೆ ನಾನು ಬರೆಯುತ್ತಿರುವುದನ್ನು ಓದಿದ, ಮೂಲತಃ ಮೂಡಿಗೆರೆಯವರಾದ ಸಿ.ಕುಪ್ಪುಸ್ವಾಮಿ ಎಂಬುವವರು ನನ್ನ ಭೇಟಿಗೆಂದು ಫೋನ್ ಮಾಡಿ ಬಂದಿದ್ದರು. ಅವರು ಹನ್ನೊಂದು ವರ್ಷಗಳ ಕಾಲ ಜಪಾನಿನಲ್ಲಿದ್ದು ಈಗ ಬೆಂಗಳೂರಿನ ಹೊಸಕೆರೆಹಳ್ಳಿಯಲ್ಲಿ ಪತ್ನಿಯೊಂದಿಗೆ ವಾಸಿಸುತ್ತಿದ್ದಾರೆ. ಆರು ತಿಂಗಳಿಗೊಮ್ಮೆ ಜಪಾನಿಗೆ ಹೋಗಿ ಬರುತ್ತಾರೆ. ಅವರು ಆ ದೇಶದಿಂದ ಬಂದರೂ, ಅಲ್ಲಿನ ಸಂಬಂಧವನ್ನು ಮಾತ್ರ ಇನ್ನೂ ಜೀವಂತವಾಗಿಟ್ಟುಕೊಂಡಿದ್ದಾರೆ. ಜಪಾನ್ ಬಗ್ಗೆ ಈ ಪರಿ ಬರೆಯುತ್ತಿರುವ ವ್ಯಕ್ತಿಯನ್ನು ಒಮ್ಮೆ ಭೇಟಿಯಾಗಲೇಬೇಕು ಎಂದು ಅವರು ತೀರ್ಮಾನಿಸಿದ್ದರಂತೆ. ನಮ್ಮಿಬ್ಬರ ನಡುವಿನ ಎರಡು ಗಂಟೆ ಮಾತುಕತೆ ಸಂದರ್ಭದಲ್ಲಿ, ''ನಾನು ಜಪಾನ್ ಬಗ್ಗೆ ಯೋಚಿಸದ ದಿನಗಳೇ ಇಲ್ಲ. ನನ್ನ ಬದುಕನ್ನು ಬದಲಿಸಿದ್ದು ಜಪಾನ್. ನಿಮಗೂ ಆ ದೇಶದ ಬಗ್ಗೆ ಹೆಮ್ಮೆ ಇರುವುದು ನನಗೆ ಖುಷಿಯನ್ನುಂಟುಮಾಡಿತು. ನಿಮ್ಮ ಭೇಟಿಗೆ ಇದೇ ಪ್ರೇರಣೆ'' ಎಂದು ಅವರು ಅಭಿಮಾನದಿಂದ ಮೂರ್ನಾಲ್ಕು ಸಲ ಹೇಳಿದರು.

''ಜಪಾನ್ ಕುರಿತು ನಾನು ಪುಂಖಾನುಪುಂಖವಾಗಿ ಬರೆಯುವುದನ್ನು ಓದಿದ್ದೀರಿ. ನಾನು ಬರೆಯುತ್ತಿರುವುದರಲ್ಲಿ ಏನಾದರೂ ದೋಷಗಳು, ತಪ್ಪುಗ್ರಹಿಕೆಗಳು ಇವೆಯಾ? ಮುಲಾಜಿಲ್ಲದೇ ಹೇಳಿ'' ಎಂದೆ. ಅದಕ್ಕೆ ಕುಪ್ಪುಸ್ವಾಮಿಯವರು, ''ಒಂದು ಸಂಗತಿಯನ್ನು ಎತ್ತಿಹೇಳಬಲ್ಲೆ'' ಎಂದರು. ನನಗೆ ತುಸು ಗಾಬರಿಯಾಯಿತು. ''ಏನು? ದಯವಿಟ್ಟು ಹೇಳಿ'' ಎಂದು ಕೋರಿದೆ. ಅದಕ್ಕೆ ಅವರು, ''ನೀವು ಬರೆದುದೆಲ್ಲ ಅಪ್ಪಟ ನಿಜ. ಇಷ್ಟೆಲ್ಲ ಮಾಹಿತಿಯನ್ನು ನೀವು ಸಂಗ್ರಹಿಸಿದ್ದು ಸಾಮಾನ್ಯ ಸಂಗತಿಯಲ್ಲ'' ಎಂದರು. ಆಗ 'ಉಸ್ಸಪ್ಪಾ' ಎಂದು ನಿಟ್ಟುಸಿರು ಬಿಟ್ಟೆ.

ಕುಪ್ಪುಸ್ವಾಮಿಯವರು ಜಪಾನ್ ಮೂಲದ ಮಿಟ್ಸುಬಿಷಿ, ಟಿಡಿಕೆ ಮತ್ತು ಬ್ರಿಜ್ ಸ್ಟೋನ್ ಕಂಪನಿಗಳಲ್ಲಿ ಕೆಲಸ ಮಾಡಿದವರು. ''ಯಾರು ಜಪಾನ್ ಮೂಲದ ಕಂಪನಿಗಳಲ್ಲಿ ಕೆಲಸ ಮಾಡುತ್ತಾರೋ, ಅವರು ಆ ದೇಶದ ಸಂಸ್ಕೃತಿ ಮತ್ತು ಕರ್ಮ ಸಿದ್ಧಾಂತಗಳನ್ನು ಮೈಗೂಡಿಸಿಕೊಂಡಿರುತ್ತಾರೆ. ಇಲ್ಲದಿದ್ದರೆ ಅಲ್ಲಿ ಕೆಲಸ ಮಾಡುವುದು ಸಾಧ್ಯವೇ ಇಲ್ಲ. ಉದಾಹರಣೆಗೆ, ಅಲ್ಲಿನ ಸಂಸ್ಥೆಗಳಲ್ಲಿ ಕೆಲಸ ಮಾಡಬೇಕೆಂದರೆ, ನೀವು ಕತ್ತೆ ರೀತಿ ದುಡಿಯಲು ಸಿದ್ಧರಿರಬೇಕು. ದಿನಕ್ಕೆ ಹದಿನೈದು ಗಂಟೆ ಕೆಲಸ ಮಾಡಿದರೂ ಅವರಿಗೆ ಸಮಾಧಾನವಿಲ್ಲ'' ಎಂದು ಹೇಳಿದರು ಕುಪ್ಪುಸ್ವಾಮಿ.

ನಂತರ ಕುಪ್ಪುಸ್ವಾಮಿ ಅವರು ಒಂದು ಪ್ರಸಂಗವನ್ನು ಹೇಳಿದರು- ''ನನಗೊಬ್ಬ ಬಾಸ್ ಇದ್ದ. ಆತ ಪ್ರತಿದಿನ ಇಪ್ಪತ್ತು ಗಂಟೆ ಕೆಲಸ ಮಾಡುತ್ತಿದ್ದ. ಆರು ತಿಂಗಳಿಗೆ ಎರಡು ಸಲ ಮಾತ್ರ ಮನೆಗೆ ಹೋಗುತ್ತಿದ್ದ. ಆಫೀಸಿನಲ್ಲಿಯೇ ಮಲಗುತ್ತಿದ್ದ. ಆತ ಸ್ವತಃ ತನ್ನ ಬಟ್ಟೆಗಳನ್ನು ಆಫೀಸಿನಲ್ಲಿಯೇ ತೊಳೆದು, ಇಸ್ತ್ರಿ ಮಾಡಿ ಧರಿಸುತ್ತಿದ್ದ. ಆತ ಆಫೀಸಿನಿಂದ ಹೊರಬಿದ್ದರೆ, ನೀರಿನಿಂದ ಹೊರಬಿದ್ದ ಮೀನಿನಂತೆ ವರ್ತಿಸುತ್ತಿದ್ದ. ಆರಂಭದಲ್ಲಿ ನನಗೆ ಆತನ ವರ್ತನೆ ವಿಚಿತ್ರವಾಗಿ ಕಾಣುತ್ತಿತ್ತು. ಕ್ರಮೇಣ ಆತ ನನ್ನನ್ನೂ ಅವನಂತೆ ಪರಿವರ್ತಿಸಿದ. ಜಪಾನಿನ ಮಂದಿ ಹದಿನಾರು-ಹದಿನೆಂಟು ಗಂಟೆ ಕೆಲಸ ಮಾಡುವುದು ಸಾಮಾನ್ಯ. ಅದರಲ್ಲಿ ಹೆಚ್ಚುಗಾರಿಕೆಯೇನೂ ಇಲ್ಲ. ಆತ ನನಗೆ ಯಾವತ್ತೂ ಒಂದು ಮಾತನ್ನು ಹೇಳುತ್ತಿದ್ದ- 'ಮನುಷ್ಯ ಯಂತ್ರವಲ್ಲ. ಮನುಷ್ಯನಿಗೂ ಯಂತ್ರಕ್ಕೂ ವ್ಯತ್ಯಾಸವಿದೆ. ಯಂತ್ರ ಉಪಯೋಗಿಸಿದಷ್ಟೂ ಸವೆಯುತ್ತದೆ, ಆದರೆ ಮನುಷ್ಯ ತನ್ನ ದೇಹವನ್ನು ಎಷ್ಟೇ ಉಪಯೋಗಿಸಿದರೂ ಸವೆಯುವುದಿಲ್ಲ. ಹೀಗಾಗಿ ಮನುಷ್ಯ ತನ್ನ ದೇಹ ಮತ್ತು ಮನಸ್ಸನ್ನು ಹೆಚ್ಚು ಹೆಚ್ಚು ಉಪಯೋಗಿಸಬೇಕು. ಏನೂ ಆಗುವುದಿಲ್ಲ'...''

ನಾನು ಸಹಜವಾಗಿ ಕುಪ್ಪುಸ್ವಾಮಿಯವರನ್ನು, ''ನೀವು ಕೆಲಸ ಮಾಡಿದ್ದೆಲ್ಲ ಜಪಾನ್ ಮೂಲದ ಕಂಪನಿಯಲ್ಲೇ ಅಂತ ಹೇಳಿದಿರಿ. ಬ್ರಿಜ್ ಸ್ಟೋನ್ ಕಂಪನಿ ಜಪಾನ್ ಮೂಲದ್ದಾ?'' ಎಂದು ಕೇಳಿದೆ. ಅದರ ಹೆಸರನ್ನು ಕೇಳಿದರೆ ಅದು ಜಪಾನಿ ಹೆಸರೆಂದು ಅನಿಸದ್ದರಿಂದ ನಾನು ಹಾಗೆ ಕೇಳಿದೆ. ''ಭಟ್ರೇ, ನಾನು ಆ ದೇಶದಲ್ಲಿ ನಾಲ್ಕೈದು ಕಂಪನಿಗಳಲ್ಲಿ ಕೆಲಸ ಮಾಡಿದ್ದೇನೆ. ಅಲ್ಲಿ ಕೆಲಸ ಮಾಡುವಾಗ, ಅವುಗಳ ಹೆಸರು, ಅದರ ಮೂಲಗಳನ್ನು ತಿಳಿದುಕೊಳ್ಳುವುದು ಮುಖ್ಯ'' ಎಂದರು ಕುಪ್ಪುಸ್ವಾಮಿ.

''ಜಪಾನಿಯರು ಸೇರಿದಂತೆ ಅನೇಕರು ಬ್ರಿಜ್ ಸ್ಟೋನ್ ಅಮೆರಿಕ ಅಥವಾ ಇಂಗ್ಲಿಷ್ ಮೂಲದ ಕಂಪನಿಯಿದ್ದಿರಬಹುದು ಎಂದು ಭಾವಿಸುತ್ತಾರೆ. ಆದರೆ ಅದು ಅಪ್ಪಟ ಜಪಾನಿನ ಸಂಸ್ಥೆ. ಆ ಕಂಪನಿಯನ್ನು ಸ್ಥಾಪಿಸಿದವನ ಹೆಸರು ಇಶಿಬಾಷಿ ಅಂತ. ಜಪಾನಿ ಭಾಷೆಯಲ್ಲಿ ಇಶಿಬಾಷಿ ಅಂದ್ರೆ ಸ್ಟೋನ್ ಬ್ರಿಜ್ (ಕಲ್ಲಿನ ಸೇತುವೆ) ಎಂದರ್ಥ. ಆ ಹೆಸರನ್ನೇ ಪಲ್ಲಟ ಮಾಡಿ 'ಬ್ರಿಜ್ ಸ್ಟೋನ್' ಅಂತ ಹೆಸರಿಡಲಾಗಿದೆ. ಹಾಗೆ ಟಿಡಿಕೆ ಎಂಬ ಕಂಪನಿಯಲ್ಲಿ ಕೆಲಸಕ್ಕಿದ್ದೆ. ಟಿಡಿಕೆ ಪೂರ್ಣ ರೂಪ ಟೋಕಿಯೋ ಡೆಂಕಿ ಮತ್ತು ಕಗಾಕು ಎಂದು. ಹಾಗಂದ್ರೆ ಟೋಕಿಯೋ ಇಲೆಕ್ಟ್ರಿಕ್ ಮತ್ತು ಕೆಮಿಕಲ್ಸ್ ಅಂತ. ಹಾಗೇ ಮಿಟ್ಸುಬಿಷಿ ಕಂಪನಿ. ಇದು ಭಾರತದಲ್ಲೂ ಪರಿಚಿತ ಬ್ರ್ಯಾಂಡ್. ಅನೇಕರಿಗೆ ಮಿಟ್ಸುಬಿಷಿ ಹೆಸರಿನ ಮರ್ಮ ಗೊತ್ತಿಲ್ಲ. ಜಪಾನಿ ಭಾಷೆಯಲ್ಲಿ 'ಮಿತ್ಸು' ಅಂದರೆ ಮೂರು ಎಂದರ್ಥ ಮತ್ತು ಬಿಷಿ ಅಂದರೆ ವಜ್ರ ಅಥವಾ ವಜ್ರದ ಆಕಾರವುಳ್ಳದ್ದು ಎಂದು. ಮಿಟ್ಸುಬಿಷಿ ಸಂಸ್ಥೆಯ ಲೋಗೋದಲ್ಲಿ ಮೂರು ವಜ್ರದ ಹರಳುಗಳಿರುವುದನ್ನು ನೋಡಬಹುದು. ಆ ಕಂಪನಿಯು ಆರಂಭದಲ್ಲಿ Daimante ಹೆಸರಿನ ಕಾರನ್ನು ತಯಾರಿಸುತ್ತಿತ್ತು'' ಎಂದು ಕುಪ್ಪುಸ್ವಾಮಿ ಹೀಗೆ ಎಷ್ಟೋ ಸ್ವಾರಸ್ಯಕರ ಸಂಗತಿಗಳನ್ನು ಹೇಳುತ್ತಾ ಹೋದರು.

''ಟೊಯೋಟಾ ಕಂಪನಿ ಹೆಸರು ಹೇಗೆ ಬಂತು ಗೊತ್ತಾ?'' ಎಂದು ಕೇಳಿದ ಕುಪ್ಪುಸ್ವಾಮಿ, ''ಜಪಾನಿನಲ್ಲಿ ಟೊಯೊದ ಎಂಬ ಹೆಸರಿನ ಪ್ರತಿಷ್ಠಿತ ಕುಟುಂಬವಿದೆ. ಆ ಕುಟುಂಬದಲ್ಲಿ ಹತ್ತಾರು ಮಂದಿ ದೊಡ್ಡ ದೊಡ್ಡ ಸಾಧನೆ ಮಾಡಿದವರೇ. ಅವರ ಪೈಕಿ ಸಾಕಿಚಿ ಟೊಯೊದ ಎಂಬಾತ ಟೊಯೊದ ಹೆಸರಿನಲ್ಲಿ ಮೋಟಾರು ವಾಹನ ತಯಾರಿಕಾ ಸಂಸ್ಥೆ ಆರಂಭಿಸಿದ. ಜಪಾನಿ ಭಾಷೆಯಲ್ಲಿ ಟೊಯೊದ ಎಂದು ಬರೆದರೂ ಟೊಯೋಟಾ ಎಂದು ಉಚ್ಚರಿಸುವುದರಿಂದ, ಈ ಗೊಂದಲ ನಿವಾರಣೆಗೆ 1936ರಲ್ಲಿ ಸಂಸ್ಥೆಯ ಹೆಸರನ್ನು ಟೊಯೋಟಾ ಅಂತ ಬದಲಿಸಲಾಯಿತು'' ಎಂದು ವಿವರಿಸಿದರು.

ಟೊಯೋಟಾ ಸಂಸ್ಥೆಯು ಇನ್ನೋವಾ ಕಾರಿಗೆ ಆರಂಭದಲ್ಲಿ 'ನೋವಾ' ಎಂದು ಹೆಸರಿಟ್ಟಿತ್ತು. ಆ ಕಾರನ್ನು ಚೀನಾದಲ್ಲಿ ಬಿಡುಗಡೆ ಮಾಡಿದಾಗ, ಅದಕ್ಕೆ ಬೇಡಿಕೆಯೇ ಬರಲಿಲ್ಲ. ನಂತರ ಗೊತ್ತಾಗಿದ್ದೇನೆಂದರೆ, ಚೈನೀಸ್ ಭಾಷೆಯಲ್ಲಿ 'ನೋವಾ' ಅಂದ್ರೆ 'ಚಲಿಸುವುದಿಲ್ಲ' (Not Going) ಎಂದರ್ಥ. ನಂತರ ಆ ಹೆಸರನ್ನು ಇನ್ನೋವಾ ಅಂದರೆ 'ಜೋರಾಗಿ ಚಲಿಸುತ್ತದೆ' ಎಂದು ಬದಲಿಸಲಾಯಿತು.

ನಮ್ಮ ಮಾತಿನ ವಿಷಯ ಜಪಾನಿನಲ್ಲಿ ಚಾಲ್ತಿಯಲ್ಲಿರುವ ವಿಚಿತ್ರ ಕಾನೂನಿನತ್ತ ಹೊರಳಿತು. ಜಪಾನಿನಲ್ಲಿ ನೀವು ಕುಟುಂಬದ ಸದಸ್ಯರೊಬ್ಬರಿಗೆ ಕಳುಹಿಸಿದ ಪತ್ರವನ್ನು ಬೇರೆಯವರು ತೆರೆದು ಓದುವುದು ಕಾನೂನುಬಾಹಿರ ಗೊತ್ತಾ ಎಂದು ಕೇಳಿದರು. ''ನೀವು ಸರಿಯಾದ ಕಾರಣವಿಲ್ಲದೇ ಕುಟುಂಬದ ಸದಸ್ಯರನ್ನೂ ಒಳಗೊಂಡಂತೆ ಬೇರೆಯವರಿಗೆ ಬರೆದಿರುವ ಮೊಹರು ಮಾಡಿದ ಪತ್ರವನ್ನು ತೆರೆದರೆ, ಜಪಾನಿ ದಂಡ ಸಂಹಿತೆಯ 133ನೇ ವಿಧಿಯ ಪ್ರಕಾರ, ನಿಮ್ಮ ಮೇಲೆ ಪತ್ರವನ್ನು ತೆರೆದ ಆರೋಪ ಹೊರಿಸಬಹುದು. ಇದಕ್ಕೆ ಒಂದು ವರ್ಷದವರೆಗೆ ಜೈಲು ಶಿಕ್ಷೆ ಅಥವಾ ಎರಡು ಲಕ್ಷ ಯೆನ್‌ವರೆಗೆ ದಂಡ ವಿಧಿಸಬಹುದು. ಪತ್ರಗಳ ಜತೆಗೆ, ಬಿಲ್‌ಗಳು ಮತ್ತು ಅಂಥದೇ ವಸ್ತುಗಳು ಕೂಡ ಈ ವರ್ಗದ ಅಡಿಯಲ್ಲಿ ಬರುತ್ತವೆ ಗೊತ್ತಿರಲಿ'' ಎಂದು ಕುಪ್ಪುಸ್ವಾಮಿ ಹೇಳಿದರು.

ಕುಪ್ಪುಸ್ವಾಮಿಯವರು ಇನ್ನೂ ಕೆಲವು ವಿಚಿತ್ರ ಕಾನೂನುಗಳನ್ನು ಹೇಳಿದರು- ಬಸ್ ಚಲಿಸುತ್ತಿರುವಾಗ ಅದರ ಚಾಲಕನೊಂದಿಗೆ ಮಾತನಾಡುವುದನ್ನು ನಿಷೇಧಿಸಲಾಗಿದೆ. ರಸ್ತೆ ಸಾರಿಗೆ ಕಾನೂನಿನ ಪ್ರಕಾರ, ಬಸ್ ಚಲಿಸುತ್ತಿರುವಾಗ ಚಾಲಕನೊಂದಿಗೆ ಮಾತಾಡುವುದನ್ನು ಸಹಪ್ರಯಾಣಿಕರು ಗಮನಿಸಿ, ದೂರು ನೀಡಿದರೆ, ಚಾಲಕ ಮತ್ತು ಅವನೊಂದಿಗೆ ಮಾತಾಡಿದವನನ್ನು ಒಳಕ್ಕೆ ಹಾಕುತ್ತಾರೆ. ಚಾಲಕನೊಂದಿಗೆ ಮಾತಾಡಬೇಕು ಅಂತ ಅನಿಸಿದರೆ, ಆತನಿಗೆ ಬಸ್ ಸ್ಟಾಪ್ ಮಾಡುವಂತೆ ಹೇಳಬೇಕು. ಆತ ನಿಲ್ಲಿಸಿದ ನಂತರವೇ ಮಾತಾಡಬಹುದು.

ಹಾಗೆಯೇ ಜಪಾನಿನಲ್ಲಿ ಇನ್ನೊಂದು ಕಾನೂನಿದೆ. ಅದರ ಪ್ರಕಾರ, ಅಂತ್ಯಕ್ರಿಯೆಗೆ ಅಡ್ಡಿಪಡಿಸುವುದು ಅಪರಾಧ. ಅದೇ ರೀತಿ ಧರ್ಮೋಪದೇಶ, ಪೂಜಾ ಸೇವೆಗೆ ಅಡ್ಡಿಪಡಿಸುವುದು ಸಹ ಅಪರಾಧ. ಆದರೆ ಮದುವೆಗೆ ಅಡ್ಡಿಪಡಿಸುವುದು ಧರ್ಮೋಪದೇಶಕ್ಕೆ ಅಡ್ಡಿಪಡಿಸಿದಂತಾಗುವುದಿಲ್ಲ. ಹಾಗಾದರೆ ಮದುವೆಗೆ ಅಡ್ಡಿಪಡಿಸುವುದು ಅಪರಾಧವೇನು? ಮದುವೆಗೆ ಅಡ್ಡಿಪಡಿಸಿದರೆ ವ್ಯವಹಾರದಲ್ಲಿ (ಬಲವಂತ ಅಥವಾ ವಂಚನೆಯಿಂದ) ಹಸ್ತಕ್ಷೇಪ ಮಾಡಿದ್ದಾರೆಂದು ಪರಿಗಣಿಸುವುದರಿಂದ, ವ್ಯವಹಾರಕ್ಕೆ ಅಡ್ಡಿಪಡಿಸಿದ ಅಪರಾಧಿಯಾಗುತ್ತಾನೆ (ದಂಡ ಸಂಹಿತೆಯ ವಿಧಿ 233 ಅಥವಾ 234).

ಟೋಕಿಯೋಕ್ಕೆ ಭೇಟಿ ನೀಡುವಾಗ, ಯಾವ ಕಾರಣಕ್ಕೂ ಶೀತ ಮತ್ತು ಜ್ವರ ಔಷಧಿಗಳನ್ನು ತೆಗೆದುಕೊಂಡು ಹೋಗಬಾರದು. ಅದು ಕಾನೂನುಬಾಹಿರ. ಹಾಗೆಯೇ ಕೊಡೈನ್ ಹೊಂದಿರುವ ಕೆಲವು ಸಾಮಾನ್ಯ ನೋವು ನಿವಾರಕಗಳು ಸಹ ಕಾನೂನುಬಾಹಿರ. ನೀವು ಈ ನಿಷೇಧಿತ ಔಷಧಿಗಳಲ್ಲಿ ಯಾವುದನ್ನಾದರೂ ಜಪಾನ್‌ಗೆ ತಂದಿದ್ದರೆ ಅಥವಾ ವೈಯಕ್ತಿಕ ಬಳಕೆಗಾಗಿ ದೇಶಕ್ಕೆ ಆಮದು ಮಾಡಿಕೊಂಡಿದ್ದರೆ, ನಿಮ್ಮನ್ನು ತಪ್ಪಿತಸ್ಥರೆಂದು ಪರಿಗಣಿಸಬಹುದು. ಅಷ್ಟಕ್ಕೇ ನಿಮ್ಮನ್ನು ಬಂಧಿಸಬಹುದು ಅಥವಾ ಗಡಿಪಾರು ಮಾಡಬಹುದು.

ನಮ್ಮ ದೇಶದಲ್ಲಿ ಬ್ಯಾಂಕಿನಲ್ಲಿ ಅಥವಾ ಅಂಗಡಿಗಳಲ್ಲಿ ಕ್ಯಾಷಿಯರ್ ನಮಗೆ ನೀಡಬೇಕಾದ ಹಣಕ್ಕಿಂತ ಜಾಸ್ತಿ ಹಣ ನೀಡಿದರೆ, ನಾವು ಸುಮ್ಮನೆ ಜೇಬಿಗೆ ಹಾಕಿಕೊಂಡು ಬರುತ್ತೇವೆ. ಆದರೆ ಹಾಗೆ ಮಾಡುವುದು ಜಪಾನಿನಲ್ಲಿ ಅಪರಾಧ. ನೀವು ಹೆಚ್ಚು ಚಿಲ್ಲರೆ ಹಣವನ್ನು ಪಡೆದಿರುವುದನ್ನು ಗಮನಿಸಿದರೂ ಬ್ಯಾಂಕಿನಲ್ಲಿ ಕ್ಲರ್ಕ್ ಅಥವಾ ಕ್ಯಾಷಿಯರ್‌ಗೆ ತಿಳಿಸದಿದ್ದರೆ ಅದು ವಂಚನೆಯ ಅಪರಾಧವಾಗುತ್ತದೆ. ನಿಮಗೆ ನೀಡಬೇಕಾಗಿದ್ದಕ್ಕಿಂತ ಹೆಚ್ಚಿನ ಹಣ ಬಂದಿದೆ ಎಂದು ನೀವು ಅರಿತುಕೊಂಡರೂ, ಅದನ್ನು ಹಿಂತಿರುಗಿಸದಿದ್ದರೆ, ನೀವು ವಂಚನೆ ಮಾಡಿದ ಶಿಕ್ಷೆಗೆ ಗುರಿಯಾಗಬಹುದು. ನೀವು ನಂತರ ತಪ್ಪನ್ನು ಗಮನಿಸಿದರೆ, ಆದರೆ ಹಣವನ್ನು ಹಿಂತಿರುಗಿಸದಿದ್ದರೆ, ನೀವು 'ಮಾಲೀಕರಿಂದ ಪಡೆದ ಆಸ್ತಿಯ ದುರುಪಯೋಗ'ಕ್ಕೆ ಗುರಿಯಾಗಬಹುದು.

ಇಂಥ ಕಾನೂನನ್ನು ಜಪಾನಿನಲ್ಲಿ ಮಾತ್ರ ಕಾಣಲು ಸಾಧ್ಯ. 2015ರಲ್ಲಿ, ಕ್ಯಾಷಿಯರ್ ತಪ್ಪಾಗಿ ನೀಡಿದ್ದ 45 ಸಾವಿರ ಯೆನ್ ಹೆಚ್ಚುವರಿ (ಚಿಲ್ಲರೆ) ಹಣವನ್ನು ತೆಗೆದುಕೊಂಡ ನಂತರ ಮಹಿಳೆಯನ್ನು ಬಂಧಿಸಲಾಯಿತು. ಹಣವನ್ನು ತಪ್ಪಾಗಿ ಲೆಕ್ಕ ಹಾಕಲಾಗಿದೆ ಎಂದು ತನಗೆ ಅರಿವಿರಲಿಲ್ಲ ಎಂದು ಮಹಿಳೆ ಪರಿಪರಿಯಾಗಿ ಹೇಳಿಕೊಂಡರೂ, ವಂಚನೆ ಆರೋಪದ ಮೇಲೆ ಆಕೆಯನ್ನು ಬಂಧಿಸಲಾಯಿತು. ಟೋಕಿಯೋಗೆ ನಿಮ್ಮ ಮುಂದಿನ ಭೇಟಿಯ ಮೊದಲು ನಿಮ್ಮ ಗಣಿತ ಕೌಶಲಗಳನ್ನು ಸುಧಾರಿಸಿಕೊಳ್ಳಿ ಮತ್ತು ಯಾವಾಗಲೂ ನಿಮ್ಮ ಚಿಲ್ಲರೆ ಹಣವನ್ನು ಪರಿಶೀಲಿಸಲು ಮರೆಯಬೇಡಿ ಎಂದು ಕುಪ್ಪುಸ್ವಾಮಿ ಕಿವಿಮಾತು ಹೇಳಲು ಮರೆಯಲಿಲ್ಲ.

ಧೂಮಪಾನಿಗಳ ಸಂಖ್ಯೆಯನ್ನು ಕಡಿಮೆ ಮಾಡುವ ಪ್ರಯತ್ನದಲ್ಲಿ, ಕಟ್ಟುನಿಟ್ಟಾದ ಧೂಮಪಾನ ಮಾರ್ಗಸೂಚಿಗಳನ್ನು ಜಾರಿಗೆ ತಂದಿರುವ ಜಪಾನ್‌ನ ಅನೇಕ ನಗರಗಳಲ್ಲಿ ಟೋಕಿಯೋ ಕೂಡ ಒಂದು. ಆ ನಗರವು ಧೂಮಪಾನ ಪ್ರದೇಶಗಳನ್ನು ಗೊತ್ತುಪಡಿಸಿದ್ದು, ಅವುಗಳನ್ನು ಪೋಸ್ಟರ್‌ಗಳು ಮತ್ತು ಚಿಹ್ನೆಗಳಿಂದ ಗುರುತಿಸಲಾಗಿದೆ ಮತ್ತು ಈ ಸ್ಥಳಗಳ ಹೊರಗೆ ಧೂಮಪಾನ ಮಾಡುವುದು ಕಾನೂನುಬಾಹಿರವಾಗಿದೆ. ಇದೇ ಕಾರಣಕ್ಕಾಗಿ, ನಡೆದಾಡುತ್ತಾ ಧೂಮಪಾನ ಮಾಡುವುದು ಸಹ ಶಿಕ್ಷಾರ್ಹ. ಟೋಕಿಯೋದಲ್ಲಿ ಈ ನಿಯಮಗಳನ್ನು ನಿರ್ಲಕ್ಷಿಸುವವರು ಐದು ಸಾವಿರ ಯೆನ್‌ಗಳವರೆಗೆ ದಂಡವನ್ನು ತೆರಬೇಕಾಗುತ್ತದೆ.

ಆದರೆ ಜಪಾನಿನಲ್ಲಿ ಸಾರ್ವಜನಿಕವಾಗಿ ಕುಡಿಯುವುದು ಅಪರಾಧವಲ್ಲ. ಪೊಲೀಸರು ಪಕ್ಕದಲ್ಲಿ ನಡೆದುಕೊಂಡು ಹೋಗುತ್ತಿದ್ದರೂ, ಕೈಯಲ್ಲಿ ಬಿಯರ್ ಬಾಟಲಿ ಹಿಡಿದು ಹಾದಿಯಲ್ಲಿ ಕುಡಿಯುತ್ತಾ ಹೋಗಬಹುದು. ಅನೇಕ ರೈಲು ನಿಲ್ದಾಣಗಳಲ್ಲಿ ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಮದ್ಯ ಮಾರಾಟ ಮಾಡುವ ವೆಂಡಿಂಗ್ ಮೆಷಿನ್‌ಗಳಿವೆ. ಅಲ್ಲಿಯೇ ಕುಡಿದು one for the road ಅಂತ ಬಾಟಲಿಯನ್ನು ಕೈಯಲ್ಲಿ ಹಿಡಿದು ಹೊರಟರೂ ಸರಿಯೇ. ಆದರೆ ಸಾಮಾನ್ಯವಾಗಿ ಯಾರೂ ಹಗಲು ಹೊತ್ತು ಕುಡಿಯುವುದಿಲ್ಲ (ಒಂದು ವೇಳೆ ಕುಡಿದರೆ ಅದು ಅಪರಾಧವಲ್ಲ). ಸಾಯಂಕಾಲ ಆರರ ನಂತರ ಇಂಥ ಚಟುವಟಿಕೆಗಳಿಗೆ ಯಾರ ಅಭ್ಯಂತರವೂ ಇಲ್ಲ.

ವಿಚಿತ್ರ ಅಂದರೆ, ಜಪಾನಿನಲ್ಲಿ ನಿಮ್ಮ ಮೊದಲ ಸೋದರ ಸಂಬಂಧಿಯನ್ನು ಮದುವೆಯಾಗುವುದು ಕಾನೂನುಬದ್ಧವಾಗಿದೆ. ಅಂಥ ವಿವಾಹಗಳನ್ನು ನಿಷೇಧಿಸಲಾಗಿರುವ ದೇಶಗಳ ಜನರಿಗೆ ಇದು ಆಶ್ಚರ್ಯವನ್ನುಂಟು ಮಾಡಬಹುದು. ಈ ಪದ್ಧತಿಯು ಜಪಾನಿನಲ್ಲಿ ಆಳವಾದ ಐತಿಹಾಸಿಕ ಬೇರುಗಳನ್ನು ಹೊಂದಿದೆ. ಇದು ಕುಲಗಳು ಸಾಮಾಜಿಕ ರಚನೆಯ ಕೇಂದ್ರ ಬಿಂದುವಾಗಿದ್ದ ಮತ್ತು ಸಂಪ್ರದಾಯಗಳು ಆಸ್ತಿಯನ್ನು ಕಾಪಾಡಿಕೊಳ್ಳಲು ಕುಲದೊಳಗಿನ ಅಂತರ್ವಿವಾಹವು ಸಾಮಾನ್ಯವಾಗಿದ್ದ ಕಾಲದಿಂದ ನಡೆದುಕೊಂಡು ಬಂದಿದೆ. ಕಾಲಾನಂತರದಲ್ಲಿ, ವಿಶೇಷವಾಗಿ ನಗರ ಪ್ರದೇಶಗಳಲ್ಲಿ ಸಾಮಾಜಿಕ ವರ್ತನೆಗಳು ಬದಲಾಗುತ್ತಾ, ಆನುವಂಶಿಕ ಅಪಾಯಗಳ ಬಗ್ಗೆ ಹೆಚ್ಚಿದ ಅರಿವು ಮತ್ತು ಪಾಶ್ಚಿಮಾತ್ಯ ಮೌಲ್ಯಗಳಿಂದ ಪ್ರಭಾವಿತವಾದ, ಬದಲಾಗುತ್ತಿರುವ ಸಾಂಸ್ಕೃತಿಕ ರೂಢಿಗಳಿಂದಾಗಿ ಅನೇಕರು ಮೊದಲ ಸೋದರ ಸಂಬಂಧಿಗಳನ್ನು ಮದುವೆಯಾಗದಿರುವುದನ್ನು ಆಯ್ಕೆ ಮಾಡಿಕೊಳ್ಳುತ್ತಿದ್ದಾರೆ.

ಕುಪ್ಪುಸ್ವಾಮಿಯವರು ಇನ್ನೂ ಒಂದು ವಿಚಿತ್ರ ಕಾನೂನಿನ ಬಗ್ಗೆ ಗಮನಸೆಳೆದರು. ಎಂಟು ಸೆಂ.ಮೀ.ಗಿಂತ ಹೆಚ್ಚಿನ ಉದ್ದದ ಕತ್ತರಿಗಳನ್ನು ಒಯ್ಯುವುದು ಜಪಾನಿನ ಬಂದೂಕು ನಿಯಂತ್ರಣ ಕಾನೂನಿನ ಪ್ರಕಾರ ಅಪರಾಧ. ಆತ್ಮರಕ್ಷಣೆಯ ಉದ್ದೇಶಗಳಿಗಾಗಿ ಅಂಥ ಕತ್ತರಿಗಳನ್ನು ಕೊಂಡೊಯ್ಯುವುದನ್ನು ಸಹ ಈ ಕಾನೂನಿನ ಅಡಿಯಲ್ಲಿ ಸಮರ್ಥನೀಯ ಕಾರಣವೆಂದು ಪರಿಗಣಿಸಲಾಗುವುದಿಲ್ಲ ಎಂಬುದು ಗಮನಿಸಬೇಕಾದ ಸಂಗತಿ. ಆದ್ದರಿಂದ, ಜಪಾನಿನಲ್ಲಿರುವ ವ್ಯಕ್ತಿಗಳು ಬ್ಲೇಡ್ ಇರುವ ಉಪಕರಣಗಳನ್ನು ಹೊತ್ತೊಯ್ಯುವಾಗ ಎಚ್ಚರಿಕೆ ವಹಿಸಬೇಕು ಮತ್ತು ಬ್ಲೇಡ್ ಉದ್ದ ಮತ್ತು ಅನುಮತಿಸುವ ಬಳಕೆಗೆ ಸಂಬಂಧಿಸಿದ ಕಾನೂನು ಅವಶ್ಯಕತೆಗಳನ್ನು ಅನುಸರಿಸುವುದನ್ನು ಖಚಿತಪಡಿಸಿಕೊಳ್ಳಬೇಕು. ಸಾರ್ವಜನಿಕ ಸುರಕ್ಷತೆ ಮತ್ತು ಭದ್ರತೆಯನ್ನು ಕಾಪಾಡಿಕೊಳ್ಳಲು, ಅಪಾಯಕಾರಿ ವಸ್ತುಗಳನ್ನು ಹೊಂದುವುದು ಮತ್ತು ಬಳಸುವುದರ ಸುತ್ತ ಇರುವ ಕಟ್ಟುನಿಟ್ಟಿನ ನಿಯಮಗಳನ್ನು ಈ ಕಾನೂನು ಪ್ರತಿಬಿಂಬಿಸುತ್ತದೆ.

''ನನ್ನ ಪ್ರಕಾರ, ಜಪಾನ್ ಒಂದು ದೇಶವಲ್ಲ, ಅದೊಂದು ಪ್ರತ್ಯೇಕ ಜಗತ್ತು. ಕಾರಣ ಅಂಥ ಇನ್ನೊಂದು ದೇಶವನ್ನು ನೀವು ಜಗತ್ತಿನಲ್ಲೆಲ್ಲೂ ನೋಡಲು ಸಾಧ್ಯವಿಲ್ಲ'' ಎಂದು ಹೇಳಿ ಕುಪ್ಪುಸ್ವಾಮಿ ಮಾತು ಮುಗಿಸಿದರು. ಆ ಮಾತಿಗೆ ನಾನೂ ಮುದ್ರೆಯೊತ್ತಿದೆ.

ಚಕ್ಕಡಿಯ ಚಕ್ರಗಳು ಚೌಕಾಕಾರವಿದ್ದರೂ ಚಲಿಸಬಲ್ಲವು!

ಚಕ್ರದ ಸರಳತೆ ಮತ್ತು ವಿಶೇಷತೆ ಇರುವುದೇ ಅದರ ಉರುಳುವ ಗುಣದಲ್ಲಿ. ವೃತ್ತಾಕಾರವಾದ್ದರಿಂದ ಚಲನೆಯುದ್ದಕ್ಕೂ ಅದರ ಕೇಂದ್ರಬಿಂದು ಹೊರಮೈಯಿಂದ ಒಂದೇ ದೂರದಲ್ಲಿರುತ್ತದೆ, ಅಂದರೆ ಚಕ್ರ ಉರುಳುವಾಗ ಅದರ ಮಧ್ಯಭಾಗ ನೆಲದಿಂದ ಒಂದೇ ಎತ್ತರದಲ್ಲಿರುತ್ತದೆ. ಎತ್ತರ ಸಮಾನವಾಗಿರುವ ನಾಲ್ಕು ಚಕ್ರಗಳನ್ನು ಒಂದು ಹಲಗೆಗೋ ಒಂದು ಪೆಟ್ಟಿಗೆಯಾಕೃತಿಗೋ ಜೋಡಿಸಿ ಮೊತ್ತಮೊದಲ ಬಂಡಿಯನ್ನು ತಯಾರಿಸಿರಬಹುದು ಆಗಿನ್ನೂ ಗುಹೆಗಳಲ್ಲಿ ವಾಸಿಸುತ್ತಿದ್ದ ಆದಿಮಾನವರು. ಹಾಗೆಯೇ ಆ ಬಂಡಿಯ ಅಲುಗಾಟ ಸಾಧ್ಯವಾದಷ್ಟೂ ಕಡಿಮೆ ಇರಬೇಕಾದರೆ ಅದು ಕ್ರಮಿಸುವ ದಾರಿ ಸಮತಟ್ಟಾಗಿರಬೇಕು ಎಂದು ಕಂಡುಕೊಳ್ಳಲು ಅವರಿಗೆ ಹೆಚ್ಚು ಸಮಯ ಬೇಕಾಗಿರಲಿಕ್ಕಿಲ್ಲ.

ತಿಳಿರು ತೋರಣ

ಶ್ರೀವತ್ಸ ಜೋಶಿ
srivathsajoshi@yahoo.com

ಅಕಾರ-ಹಕಾರ ಉಚ್ಚಾರ ಸಮಸ್ಯೆಯುಳ್ಳವರು ಈಗೀಗ ಸುದ್ದಿಮನೆಗಳಲ್ಲೂ ಸೇರಿಕೊಂಡಿದ್ದಾರೆ. ಅದರಿಂದಾಗಿ ರಸ್ತೆ ಉಬ್ಬುಗಳು ರಸ್ತೆ ಹುಬ್ಬುಗಳಾಗಿವೆ. ''ಮೇಲು ಸೇತುವೆ ಹತ್ತಿರ ರಸ್ತೆ ಹುಬ್ಬು ನಿರ್ಮಿಸಿ ಸಂಚಾರ ನಿಯಂತ್ರಣ ಮಾಡಲು ಮನವಿ'', ''ರಸ್ತೆ ಹುಬ್ಬು ತಪ್ಪಿಸಹೋದ ಸ್ಕೂಟರ್ ಡಿಕ್ಕಿ ಹೊಡೆದು ಪಾದಚಾರಿ ಸಾವು'', ''ಮಕ್ಕಳ ರಕ್ಷಣೆ ದೃಷ್ಟಿಯಿಂದ ಶಾಲೆಯ ಬಳಿ ರಸ್ತೆ ಹುಬ್ಬು ಹಾಕುವಂತೆ ಸಚಿವರಿಂದ ಸೂಚನೆ'', ''ಮೋದಿ ಭೇಟಿ ನೀಡುತ್ತಾರೆಂದು ತೆರವುಗೊಂಡ ರಸ್ತೆ ಹುಬ್ಬುಗಳು'' ರೀತಿಯ ತಲೆಬರಹಗಳು ಮಾಮೂಲಿಯಾಗಿಬಿಟ್ಟಿವೆ. ಇವೆಲ್ಲ ಬೇರೆಬೇರೆ ಪತ್ರಿಕೆಗಳಲ್ಲಿ ಬಂದವುಗಳೇ. ನನ್ನ ಸೃಷ್ಟಿಯೇನಲ್ಲ. ನನಗನಿಸುತ್ತದೆ ಇದು ಹೀಗೂ ಇರಬಹುದು- ರಸ್ತೆ ಉಬ್ಬಿನ ಬದಿನೋಟ (ಸೈಡ್ ವ್ಯೂ) ಹುಬ್ಬಿನ ಆಕಾರವೇ ತಾನೆ? ಆದ್ದರಿಂದಲೇ 'ರಸ್ತೆ ಹುಬ್ಬುಗಳು' ಅಂತ ಪ್ರಜ್ಞಾಪೂರ್ವಕ ಬರೆಯುತ್ತಾರೇನೋ. ಏನಿದ್ದರೂ ಈ ಅಕಾರ-ಹಕಾರ ಅಧ್ವಾನಗಳು ಒಂದು ರೀತಿಯಲ್ಲಿ ರಸ್ತೆ ಉಬ್ಬುಗಳಿದ್ದಂತೆಯೇ. ಓದಿನ ಓಘಕ್ಕೆ ತಡೆಯೊಡ್ಡಿ ಕಿರಿಕಿರಿ ಮಾಡುತ್ತವೆ.

ನಿಜವಾಗಿ ರಸ್ತೆ ಉಬ್ಬುಗಳು ಇರುವುದು ನಮ್ಮೆಲ್ಲರ ಒಳಿತಿಗೇನೇ. ಆದರೆ ಕೆಲವೊಮ್ಮೆ ಕತ್ತಲಲ್ಲಿ ಅವು ಸರಿಯಾಗಿ ಕಾಣಿಸದಿದ್ದಾಗ ವಾಹನ ಮುಗ್ಗರಿಸಿ ಸವಾರರ ಜೀವಕ್ಕೆ ಮುಳುವಾಗುವುದೂ ಇದೆ. ಕೆಎಸ್‌ಆರ್‌ಟಿಸಿ ಐರಾವತದಲ್ಲಿ ''ಆರಾಮವಾಗಿ ಮಗುವಿನಂತೆ ನಿದ್ರಿಸಿ ಮಲ್ಟಿ ಆಕ್ಸೆಲ್ ಸೌಲಭ್ಯದೊಂದಿಗೆ'' ಜಾಹೀರಾತಿನಂತೆ ಪ್ರಯಾಣಿಕರೆಲ್ಲರೂ ಸುಖನಿದ್ರೆಯಲ್ಲಿದ್ದಾಗ ಚಾಲಕನು ರಸ್ತೆ ಉಬ್ಬುಗಳ ಮೇಲೆ ಬಸ್ಸನ್ನು ವೇಗವಾಗಿ ಚಲಾಯಿಸಿದರೆ ಧಡ್‌ಧಡ್‌ಧಡ್‌ಧಡ್ ಧಡ್... ಎಂಬ ಶಬ್ದಕ್ಕಾದರೂ ಎಚ್ಚರವಾಗುತ್ತದೆ, ನಿಧಾನವಾಗಿ ಒಂದೊಂದೇ ಉಬ್ಬಿನ ಮೇಲೆ ಚಕ್ರಗಳನ್ನು ಹತ್ತಿಸಿ-ಇಳಿಸಿಕೊಂಡು ಹೋದರೆ ಆ ಏರಿಳಿತದ ಕುಲುಕಾಟದಿಂದಾದರೂ ಎಚ್ಚರ ಆಗಿಯೇಆಗುತ್ತದೆ. ಹಾಗಾಗಿ ರಸ್ತೆ ಉಬ್ಬುಗಳಿಂದಾಗುವ ಉಪಕಾರವನ್ನು ಮರೆತು ನಾವು ಅವುಗಳನ್ನು ಕಿರಿಕಿರಿ ಎಂದು ಪರಿಗಣಿಸಿ ಶಪಿಸುವ ಸಂದರ್ಭಗಳೇ ಹೆಚ್ಚು. ಉದ್ದೇಶಪೂರ್ವಕ ರಸ್ತೆ ಉಬ್ಬುಗಳು ಸಾಲದೆಂಬಂತೆ ಬೇರೆಡೆಯೂ ರಸ್ತೆಯಲ್ಲಿ ಗುಳಿ-ಹೊಂಡಗಳು, ತಗ್ಗು-ದಿಣ್ಣೆಗಳು. ಬಿಹಾರದ ರಸ್ತೆಗಳು ಹೇಮಾಮಾಲಿನಿಯ ಕೆನ್ನೆಗಳಂತೆ ಇವೆ ಎಂದು ಒಂದು ಕಾಲದಲ್ಲಿ ಲಾಲೂಪ್ರಸಾದ್ ಯಾದವ್ ಹೇಳಿದ್ದರು. ನಿಜದಲ್ಲಿ ಅವು ಹೇಮಾಮಾಲಿನಿಯ ಕೆನ್ನೆಗಳಲ್ಲ, ಓಂಪುರಿಯ ಕೆನ್ನೆಗಳಂತೆ ಇರುತ್ತಿದ್ದದ್ದು. ಈಗ ಗಡ್ಕರಿ ಯುಗದಲ್ಲಿ ಒಟ್ಟಾರೆಯಾಗಿ ದೇಶಾದ್ಯಂತ ರಸ್ತೆಗಳು ಅಭಿವೃದ್ಧಿಗೊಂಡಿರುವುದು, ಸುಖಕರ ಪ್ರಯಾಣಕ್ಕೆ ಅನುಕೂಲ ಆಗಿರುವುದು ಹೌದಾದರೂ ಪ್ರತಿವರ್ಷ ಮಳೆಗಾಲದಲ್ಲಿ ಶಿರಾಡಿ ಘಾಟಿ ರಸ್ತೆಯ ಅವಸ್ಥೆ ನೋಡಿದರೆ ಗಡ್ಕರಿಯಲ್ಲ ಬ್ರಹ್ಮನಿಂದಲೂ ಅದರ ಉದ್ಧಾರ ಸಾಧ್ಯವಿಲ್ಲ ಎನ್ನುವಂಥ ಪರಿಸ್ಥಿತಿ ಇರುತ್ತದಂತೆ.

ಇರಲಿ, ರಸ್ತೆ ಉಬ್ಬುಗಳ ಮತ್ತು ಏರು-ತಗ್ಗುಗಳ ಚಿತ್ರಣವನ್ನು ಸದ್ಯಕ್ಕೆ ಮನಸ್ಸಿನ ಮೂಲೆಯಲ್ಲಿರಿಸಿ, ಇದಕ್ಕೆ ಸಂಬಂಧಿಸಿದ್ದೇ ಬೇರೊಂದು ವಿಷಯವನ್ನು ಮುನ್ನೆಲೆಗೆ ತಂದುಕೊಳ್ಳೋಣ. ಮನುಕುಲದ ಇದುವರೆಗಿನ ಸಾಧನೆ ಮತ್ತು ಸಂಶೋಧನೆಗಳಲ್ಲಿ ಅತ್ಯಂತ ಮಹತ್ತರವಾದದ್ದು ಯಾವುದು? ಈ ಪ್ರಶ್ನೆಗೆ ಒಬ್ಬೊಬ್ಬರೂ ಒಂದೊಂದು ಉತ್ತರ ಕೊಡುತ್ತಾರೆ. ಟೆಲಿಫೋನ್, ರೇಡಿಯೊ, ಟೆಲಿವಿಷನ್ ಮುಂತಾದ ದೂರಸಂಪರ್ಕ ಸಾಧನಗಳು ಸೋಜಿಗವಷ್ಟೇ ಅಲ್ಲ ಅತಿ ಪ್ರಾಮುಖ್ಯದವು ಎಂದು ಕೆಲವರು ಹೇಳಬಹುದು. ವೈದ್ಯಕೀಯ ಸಂಶೋಧನೆಗಳಿಂದ, ರೋಗನಿರೋಧಕ ಲಸಿಕೆಗಳಿಂದ, ಔಷಧಗಳಿಂದ ಮನುಷ್ಯನ ಸರಾಸರಿ ಆಯುಷ್ಯ ಹೆಚ್ಚಿರುವುದು ಬಹುಮುಖ್ಯ ಸಾಧನೆ ಎಂದು ಕೆಲವರಿಗೆ ಅನಿಸಬಹುದು. ಇನ್ನು ಕೆಲವರಿಗೆ ಕಂಪ್ಯೂಟರ್, ಇಂಟರ್‌ನೆಟ್, ಸೋಷಿಯಲ್ ಮೀಡಿಯಾಗಳೇ ಅದ್ಭುತ ವಿಸ್ಮಯ ಎನಿಸಬಹುದು. ಹಕ್ಕಿಯಂತೆ ಆಕಾಶದಲ್ಲಿ ಹಾರಬಲ್ಲ ವಿಮಾನಗಳನ್ನು ನಿರ್ಮಿಸಿದ್ದೇ ದೊಡ್ಡ ಸಾಧನೆಯೆನಿಸಿದರೆ, ರಾಕೆಟ್‌ಗಳಲ್ಲಿ ಬಾಹ್ಯಾಕಾಶಕ್ಕೆ ಜಿಗಿದದ್ದು, ಚಂದ್ರನ ಮೇಲೆ ಹೆಜ್ಜೆಯಿಟ್ಟದ್ದು... ಇವೆಲ್ಲ ಮಾನವನ ಅಪ್ರತಿಮ ಸಾಧನೆಗಳು ಎನ್ನುವವರೂ ಇದ್ದಾರೆ. ಹಾಗೆ ನೋಡಿದರೆ ಭಾರತದ ಇತ್ತೀಚಿನ ಚಂದ್ರಯಾನ ಯೋಜನೆಗಳು, ಇಸ್ರೋದಿಂದ ಒಂದೊಂದು ಸಲಕ್ಕೆ ನೂರಾರು ಉಪಗ್ರಹಗಳ ಸಾಮೂಹಿಕ ಉಡಾವಣೆ ಸಹ ಕಮ್ಮಿಯೇನಲ್ಲ. ಆದರೆ ಈ ಎಲ್ಲ ಸಾಧನೆಗಳಿಗಿಂತ ತೀರಾ ಮೂಲಭೂತವಾದ ಸಂಶೋಧನೆಯೊಂದನ್ನು ಅತ್ಯಂತ ಮಹತ್ವದ್ದು ಎಂದು ನಾವೆಲ್ಲರೂ ಒಪ್ಪಲೇಬೇಕಾಗುತ್ತದೆ. ಅದೇ, ತಿರುಗುವ ಗಾಲಿ ಅಥವಾ ಚಕ್ರದ ಕಲ್ಪನೆ. ಗಾಲಿಗಳನ್ನು ಉಪಯೋಗಿಸಿದ ಬಂಡಿಯ ಕಲ್ಪನೆ. ಬಂಡಿಯನ್ನು ಸಾಮಾನು ಸಾಗಣೆ ಮತ್ತು ಕ್ರಮೇಣ ಜನರನ್ನೂ ಒಂದೆಡೆಯಿಂದ ಇನ್ನೊಂದೆಡೆಗೆ ಸಾಗಿಸಲು ಬಳಸತೊಡಗಿದ ಕಲ್ಪನೆ. ನಿಜವಾಗಿಯೂ ಒಂದು ರೀತಿಯ ಕ್ರಾಂತಿ ತಂದ ಸಂಶೋಧನೆ ಎಂದರೆ ಚಕ್ರದ್ದೇ. ಹೀಗೆನ್ನುವಾಗ ನನಗೆ ಆಂಧ್ರಪ್ರದೇಶ ರಾಜ್ಯ ರಸ್ತೆ ಸಾರಿಗೆ ಸಂಸ್ಥೆಯ ಲಾಂಛನದಲ್ಲಿರುವ Wheel for common weal ಎಂಬ ಧ್ಯೇಯವಾಕ್ಯ ನೆನಪಾಗುತ್ತದೆ. ಎಷ್ಟೊಂದು ಅರ್ಥಪೂರ್ಣ ವಾಕ್ಯ! ಮನುಕುಲದ ಸರ್ವಸಾಮಾನ್ಯ ಪ್ರಗತಿಗೆ ಚಕ್ರದಿಂದಾದಷ್ಟು ಸಹಾಯ ಬೇರಾವುದರಿಂದಲೂ ಆಗಿಲ್ಲ ಎಂದರೆ ಖಂಡಿತ ತಪ್ಪಾಗಲಾರದು.

ಚಕ್ರದ ಸರಳತೆ ಮತ್ತು ವಿಶೇಷತೆ ಇರುವುದೇ ಅದರ ಉರುಳುವ ಗುಣದಲ್ಲಿ. ವೃತ್ತಾಕಾರವಾದ್ದರಿಂದ ಚಲನೆಯುದ್ದಕ್ಕೂ ಅದರ ಕೇಂದ್ರಬಿಂದು ಹೊರಮೈಯಿಂದ ಒಂದೇ ದೂರದಲ್ಲಿರುತ್ತದೆ, ಅಂದರೆ ಚಕ್ರ ಉರುಳುವಾಗ ಅದರ ಮಧ್ಯಭಾಗ ನೆಲದಿಂದ ಒಂದೇ ಎತ್ತರದಲ್ಲಿರುತ್ತದೆ. ಎತ್ತರ ಸಮಾನವಾಗಿರುವ ನಾಲ್ಕು ಚಕ್ರಗಳನ್ನು ಒಂದು ಹಲಗೆಗೋ ಒಂದು ಪೆಟ್ಟಿಗೆಯಾಕೃತಿಗೋ ಜೋಡಿಸಿ ಮೊತ್ತಮೊದಲ ಬಂಡಿಯನ್ನು ತಯಾರಿಸಿರಬಹುದು ಆಗಿನ್ನೂ ಗುಹೆಗಳಲ್ಲಿ ವಾಸಿಸುತ್ತಿದ್ದ ಆದಿಮಾನವರು. ಹಾಗೆಯೇ ಆ ಬಂಡಿಯ ಅಲುಗಾಟ ಸಾಧ್ಯವಾದಷ್ಟೂ ಕಡಿಮೆ ಇರಬೇಕಾದರೆ ಅದು ಕ್ರಮಿಸುವ ದಾರಿ ಸಮತಟ್ಟಾಗಿರಬೇಕು ಎಂದು ಕಂಡುಕೊಳ್ಳಲು ಅವರಿಗೆ ಹೆಚ್ಚು ಸಮಯ ಬೇಕಾಗಿರಲಿಕ್ಕಿಲ್ಲ. ಆದರೂ ಆಗಿನ ಮಿತವಾದ ತಂತ್ರಜ್ಞಾನದಲ್ಲಿ ಮರದ ಅಥವಾ ಕಲ್ಲಿನ ಚಕ್ರಗಳನ್ನು ತಯಾರಿಸುವಾಗ ಪಕ್ಕಾ ವೃತ್ತಾಕಾರವಿರುವಂತೆ ನೋಡಿಕೊಳ್ಳುವುದು ಕಷ್ಟವಾಗಿರಬಹುದು. ಈಗಾದರೆ ಟೈರುಗಳ ವಿನ್ಯಾಸ ಮತ್ತು ಉತ್ಪಾದನೆ ಎಲ್ಲದಕ್ಕೂ ಕಂಪ್ಯೂಟರ್ ನಿರ್ದೇಶನವಿರುವುದರಿಂದ ಅಗ್ದೀ ಉರುಟಾಗಿರುವಂತೆ ನೋಡಿಕೊಳ್ಳುವುದಕ್ಕಾಗುತ್ತದೆ. ಅಂತೂ ಚಕ್ರವೆಂದರೆ ವೃತ್ತಾಕಾರದ್ದೇ ಆಗಿರುತ್ತದೆ ಎಂದು ಚಿಕ್ಕ ಮಗುವಿಗೂ ಗೊತ್ತಿರುತ್ತದೆ.

ವೃತ್ತಾಕಾರವಲ್ಲದ ಚಕ್ರಗಳು ಸಾಧ್ಯವೇ? ಪೆನ್ಸಿಲ್ ಉರುಳುತ್ತದಲ್ಲ ಮೇಜಿನ ಮೇಲೆ!? ಪೆನ್ಸಿಲ್ ಅಂದರೆ ನಾನು ಹೇಳುತ್ತಿರುವುದು ಸಾಮಾನ್ಯವಾದ ಷಡ್ಭುಜ ಹೊರಮೈಯ ನಟರಾಜ್ ಎಚ್‌ಬಿ ಪೆನ್ಸಿಲ್. ಏಕೆಂದರೆ ದುಂಡಗಿನ ಪೆನ್ಸಿಲ್‌ಗಳೂ ಇರುತ್ತವೆ, ಅವುಗಳಂತೂ ಹೇಗೂ ಚಕ್ರದಂತೆ ಸುಲಭವಾಗಿ ಉರುಳಬಲ್ಲವು. ಉರುಳಬಾರದು ಎಂಬ ಉದ್ದೇಶದಿಂದ ಬೇಕಂತಲೇ ಚೌಕ ಮೇಲ್ಮೈಯ ಪೆನ್ಸಿಲ್‌ಗಳನ್ನೂ ತಯಾರಿಸುತ್ತಾರೆ. ಉದಾಹರಣೆಗೆ ಬಡಗಿಗಳು ಉಪಯೋಗಿಸುವ ಪೆನ್ಸಿಲ್. ಮರದ ಕೆಲಸ ಮಾಡುವಾಗ ಅಳತೆಗಳ ಗುರುತು ಹಾಕಿಕೊಳ್ಳಲು ಪದೇ ಪದೇ ಬೇಕಾಗುವ ಪೆನ್ಸಿಲ್ ಇಟ್ಟಲ್ಲಿಂದ ಉರುಳಿಕೊಂಡು ಹೋದರೆ, ಕಾಣೆಯಾದರೆ ಕಷ್ಟ. ಕಾರ್ಪೆಂಟರ್ ಪೆನ್ಸಿಲ್ ಎಂದು ಚೌಕ ಪೆನ್ಸಿಲ್‌ಗಳು ಇಲ್ಲಿ ಅಮೆರಿಕದಲ್ಲೂ ಮಾರುಕಟ್ಟೆಯಲ್ಲಿ ಸಿಗುತ್ತವೆ. ಚಕ್ರದ ಬಗ್ಗೆ ವಿವರಿಸುತ್ತ ನಾನಿಲ್ಲಿ ಪೆನ್ಸಿಲ್‌ನ ಹೋಲಿಕೆ ಕೊಟ್ಟಿದ್ದು ಉರುಳುವಿಕೆಯ ಸ್ಪಷ್ಟ ಚಿತ್ರಣವನ್ನು ನಿಮ್ಮ ಮನಸ್ಸಿನಲ್ಲಿ ಮೂಡಿಸುವುದಕ್ಕೆ. ವಸ್ತುವಿನ ಹೊರಮೈ ವೃತ್ತಾಕಾರವಿದ್ದಾಗ ಅಥವಾ ಬಹುತೇಕ ವೃತ್ತವನ್ನೇ ಹೋಲುವ ಬಹುಭುಜಾಕೃತಿಯಾಗಿದ್ದಾಗ ಅದು ಚಕ್ರದಂತೆ ಉರುಳುವುದು ಸಾಧ್ಯವಾಗುತ್ತದೆ- ಎಂದು ಮನದಟ್ಟು ಮಾಡುವುದಕ್ಕೆ.

ಮತ್ತೆ ಚಕ್ರವು ರಸ್ತೆಯಲ್ಲಿ ಉರುಳುವ ವಿಚಾರಕ್ಕೆ ಬರೋಣ. ರಸ್ತೆ ಸಮತಟ್ಟಾಗಿದ್ದರೆ ಮತ್ತು ಚಕ್ರ ವೃತ್ತಾಕಾರದ್ದಿದ್ದರೆ ಸಲೀಸು ಚಲನೆ. ರಸ್ತೆಯಲ್ಲಿ ಉಬ್ಬುತಗ್ಗುಗಳಿದ್ದು ಅದಕ್ಕೆ ಸರಿಯಾಗಿ ಚಕ್ರದ ಮೇಲ್ಮೈಯಲ್ಲೂ ಉಬ್ಬುತಗ್ಗುಗಳಿದ್ದರೆ ಮತ್ತು ಅವು ಗಿಯರ್‌ನ ಹಲ್ಲುಗಳಂತೆ ಪರಸ್ಪರ ಹೊಂದಿಕೊಂಡರೆ? ಆಗಲೂ ಚಲನೆ ಏಕ್‌ದಂ ನಾಜೂಕಾಗುತ್ತದೆ. ಸಮತಟ್ಟಾದ ರಸ್ತೆಯ ಮೇಲೆ ದುಂಡಗಿನ ಚಕ್ರ ಉರುಳಿದಷ್ಟೇ ನಾಜೂಕು ಎಂದರೆ ನಂಬುತ್ತೀರಾ? ಅದೇ ಥಿಯರಿಯನ್ನು ಮುಂದುವರಿಸಿದರೆ, ಚೌಕಾಕಾರದ ಚಕ್ರಗಳಿರುವುದೂ ಸಾಧ್ಯ. ಅದಕ್ಕೆ ತಕ್ಕಂತೆ ಏಕಪ್ರಕಾರವಾಗಿ ಉಬ್ಬುತಗ್ಗುಗಳಿರುವ ರಸ್ತೆಯಿದ್ದರಾಯಿತು! ಇದು ಕಾರ್ಯೋಪಯೋಗಿ ಅಲ್ಲದಿದ್ದರೂ ಪ್ರಯೋಗಾತ್ಮಕವಾಗಿ ಭಲೇ ಐಡಿಯಾ! ಅಂಥದೊಂದು ರಸ್ತೆ-ಚಕ್ರಗಳ ಕಾಂಬಿನೇಷನನ್ನು ಕಲ್ಪಿಸಿಯೇಬಿಟ್ಟಿದ್ದಾರೆ ಕೆಲವು ಪಾಶ್ಚಾತ್ಯ ಗಣಿತಜ್ಞರು. ರಸ್ತೆ ನಿರ್ಮಿಸುವುದು ಸಿವಿಲ್ ಎಂಜಿನಿಯರ್ಸ್ ಅಲ್ಲವೆ, ಗಣಿತಜ್ಞರಿಗೇನು ಕೆಲಸ ಅಂತೀರಾ? ಸಿವಿಲ್ ಎಂಜಿನಿಯರ್‌ಗೂ ಆಟೊಮೊಬೈಲ್ ಎಂಜಿನಿಯರ್‌ಗೂ ಗಣಿತ ಬೇಕೇಬೇಕಲ್ಲ! ಚೌಕಾಕಾರ ಚಕ್ರಗಳಿಗೆ ಸರಿ ಹೊಂದುವಂತೆ ರಸ್ತೆಯ ಉಬ್ಬುಗಳು ಯಾವ ಆಕಾರದ್ದಿರಬೇಕು ಎಂದು ಕಂಡುಹಿಡಿಯಲು ಗಣಿತಸೂತ್ರಗಳೇ ಬೇಕು. ಅದನ್ನೂ ಕಂಡುಕೊಂಡಿದ್ದಾರೆ. ಆ ಆಕಾರಕ್ಕೆ Catenary ಎಂದೊಂದು ವಿಶೇಷ ಹೆಸರನ್ನೂ ಇಟ್ಟಿದ್ದಾರೆ. ಅದು, ಸರಪಳಿ ಎಂಬ ಅರ್ಥ ಬರುವ ಲ್ಯಾಟಿನ್ ಪದದಿಂದ ಎರವಲು ಪಡೆದದ್ದು. ಸರಪಳಿಯ ಎರಡು ತುದಿಗಳನ್ನು ಎರಡು ಕೈಗಳಲ್ಲಿ ಹಿಡಿದಾಗ ಅದು ತನ್ನದೇ ಭಾರಕ್ಕೆ ಯಾವ ಆಕಾರದಲ್ಲಿ ತೂಗುತ್ತದೋ ಆ ಆಕಾರ. ತಥಾಕಥಿತ ರಸ್ತೆಯ ಉಬ್ಬುಗಳು ಹಾಗೆ (ಆದರೆ ತೂಗುತ್ತಿರುವ ಸರಪಳಿಯಂತಲ್ಲ, ಮೇಲುಕೆಳಗಾಗಿ ಕಮಾನಿನಂತೆ) ಇರಬೇಕು. ಅದರ ಮೇಲೆ ಚೌಕಾಕಾರದ ಚಕ್ರಗಳ ಚಲನೆ ಸುಲಭಸಾಧ್ಯ!

ಸಮಸ್ಯೆ ಏನೆಂದರೆ ಈ ಕ್ಯಾಟೆನರಿ ಆಕಾರವನ್ನು ಗಣಿತರೀತ್ಯಾ ಅಂದರೆ ಸಮೀಕರಣದಂತೆ ನಿರೂಪಿಸುವುದು ಕಷ್ಟ. ಗೆಲಿಲಿಯೋನಂಥ ಮಹಾಮೇಧಾವಿಗೂ ಅದು ಸುಲಭವಾಗಿ ದಕ್ಕಿರಲಿಲ್ಲವಂತೆ. ಆತ ಅದು ಪ್ಯಾರಬೊಲ ಆಕಾರವೇ ಇರಬಹುದು ಎಂದುಕೊಂಡಿದ್ದನಂತೆ. ಗಣಿತದ ಶಾಖೆ ಕ್ಯಾಲ್ಕುಲಸ್ ಮುಂದುವರಿದಂತೆಲ್ಲ ಗಣಿತಜ್ಞರಿಗೆ ಈ ಆಕಾರಕ್ಕೊಂದು ಗಣಿತಸೂತ್ರವನ್ನು ಕಂಡುಕೊಳ್ಳುವುದು ಸಾಧ್ಯವಾಯಿತು. ಅದಕ್ಕೆ **hyperbolic cosine** ಎಂಬ ಹೆಸರೂ ಸಿಕ್ಕಿತು. ಈ ಆಕಾರಕ್ಕೆ ಒಂದು ಒಳ್ಳೆಯ ನಿದರ್ಶನವೆಂದರೆ ಅಮೆರಿಕದಲ್ಲಿ ಸೈಂಟ್ ಲೂಯಿಸ್ ನಗರದಲ್ಲಿರುವ 'ಗೇಟ್‌ವೇ ಆರ್ಚ್'. 630 ಅಡಿಗಳಷ್ಟು ಎತ್ತರದ ಈ ಭವ್ಯಸ್ಮಾರಕವು 1965ರಲ್ಲಿ ನಿರ್ಮಾಣವಾಯಿತು. ತನ್ನದೇ ತೂಕವನ್ನು ತಡೆದುಕೊಳ್ಳುವ ಶಕ್ತಿ ಇಂಥ ಕಮಾನುಗಳ ಪೈಕಿ ಹೈಪರ್‌ಬೊಲಿಕ್ ಆಕಾರದ ಕಮಾನಿಗೆ ಅತ್ಯಧಿಕವಾಗಿರುತ್ತದೆ. ಆದರೆ ಬೇರೆ ವಸ್ತುಗಳ ಭಾರವನ್ನು ತಡೆದುಕೊಳ್ಳುವ ಕ್ಷಮತೆಯಿರುವುದಿಲ್ಲ. ಆದ್ದರಿಂದಲೇ ಗೇಟ್‌ವೇ ಆರ್ಚ್ ಬರೀ ಒಂದು ಸ್ಮಾರಕವಷ್ಟೇ ಆಗಿದೆ. ಅಲ್ಲಿ ನ್ಯೂಯಾರ್ಕ್‌ನ ಎಂಪೈರ್ ಸ್ಟೇಟ್ ಕಟ್ಟಡ, ಶಿಕಾಗೊದ ವಿಲ್ಲಿಸ್ ಟವರ್ ಮುಂತಾದವುಗಳಲ್ಲಿದ್ದಂತೆ ವಸತಿಸಮುಚ್ಚಯಗಳಾಗಲೀ ಕಾರ್ಯಾಲಯಗಳಾಗಲೀ ಇಲ್ಲ. ಒಮ್ಮೆಗೆ ಇಂತಿಷ್ಟೇ ಎಂದು ನಿರ್ದಿಷ್ಟ ಸಂಖ್ಯೆಯ ಪ್ರವಾಸಿಗರನ್ನು ಲಿಫ್ಟ್ ಮೂಲಕ ಮೇಲಕ್ಕೊಯ್ದು ಅಲ್ಲಿಂದ ವಿಹಂಗಮ ನೋಟ ತೋರಿಸುವ ವ್ಯವಸ್ಥೆಯಿದೆ.

ಮತ್ತೆ ನಮ್ಮ ಚೌಕಚಕ್ರಗಳ ಚಕ್ಕಡಿಯ ವಿಚಾರಕ್ಕೆ ಬಂದರೆ, ಅದಕ್ಕೆ ಬೇಕಾಗುವ ರಸ್ತೆಯ ಉಬ್ಬುಗಳು ಹೈಪರ್‌ಬೊಲಿಕ್ ಕೊಸೈನ್ ಆಕಾರದಲ್ಲಿರಬೇಕು ಎಂದು ಗಣಿತಜ್ಞರು ನಿರ್ಧರಿಸಿದರು. ಅಂಥ ರಸ್ತೆಯ ಮೇಲೆ ಚೌಕ ಚಕ್ರಗಳ ವಾಹನ- ಸೈಕಲ್, ಆಟೋರಿಕ್ಷಾ ಅಥವಾ ಕಾರು ಯಾವುದಾದರೂ ಸರಿ- ಆರಾಮಾಗಿ ಚಲಿಸಬಹುದು. ಸಮತಟ್ಟಾದ ರಸ್ತೆಯ ಮೇಲೆ ಉರುಟುಗಾಲಿಗಳ ಬಂಡಿ ಓಡಿಸಿದಂತೆಯೇ! ಇನ್ನೂ ನಂಬಿಕೆ ಬರದವರಿಗೆಂದೇ ಅಮೆರಿಕದ ಮಿನೆಸೋಟಾ ಸಂಸ್ಥಾನದ ಮೆಕಲೆಸ್ಟರ್ ಕಾಲೇಜಿನ ಮ್ಯಾಥಮಾಟಿಕ್ಸ್ ಪ್ರೊಫೆಸರ್ ಸ್ಟಾನ್ ವ್ಯಾಗನ್ ಎಂಬುವವರು ಅಲ್ಲಿನ ವಿಜ್ಞಾನಮಂದಿರದಲ್ಲಿ ಇಂಥದೊಂದು ರಸ್ತೆಯನ್ನೂ ಅದರ ಮೇಲೆ ಓಡಿಸಲು ಚೌಕ ಚಕ್ರಗಳ ಟ್ರೈಸಿಕಲ್ ಒಂದನ್ನೂ ನಿರ್ಮಿಸಿದ್ದಾರೆ. ಅಲ್ಲಿಗೆ ಭೇಟಿನೀಡುವ ಸಾರ್ವಜನಿಕರಿಗೆ ಟ್ರೈಸಿಕಲ್ ಸವಾರಿ ಮಾಡುವ ಅವಕಾಶವನ್ನೂ ಕಲ್ಪಿಸಿದ್ದಾರೆ. ಚೌಕ ಚಕ್ರಗಳ ವಾಹನ ಇರುವುದು ಸಾಧ್ಯ ಎನ್ನುವುದನ್ನು ಸಾಬೀತುಪಡಿಸಿದ್ದಾರೆ. ನಿಜ, ಇದು ಥಿಯರಿಗಷ್ಟೇ ಸರಿಹೊಂದುವುದೇ ಹೊರತು ಪ್ರಾಕ್ಟಿಕಲಿ ಜನೋಪಯೋಗಿ ಆಗುವಂಥದ್ದಲ್ಲ. ಮೊದಲನೆಯದಾಗಿ ಆ ಹೈಪರ್‌ಬೊಲಿಕ್ ಕೊಸೈನ್ ರಸ್ತೆಯು ಒಂದು ತುದಿಯಿಂದ ಇನ್ನೊಂದು ತುದಿಗೆ ಎಳೆದ ಸರಳರೇಖೆಯಂತೆ ನೇರವಾಗಿರಬೇಕು, ಬರೀ ಹತ್ತಿಪ್ಪತ್ತು ಮೀಟರ್‌ಗಳಷ್ಟು ಉದ್ದವಾದರೂ ಸರಿ, ಕನ್ಯಾಕುಮಾರಿಯಿಂದ ಕಾಶ್ಮೀರದವರೆಗಿನದಾದರೂ ಸರಿ. ಎರಡನೆಯದಾಗಿ ಅಂಥ ರಸ್ತೆಯ ಮೇಲೆ ವಾಹನ ಚಲಾಯಿಸುವಾಗ ವಾಹನವು ಎಡಕ್ಕೋ ಬಲಕ್ಕೋ ವಾಲುವಂತಿಲ್ಲ. ರಸ್ತೆಯೇ ಸರಳರೇಖೆಯದು ಅಂದಮೇಲೆ ಅಗತ್ಯವೂ ಇಲ್ಲವೆನ್ನಿ. ಆದರೂ 'ಒಂದಾ' ಹೋಗುತ್ತೇನೆಂತಲೋ ಚಹ ಕುಡಿಯುತ್ತೇನಂತಲೋ ವಾಹನವನ್ನು ಸೈಡಿಗೆ ನಿಲ್ಲಿಸುವ ಸಂದರ್ಭಗಳೂ ಸ್ಟ್ರಿಕ್ಟ್ಲೀ ನಾಟ್ ಓಕೆ. ಮೆಕಲೆಸ್ಟರ್ ಪ್ರೊಫೆಸರರು ತಯಾರಿಸಿದ ಮಾಡೆಲ್‌ನಲ್ಲಾದರೂ ಅಷ್ಟೇ, ರಸ್ತೆಯ ಒಂದು ತುದಿಯಿಂದ ಇನ್ನೊಂದು ತುದಿಗೆ ಟ್ರೈಸಿಕಲ್ ತಲುಪಿದ ಮೇಲೆ ಅದನ್ನು ಕೈಗಳಿಂದೆತ್ತಿ ವಿರುದ್ಧ ದಿಕ್ಕಿಗೆ ಮುಖ ತಿರುಗಿಸುವಂತೆ ಮಾಡಬೇಕು, ಪುಷ್-ಪುಲ್ ರೈಲಿನ ಎಂಜಿನ್ ಬದಲಾಯಿಸಿದಂತೆ.

ಮೆಕಲೆಸ್ಟರ್ ಮಾಡೆಲ್‌ನ ಆ ಮಿತಿಯನ್ನು ಪರಿಹರಿಸುತ್ತ ಚೌಕಚಕ್ರ ಟ್ರೈಸಿಕಲ್‌ನ ಪರಿಷ್ಕೃತ ರೂಪವೊಂದನ್ನು ನ್ಯೂಯಾರ್ಕ್‌ನಲ್ಲಿರುವ ಮ್ಯೂಸಿಯಂ ಆಫ್ ಮ್ಯಾಥಮಾಟಿಕ್ಸ್‌ನಲ್ಲಿ ಸಾರ್ವಜನಿಕರ ದೇಖಾವೆಗೆ ಮತ್ತು ಸವಾರಿಗೆ ಇಡಲಾಗಿದೆ. ಇದರಲ್ಲಿ ಟ್ರೈಸಿಕಲ್‌ನ ಮೂರು ಗಾಲಿಗಳು ಚಚ್ಚೌಕ ಆದರೆ ಬೇರೆಬೇರೆ ಸುತ್ತಳತೆಯವು. ಆದ್ದರಿಂದ ಟ್ರೈಸಿಕಲ್ ಸರಳರೇಖೆಯಲ್ಲಿ ಚಲಿಸದು. ಗಾಣದೆತ್ತಿನಂತೆ, ಅಥವಾ ಜಾತ್ರೆಗಳಲ್ಲಿರುವ ಕ್ಯಾರೊಸೊಲ್‌ಗಳಂತೆ ವರ್ತುಲಾಕಾರದಲ್ಲಿ ಚಲಿಸುವುದು. ಅಪ್ರದಕ್ಷಿಣವಾಗಿ ಚಲಿಸುವುದೆಂದು ಊಹಿಸಿದರೆ, ಟ್ರೈಸಿಕಲ್‌ನ ಹಿಂಭಾಗದ ಚಕ್ರಗಳ ಪೈಕಿ ಎಡದ್ದು ಅತ್ಯಂತ ಚಿಕ್ಕ ಚಕ್ರ; ಬಲದ್ದು ಅತ್ಯಂತ ದೊಡ್ಡ ಚಕ್ರ; ಮುಂದಿನ ಒಂದು ಚಕ್ರ ಅವೆರಡರ ಅಳತೆಗೆ ಮಧ್ಯರೀತಿಯದು. ಟ್ರೈಸಿಕಲ್ ಚಲಿಸುವ ಟ್ರ್ಯಾಕ್‌ನ ಕ್ಯಾಟೆನರಿ ಕಮಾನುಗಳು ವೃತ್ತಕೇಂದ್ರದಿಂದ ಹೊರಕ್ಕೆ ಚಾಚಿಕೊಂಡಂತೆ ಅವುಗಳ ಉಬ್ಬು (ಕರ್ವೇಚರ್) ಜಾಸ್ತಿಯಾಗುತ್ತ ಹೋಗುತ್ತದೆ. ಆದ್ದರಿಂದಲೇ ಅತ್ಯಂತ ಚಿಕ್ಕ ಚಕ್ರವು ಬೇಗಬೇಗ ಹೆಚ್ಚು ಸುತ್ತುಗಳನ್ನು ಸುತ್ತುತ್ತದೆ, ಅತ್ಯಂತ ದೊಡ್ಡ ಚಕ್ರವು ನಿಧಾನವಾಗಿ ಕಡಿಮೆ ಸಂಖ್ಯೆಯ ಸುತ್ತುಗಳನ್ನು ಮುಗಿಸಿರುತ್ತದೆ (ಗಣೇಶ-ಸುಬ್ರಹ್ಮಣ್ಯರ ಕತೆ ನಿಮಗೆ ನೆನಪಾದರೆ ಅದು ಕಾಕತಾಳೀಯ). ಟ್ರೈಸಿಕಲ್‌ನ ಚಕ್ರಗಳು ಬೇರೆಬೇರೆ ಸೈಜಿನವಾದ್ದರಿಂದ ಟ್ರೈಸಿಕಲ್ ಅನ್ನು ವರ್ತುಲ ಟ್ರ್ಯಾಕ್‌ನಿಂದ ಎತ್ತಿ ಸಮತಟ್ಟು ನೆಲದ ಮೇಲೆ ಇಡುವುದಕ್ಕೆ ಸಾಧ್ಯವೇ ಇಲ್ಲ. ಆದರೆ 'ಚಕ್ಕಡಿಯ ಚಕ್ರಗಳು ಚೌಕಾಕಾರವಿದ್ದರೂ ಚಲಿಸಬಲ್ಲವು' ಎಂದು ಮನದಟ್ಟಾಗುವಂತೆ ತೋರಿಸಲಿಕ್ಕೆ ಒಳ್ಳೆಯ ಮಾದರಿ. ಮಕ್ಕಳಲ್ಲೂ ದೊಡ್ಡವರಲ್ಲೂ ಮ್ಯಾಥಮ್ಯಾಟಿಕ್ಸ್ ಗುಮ್ಮನ ಹೆದರಿಕೆ ಕಡಿಮೆ ಮಾಡಲು ಪ್ರಯತ್ನಿಸುವ ಸಾಧನಗಳಲ್ಲಿ ಇದೂ ಒಂದು.

ಕೊನೆಯಲ್ಲಿ ಒಂದು ಸಂದರ್ಭೋಚಿತ ಹಾಸ್ಯಪ್ರಸಂಗವನ್ನು ನೆನಪಿಸಿಕೊಳ್ಳುತ್ತೇನೆ. ಇದು ರಸ್ತೆ ಉಬ್ಬುಗಳಿಗೆ ಸಂಬಂಧಿಸಿದ್ದೇ, ಸ್ವಲ್ಪ ತುಂಟತನದ್ದು. ದಾವಣಗೆರೆಯಲ್ಲಿ ನಾನು ಎಂಜಿನಿಯರಿಂಗ್ ಓದುತ್ತಿದ್ದಾಗ ಬಾಲಸುಬ್ರಹ್ಮಣ್ಯಂ ಎಂಬ ಹೆಸರಿನ ಒಬ್ಬ ಸಹಪಾಠಿ ಇದ್ದನು. ಎಲ್ಲರೂ ಬಾಲು ಎಂದು ಅವನನ್ನು ಕರೆಯುತ್ತಿದ್ದೆವು. ವಯಸ್ಸಹಜ ರಸಿಕಪ್ರಜ್ಞೆ ಎಲ್ಲರಿಗೂ ಇದ್ದರೆ ಅವನಿಗೆ ತುಸು ಜಾಸ್ತಿ. ಜತೆಯಲ್ಲೇ ಸ್ವಲ್ಪ ಪೊರಕಿ ರಫ್ ಆ್ಯಂಡ್ ಟಫ್ ಸ್ವಭಾವ. ನಮ್ಮ ಎಂಜಿನಿಯರಿಂಗ್ ಕಾಲೇಜಿನ ಎದುರಿಗೆ ಹಾದುಹೋಗುವ ರಸ್ತೆಯಲ್ಲಿ ಸ್ಪೀಡ್‌ಬ್ರೇಕರ್ ಉಬ್ಬುತಗ್ಗುಗಳು ಏಕೆ ಇವೆ ಎನ್ನುವುದಕ್ಕೆ ಅವನ ವಿವರಣೆ ಏನಿತ್ತು ಗೊತ್ತೇ? ''ಅಲ್ಲ ಕಣ್ರೋ... ಲೂನಾ ಮೇಲೆ ಬರುವ ಮಿಟುಕಲಾಡಿ ಮೀನಾಕ್ಷಿಗಳ ಸೌಂದರ್ಯವು ಸ್ಪೀಡ್‌ಬ್ರೇಕರ್‌ಗಳಿಂದಾಗಿ ನಮಗೆ ಹೆಚ್ಚು ಸವಿಯಲಿಕ್ಕೆ ಸಿಗುತ್ತದಲ್ವೇನ್ರೋ...'' ಅಂತಿದ್ದ ಬಾಲು ಮಹಾಶಯ! ಈಗ ನಾನು ಯೋಚಿಸುತ್ತಿದ್ದೇನೆ- ಆ ರಸ್ತೆಯು ಒಂದುವೇಳೆ ಹೈಪರ್‌ಬೊಲಿಕ್ ಕೊಸೈನ್ ಆಕಾರದಲ್ಲಿದ್ದಿದ್ದರೆ, ಮತ್ತು ಲೂನಾ ಚಕ್ರಗಳು ಚೌಕಾಕಾರವಾಗಿದ್ದರೆ ಮಿಟುಕಲಾಡಿ ಮೀನಾಕ್ಷಿಗಳು 'ಚಲ್ ಮೇರೀ ಲೂನಾ...' ಎನ್ನುತ್ತ ಸುಯ್ಯಂತ ಹೋಗುವುದಕ್ಕಾಗುತ್ತಿತ್ತು. ಬಾಲುಗೆ ಆಗ ತೀವ್ರ ನಿರಾಸೆಯಾಗಿರುತ್ತಿತ್ತು!

ಭಾರತದಲ್ಲಿ ಆದಾಯ ತೆರಿಗೆ: ಸಿಂಹಾವಲೋಕನ



ವಿದ್ಯಮಾನ
ವಿನಾಯಕ ವೆಂ.ಭಟ್ಟ, ಅಂಬ್ಲಿಹೊಂಡ
vveditoped@gmail.com

ಸೂರ್ಯನು ಭೂಮಿಯಿಂದ ತೇವಾಂಶವನ್ನು ಸೆಳೆದು ಅದನ್ನು ಮಳೆಯ ರೂಪದಲ್ಲಿ ಸಾವಿರ ಪಟ್ಟು ಭೂಮಿಗೇ ಹಿಂದಿರುಗಿಸುವಂತೆ ರಾಜಾ ದಿಲೀಪನು ತನ್ನ ಪ್ರಜೆಗಳ ಒಳಿತಿಗಾಗಿ ಮಾತ್ರ ಅವರಿಂದ ತೆರಿಗೆಗಳನ್ನು ಸಂಗ್ರಹಿಸಿ ಅದರ ನೂರು ಪಟ್ಟು ಜನಕಲ್ಯಾಣ ಕಾರ್ಯಗಳನ್ನು ಮಾಡುತ್ತಿದ್ದನು ಎಂದು ರಘುವಂಶದಲ್ಲಿ ಮಹಾಕವಿ ಕಾಳಿದಾಸ ಉಲ್ಲೇಖಿಸಿರುತ್ತಾನೆ. ಇದು ನನ್ನ ಸಂಶೋಧನೆ ಅಲ್ಲ, ಆದಾಯ ತೆರಿಗೆ ಇಲಾಖೆಯ ವೆಬ್‌ಸೈಟ್‌ನಲ್ಲಿ ಮಾಡಲಾಗಿರುವ ರಘುವಂಶ ಮಹಾಕಾವ್ಯದ ಉಲ್ಲೇಖ. ಜನರ ಮೇಲೆ ತೆರಿಗೆ ಹಾಕುವುದು ರಾಜಾ ದಿಲೀಪನ ಕಾಲದಲ್ಲೂ ಇತ್ತು ಎಂಬುದನ್ನು ಮತ್ತು ಹಾಗೆ ಸಂಗ್ರಹಿಸಿದ ತೆರಿಗೆಯನ್ನು ದೇಶದ ಅಭಿವೃದ್ಧಿ ಕಾರ್ಯಗಳಿಗೆ ಬಳಸಲಾಗುತ್ತದೆ ಎಂಬುದನ್ನು ಹೇಳುವುದು ಇಲಾಖೆಯ ಉದ್ದೇಶವಾಗಿರಲಿಕ್ಕೆ ಸಾಕು.

ಭಾರತದಲ್ಲಿನ ಆದಾಯ ತೆರಿಗೆಯ ಸಂಕ್ಷಿಪ್ತ ಇತಿಹಾಸವನ್ನು ಒಮ್ಮೆ ಅವಲೋಕಿಸೋಣ. 1860ರಲ್ಲಿ ಸರ್ ಜೇಮ್ಸ್ ವಿಲ್ಸನ್ ದೇಶದಲ್ಲಿ ಔಪಚಾರಿಕವಾಗಿ ತೆರಿಗೆಯನ್ನು ಪರಿಚಯಿಸಿದರು. ಸ್ವಾತಂತ್ರ್ಯಪೂರ್ವ ಭಾರತದ ಹಣಕಾಸು ಸಚಿವರಾಗಿದ್ದ ಅವರು, ಬ್ರಿಟಿಷ್ ಆಳ್ವಿಕೆಯಲ್ಲಿ ಮೊದಲ ಕೇಂದ್ರ ಬಜೆಟ್ ಅಧಿವೇಶನದಲ್ಲಿ ತೆರಿಗೆಯನ್ನು ಪರಿಚಯಿಸಿದರು. ಈ ಕಾಯ್ದೆಯ ಮೂಲಕವೇ ಭಾರತದಲ್ಲಿ ಕೇಂದ್ರೀಕೃತ ಸಂಘಟಿತ ತೆರಿಗೆ ವ್ಯವಸ್ಥೆ ಪ್ರಾರಂಭವಾಯಿತು. 1857ರ ಮಿಲಿಟರಿ ದಂಗೆಯಿಂದ ಸರಕಾರವು ಅನುಭವಿಸಿದ ನಷ್ಟವನ್ನು ವಸೂಲಿ ಮಾಡಲು ಈ ಕಾಯ್ದೆಯನ್ನು ಪರಿಚಯಿಸಲಾಯಿತು ಎನ್ನಲಾಗುತ್ತದೆ. 1886ರಲ್ಲಿ, ಪ್ರತ್ಯೇಕ ಆದಾಯ ತೆರಿಗೆ ಕಾಯ್ದೆಯನ್ನು ಅಂಗೀಕರಿಸಲಾಯಿತು. ಈ ಕಾಯ್ದೆಯು ಕಾಲಕಾಲಕ್ಕೆ ವಿವಿಧ ಮಾರ್ಪಾಡುಗಳೊಂದಿಗೆ 3 ದಶಕಗಳವರೆಗೆ ಜಾರಿಯಲ್ಲಿತ್ತು. ಮತ್ತೆ 1918ರಲ್ಲಿ ಹೊಸ ಆದಾಯ ತೆರಿಗೆ ಕಾಯ್ದೆಯನ್ನು ಅಂಗೀಕರಿಸಲಾಯಿತು ಹಾಗೂ ಮತ್ತೆ ಅದನ್ನು 1922ರಲ್ಲಿ ಅಂಗೀಕರಿಸಿದ ಮತ್ತೊಂದು ಹೊಸ ಕಾಯ್ದೆಯಿಂದ ಬದಲಾಯಿಸಲಾಯಿತು. ಈ ಕಾಯ್ದೆಯು ಹಲವಾರು ತಿದ್ದುಪಡಿಗಳೊಂದಿಗೆ 1961-62ರವರೆಗೂ ಜಾರಿಯಲ್ಲಿತ್ತು.

ಸ್ವತಂತ್ರ ಭಾರತದಲ್ಲಿ ಆದಾಯ ತೆರಿಗೆ ಕಾಯ್ದೆ 1961 ಅನ್ನು ಜಮ್ಮು ಮತ್ತು ಕಾಶ್ಮೀರವೂ ಸೇರಿದಂತೆ ಇಡೀ ಭಾರತಕ್ಕೆ ಅನ್ವಯಿಸುವಂತೆ 1961ರ ಏಪ್ರಿಲ್ 1ರಿಂದ ಜಾರಿಗೆ ತರಲಾಗಿತ್ತು. 1962ರಿಂದ ಪ್ರತಿ ವರ್ಷ ಕೇಂದ್ರ ಬಜೆಟ್ ಮೂಲಕ ಆದಾಯ ತೆರಿಗೆ ಕಾಯ್ದೆಯಲ್ಲಿ ದೂರಗಾಮಿ ಸ್ವರೂಪದ ಹಲವಾರು ತಿದ್ದುಪಡಿಗಳನ್ನು ಮಾಡುತ್ತಾ ಬರಲಾಗಿದೆ. ಸರಕಾರಗಳು ಹೀಗೆ ಜನರಿಂದ ಸಂಗ್ರಹಿಸಿದ ಆದಾಯವನ್ನು ಸರಕಾರದ ವೆಚ್ಚಗಳಿಗೆ ಹಣಕಾಸು ಒದಗಿಸುವುದರ ಜತೆಗೆ, ಪ್ರಗತಿಪರ ಆದಾಯ ತೆರಿಗೆಯ ಮೂಲಕ ಜನಸಂಖ್ಯೆಯಲ್ಲಿ ಸಂಪತ್ತನ್ನು ಸಮಾನವಾಗಿ ವಿತರಿಸಲು ಮತ್ತು ಆರ್ಥಿಕ ಏರಿಳಿತಗಳ ಚಕ್ರದಿಂದ ದೇಶದ ಮೇಲೆ ಉಂಟಾಗುವ ಪರಿಣಾಮಗಳನ್ನು ತಗ್ಗಿಸಲು ಸ್ವಯಂಚಾಲಿತ ಹಣಕಾಸಿನ ಸ್ಥಿರೀಕರಣವಾಗಿ ಕಾರ್ಯನಿರ್ವಹಿಸಲು ವಿನ್ಯಾಸಗೊಳಿಸಲಾಗಿತ್ತು. ಒಂದು ರಾಷ್ಟ್ರದ ಆರ್ಥಿಕ ಶಕ್ತಿಯು ರಾಷ್ಟ್ರದ ತೆರಿಗೆ ವ್ಯವಸ್ಥೆಗಳು ಎಷ್ಟು ಉತ್ತಮವಾಗಿವೆ ಎಂಬುದರ ಮೇಲೆ ಅವಲಂಬಿತವಾಗಿರುತ್ತದೆ. ಆದರೆ, ಸಂಗ್ರಹಿಸಿದ ತೆರಿಗೆಗಳು ಸಾರ್ವಜನಿಕ ಒಳಿತಿಗಾಗಿ ವ್ಯಯವಾಗುವುದು ಕಡ್ಡಾಯವಾಗಿರಬೇಕು ಅಷ್ಟೆ.

ಇರಲಿ, ಆದಾಯ ತೆರಿಗೆ ಕಾಯ್ದೆಗೆ ಮುಂದಿನ ಪರಿಷ್ಕರಣೆಗಳು 1918 ಮತ್ತು 1922ರಲ್ಲಿ ಬಂದವು. 1918ರ ಕಾಯ್ದೆಯು 1886ರ ಕಾಯ್ದೆಯನ್ನು ರದ್ದುಗೊಳಿಸಿತು ಮತ್ತು ಅನೇಕ ಹೊಸ ಪ್ರಮುಖ ಬದಲಾವಣೆಗಳನ್ನು ರೂಪಿಸಿತು. 1922ರ ಕಾಯ್ದೆಯು ಅತ್ಯಂತ ಮುಖ್ಯವಾಗಿತ್ತು, ಏಕೆಂದರೆ ಅಂದಿನಿಂದ ಭಾರತವು ಪ್ರತ್ಯೇಕ ಆದಾಯ ತೆರಿಗೆ ಇಲಾಖೆಯನ್ನು ಹೊಂದಲು ಸಾಧ್ಯವಾಯಿತು. 1922ರ ಕಾಯ್ದೆಯು ಭಾರತದಲ್ಲಿ ಸ್ವತಂತ್ರ ಸರಕಾರ ರಚನೆಯಾದ ಮೇಲೂ 1961ರವರೆಗೆ ಜಾರಿಯಲ್ಲಿತ್ತು. ಕಾನೂನು ಸಚಿವಾಲಯದೊಂದಿಗೆ ಸಮಾಲೋಚಿಸಿದ ನಂತರ 1961ರ ಭಾರತೀಯ ಆದಾಯ ತೆರಿಗೆ ಕಾಯ್ದೆ ಜಾರಿಗೆ ಬಂತು. ಇದು ದೀರ್ಘವೂ ಸಂಕೀರ್ಣವೂ ಆಗಿದ್ದು 23 ಅಧ್ಯಾಯಗಳು, 298 ವಿಭಾಗಗಳನ್ನು ಹೊಂದಿತ್ತು. ಶೇ.97.75ರಷ್ಟು ಅತ್ಯಧಿಕ ತೆರಿಗೆ ದರ ಮತ್ತು 11 ತೆರಿಗೆ ಸ್ಲ್ಯಾಬ್ ಗಳಿಂದ, ಶೇ.30ರಷ್ಟು ಗರಿಷ್ಠ ದರ ಮತ್ತು 3 ಸ್ಲ್ಯಾಬ್‌ಗಳವರೆಗೆ ತಲುಪುವವರೆಗೆ ಭಾರತದ ಆದಾಯ ತೆರಿಗೆ ವ್ಯವಸ್ಥೆ ಬಹಳ ದೂರ ಸಾಗಿಬಂದಿದೆ. ಈ ಪಯಣದ ಒಂದು ಸಿಂಹಾವಲೋಕನ ಮಾಡೋಣ.

- **1949-50:** ಸ್ವತಂತ್ರ ಭಾರತದಲ್ಲಿ ಇದೇ ಮೊದಲ ಬಾರಿಗೆ ತೆರಿಗೆ ದರಗಳನ್ನು ಬದಲಾಯಿಸಲಾಯಿತು. ಆಗಿನ ಹಣಕಾಸು ಸಚಿವ ಜಾನ್ ಮಥಾಯ್ ಅವರು 10,000 ರು.ವರೆಗಿನ ಆದಾಯದ ಮೇಲಿನ ತೆರಿಗೆಯನ್ನು ಮೊದಲ ಸ್ಲ್ಯಾಬ್‌ನಲ್ಲಿ ಒಂದು ಆಣಾದಿಂದ ಒಂಬತ್ತು ಪೈಸೆಗಳಿಗೆ ಮತ್ತು 2ನೇ ಸ್ಲ್ಯಾಬ್‌ನಲ್ಲಿ ಎರಡು ಆಣಾಗಳಿಂದ 'ಒಂದು ಆಣಾ ಒಂಬತ್ತು ಪೈಸೆಗಳಿಗೆ'' ಇಳಿಸಿದರು ('ಅಣಾ' ಎಂಬುದು ಹಿಂದೆ ಭಾರತದಲ್ಲಿ ಬಳಸಲಾಗುತ್ತಿದ್ದ ಕರೆನ್ಸಿ ಘಟಕವಾಗಿತ್ತು. ಇದು ರುಪಾಯಿಗೆ 1/16 ಗೆ ಸಮಾನವಾಗಿದೆ ಅಂದರೆ, ಹದಿನಾರು ಆಣೆಗೆ ಒಂದು ರುಪಾಯಿಯಾಗುತ್ತದೆ).
- **1974-75:** ವೈ.ಬಿ.ಚವಾಣ್ ಅವರು, ತೆರಿಗೆದಾರರ ಕಣ್ಣಲ್ಲಿ ನೀರೂರಿಸುತ್ತಿದ್ದ ಗರಿಷ್ಠ ದರವನ್ನು ಶೇ.97.75ರಿಂದ ಶೇ.75ಕ್ಕೆ ಇಳಿಸಿದರು. ವೈಯಕ್ತಿಕ ಆದಾಯದ ಎಲ್ಲಾ ಹಂತಗಳಲ್ಲಿ ತೆರಿಗೆಗಳನ್ನು ತಗ್ಗಿಸಲಾಯಿತು. 6,000ದವರೆಗಿನ ಆದಾಯ ಹೊಂದಿರುವವರಿಗೆ ಆದಾಯ ತೆರಿಗೆ ಇಲ್ಲ; 70 ಸಾವಿರ ರು.ಗಿಂತ ಹೆಚ್ಚಿನ ಆದಾಯದ ಸ್ಲ್ಯಾಬ್ ಮೇಲೆ ಮೂಲ ಆದಾಯ ತೆರಿಗೆಯ ಕನಿಷ್ಠ ದರವನ್ನು ಶೇ.70ಕ್ಕೆ ಇರಿಸಲಾಯಿತು. ಸರ್ಚಾರ್ಜ್ ದರವನ್ನು ಎಲ್ಲಾ ವರ್ಗಗಳಿಗೆ ಏಕರೂಪದ ಶೇ.10ಕ್ಕೆ ಇಳಿಸಲಾಯಿತು.
- **1985-86:** ವಿಶ್ವನಾಥ್ ಪ್ರತಾಪ್ ಸಿಂಗ್ ಅವರು ಆದಾಯ ತೆರಿಗೆ ಸ್ಲ್ಯಾಬ್‌ಗಳ ಸಂಖ್ಯೆಯನ್ನು ಎಂಟರಿಂದ ನಾಲ್ಕಕ್ಕೆ ಇಳಿಸುವ ಮೂಲಕ ತೆರಿಗೆ ರಚನೆಯನ್ನು ಕ್ರಾಂತಿಕಾರಕವಾಗಿ ಪುನರ್‌ರಚಿಸಿದರು. ವೈಯಕ್ತಿಕ ಆದಾಯದ ಮೇಲಿನ ಆದಾಯ ತೆರಿಗೆಯ ಅತ್ಯಧಿಕ ಕನಿಷ್ಠ ದರವು ಶೇ.61.85ರಿಂದ ಶೇ.50ಕ್ಕೆ ಇಳಿಯಿತು. 18,000 ರು.ಗಿಂತ ಕಡಿಮೆ ಆದಾಯವಿರುವವರು ಯಾವುದೇ ತೆರಿಗೆ ಪಾವತಿಸುವ ಅಗತ್ಯವಿರದಿದ್ದರೆ, 18,001 ರು.ಗಳಿಂದ 25,000 ರು.ಗಳವರೆಗಿನ ಸ್ಲ್ಯಾಬ್ ಮೇಲೆ ಆದಾಯ ತೆರಿಗೆ ದರವನ್ನು ಶೇ.25ಕ್ಕೆ ನಿಗದಿಪಡಿಸಲಾಗಿತ್ತು. 25,001 ರು.ಗಳಿಂದ 50,000 ರು.ಗಳವರೆಗಿನ ಸ್ಲ್ಯಾಬ್‌ನಲ್ಲಿ ಇದು ಶೇ.30ರಷ್ಟಿತ್ತು; 50,001 ರು.ಗಳಿಂದ 1 ಲಕ್ಷ ರು.ವರೆಗಿನ ತೆರಿಗೆಗೆ ಶೇ.40ರಷ್ಟು ತೆರಿಗೆ ವಿಧಿಸಲಾಗುತ್ತಿತ್ತು ಮತ್ತು 1 ಲಕ್ಷ ರು.ಗಿಂತ ಹೆಚ್ಚಿನ ಆದಾಯದ ಮೇಲೆ ಇದು ಶೇ.50ರಷ್ಟಿತ್ತು.
- **1992-93:** ಮನಮೋಹನ್ ಸಿಂಗ್ ಅವರು ಸ್ಲ್ಯಾಬ್‌ಗಳ ಸಂಖ್ಯೆಯನ್ನು ನಾಲ್ಕರಿಂದ ಮೂರಕ್ಕೆ ಇಳಿಸಿದರು. 30,000 ರು.ಗಳಿಂದ 50,000 ರು.ವರೆಗಿನ ಆದಾಯಕ್ಕೆ ಪ್ರವೇಶ ದರವು ಶೇ.20, 50 ಸಾವಿರದಿಂದ 1 ಲಕ್ಷ ರು.ಗಳವರೆಗಿನ ಆದಾಯಕ್ಕೆ ಮಧ್ಯಮ ಸ್ಲ್ಯಾಬ್ ಮತ್ತು 1 ಲಕ್ಷ ರು.ಗಿಂತ ಹೆಚ್ಚಿನ ಆದಾಯಕ್ಕೆ ಗರಿಷ್ಠ ಶೇ.40ರಷ್ಟು ತೆರಿಗೆ ವಿಧಿಸಲಾಗುತ್ತಿತ್ತು. 1994-95, ಎರಡು ವರ್ಷಗಳ ಅಂತರದ ನಂತರ, ಮನಮೋಹನ್‌ರು ತೆರಿಗೆ ಸ್ಲ್ಯಾಬ್‌ಗಳನ್ನು ಸರಿಹೊಂದಿಸಿದರು ಆದರೆ ದರಗಳನ್ನು ಮಾತ್ರ ಬದಲಾಯಿಸಲಿಲ್ಲ. ಮೊದಲ ಸ್ಲ್ಯಾಬ್ ಅನ್ನು 35,000 ರು.ಗಳಿಂದ 60,000 ರು.ಗಳಿಗೆ ನಿಗದಿಪಡಿಸಲಾಯಿತು. ಅದೇ ಶೇ.20ರಷ್ಟು ತೆರಿಗೆ ದರದೊಂದಿಗೆ, ಎರಡನೇ ಸ್ಲ್ಯಾಬ್ ಅನ್ನು 60,000 ರು.ಗಳಿಂದ 1.2 ಲಕ್ಷ ರು.ಗೆ ನಿಗದಿಪಡಿಸಲಾಯಿತು. ವಿ.ಪಿ.ಸಿಂಗ್ ಮತ್ತು ಮನಮೋಹನ್ ಸಿಂಗ್ ತಮ್ಮ ಬಜೆಟ್‌ಗಳಲ್ಲಿ ಸ್ಲ್ಯಾಬ್‌ಗಳ ಸಂಖ್ಯೆಯನ್ನು ಕಡಿತಗೊಳಿಸಿದರೂ, 1997-98ರಲ್ಲಿ ಪಿ.ಚಿದಂಬರಂ ಅವರು ಮಂಡಿಸಿದ ತಮ್ಮ 'ಕನಸಿನ ಬಜೆಟ್'ನಲ್ಲಿ ಚಾಲ್ತಿಯಲ್ಲಿರುವ 15, 30 ಮತ್ತು 40 ಪ್ರತಿಶತ ದರಗಳನ್ನು 10, 20 ಮತ್ತು 30 ಪ್ರತಿಶತಕ್ಕೆ ಬದಲಾಯಿಸಿದರು. 40,000 ರು.ಗಳಿಂದ 60,000 ರು.ಗಳವರೆಗೆ ಆದಾಯ ಹೊಂದಿರುವವರು ಮೊದಲ ಸ್ಲ್ಯಾಬ್‌ನಲ್ಲಿ ಶೇ.10, 60 ಸಾವಿರ ರಿಂದ 1.5 ಲಕ್ಷ ರು.ವರೆಗಿನ ಸ್ಲ್ಯಾಬ್‌ನಲ್ಲಿ ಶೇ.20 ಮತ್ತು 1.5 ಲಕ್ಷ ರು.ಗಿಂತ ಹೆಚ್ಚಿನ ಎಲ್ಲಾ ಆದಾಯಕ್ಕೆ ಶೇ.30ರಷ್ಟು ತೆರಿಗೆ ಪಾವತಿಸಿದ್ದಾರೆ. ಸ್ಟ್ಯಾಂಡರ್ಡ್ ಡಿಡಕ್ಷನ್ ಮಿತಿಯನ್ನು ಸಂಬಳ ಪಡೆಯುವ ತೆರಿಗೆದಾರರಿಗೆ ಏಕರೂಪವಾಗಿ ಅನ್ವಯವಾಗುವಂತೆ 20,000 ರು.ಗೆ ಹೆಚ್ಚಿಸಿದರು. ಇದಲ್ಲದೆ, ವಾರ್ಷಿಕ 75,000 ರು.ಗಳ ವೇತನ ಪಡೆಯುವ ಮತ್ತು ಭವಿಷ್ಯ ನಿಧಿಗೆ 10 ಪ್ರತಿಶತದಷ್ಟು ಕೊಡುಗೆ ನೀಡುವ ಉದ್ಯೋಗಿಗಳು ಯಾವುದೇ ತೆರಿಗೆ ಪಾವತಿಸಬೇಕಾಗಿಲ್ಲ ಎಂದು ಘೋಷಿಸಲಾಯಿತು.
- **2005-06:** ಸುಮಾರು 10 ವರ್ಷಗಳ ನಂತರ, ಚಿದಂಬರಂ ಮತ್ತೊಮ್ಮೆ ತೆರಿಗೆ ಶ್ರೇಣಿಗಳಲ್ಲಿ ಕೆಲವು ಗಮನಾರ್ಹ ಬದಲಾವಣೆಗಳನ್ನು ಘೋಷಿಸಿದರು. 1 ಲಕ್ಷದಿಂದ 1.5 ಲಕ್ಷ ರು.ವರೆಗಿನ ಆದಾಯಕ್ಕೆ ಶೇ.10, 1.5 ಲಕ್ಷದಿಂದ 2.5 ಲಕ್ಷ ರು.ವರೆಗಿನ ಆದಾಯಕ್ಕೆ ಶೇ.20 ಮತ್ತು 2.5 ಲಕ್ಷ ರು.ಗಿಂತ ಹೆಚ್ಚಿನ ಆದಾಯವಿರುವವರಿಗೆ ಶೇ.30ರಷ್ಟು ತೆರಿಗೆ ವಿಧಿಸಲಾಗುವುದು ಎಂದು ಘೋಷಿಸಿದರು.
- **2010-11:** ಐದು ವರ್ಷಗಳ ನಂತರ, ಪ್ರಣಬ್ ಮುಖರ್ಜಿಯವರು ಆದಾಯದ ಸ್ಲ್ಯಾಬ್‌ಗಳನ್ನು ಮತ್ತೆ ಬದಲಾಯಿಸಿದರು. 1.6 ಲಕ್ಷ ರು.ವರೆಗಿನ ಆದಾಯವಿರುವವರು ಶೂನ್ಯ ತೆರಿಗೆ, 1.6 ಲಕ್ಷ ರು.ಗಳಿಂದ 5 ಲಕ್ಷ ರು.ವರೆಗಿನ ಆದಾಯವಿರುವವರು ಶೇ.10, 5 ಲಕ್ಷದಿಂದ 8 ಲಕ್ಷ ರು.ವರೆಗಿನ ಆದಾಯವಿರುವವರು ಶೇ.20 ಮತ್ತು 8 ಲಕ್ಷ ರು.ಗಿಂತ ಹೆಚ್ಚಿನ ಆದಾಯವಿರುವವರು ಶೇ.30 ತೆರಿಗೆ ಪಾವತಿಸಬೇಕಾಗುತ್ತಿತ್ತು.
- **2012-13:** ಪ್ರಣಬ್ ಮುಖರ್ಜಿಯವರು ವೈಯಕ್ತಿಕ ತೆರಿಗೆದಾರರ ಸಾಮಾನ್ಯ ವರ್ಗದ ವಿನಾಯಿತಿ ಮಿತಿಯನ್ನು 1.8 ಲಕ್ಷ ರು.ಗಳಿಂದ 2 ಲಕ್ಷ ರು.ಗೆ ಹೆಚ್ಚಿಸಿದ್ದಲ್ಲದೆ, ತೆರಿಗೆ ಸ್ಲ್ಯಾಬ್‌ಗಳನ್ನು ಸ್ವಲ್ಪ ಬದಲಾಯಿಸಿದರು. ವಾರ್ಷಿಕ 2 ಲಕ್ಷ ರು.ವರೆಗಿನ ಆದಾಯವಿರುವವರು ತೆರಿಗೆ ಪಾವತಿಸಬೇಕಾಗಿಲ್ಲ, 2 ಲಕ್ಷದಿಂದ 5 ಲಕ್ಷ ರು.ವರೆಗಿನ ಆದಾಯವಿರುವವರು ಈಗ ಶೇ.10, 5 ಲಕ್ಷದಿಂದ 10 ಲಕ್ಷ ರು.ವರೆಗಿನ ಆದಾಯವಿರುವವರು ಶೇ.20, 10 ಲಕ್ಷ ದು. ಗಿಂತ ಹೆಚ್ಚಿನ ಆದಾಯವಿರುವವರು ಶೇ.30 ತೆರಿಗೆ ಪಾವತಿಸಬೇಕಾಗುತ್ತಿತ್ತು.
- **2017-18:** 2.5 ಲಕ್ಷ ರು.ಗಳಿಂದ 5 ಲಕ್ಷ ರು.ವರೆಗಿನ ಆದಾಯವಿರುವ ವೈಯಕ್ತಿಕ ತೆರಿಗೆದಾರರಿಗೆ ಪ್ರಸ್ತುತ ಇರುವ ತೆರಿಗೆ ದರವನ್ನು ಶೇ.10ರಿಂದ 5ಕ್ಕೆ ಇಳಿಸಲಾಯಿತು. ಇದಲ್ಲದೆ, ಆದಾಯ ತೆರಿಗೆ ಕಾಯ್ದೆ, 1961ರ ಸೆಕ್ಷನ್ 87 ಎ ಅಡಿಯಲ್ಲಿ ಅಸ್ತಿತ್ವದಲ್ಲಿರುವ ರಿಯಾಯಿತಿಯನ್ನು (ಈ ಹಿಂದೆ 5 ಲಕ್ಷ ರು.ವರೆಗಿನ ಆದಾಯವಿರುವವರಿಗೆ ನೀಡಲಾಗುತ್ತಿತ್ತು) 2.5 ಲಕ್ಷದಿಂದ 3.5 ಲಕ್ಷ ರು.ಗಳವರೆಗೆ ಆದಾಯವಿರುವವರಿಗೂ ಅನ್ವಯವಾಗುವಂತೆ ನೋಡಿಕೊಳ್ಳಲಾಯಿತು. ಸೆಕ್ಷನ್ 87 ಎ ಅಡಿಯಲ್ಲಿ ಹೊಸ ರಿಯಾಯಿತಿಯ ಸಂಯೋಜಿತ ಪರಿಣಾಮ ಮತ್ತು ಕನಿಷ್ಠ ಸ್ಲ್ಯಾಬ್ ಅನ್ನು ಶೇ.5ಕ್ಕೆ ಇಳಿಸುವುದರಿಂದ, 3 ಲಕ್ಷ ರು.ವರೆಗಿನ ಆದಾಯವಿರುವವರಿಗೆ ತೆರಿಗೆ ಹೊರೆ ಶೂನ್ಯವಾಗುವಂತೆ ನೋಡಿಕೊಳ್ಳಲಾಯಿತು.
- **2020-21:** ವಿತ್ತ ಸಚಿವೆ ನಿರ್ಮಲಾ ಸೀತಾರಾಮನ್ ಅವರು ಹೊಸ ಐಚ್ಛಿಕ ವೈಯಕ್ತಿಕ ಆದಾಯ ತೆರಿಗೆ ವ್ಯವಸ್ಥೆಯನ್ನು ಪ್ರಸ್ತಾಪಿಸಿ, ತೆರಿಗೆ ವ್ಯವಸ್ಥೆಯನ್ನು ಸರಳಗೊಳಿಸಿದರು ಮತ್ತು ಕಡಿಮೆ ತೆರಿಗೆ ದರಗಳನ್ನು ಘೋಷಿಸಿದರು. 100ಕ್ಕೂ ಹೆಚ್ಚು ಆದಾಯ ತೆರಿಗೆ ಕಡಿತಗಳು ಮತ್ತು ವಿನಾಯಿತಿಗಳಲ್ಲಿ ಸುಮಾರು 70ನ್ನು ತೆಗೆದುಹಾಕಿದರು.

ಸತತ 8ನೇ ಬಾರಿಗೆ ಬಜೆಟ್ ಮಂಡಿಸಿರುವ ನಿರ್ಮಲಾ ಅವರು 2025ರಲ್ಲಿ ಮಧ್ಯಮವರ್ಗಕ್ಕೆ 'ಗುಡ್ ನ್ಯೂಸ್' ನೀಡಿದ್ದಾರೆ ಎನ್ನಲೇಬೇಕು. ಹಣಕಾಸು ವರ್ಷ 2025-26ರಿಂದ ವಾರ್ಷಿಕ 12 ಲಕ್ಷ ರು.ವರೆಗೆ ಆದಾಯವಿರುವವರು ಯಾವುದೇ ತೆರಿಗೆ ಕಟ್ಟುವಂತಿಲ್ಲ. ಜತೆಗೆ ತೆರಿಗೆ ಪಾವತಿಸುವವರಿಗೆ ಅನುಕೂಲವಾಗುವಂತೆ ತೆರಿಗೆ ಸ್ಲ್ಯಾಬ್‌ಗಳಲ್ಲೂ ಬದಲಾವಣೆ ಮಾಡಿದ್ದಾರೆ. 12 ಲಕ್ಷ ರು.ವರೆಗೆ ಶೂನ್ಯ ತೆರಿಗೆ ಇದ್ದು, ಇದರೊಂದಿಗೆ 75,000 ರು. ಸ್ಟ್ಯಾಂಡರ್ಡ್ ಡಿಡಕ್ಷನ್ ಕೂಡ ಅನ್ವಯಿಸಿ ಒಟ್ಟು 12,75,000 ರು.ವರೆಗೆ ಆದಾಯ ಇರುವವರಿಗೆ ಯಾವುದೇ ತೆರಿಗೆ ಇರುವುದಿಲ್ಲ. ಅಷ್ಟೇ ಅಲ್ಲದೆ, 64 ವರ್ಷಗಳಷ್ಟು ಹಳೆಯ ಆದಾಯ ತೆರಿಗೆ ಕಾಯ್ದೆ, 1961ರ ಬದಲಿಗೆ ಹೊಸ ಆದಾಯ ತೆರಿಗೆ ಕಾಯ್ದೆ ಜಾರಿಗೆ ಬರಲಿದೆ. ಇದು ಹೆಚ್ಚು ಸರಳವಾಗಿರಲಿದ್ದು, ತೆರಿಗೆದಾರರಿಗೆ ಹೆಚ್ಚಿನ ಅನುಕೂಲಗಳು ದೊರೆಯಬಹುದು ಎಂದು ನಿರೀಕ್ಷಿಸಲಾಗಿದೆ.

2013ರಲ್ಲಿ 2 ಲಕ್ಷ ರು.ವರೆಗಿದ್ದ ಶೂನ್ಯ ತೆರಿಗೆಯನ್ನು ಕೇವಲ ಹತ್ತು ವರ್ಷಗಳ ಅವಧಿಯಲ್ಲಿ 12 ಲಕ್ಷಕ್ಕೆ ಏರಿಸಿದ ಹಾಗಾಯಿತು. ಈ ಕ್ರಮದಿಂದ, ಕೇಂದ್ರ ಸರಕಾರ ಹೆಚ್ಚು ಕಡಿಮೆ 1.25 ಲಕ್ಷ ಕೋಟಿ ರುಪಾಯಿಗಳ ಆದಾಯವನ್ನು ಕಳೆದುಕೊಳ್ಳಲಿದೆ. ಇದು ಸಣ್ಣ ಮೊತ್ತವಲ್ಲ. ಎಲ್ಲರಿಗೂ ಅರ್ಥವಾಗುವಂತೆ ಹೇಳಬೇಕೆಂದರೆ, ಕರ್ನಾಟಕದಂಥ 2 ರಾಜ್ಯಗಳ 'ಪುಕ್ಕಟೆ ಗ್ಯಾರಂಟಿ' ಯೋಜನೆಗಳಿಗೆ ಸಾಕಾಗುವಷ್ಟು ಹಣ ಇದಾಗುತ್ತದೆ. ಶೂನ್ಯ ತೆರಿಗೆಯ ಮಿತಿಯನ್ನು 12 ಲಕ್ಷಕ್ಕೆ ತಂದು ನಿಲ್ಲಿಸಿರುವುದು ನಿಜಕ್ಕೂ ಒಂದು ಕ್ರಾಂತಿಕಾರಕ ನಿರ್ಧಾರ. ಅಷ್ಟೇ ಅಲ್ಲದೆ ತೆರಿಗೆಯಲ್ಲಿನ ಈ ಸಕಾರಾತ್ಮಕ ಮತ್ತು ಕ್ರಾಂತಿಕಾರಕ ಬದಲಾವಣೆಯನ್ನು, ಸಾರ್ವತ್ರಿಕ ಚುನಾವಣೆಯ ಸ್ವಲ್ಪ ಮೊದಲು ಘೋಷಿಸಿ ಅದರ ಲಾಭ ಪಡೆಯಬಹುದಾಗಿತ್ತು. ಹಾಗೆ ಮಾಡದೆ, ಈಗ ಪರಿಷ್ಕರಣೆ ಮಾಡುವ ಮೂಲಕ ಒಂದು ಉತ್ತಮ ಶಿಷ್ಟಾಚಾರಕ್ಕೆ ಮೋದಿ ಸರಕಾರ ನಾಂದಿ ಹಾಡಿದೆ ಎನ್ನಲಡ್ಡಿಯಿಲ್ಲ.

ಜನರಿಗೆ ಬೇರೆಯದೊಂದು 'ಆಪ್'ಶನ್ ಬೇಕಿತ್ತು!

ಸಿನಿಗನ್ನಡ

ತುಂಟರಗಾಳಿ
ಹರಿ ಪರಾಕ್
vveditoped@gmail.com

ಚಿತ್ರಮಂದಿರ ತುಂಬಿದೆ ಅಥವಾ ಹೌಸ್‌ಫುಲ್, ಇದು ಸಾಮಾನ್ಯವಾಗಿ ಚಿತ್ರರಂಗದವರಿಗೆ ಖುಷಿ ಕೊಡುವ ಬೋರ್ಡ್. ಆದರೆ ಇತ್ತೀಚೆಗೆ ಈ ರೀತಿಯ ಬೋರ್ಡುಗಳು ಬೋರ್ಡಿಗೇ ಇಲ್ಲದಂತಾಗಿವೆ. ಎಲ್ಲೋ ಕೆಲವು ಸ್ಟಾರ್‌ಗಳ ಸಿನಿಮಾಗೆ ಮೊದಲೆರಡು ದಿನ ಇಂಥ ಬೋರ್ಡ್ ಬೀಳಬಹುದೇನೋ ಅಷ್ಟೇ. ಇದಕ್ಕೆ ಕಾರಣ ಏನು ಅಂತ ಹೇಳೋದು ಕಷ್ಟ. ಬಿಡುಗಡೆ ಆಗುತ್ತಿರುವ ಚಿತ್ರಗಳ ಸಂಖ್ಯೆ ಮಿತಿಮೀರುತ್ತಿದ್ದು, ವಾರಕ್ಕೆ ಏಳೆಂಟು ಸಿನಿಮಾಗಳನ್ನು ಬಿಡುಗಡೆ ಮಾಡಿ, ಅದ್ಯಾವ ಮುಖ ಇಟ್ಕೊಂಡು ನಮ್ಮ ಸಿನಿಮಾಗೆ ಬನ್ನಿ ಅಂತ ಜನರನ್ನ ಕರೆಯೋಕೆ ಆಗುತ್ತೆ ಹೇಳಿ. ಅದರಲ್ಲೂ ಈ ದುಬಾರಿ ದುನಿಯಾದಲ್ಲಿ ಒಂದ್ ಫ್ಯಾಮಿಲಿ ಒಂದ್ ಸಿನಿಮಾ ನೋಡಬೇಕು ಅಂದರೆ ಸಾವಿರಾರು ರುಪಾಯಿ ಖರ್ಚು ಮಾಡಬೇಕಾಗುತ್ತೆ. ಹಾಗಾಗಿ ಸಾಮಾನ್ಯ ಪ್ರೇಕ್ಷಕ, ಒಂದು ಚಿತ್ರದ ಬಗ್ಗೆ ತುಂಬಾ ಒಳ್ಳೆ ಒಪೀನಿಯನ್ ಬಂದರೆ ಮಾತ್ರ ಥಿಯೇಟರ್ ಕಡೆ ಮುಖ ಹಾಕುತ್ತಾನೆ. ಇನ್ನು, ಜನ ಬರಲ್ಲ ಅಂತ ಚಿತ್ರಮಂದಿರಗಳಿಂದ ಬೇಗನೆ ಸಿನಿಮಾಗಳನ್ನ ತೆಗೀತಾರೆ. ಆದರೆ, ನಾವ್ ನೋಡಬೇಕು ಅಂದ್ರೆ ಆಗ್ಲೇ ಥಿಯೇಟರ್‌ನಿಂದ ತೆಗೆದುಬಿಟ್ಟಿದ್ದಾರೆ ಅಂತಾರೆ ಜನ. ಇದೊಂಥರಾ, ಮದ್ವೆ ಆಗದೆ ಹುಚ್ಚು ಬಿಡಲ್ಲ, ಹುಚ್ಚು ಬಿಡದೆ ಮದುವೆ ಆಗಲ್ಲ ಅನ್ನೋ ಥರ. ಇದರ ಜತೆಗೆ, ಚಿತ್ರಮಂದಿರಕ್ಕಂತೂ ಜನ ಬರಲಿಲ್ಲ ಅಂತ ಸಿನಿಮಾದವರು ಸಿನಿಮಾ ರಿಲೀಸಾಗಿ ತಿಂಗಳಾಗುವ ಮೊದಲೇ ಓಟಿಟಿಗೆ ಸಿನಿಮಾ ಬಿಡ್ತಾರೆ. ಅಯ್ಯೋ, ರಿಲೀಸಾಗಿ ತಿಂಗಳಿಗೆ ಮುಂಚೆ ಓಟಿಟಿಗೆ ಬರುತ್ತೆ, ಇಲ್ಲೇ ನೋಡೋಣ ಬಿಡು, ಥಿಯೇಟರ್‌ಗೆ ಯಾಕ್ ಹೋಗೋದು ಅಂತ ಜನರೂ ಫಿಕ್ಸ್ ಆಗಿಬಿಟ್ಟಿದ್ದಾರೆ. ಹಾಗಾಗಿ ಈಗೀಗ ಕೇವಲ ಅಭಿಮಾನಿ ದೇವರುಗಳು ಮಾತ್ರ ತಮ್ಮ ನೆಚ್ಚಿನ ನಟನ ಸಿನಿಮಾ ಬಿಡುಗಡೆ ಇದ್ರೆ ಮಾತ್ರ ಮೊದಲ ದಿನ ಥಿಯೇಟರ್ ಕಡೆ ತಲೆ ಹಾಕೋದು ಅನ್ನೋ ಥರ ಆಗಿದೆ. ಉಳಿದವರ ಪಾಲಿಗಂತೂ ಮನೆಯೇ ಚಿತ್ರಾಲಯ.

ಲೂಸ್ ಟಾಕ್

ಅರವಿಂದ ಕೇಜ್ರಿವಾಲ್

- **ಏನ್ ಕೇಜ್ರಿವಾಲ್ ಅವರೇ, ದೆಹಲಿಯಲ್ಲಿ ಕೊನೆಗೂ 'ಆಪ್' ಕಥೆ ಮುಗೀತಲ್ಲ?**
– ಏನ್ ಮಾಡೋದು, 'ಆಪ್'ತರು ಅನ್ನಿಸಿಕೊಂಡವರೇ ಕೈ ಕೊಟ್ರು, ಅದಕ್ಕೇ ಸೋಲಾಯ್ತು
- **ಓಹ್, ಹೌದಾ.. ಆದ್ರೆ ದೆಹಲಿ ಜನ ನಿಮ್ಮನ್ನ ಮರೆತು ಯಾಕೆ ಉಲ್ಟಾ ಹೊಡೆದ್ರು?**
– ಯಾಕೆ ಮರೆತ್ರು ಅಂತ ಗೊತ್ತಿಲ್ಲ, ಆದ್ರೆ ಮುಂದೆ ಬಿಜೆಪಿ ಆಡಳಿತ ನೋಡಿದ್ಮೇಲೆ ಈ 'ಆಪ'ತ್ಬಾಂಧವನ ಖಂಡಿತಾ ನೆನಪಿಸಿಕೊಳ್ತಾರೆ.
- **ಚುನಾವಣಾ ಫಲಿತಾಂಶದ ಬಗ್ಗೆ ನಿಮ್ಮ ವ್ಯಾಖ್ಯಾನ ಏನು?**
– ಜನರನ್ನ ಶೋಷಣೆ ಮಾಡೋ ಪಕ್ಷನಾ ಆಯ್ಕೆ ಮಾಡಿ, 'ಆಪ'ತ್ತಿಗಾದ ನೆಂಟನನ್ನ, ಜನರನ್ನ ಪೋಷಣೆ ಮಾಡಿದ ಪಕ್ಷನ 'ಆಪೋ'ಷಣೆ ತಗೊಂಡ್‌ಬಿಟ್ರು ಜನ.
- **ಆದ್ರೂ ನೀವು ಜೈಲಿಗೆ ಹೋಗಿ ಬಂದಿದ್ದೂ ವರ್ಕ್ ಔಟ್ ಆಗಲಿಲ್ಲವಲ್ಲ. ಅನುಕಂಪದ ಅಲೆ ಯಾಕೆ ಕೆಲಸ ಮಾಡ್ಲಿಲ್ಲ?**
– ಗೊತ್ತಿಲ್ಲ. ಆದ್ರೆ ಇದೊಂದು 'ಆಪ್'ರೂಪದ ಪ್ರಕರಣ ಅಂತ ಹೇಳಬಹುದು ಅಷ್ಟೇ.
- **ಸರಕಾರ ಬದಲಾಯಿಸಿದ ದೆಹಲಿ ಜನರ ಮೈಂಡ್ ಸೆಟ್‌ನ ನೀವು ಹೇಗೆ ವಿಶ್ಲೇಷಣೆ ಮಾಡ್ತೀರ?**
– ಅದರಲ್ಲಿ ವಿಶೇಷ ಏನಿಲ್ಲ, ಒಂದೇ ಪಕ್ಷದ ಸರಕಾರ ನೋಡಿದ ಜನರಿಗೆ ಬೇರೆ 'ಆಪ್'ಶನ್ ಬೇಕಿತ್ತು ಅಷ್ಟೇ.

(ಕಾಲ್ಪನಿಕ ಸಂದರ್ಶನ)

ಸಮಯಾಸಮಯ ಉಂಟೇ ಚಿತ್ರವತ್ಸಲ ನಿನಗೆ...?!

ರಸದೌತಣ
ಯಗಟಿ ರಘು ನಾಡಿಗ್
naadigru@gmail.com

ಮನಮಿಡಿಯುವ ಕಥೆ, ಕಣ್ಮನ ತಣಿಸುವ ದೃಶ್ಯಗಳು, ಕಿವಿಗಿಂಪಾದ ಹಾಡುಗಳು, ಅರ್ಥಪೂರ್ಣ ಸಂಭಾಷಣೆ ಇಂಥ ಸಾಕಷ್ಟು ಸಾಂಬಾರ ಪದಾರ್ಥಗಳಿಂದ ಹದವಾಗಿ ತಯಾರಾದ ಚಲನಚಿತ್ರವೆಂಬ ರುಚಿಕಟ್ಟಾದ ಭಕ್ಷ್ಯವನ್ನು ಬೆಳ್ಳಿತೆರೆಯ ಬಾಳೆಲೆಯ ಮೇಲೆ ದಿವಿನಾಗಿ ಬಡಿಸಬೇಕು. ಅದನ್ನು ಮನದುಂಬಿ ಚಪ್ಪರಿಸುವ ಪ್ರೇಕ್ಷಕ ಪ್ರಭುವಿನ ಶಿಳ್ಳೆ-ಚಪ್ಪಾಳೆಗಳು ಚಿತ್ರಮಂದಿರದಲ್ಲಿ ಅನುರಣಿಸಬೇಕು. ಆಗಲೇ, ಅದಕ್ಕೆ ಜೀವ ಕೊಟ್ಟವರ ಜೀವವೂ ತಂಪಾಗೋದು...

ಬಣ್ಣದ ಲೋಕದಲ್ಲಿ ಹಾಸುಹೊಕ್ಕಾಗಿರುವ ಈ ಅಲಿಖಿತ ನಿಯಮವನ್ನು ಸಂವಿಧಾನದಂತೆ ಗೌರವಿಸಿ, ವ್ರತದಂತೆ ಪಾಲಿಸಿ, ಶಿರದಲ್ಲಿ ಧರಿಸಿದವರಲ್ಲಿ ಎದ್ದುಕಾಣುವ ಹೆಸರು ನಿರ್ದೇಶಕ ಪುಟ್ಟಣ್ಣ ಕಣಗಾಲರದು. ತಾವು ನಿರ್ದೇಶಿಸ ಹೊರಟಿರುವ ಚಿತ್ರದ ಕಥೆ-ಚಿತ್ರಕಥೆ-ಸಂಭಾಷಣೆ, ಅದಕ್ಕೊಪ್ಪುವ ಪಾತ್ರಧಾರಿಗಳು ಮತ್ತು ತಾಂತ್ರಿಕ ವರ್ಗ, ಮಾಧುರ್ಯಭರಿತ ಗೀತೆಗಳು, ಚಿತ್ರೀಕರಣದ ವೇಳೆ ಯಾವುದೇ ತೊಡಕಾಗದಂತೆ ಕೈಹಿಡಿಯುವ ರಂಗಸಜ್ಜಿಕೆಗಳು ಮತ್ತು ಪರಿಕರಗಳು ಇವೆಲ್ಲವನ್ನೂ ಸಮರ್ಥವಾಗಿ ಸಜ್ಜುಗೊಳಿಸಿಕೊಂಡೇ ಚಿತ್ರೀಕರಣಕ್ಕೆ ಮುಂದಾಗುತ್ತಿದ್ದುದು ಪುಟ್ಟಣ್ಣನವರ ವೈಶಿಷ್ಟ್ಯ. ಈ ಪೈಕಿ ಯಾವುದೇ ಒಂದರ ಕೊರತೆಯಾದರೂ, ''ಶಾಲೆಗೆ ಹೋಗಲು ನಾ ಒಲ್ಲೆ'' ಎಂದು ರಚ್ಚೆಹಿಡಿಯುವ ಪುಟ್ಟಮಗುವಿನಂತೆ ಹಠ ಹಿಡಿಯುತ್ತಿದ್ದ ಚಿತ್ರಕರ್ಮಿ-ಚಿತ್ರಪ್ರೇಮಿ-ಚಿತ್ರವತ್ಸಲ ಅವರು! ಪುಟ್ಟಣ್ಣನವರಿಂದ ಚಿತ್ರ ಮಾಡಿಸಲು ಮುಂದಾಗುತ್ತಿದ್ದ ನಿರ್ಮಾಪಕರಿಗೂ ಇದು ಗೊತ್ತಿದ್ದ ಸಂಗತಿಯೇ ಆಗಿದ್ದರಿಂದ, ಅವರು ಕೇಳಿದ್ದನ್ನೆಲ್ಲ ಚಾಚೂ ತಪ್ಪದೆ ಒದಗಿಸುವೆಡೆಗೆ ಇನ್ನಿಲ್ಲದ ಗಮನ ನೀಡುತ್ತಿದ್ದರು ಎನ್ನಿ.

ಇಷ್ಟಾಗಿಯೂ, ಚಿತ್ರೀಕರಣದ ವೇಳೆ ಕೆಲವೊಮ್ಮೆ ಎಡವಟ್ಟುಗಳಾಗಿಬಿಡುತ್ತಿದ್ದವು. ನಿಗದಿತ ತಾಂತ್ರಿಕ ಪರಿಕರವೊಂದು ಕೈಕೊಟ್ಟಾಗ ಅಥವಾ ಕಲಾವಿದರೊಬ್ಬರು ಸಮಯಕ್ಕೆ ಸರಿಯಾಗಿ ಸೆಟ್‌ಗೆ ಬಾರದಿದ್ದಾಗ, ಅಪ್ಪಟ ವೀರಭದ್ರನೇ ಆಗಿಬಿಡುತ್ತಿದ್ದರು ಪುಟ್ಟಣ್ಣ. ಇಂಥ ಸಂದರ್ಭದಲ್ಲಿ ಕೆಲಸ ಮುಂದೆ ಸಾಗುವಂತಾಗುವಲ್ಲಿ ಅವರ ಕೈಹಿಡಿಯುತ್ತಿದ್ದುದು ಕಸುಬಿನಲ್ಲಿ ಅವರಿಗಿದ್ದ ಅಪಾರಜ್ಞಾನ ಮತ್ತು ಸಮಯಸ್ಫೂರ್ತಿ. ಅಂಥದೊಂದು ಸಂದರ್ಭವಿದು. ಬೆಂಗಳೂರಿನ ಹೊರವಲಯದ ಸಾವನದುರ್ಗದಲ್ಲಿ ಆ ಚಿತ್ರದ ಹೊರಾಂಗಣ ಚಿತ್ರೀಕರಣಕ್ಕೆ ಯೋಜಿಸಲಾಗಿತ್ತು. ಅಂತೆಯೇ ಚಿತ್ರತಂಡವು ಅಲ್ಲಿಗೆ ತೆರಳಿ ಸಿದ್ಧತೆಗಳನ್ನು ಮಾಡಿಕೊಳ್ಳಲಾರಂಭಿಸಿತು. ಮೇಕಪ್ ಮಾಡಿಕೊಂಡ ಜೂನಿಯರ್ ಕಲಾವಿದರು ತಂತಮ್ಮ ಭಾಗದ ಮಾತನ್ನೋ ಹಾವಭಾವವನ್ನೋ ಮರುಮನನ ಮಾಡಿಕೊಂಡು ದೃಶ್ಯಕ್ಕೆ ಅಣಿಯಾಗುತ್ತಿದ್ದರು. ಕ್ಯಾಮರಾ ಕೋನವನ್ನು ಸಂಯೋಜಿಸುವಲ್ಲಿ ಛಾಯಾಗ್ರಾಹಕರು ತಮ್ಮ ತಂಡದೊಡನೆ ವ್ಯಸ್ತರಾಗಿದ್ದರು. ಇಷ್ಟೆಲ್ಲಾ ಚಟುವಟಿಕೆಗಳು ಭರದಿಂದ ಸಾಗುತ್ತಿದ್ದರೂ ಪುಟ್ಟಣ್ಣ ಮಾತ್ರ ಕೆಂಡಗಣ್ಣೇಶ್ವರನಾಗಿದ್ದರು. ಕಾರಣ, ಅಂದಿನ ದೃಶ್ಯದಲ್ಲಿ ಕಾಣಿಸಿಕೊಳ್ಳಬೇಕಿದ್ದ ಮುಖ್ಯ ಪಾತ್ರಧಾರಿಯೇ ಚಿತ್ರೀಕರಣ ತಾಣಕ್ಕೆ ಬಂದಿರಲಿಲ್ಲ! ಕರೆ ಮಾಡಿ ಬೇಗ ಬರುವಂತೆ ತಿಳಿಸೋಣವೆಂದರೆ ಅದು ಈಗಿನಂತೆ ಲ್ಯಾಂಡ್‌ಲೈನ್ ಫೋನು-ಮೊಬೈಲುಗಳ ಜಮಾನ ಕೂಡ ಆಗಿರಲಿಲ್ಲ. ಹಾಗಂತ, ಅವರಿಗಾಗಿ ದಿನವೆಲ್ಲಾ ಕಾಯುತ್ತಾ ಕೂರುವಂತೆಯೂ ಇರಲಿಲ್ಲ. ಕಾರಣ, ಹೊರಾಂಗಣ ಚಿತ್ರೀಕರಣವಾದ್ದರಿಂದ ಸೂರ್ಯನ ಸಹಜ ಬೆಳಕಿನಲ್ಲೇ ದೃಶ್ಯವನ್ನು ಅಂದು ಚಿತ್ರೀಕರಿಸಲೇಬೇಕಿತ್ತು. ಸಮಯ ಬೇರೆ ಓಡುತ್ತಿತ್ತು. ಹೀಗಾಗಿ ಪುಟ್ಟಣ್ಣ ಕಣಗಾಲರು ಇನ್ನಿಲ್ಲದಂತೆ ಪೇಚಾಡುತ್ತಿದ್ದರು.

ಅಂದಿನ ಚಿತ್ರೀಕರಣವನ್ನು ವೀಕ್ಷಿಸಲು ಪುಟ್ಟಣ್ಣನವರ ಸೋದರ ಕಣಗಾಲ್ ಪ್ರಭಾಕರ ಶಾಸ್ತ್ರಿಯವರೂ ಅಲ್ಲಿಗೆ ಬಂದಿದ್ದರು. ಸೋದರರಿಬ್ಬರ ಸ್ವಭಾವದಲ್ಲಿ ಅಜಗಜಾಂತರ. ಪುಟ್ಟಣ್ಣ ಕೊಂಚ 'ಟೆನ್ಷನ್ ಪಾರ್ಟಿ' ಆದರೆ, ಪ್ರಭಾಕರ ಶಾಸ್ತ್ರಿಗಳು 'ಬಿಡುಬೀಸು ಮಾತಿನ' ನಿರಾಳಜೀವಿ, ಯಾವುದಕ್ಕೂ ತಲೆಕೆಡಿಸಿಕೊಳ್ಳುತ್ತಿರಲಿಲ್ಲ. ಹೊತ್ತು ಏರತೊಡಗಿದಂತೆ ಪುಟ್ಟಣ್ಣನವರ ಕೋಪವೂ ಏರುತ್ತಿದ್ದುದನ್ನು ಕಂಡ ಶಾಸ್ತ್ರಿಗಳು ತಾವು ಮೆಲ್ಲುತ್ತಿದ್ದ ತಾಂಬೂಲವನ್ನು ಎಡ ದವಡೆಗೆ ವರ್ಗಾಯಿಸಿ, ''ಆಗಿದ್ದು ಆಗಿಹೋಯ್ತು ಕಣೋ ಪುಟ್ಟಾ... ಬಿಟ್ಟುಬಿಡೋ.. ಸಿನಿಮಾ ಸೆಟ್ಟಿನಲ್ಲಿ ಹೀಗೆಲ್ಲಾ ರೌದ್ರಾವತಾರ ತಾಳಬೇಡವೋ. ನೋಡಿಲ್ಲಿ, ನಿನ್ನ ಅವತಾರ ಕಂಡು ಎಲ್ಲರೂ ಗಾಬರಿಯಾಗಿದ್ದಾರೆ. ಸ್ವಲ್ಪ ಸಮಾಧಾನ ತಂದ್ಕೊಳ್ಳಯ್ಯಾ...'' ಎಂದು ತಮ್ಮ ಸ್ವಭಾವ ಸಹಜ ದನಿಯಲ್ಲಿ ಹೇಳಿ ಪುಟ್ಟಣ್ಣನವರ ಬೆನ್ನು ಚಪ್ಪರಿಸಿದರು. ಅಣ್ಣನ ಅಷ್ಟೂ ಮಾತನ್ನೂ ಅದರ ಏರಿಳಿತವನ್ನೂ ಗಮನವಿಟ್ಟು ಕೇಳಿಸಿಕೊಳ್ಳುತ್ತಿದ್ದುದರ ಜತೆಗೆ ಅಣ್ಣನ ಮುಖಭಾವದ ಮೇಲೂ ಕಣ್ಣು ನೆಟ್ಟಿದ್ದ ಪುಟ್ಟಣ್ಣನವರಲ್ಲಿ ಸಮಯಸ್ಫೂರ್ತಿ

ಜಾಗೃತಗೊಂಡಿತು. ಕಾರ್ಮೋಡದಂತೆ ಕವಿದಿದ್ದ ಆತಂಕವು ಹಿಂಜಿದ ಹತ್ತಿಯಂತೆ ಹಾರಿಹೋಯಿತು. ಅಲ್ಲಿಯವರೆಗೂ ಧುಮುಗುಡುತ್ತಿದ್ದ ಪುಟ್ಟಣ್ಣನವರ ಮುಖದಲ್ಲಿ ಮಂದಹಾಸ ಜಿನುಗಿತು. ತಕ್ಷಣವೇ, ''ಎಲ್ಲಯ್ಯಾ ಆ ಮೇಕಪ್‌ಮನ್? ಬಾರಯ್ಯಾ ಇಲ್ಲಿ, ಪ್ರಭಣ್ಣನ ಮುಖಕ್ಕೆ ಬಣ್ಣ ಹಚ್ಚು. ಬೇಗ ಬೇಗ, ಸಮಯವಿಲ್ಲ'' ಎಂದು ತ್ವರೆ ಮಾಡತೊಡಗಿದರು. ಈ ಅನಿರೀಕ್ಷಿತ ಬೆಳವಣಿಗೆಯಿಂದ ಕಕ್ಕಾಬಿಕ್ಕಿಯಾಗಿದ್ದ ಪ್ರಭಾಕರ ಶಾಸ್ತ್ರಿಗಳು, ''ಲೇಯ್ ಪುಟ್ಟಾ, ಏನೋ ನಿಂದು ಹುಡುಗಾಟ? ನಂಗ್ಯಾಕೋ ಮೇಕಪ್ಪು?'' ಎಂದಿದ್ದಕ್ಕೆ ಪುಟ್ಟಣ್ಣನವರು, ''ಲೋ ಅಣ್ಣಾ, ಇವತ್ತು ಚಿತ್ರೀಕರಿಸಬೇಕಿದ್ದ ದೃಶ್ಯದ ಮುಖ್ಯಪಾತ್ರಧಾರಿಯೇ ಕೈಕೊಟ್ಟನಲ್ಲಾ ಎಂದು ತಲ್ಲಣಗೊಂಡಿದ್ದೆ. ಆದರೆ, ದೃಶ್ಯದಲ್ಲಿ ಆತ ಅಭಿವ್ಯಕ್ತಿಸಬೇಕಿದ್ದ ಭಾವವನ್ನೆಲ್ಲಾ ನೀನು ನನಗೆ ಹೇಳಿದ ಸಮಾಧಾನದ ಮಾತಲ್ಲೇ ಹೊಮ್ಮಿಸಿಬಿಟ್ಟೆಯಲ್ಲೋ?! ಪ್ರಭಣ್ಣಾ, ಹಚ್ಕೊಳ್ಳೋ ಬಣ್ಣಾನಾ... ಅವನಿಗಿಂತ ಉತ್ತಮವಾಗಿ ಅಭಿನಯಿಸಬಲ್ಲ ಒಬ್ಬ ಕಲಾವಿದನನ್ನ ಹೆಕ್ಕಿ, ಕಲಾಶಾರದೆಯ ಮಡಿಲಿಗೆ ಹಾಕಿದ್ದೀನಿ ಅನ್ನೋ ಹೆಮ್ಮೆ ಮತ್ತು ಸಂತೃಪ್ತಿ ಈ ಪುಟ್ಟಣ್ಣನಿಗೆ ದಕ್ಕೋ ಹಾಗೆ ಮನದುಂಬಿ ಅಭಿನಯಿಸೋ....'' ಎಂದು ಹೇಳಿ ಗದ್ಗದಿತರಾದರು. ಆ ಚಿತ್ರವೇ ಕಲ್ಪನಾ ದ್ವಿಪಾತ್ರದಲ್ಲಿ ಅಭಿನಯಿಸಿದ 'ಕಪ್ಪು-ಬಿಳುಪು'. ಅಂದು ಸಾವನದುರ್ಗದಲ್ಲಿ ಚಿತ್ರೀಕರಣವಾಗಬೇಕಿದ್ದುದು, ''ಇಂದಿನ ಹಿಂದೂ ದೇಶದ ನವಯುವಕರೇ, ನವಯುವತಿಯರೇ; ಯಾವುದು ಕಪ್ಪು, ಯಾವುದು ಬಿಳುಪು, ಯಾವುದು ಸತ್ಯ, ಯಾವುದು ಮಿಥ್ಯ...'' ಎಂಬ ಬೋಧಪ್ರದ ಗೀತೆ!

ಅಲ್ಲಿಯವರೆಗೂ ಕಥೆ-ಚಿತ್ರಕಥೆ-ಸಂಭಾಷಣೆ-ಹಾಡು ಇತ್ಯಾದಿಗಳನ್ನು ಬರೆದುಕೊಟ್ಟು ಚಲನಚಿತ್ರಗಳಿಗೆ ರಂಗು ತುಂಬಿದ್ದ ಕಣಗಾಲ್ ಪ್ರಭಾಕರ ಶಾಸ್ತ್ರಿಗಳು ಅಂದು ತಮ್ಮನ ಆಗ್ರಹಕ್ಕೆ ಮನಸೋತು ಮುಖಕ್ಕೆ ರಂಗು ಮೆತ್ತಿಕೊಳ್ಳಬೇಕಾಯಿತು! ತುಂಡು ಪಂಚೆ, ಹೆಗಲ ಮೇಲೊಂದು ಕಂಬಳಿ, ಕೊರಳಲ್ಲಿ ಮಣಿಮಾಲೆ, ಕೈಯಲ್ಲೊಂದು ಕೋಲು ಹಿಡಿದಿರುವ, ಮೇಲ್ನೋಟಕ್ಕೆ ಹುಚ್ಚನಂತೆ ಕಾಣುವ ವ್ಯಕ್ತಿಯ ಗೆಟಪ್ ಅದು. ಪಿಕ್‌ನಿಕ್‌ಗೆಂದು ಬಂದ ಯುವಕ-ಯುವತಿಯರ ತಂಡಕ್ಕೆ ಬುದ್ಧಿವಾದ ಹೇಳಲು ಮುಂದಾಗುವ ಈ ಪಾತ್ರವನ್ನು ಅವರೆಲ್ಲರೂ 'ಹುಚ್ಚ' ಎಂಬಂತೆ ನಡೆಸಿಕೊಂಡು ಗೇಲಿಮಾಡುತ್ತಾರೆಯೇ ವಿನಾ, ಅವನೊಳಗಿನ 'ಅವಧೂತ'ನನ್ನು ಗುರುತಿಸುವುದಿಲ್ಲ. ಈ ಹಾಡಿನ ಒಂದು ಭಾಗದಲ್ಲಂತೂ ದುರಹಂಕಾರಿ ಆಧುನಿಕ ಯುವತಿಯ ಪಾತ್ರಧಾರಿ ಕಲ್ಪನಾ, ಈ ವ್ಯಕ್ತಿಯ ಅವಧೂತತ್ವವನ್ನು ಗುರುತಿಸದೆ ಕಾಲಿನಿಂದ ಚಪ್ಪಲಿ ಬಿಚ್ಚಿ ತೋರಿಸುತ್ತಾರೆ. ಆಗ ಅವರೆಡೆಗೆ ಸಾಗುವ ಈ ಬುದ್ಧಿಮಾತಿನ ಆಸಾಮಿ, ಚಪ್ಪಲಿ ಹಿಡಿದಿದ್ದ ಆಕೆಯ ಕೈಯನ್ನು ಸ್ವತಃ ನಿಧಾನವಾಗಿ ಕೆಳಗಿಳಿಸಿ 'ಇದು ಸಲ್ಲ' ಎಂದು ಕಣ್ಣಲ್ಲೇ ಮಾತನಾಡುತ್ತಾರೆ. ಈ ಹಾಡಿನ ಅಷ್ಟೂ ಭಾಗದಲ್ಲಿ ಕಣಗಾಲ್ ಪ್ರಭಾಕರ ಶಾಸ್ತ್ರಿಯವರು ನೀಡಿರುವ ಅಭಿನಯ 'ಮೈಝುಂ' ಎನ್ನಿಸುವಂತಿದೆ ಎಂದರೆ ಅತಿಶಯೋಕ್ತಿಯಲ್ಲ. ಮುಖಕ್ಕೆ ಬಣ್ಣ ಹಚ್ಚಿಕೊಂಡಿದ್ದು ಅದೇ ಮೊದಲ ಬಾರಿಗೆ ಆಗಿದ್ದರೂ, ಅವರು ಪಾತ್ರದಲ್ಲಿ ಲೀನವಾಗಿರುವ ಬಗೆ, ಚಿಮ್ಮಿಸಿರುವ ದೇಹಭಾಷೆ, ಸಾಹಿತ್ಯದಲ್ಲಿನ ಆಶಯವನ್ನು ಹೊಮ್ಮಿಸುವಾಗ ಮುಖದ ಗೆರೆಗಳಿಗೆ ಒತ್ತುನೀಡಿರುವ ಪರಿ ಚಿತ್ರರಸಿಕರ ಮನಗೆಲ್ಲುತ್ತವೆ. ಒಂದು ಹಂತದಲ್ಲಂತೂ, ಈ ಹಾಡನ್ನು ಹಾಡಿರುವುದು ಗಾಯಕ ಪಿ.ಬಿ.ಶ್ರೀನಿವಾಸ್ ಅವರಲ್ಲ, ಸ್ವತಃ ಕಣಗಾಲ್ ಪ್ರಭಾಕರ ಶಾಸ್ತ್ರಿಗಳೇ ಎಂದು ನೋಡುಗರು ಅಂದುಕೊಳ್ಳುವಷ್ಟರ ಮಟ್ಟಿಗೆ ಹಾಡಿನ 'ಶಾರೀರ'ಕ್ಕೆ ತಮ್ಮ 'ಶರೀರ'ವನ್ನು ಅವರು ಒಗ್ಗಿಸಿದ್ದಾರೆ, ಪಾತ್ರದಲ್ಲಿ ಬೆರೆತುಹೋಗಿದ್ದಾರೆ. ಶಾಸ್ತ್ರಿಗಳ ನಟನಾ ವೈಭವದ ನಡುನಡುವೆ ಆದಿಗುರು ಶ್ರೀ ಶಂಕರಾಚಾರ್ಯರು, ಸ್ವಾಮಿ ವಿವೇಕಾನಂದರು, ಸುಭಾಷ್ ಚಂದ್ರ ಬೋಸರ ಛಾಯಾರೂಪಗಳು ಕಾಣಿಸಿಕೊಂಡು ತಂತಮ್ಮ ಸುಪ್ರಸಿದ್ಧ ಉದ್ಘೋಷಗಳನ್ನು ಮೊಳಗಿಸಿ, ಯುವಪೀಳಿಗೆಯು ಸಾಗಬೇಕಿರುವ ಹಾದಿಗೆ ಸ್ಪಷ್ಟತೆಯನ್ನು ತೋರುತ್ತವೆ.

'ಕಪ್ಪು-ಬಿಳುಪು' ಚಿತ್ರ ತೆರೆಕಂಡಿದ್ದು 1969ರಲ್ಲಿ. ಆದರೆ, ಮೇಲೆ ಉಲ್ಲೇಖಿಸಿರುವ ಹಾಡಿನ ಆಶಯ, ಅದರಲ್ಲಿನ ಶಾಸ್ತ್ರಿಗಳ ಅಭಿನಯ ಇಂದಿಗೂ ಸಲ್ಲುವಷ್ಟರ ಮಟ್ಟಿಗೆ ಹಸಿರಾಗಿವೆ. ಅಂದು ಸದರಿ ಹಾಡಿನ ಚಿತ್ರೀಕರಣದಲ್ಲಿ ವಾಸ್ತವವಾಗಿ ಕಾಣಿಸಿಕೊಳ್ಳಬೇಕಿದ್ದ ಕಲಾವಿದ ಬರಲಿಲ್ಲ ಎಂಬ ಕಾರಣಕ್ಕೆ ಪುಟ್ಟಣ್ಣನವರು ಚಿತ್ರೀಕರಣವನ್ನು ಮುಂದೂಡಿ ಮತ್ತೊಂದು ದಿನದಂದು ಚಿತ್ರೀಕರಿಸಿದ್ದಿದ್ದರೆ, ಇಂಥದೇ ಭಾವತೀವ್ರತೆಯ ಫಲಿತಾಂಶ ದಕ್ಕುತ್ತಿತ್ತೇ? ಈ ಪ್ರಶ್ನೆಗೆ ಉತ್ತರಿಸಲಾಗದು. ಆದರೆ, 'ಸರಿಯಾದ ಸಮಯಕ್ಕೆ ಸರಿಯಾದ ತೀರ್ಮಾನ' ಎಂಬ ಮಾತಿಗೆ ದ್ಯೋತಕವಾಗಿ ಪುಟ್ಟಣ್ಣನವರು ಮೆರೆದ ಸಮಯಸ್ಫೂರ್ತಿಯು ''ಇಂದಿನ ಹಿಂದೂ ದೇಶದ'' ಗೀತೆಯ ದೃಶ್ಯಾನುಭೂತಿಯನ್ನು ಸವಿಯುವ ವಿಷಯದಲ್ಲಿ ನೋಡುಗರಿಗೆ ಭರ್ಜರಿ ರಸದೌತಣವನ್ನೇ ನೀಡಿತು, ಒಂದು ಸಕಾರಾತ್ಮಕ ಟ್ರೆಂಡ್ ಅನ್ನೇ ಸೃಷ್ಟಿಸಿತು ಎಂಬುದಂತೂ ನಿಜ. ವೈಯಕ್ತಿಕ ಅಥವಾ ವೃತ್ತಿ ಬದುಕಿನಲ್ಲಿ ಏನೋ ಕೊರತೆಯಾದಾಗ ಅದನ್ನೇ ನೆನೆದು ಗೋಳಿಡುತ್ತ ಕೂರುವ ಬದಲು, ಆ ಕೊರತೆಯನ್ನೇ ಒಂದು ಅವಕಾಶವಾಗಿ ಮಾರ್ಪಡಿಸಿಕೊಳ್ಳುವ ಛಲಕ್ಕೂ, ಸಾಮರ್ಥ್ಯದ ಅಭಿವ್ಯಕ್ತಿಯ ಅಸ್ತ್ರ ಮಾಡಿಕೊಳ್ಳುವ ಕೌಶಲಕ್ಕೂ ಈ ಸನ್ನಿವೇಶ ಸಾಕ್ಷಿಯಾಗಬಲ್ಲದು.

ಪುಟ್ಟಣ್ಣನವರು ಇಂಥ 'ಸಮಯಸ್ಫೂರ್ತಿ'ಯನ್ನು ಸಾಕಷ್ಟು ಸಂದರ್ಭದಲ್ಲಿ ಮೆರೆದದ್ದಿದೆ. ಸದ್ಯಕ್ಕೆ 'ಬೆಳ್ಳಿಮೋಡ' ಚಿತ್ರದ ಅಂಥ ಸನ್ನಿವೇಶವೊಂದನ್ನು ಅವಲೋಕಿಸೋಣ. ಕಲ್ಯಾಣ್ ಕುಮಾರ್ ಮತ್ತು ಕಲ್ಪನಾ ಈ ಚಿತ್ರದ ಪ್ರಮುಖ ಪಾತ್ರಧಾರಿಗಳು. ವಿದೇಶದಿಂದ ಆಗಮಿಸಿದ ಕಥಾನಾಯಕ ಪಾತ್ರಧಾರಿ ಕಲ್ಯಾಣ್ ಅವರನ್ನು ಭೇಟಿಯಾಗಿ ಮಾತಾಡಲು ಕಲ್ಪನಾ ಅವರು ಬೆಟ್ಟದ ತುದಿಗೆ ತೆರಳುವ ಸನ್ನಿವೇಶವದು. ಪಾತ್ರಧಾರಿಗಳು ದೃಶ್ಯದ ಸಂಭಾಷಣೆಯನ್ನು ಉರುಹೊಡೆದಿದ್ದು ಆಯ್ತು, ಕ್ಯಾಮರಾ ಕೋನವನ್ನು ಫೈಸಲ್ ಮಾಡಿದ್ದೂ ಆಯ್ತು. ಆದರೂ ಪುಟ್ಟಣ್ಣನವರಿಗೆ ಸಮಾಧಾನವಾಗುತ್ತಿಲ್ಲ. 'ಒಬ್ಬ ಪ್ರೇಕ್ಷಕನಾಗಿ ಈ ದೃಶ್ಯದ ವೀಕ್ಷಣೆಯಲ್ಲಿ ಸಿಗಬೇಕಾದ ಮಜಾ ಸಿಗುತ್ತಿಲ್ವಲ್ಲಾ' ಅಂತ ಒಬ್ಬರೇ ಕೈ ಕೈ ಹಿಸುಕಿಕೊಳ್ಳುತ್ತಿದ್ದರು. ನೋಡುವಷ್ಟು ಹೊತ್ತು ನೋಡಿ ಅವರೆಡೆಗೆ ಸಾಗಿದರು ಛಾಯಾಗ್ರಾಹಕ ಆರ್.ಎನ್.ಕೃಷ್ಣಪ್ರಸಾದ್ (ಇವರು ಖ್ಯಾತ ನಟ-ನಿರ್ದೇಶಕ ಆರ್.ನಾಗೇಂದ್ರ ರಾಯರ ಮಗ ಹಾಗೂ ಖ್ಯಾತ ಗೀತಸಾಹಿತಿ ಆರ್.ಎನ್.ಜಯಗೋಪಾಲ್‌ರ ಸೋದರ). ''ಏನಾಯ್ತು? ಏನ್ ನಿಮ್ ಕಥೆ?'' ಅಂತ ಕೃಷ್ಣಪ್ರಸಾದ್ ಪ್ರಶ್ನಿಸುತ್ತಿದ್ದರೆ, ಪುಟ್ಟಣ್ಣನವರು ಉತ್ತರಿಸುವ ಬದಲು ಕೃಷ್ಣಪ್ರಸಾದರ ತಲೆಯ ಕಡೆಗೇ ನೋಡುತ್ತಿದ್ದರು. ಕೆಲ ಕ್ಷಣದ ನಂತರ ಕೃಷ್ಣಪ್ರಸಾದರ ತಲೆಗೆ ಕೈಹಾಕಿ ಅವರು ಧರಿಸಿದ್ದ 'ಕ್ಯಾಪ್' ಅನ್ನು ಎಗರಿಸಿಬಿಟ್ಟರು... ನಂತರ ತಾವು ಧರಿಸಿದ್ದ ಬಿಳಿಬಣ್ಣದ ಕೋಟ್ ಅನ್ನು ಬಿಚ್ಚಿಬಿಟ್ಟರು... ಎರಡನ್ನೂ ಹಿಡಿದುಕೊಂಡು ಎಳೇಮಗುವಿನ ಹಾಗೆ ನಟ ಕಲ್ಯಾಣ್ ಕುಮಾರ್‌ರತ್ತ ಓಡಿದರು. ಚಿತ್ರತಂಡ ಅವಾಕ್ಕಾಗಿ ನೋಡುತ್ತಲೇ ಇತ್ತು. ಆ ಕೋಟು ಮತ್ತು ಕ್ಯಾಪ್ ಅನ್ನು ತೊಡಿಸುತ್ತಿದ್ದಂತೆ, ಕಲ್ಯಾಣ್‌ರ ಮುಖದಲ್ಲಿ 'ಫಾರಿನ್ ರಿಟರ್ನ್ಡ್' ಆಸಾಮಿಯ ಕಳೆ! ಪುಟ್ಟಣ್ಣನವರ ಸಮಯಸ್ಫೂರ್ತಿಯಿಂದಾಗಿ ಸ್ಥಳದಲ್ಲೇ 'ಫಾರಿನ್ ಮಾಲು' ಸೃಷ್ಟಿಯಾಗಿತ್ತು!!

ಈ ಕಾರಣಕ್ಕೇ ಅಲ್ಲವೇ ಪುಟ್ಟಣ್ಣನವರು ನಮಗಿಷ್ಟವಾಗೋದು?

ನೆಟ್ ಪಿಕ್ಸ್

ಖೇಮು ಒಂದು ಗಿಣಿ ಅಂಗಡಿಗೆ ಹೋದ. ಪಂಜರದಲ್ಲಿರೋ ಎರಡು ಮಾತಾಡೋ ಗಿಣಿಗಳನ್ನು ನೋಡಿದ. ತುಂಬಾ ಇಷ್ಟ ಆಯ್ತು ಅವನಿಗೆ. ಆ ಎರಡೂ ಹೆಣ್ಣು ಗಿಣಿಗಳಾಗಿದ್ವು. ಅವನ್ನು ಮಾತಾಡಿಸೋಕೆ ಅಂತ, ''ಹಾಯ್, ಹ್ಯಾವಿಂಗ್ ಫನ್?'' ಅಂತ ಕೇಳಿದ ಖೇಮು. ಅದಕ್ಕೆ ಆ ಗಿಣಿಗಳು, ''ಲೋ ಮಚ್ಚಾ, ನಾವಿಲ್ಲಿ ನಮಗೆ ಬಾಯ್‌ಫ್ರೆಂಡ್ ಇಲ್ಲ ಅಂತ ಬರಗೆಟ್ಟು ಕೂತಿದ್ದೀವಿ, ಹ್ಯಾವಿಂಗ್ ಫನ್ ಅಂತ ಕೇಳ್ತೀಯಾ, ನಿನ್ ಮುಖ ಮುಚ್ಚಾ'' ಅಂತ ಬೈದ್ವು. ಅಂಗಡಿಯವನು ''ಬ್ಯಾಡ ಸರ್, ಅವು ತುಂಬಾ ಮಾಡರ್ನ್ ಗಿಣಿಗಳು, ಸುಮ್ನೆ ಏನೇನೋ ತರ್ಲೆ ಮಾತಾಡ್ತವೆ'' ಅಂತ ಹೇಳ್ದ. ಆದ್ರೂ ಖೇಮು ಬಿಡಲಿಲ್ಲ. ಇಲ್ಲ ನಂಗೇ ಅವೇ ಬೇಕು ಅಂತ ಹಠ ಹಿಡಿದು ಗಿಣಿಗಳನ್ನು ಖರೀದಿಸಿ ಮನೆಗೆ ತಂದು ಪಂಜರದಲ್ಲಿಟ್ಟು ನೇತುಹಾಕಿದ. ಆದ್ರೆ ಆ ಗಿಣಿಗಳು ಯಾವಾಗ್ಲೂ ''ಅಯ್ಯೋ, ನಮಗೆ ಈ ಜನ್ಮದಲ್ಲಿ ಬಾಯ್‌ಫ್ರೆಂಡ್ಸ್ ಸಿಗಲ್ಲ, ಇವ್ರ್ ನೋಡಿದ್ರೆ ನಮ್ಮನ್ನ ಇಲ್ಲಿ ತಂದು ಕೂಡಿಹಾಕಿದ್ದಾರೆ, ನಮ್ಮ ಹಣೆಬರಹ'' ಅಂತ ವಟವಟ ಅಂತಾನೇ ಇದ್ವು. ಖೇಮುಗೂ ದಿನಾ ಇದನ್ನೇ ನೋಡಿ ನೋಡಿ ಸಾಕಾಯ್ತು. ಫ್ರೆಂಡ್ ಹತ್ರ ವಿಷ್ಯ ಹೇಳಿದ. ಅವನು, 'ಬಾ ನನ್ನ ಜತೆ' ಅಂತ ಒಂದು ಆಶ್ರಮಕ್ಕೆ ಕರ್ಕೊಂಡು ಹೋದ. ಅಲ್ಲಿನ ಸ್ವಾಮೀಜಿಗೆ ಸಮಸ್ಯೆ ಹೇಳಿಕೊಂಡ ಖೇಮು. ಅದಕ್ಕೆ ಸ್ವಾಮೀಜಿ, ''ನೋಡಪ್ಪಾ, ಮನುಷ್ಯ ಆಗ್ಲಿ ಗಿಣಿ ಆಗ್ಲಿ, ಅವು ಬೆಳೆದಿರೋ ವಾತಾವರಣದ ಮೇಲೆ ಅವರ ವರ್ತನೆ ಡಿಪೆಂಡ್ ಆಗುತ್ತೆ. ಅದೇ ನಮ್ಮ ಆಶ್ರಮದಲ್ಲೂ ಎರಡು ಗಂಡು ಗಿಣಿ ಇವೆ. ಗಂಡು ಗಿಣಿಗಳಾದ್ರೂ 'ಗರ್ಲ್‌ಫ್ರೆಂಡ್ ಬೇಕು' ಅನ್ನದೆ ಯಾವಾಗ ನೋಡಿದರೂ ಮಾಲೆ ಹಿಡ್ಕೊಂಡು ಜಪ ಮಾಡ್ತಾ ಪ್ರಾರ್ಥನೆ ಮಾಡ್ತಾ ಇರ್ತವೆ. ಅವುಗಳ ಜತೆ ನಿನ್ನ ಗಿಣಿಗಳನ್ನು ತಂದು ಬಿಡು. ತಾವಾಗೇ ಸರಿಹೋಗ್ತವೆ'' ಅಂದ್ರು. ಸರಿ ಅಂತ ಹೇಳಿ ಖೇಮು ತನ್ನ ಗಿಣಿಗಳನ್ನು ತಂದು ಆಶ್ರಮದ ಗಿಣಿಗಳ ಜತೆ ಬಿಟ್ಟ. ಆಶ್ರಮದ ಗಿಣಿಗಳನ್ನು ನೋಡಿ, ಖೇಮು ಮನೆ ಗಿಣಿಗಳು, ''ನಾವಿಲ್ಲಿ ಬಾಯ್ ಫ್ರೆಂಡ್ ಇಲ್ಲ ಅಂತ ಸಾಯ್ತಾ ಇದ್ರೆ, ಈ ನನ್ಮಕ್ಕಳು ಜಪ ಮಾಡ್ತಾ ಕುಂತವ್ರೆ'' ಅಂತ ಎಂದಿನಂತೆ ಬೈಕೊಂಡ್ವು. ಅದನ್ನು ಕೇಳಿದ ಆಶ್ರಮದ ಒಂದು ಗಿಣಿ ತನ್ನ ಕೈಯಲ್ಲಿದ್ದ ಜಪಮಾಲೆಯನ್ನು ಪಕ್ಕಕ್ಕಿಡ್ತಾ ಇನ್ನೊಂದು ಗಿಣಿಗೆ ಹೇಳಿತು, ''ಬ್ರದರ್, ಕೊನೆಗೂ ದೇವರು ನಮ್ಮ ಪ್ರಾರ್ಥನೆಗೆ ಪ್ರತಿಫಲ ಕೊಟ್ಟ''.

ಲೈನ್ ಮ್ಯಾನ್

- **ಕೂಲ್ ಕಸ್ಟಮರ್ ಅಂದ್ರೆ ಯಾರು?**
– ಐಸ್‌ಕ್ರೀಮ್ ಅಂಗಡಿಯ ಗ್ರಾಹಕ
- **ಸಿನಿಮಾ ರಂಗದಲ್ಲಿ ಸಂಭಾವಿತರು ಅಂದ್ರೆ ಯಾರು?**
– ಸಂಭಾವನೆ ಕೇಳದೇ ಇರೋರು
- **ಸಿಗರೇಟು ಸೇದೋದನ್ನ ಬಿಡಲಾಗದವನಿಗೆ ಏನು ಹೇಳಬೇಕು?**
– 'ಸುಟ್ಟು' ಗುಣ ಸುಟ್ಟರೂ ಹೋಗಲ್ಲ
- **ಎಣ್ಣೆ ಹೊಡೆದು ಮಾಡೋ ವಿಡಿಯೋ ಕಾಲ್**
– 'ಝೂಮ್' ಕಾಲ್
- **ಸೋಡಾ ಕುಡಿಯೋಕೆ ಕಂಪನಿ ಕೊಡೋ 'ಗೆಳೆಯ'**
– ಸೋಡಾ 'ಬಡ್ಡಿ'
- **ಕೆಲವರು ಸ್ವಿಮ್ಮಿಂಗ್ ಪೂಲ್‌ನಲ್ಲಿ ರಬ್ಬರ್ ಟ್ಯೂಬ್‌ನಲ್ಲಿ ಕುಳಿತು ಕುಡಿಯೋದು ಯಾಕೆ?**
– ತೇಲುತ್ತಾ ತೇಲೋಕೆ
- **ಇಬ್ಬನಿ ಬಿದ್ದ ಕಾರಣಕ್ಕೆ ಕ್ರಿಕೆಟ್ ಮ್ಯಾಚ್ ಸೋತ ಕ್ಯಾಪ್ಟನ್ ಏನು ಹೇಳ್ತಾನೆ?**
– We couldn't win due to dew
- **ಸಣ್ಣ ಮಕ್ಕಳೂ ಕೋಡಿಂಗ್ ಕಲಿಯುತ್ತಿರೋ ಈ ಸಮಯದಲ್ಲಿ ಅತಿಬುದ್ಧಿವಂತರಂತೆ ಮಾತಾಡೋರನ್ನ ಏನಂತ ಬಯ್ತಾರೆ?**
– ನಿಂಗೇನ್ ಎರಡ್ ಕೋಡಿದೆಯಾ?
- **ಭಾರತದಲ್ಲೇ ನಾವೇ ತಯಾರಿಸಿದ ಆಪ್‌ಗಳನ್ನ ಏನೆನ್ನಬಹುದು?**
– ಅಪ್ ನೇ ಆಪ್
- **ಬಹಳ ವರ್ಷಗಳವರೆಗೆ ರಸ್ತೆಯಲ್ಲಿ ಓಡಾಡಿ ಸವೆದುಹೋಗಿರುವ ಕಾರಿನ ಟೈರ್**
– ಟೈರ್ಡ್

ಅಚ್ಚುಕಟ್ಟು ಪ್ರದೇಶ
RNI: KARKAN/2016/67914
VISHVAVANI, Printed & Published by: VISHWESHWAR BHAT, On behalf of Vishwakshara Media Private Ltd., No.1687, Nisarga Serenity, Complex Road, Near Raghavendra Swamy Temple, BEML Layout, 5th Stage, Rajarajeshwarinagar, Bangalore.560098. PH: 6362393988/6362393942 Printed MNS Printers PVT.Ltd,345/4,Bhatrahalli,Near KR Puram RTO, Old Madras Road,Bengalore 560049
Editor-in Chief : Vishweshwar Bhat. ಪ್ರಧಾನ ಸಂಪಾದಕ: ವಿಶ್ವೇಶ್ವರ ಭಟ್
CopyRight: Vishwakshara Media Private Ltd. All rights reserved. Reproduction in any manner electronic or otherwise, in whole or in part, without prior written permission is prohibited.
ನಮ್ಮ ಆವೃತ್ತಿಗಳು: ಬೆಂಗಳೂರು, ಹುಬ್ಬಳ್ಳಿ ಮಂಗಳೂರು, ಬೆಳಗಾವಿ ಕಲಬುರಗಿ, ದಾವಣಗೆರೆ
Vol:9, Issue: 26

ಸಮಾಚಾರ ಸಣ್ಣದಲ್ಲ

ಬೋನಿಗೆ ಬಿದ್ದ ಚಿರತೆ

ಹಾವೇರಿ: ಕುರಿದೊಡ್ಡಿಯಲ್ಲಿದ್ದ ಆಡು ಮತ್ತು ಕುರಿಗಳ ಮೇಲೆ ದಾಳಿ ಮಾಡುತ್ತಿದ್ದ ಚಿರತೆಯನ್ನು ಹಿಡಿಯುವಲ್ಲಿ ಹಾವೇರಿ ಜಿಲ್ಲೆ ರಾಣೆಬೆನ್ನೂರು ಅರಣ್ಯ ಇಲಾಖೆಯ ಸಿಬ್ಬಂದಿ ಯಶಸ್ವಿಯಾಗಿದ್ದಾರೆ. ರಾಣೆಬೆನ್ನೂರು ತಾಲೂಕಿನ ರಾಹುನತಕಟ್ಟಿ ಬಳಿ ಬೋನು ಇರಿಸಿ ಚಿರತೆಯನ್ನು ಸೆರೆ ಹಿಡಿಯಲಾಗಿದೆ. ಮಡ್ಲೇರಿ ಗ್ರಾಮದ ಭರಮಪ್ಪ ಮೈಲಪ್ಪ ದೊಡ್ಡಬಡ್ಡಾಳರ ಮತ್ತು ತಿರುಕಪ್ಪ ಹುಚ್ಚಪ್ಪ ದೊಡ್ಡಬಡ್ಡಾಳರ ಅವರಿಗೆ ಸೇರಿದ ಕುರಿದೊಡ್ಡಿಯಲ್ಲಿದ್ದ 50ಕ್ಕೂ ಹೆಚ್ಚು ಆಡು ಮತ್ತು ಕುರಿಗಳ ಮೇಲೆ ಈ ಚಿರತೆ ದಾಳಿ ಮಾಡಿತ್ತು. ಚಿರತೆ ದಾಳಿಯಿಂದ ಕುರಿಗಳು ಸಾವನ್ನಪ್ಪಿದ್ದವು. ಆಗ ಚಿರತೆ ಸೆರೆ ಹಿಡಿಯಲು ಬೋನ್ ಇಡಲಾಗಿತ್ತು. ಆದರೆ ಚಿರತೆ ಬೋನಿಗೆ ಬಿದ್ದಿರಲಿಲ್ಲ. ಇದರಿಂದ ಕುರಿಗಾಹಿಗಳಿಗೆ ಆತಂಕ ಉಂಟಾಗಿತ್ತು. ಈಗ ಚಿರತೆ ಸೆರೆಯಾಗಿದ್ದು, ಅರಣ್ಯ ಇಲಾಖೆಯ ಸಿಬ್ಬಂದಿ ದೂರದ ಅರಣ್ಯಕ್ಕೆ ಚಿರತೆಯನ್ನು ಬಿಟ್ಟು ಬಂದಿದ್ದಾರೆ. ಚಿರತೆ ಕಾಟದಿಂದ ಬೇಸತ್ತಿದ ಜನರು ಇದೀಗ ನಿಟ್ಟುಸಿರು ಬಿಟ್ಟಿದ್ದಾರೆ. ಅರಣ್ಯಾಧಿಕಾರಿಗಳ ಕಾರ್ಯಕ್ಕೆ ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

ಬಸ್- ಬೈಕ್ ನಡುವೆ ಡಿಕ್ಕಿ: ಇಬ್ಬರ ಸಾವು

ತುಮಕೂರು: ಕೆಎಸ್ಆರ್‌ಟಿಸಿ ಬಸ್ ಹಾಗೂ ಬೈಕ್ ನಡುವೆ ಭೀಕರ ಅಪಘಾತ ನಡೆದ ಪರಿಣಾಮ ಬೈಕ್ ಸವಾರರಿಬ್ಬರು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ತುಮಕೂರು ಜಿಲ್ಲೆ ತಿಪಟೂರು ತಾಲೂಕಿನ ನೊಣವಿನಕೆರೆ ಬಳಿ ಅಲ್ಬೂರಿನಲ್ಲಿ ನಡೆದಿದೆ. ಬಿದರೆಕೆರೆ ಗ್ರಾಮದ ಯೋಗೇಶ್(23), ದಯಾನಂದ್(25) ಮೃತ ದುರ್ದೈವಿಗಳು. ಶುಕ್ರವಾರ ರಾತ್ರಿ ಯೋಗೇಶ್ ಮತ್ತು ದಯಾನಂದ್ ಒಂದೇ ಬೈಕ್‌ನಲ್ಲಿ ಬಿದರೆಕೆರೆ ಕಡೆಯಿಂದ ತುರುವೇಕೆರೆ ಕಡೆಗೆ ತೆರಳುತ್ತಿದ್ದರು. ಈ ವೇಳೆ ತುರುವೇಕೆರೆ ಕಡೆಯಿಂದ ಬಂದ ಕೆಎಸ್‌ಆರ್‌ಟಿಸಿ ಬಸ್ ಬೈಕ್‌ಗೆ ಡಿಕ್ಕಿಯಾಗಿದೆ. ಡಿಕ್ಕಿಯ ರಭಸಕ್ಕೆ ಬೈಕ್‌ನಲ್ಲಿದ್ದ ಇಬ್ಬರು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ಮೃತರು ಬೈಕ್ ಗ್ಯಾರೇಜ್‌ನಲ್ಲಿ ಕೆಲಸ ಮಾಡಿತ್ತಿದ್ದರು ಎನ್ನಲಾಗಿದೆ. ಘಟನಾ ಸ್ಥಳಕ್ಕೆ ನೊಣವಿನಕೆರೆ ಪೊಲೀಸರು ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ. ಘಟನೆ ಸಂಬಂಧ ನೊಣವಿನಕೆರೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಹಿರಿಯ ಪತ್ರಕರ್ತ ಅಶೋಕ್ ಕುಮಾರ್ ನಿಧನ

ಹಾಸನ: ಹಿರಿಯ ಪತ್ರಕರ್ತ ಹಾಗೂ ಗೊಮ್ಮಟವಾಣಿ ಸಂಪಾದಕ ಶ್ರವಣಬೆಳಗೊಳದ ಎಸ್.ಎನ್. ಅಶೋಕ್ ಕುಮಾರ್ (80) ಅವರು ಹಾಸನದ ರಾಜೀವ್ ಆಸ್ಪತ್ರೆಯಲ್ಲಿ ನಿಧನರಾದರು. ಪತ್ನಿ, ಡಾ.ನಿತಿನ್ ಮತ್ತು ಸಚಿನ್ ಸೇರಿದಂತೆ ಮೂವರು ಮಕ್ಕಳನ್ನು ಅಗಲಿದ್ದಾರೆ. ಶನಿವಾರ ಶ್ರವಣಬೆಳಗೊಳದಲ್ಲಿ ಅಂತ್ಯಕ್ರಿಯೆ ನೆರವೇರಿತು.

ಕೆಯುಡಬ್ಲ್ಯುಜೆ ಸಂತಾಪ: ಹಿರಿಯ ಪತ್ರಕರ್ತ ಎಸ್.ಎನ್.ಅಶೋಕ್ ಕುಮಾರ್ ನಿಧನಕ್ಕೆ ಕರ್ನಾಟಕ ಕಾರ್ಯನಿರತ ಪತ್ರಕರ್ತರ ಸಂಘ (ಕೆಯುಡಬ್ಲ್ಯುಜೆ) ಸಂತಾಪ ವ್ಯಕ್ತಪಡಿಸಿದೆ. ಅಶೋಕ್ ಕುಮಾರ್ ಮಾರ್ಗದರ್ಶನದಲ್ಲಿ ಶ್ರವಣಬೆಳಗೊಳದಲ್ಲಿ ಜಿಲ್ಲಾ ಸಮ್ಮೇಳನ, ರಾಜ್ಯ ಪತ್ರಕರ್ತರ ಸಮ್ಮೇಳನ ಮತ್ತು ರಾಷ್ಟ್ರೀಯ ಪತ್ರಕರ್ತರ ಸಮ್ಮೇಳನ ನಡೆಸಿದ್ದು ಇನ್ನೂ ಸವಿನೆನಪಾಗಿದೆ ಎಂದು ಸಂಘದ ರಾಜ್ಯಾಧ್ಯಕ್ಷ ಶಿವಾನಂದ ತಗಡೂರು ಸ್ಮರಿಸಿದ್ದಾರೆ.

ವೆಂಚುರೈಸ್ ಅಡಿ 3 ಲಕ್ಷ ಡಾಲರ್ ಮೊತ್ತದ 9 ನಗದು ಬಹುಮಾನ | ಹುಬ್ಬಳ್ಳಿಯಲ್ಲಿ ಸ್ಟಾರ್ಟ್‌ಅಪ್, ವಿಜಯಪುರದಲ್ಲಿ ಸೋಲಾರ್ ಸೆಲ್ ಆಗ್ರೋ ಪಾರ್ಕ್

ವಲಯವಾರು ಕೈಗಾರಿಕಾ ಪಾರ್ಕ್‌ಗಳ ಸ್ಥಾಪನೆಗೆ ಕ್ರಮ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ರಾಜ್ಯದಲ್ಲಿ ಸಮಗ್ರ ಕೈಗಾರಿಕಾ ಬೆಳವಣಿಗೆ ಸಾಧಿಸಲು ವಲಯವಾರು ಕೈಗಾರಿಕಾ ಪಾರ್ಕ್‌ಗಳನ್ನು ಅಭಿವೃದ್ಧಿ ಪಡಿಸುತ್ತಿದೆ ಎಂದು ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ ಎಂ.ಬಿ.ಪಾಟೀಲ ಹೇಳಿದ್ದಾರೆ.

ಫೆ.11ರಿಂದ 14ರವರೆಗೆ ನಡೆಯಲಿರುವ ಜಾಗತಿಕ ಹೂಡಿಕೆದಾರರ ಸಮಾವೇಶಕ್ಕೆ ಪೂರ್ವಭಾವಿಯಾಗಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿ, ಕೋಲಾರ ಜಿಲ್ಲೆಯ ಶ್ರೀನಿವಾಸಪುರದಲ್ಲಿ ಆಧುನಿಕ ಫಾರ್ಮಾ ಪಾರ್ಕ್, ವಿಜಯಪುರದಲ್ಲಿ ಸೋಲಾರ್ ಸೆಲ್ ಪಾರ್ಕ್ ಮತ್ತು ಕೃಷಿ ಉತ್ಪನ್ನಗಳನ್ನು ಆಧರಿಸಿದ ಆಗ್ರೋ ಪಾರ್ಕ್, ಚಿತ್ರದುರ್ಗದಲ್ಲಿ ಡ್ರೋನ್ ಪಾರ್ಕ್, ಜಂಗಮನಕೋಟೆಯಲ್ಲಿ ಸರ್.ಎಂ.ವಿಶ್ವೇಶ್ವರಯ್ಯನವರ ಹೆಸರಿನಲ್ಲಿ ಡೀಪ್-ಟೆಕ್ ಪಾರ್ಕ್, ಡಾಬಸಪೇಟೆಗೆ ಸಮೀಪದ ಹನುಮಂತಪುರದಲ್ಲಿ ಮೆಗಾ ಲಾಜಿಸ್ಟಿಕ್ಸ್ ಪಾರ್ಕ್, ಚಿಕ್ಕಬಳ್ಳಾಪುರ ಜಿಲ್ಲೆ ಮತ್ತು ಧಾರವಾಡದಲ್ಲಿ ಇ.ವಿ ಕ್ಲಸ್ಟರ್ ಸ್ಥಾಪಿಸಲಾಗುವುದು ಎಂದರು.

ಹುಬ್ಬಳ್ಳಿ ವಿಮಾನ ನಿಲ್ದಾಣದ ಬಳಿ 400ಕ್ಕೂ ಹೆಚ್ಚು ನವೋದ್ಯಮಗಳಿಗೆ ಆಸರೆ ನೀಡಲಿರುವ 200 ಎಕರೆ ವಿಸ್ತಾರದ ಸ್ಟಾರ್ಟ್‌ಅಪ್ ಪಾರ್ಕ್ ಅಸ್ತಿತ್ವಕ್ಕೆ ಬರಲಿದೆ. ಅಲ್ಲದೆ, ವಿಜಯಪುರದ ತಿಡಗುಂದಿಯಲ್ಲಿ 1,200 ಎಕರೆ ವಿಸ್ತೀರ್ಣದಲ್ಲಿ ಸೋಲಾರ್ ಸೆಲ್ ಮತ್ತು

ಜಾಗತಿಕ ಹೂಡಿಕೆದಾರರ ಸಮಾವೇಶಕ್ಕೆ ಆಗಿರುವ ಸಿದ್ಧತೆಗಳನ್ನು ಅರಮನೆ ಮೈದಾನದಲ್ಲಿ ಸಚಿವ ಎಂ.ಬಿ.ಪಾಟೀಲ ವೀಕ್ಷಿಸಿದರು.

ಅಗ್ರೊ ಟೆಕ್ ಪಾರ್ಕ್ ಅಭಿವೃದ್ಧಿ ಪಡಿಸಲಾಗುವುದು. ಸಮಾವೇಶದಲ್ಲಿ ಭವಿಷ್ಯದ ತಯಾರಿಕಾ ವಲಯ, ಸಾರಿಗೆ ಮತ್ತು ಪರಿಸರಸ್ನೇಹಿ ಇಂಧನ ಉತ್ಪಾದನೆ ವಲಯಗಳಿಗೆ ವಿಶೇಷ ಗಮನ ಕೊಡಲಾಗುತ್ತಿದೆ. ಇದರ ಅಂಗವಾಗಿ 60ಕ್ಕೂ ಹೆಚ್ಚು ಸ್ಟಾರ್ಟ್‌ಅಪ್ ಕಂಪನಿಗಳು ಅತ್ಯಾಧುನಿಕ ತಂತ್ರಜ್ಞಾನ ಮತ್ತು ಅವುಗಳನ್ನು ಆಧರಿಸಿ ರೂಪಿಸಿರುವ ಪರಿಹಾರೋಪಾಯ ಪ್ರದರ್ಶಿಸಲಿವೆ. ಇವುಗಳಲ್ಲಿ ಕಾರ್ಬನ್ ನ್ಯಾನೋ ಟ್ಯೂಬ್, ಅಟಾನಮಸ್ ಸಿಸ್ಟಮ್ಸ್, ಮಾನವ ರಹಿತ ಏರಿಯಲ್ ವೆಹಿಕಲ್ಸ್ ಮತ್ತು ಸುಧಾರಿತ ರೋಬೋಟಿಕ್ಸ್ ಮುಂತಾದವು ಸೇರಿವೆ ಎಂದರು. ಕೈಗಾರಿಕಾ ಇಲಾಖೆ ಪ್ರಧಾನ ಕಾರ್ಯದರ್ಶಿ ಸೆಲ್ವಕುಮಾರ್, ಆಯುಕ್ತೆ ಗುಂಜನ್ ಕೃಷ್ಣ, ಕೆಐಎಡಿಬಿ ಸಿಇಒ ಡಾ. ಮಹೇಶ್ ಮುಂತಾದವರು ಉಪಸ್ಥಿತರಿದ್ದರು.

ಸಾಧಕ ಕಂಪನಿಗಳಿಗೆ ಪುರಸ್ಕಾರ

ರಾಜ್ಯದ ಆರ್ಥಿಕ ಮತ್ತು ಕೈಗಾರಿಕಾ ಬೆಳವಣಿಗೆಗೆ ನಿರ್ಣಾಯಕ ಕೊಡುಗೆ ನೀಡುತ್ತಿರುವ 14 ಉದ್ಯಮಗಳನ್ನು ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ ಇದೇ ಮೊದಲ ಬಾರಿಗೆ ಗುರುತಿಸಿ, ಪುರಸ್ಕರಿಸಲಾಗುತ್ತಿದೆ. ಇವುಗಳಲ್ಲಿ ವೈಮಾಂತರಿಕ್ಷ ಮತ್ತು ರಕ್ಷಣೆ, ಆಟೋ/ಇ.ವಿ., ಜೈವಿಕ ತಂತ್ರಜ್ಞಾನ ಮತ್ತು ಜೀವವಿಜ್ಞಾನ ವಲಯಗಳ ಸಾಧಕ ಉದ್ಯಮಗಳು ಇರಲಿವೆ. ಈ ಕಾರ್ಯಕ್ರಮ ಫೆ.12ರ ಸಂಜೆ ನಡೆಯಲಿದೆ ಎಂದರು. ತಮ್ಮ ಉದ್ಯಮಗಳಿಗೆ ಒಂದು ಬಾರಿಯ ಗರಿಷ್ಠ ಬಂಡವಾಳ ಹೂಡಿಕೆ ಮಾಡಿರುವ ಕಂಪನಿಗಳು ಮತ್ತು ಜಾಗತಿಕ ಮಟ್ಟದ ಸಂಶೋಧನೆ ಹಾಗೂ ಅಭಿವೃದ್ಧಿಗೆ (ಆರ್‌ಡಿ) ಆದ್ಯತೆ ನೀಡಿರುವ ಉದ್ದಿಮೆಗಳನ್ನೂ ವಿಶೇಷವಾಗಿ ಪರಿಗಣಿಸಿ, ಪುರಸ್ಕಾರ ನೀಡಲಾಗುವುದು. ಹಾಗೆಯೇ, ರಾಜ್ಯದ ಕೈಗಾರಿಕಾ ಬೆಳವಣಿಗೆಯಲ್ಲಿ ಮಹತ್ತರ ಪಾತ್ರ ವಹಿಸುತ್ತಿರುವ 35ಕ್ಕೂ ಹೆಚ್ಚು ಸಣ್ಣ ಮತ್ತು ಮಧ್ಯಮ ಸ್ತರದ ಕೈಗಾರಿಕೆಗಳು, ಜಿಲ್ಲಾ ಮಟ್ಟದಲ್ಲಿ ಅತ್ಯುತ್ತಮ ಸಾಧನೆ ಮಾಡುತ್ತಿರುವ ಮಹಿಳಾ ಉದ್ಯಮಿಗಳು, ವಲಯವಾರು ಕೈಗಾರಿಕಾ ಉತ್ಕೃಷ್ಟತೆ ಸಾಧಿಸಿರುವ ಉದ್ಯಮಗಳಿಗೆ ಫೆ.13ರ ಸಂಜೆ ಪ್ರಶಸ್ತಿ ಪುರಸ್ಕಾರ ಕೊಡಲಾಗುವುದು. ವೆಂಚುರೈಸ್ ಉಪಕ್ರಮದಡಿ ಒಟ್ಟು 3 ಲಕ್ಷ ಡಾಲರ್ ಮೌಲ್ಯದ 9 ಬಹುಮಾನಗಳನ್ನು ಪ್ರದಾನ ಮಾಡಲಾಗುವುದು. ಇದರಲ್ಲಿ ಮೊದಲ ಮೂರು ಸ್ಥಾನಗಳಿಗೆ ಕ್ರಮವಾಗಿ 50 ಸಾವಿರ ಡಾಲರ್, 30 ಸಾವಿರ ಡಾಲರ್ ಮತ್ತು 20 ಸಾವಿರ ಡಾಲರ್ ನಗದು ಪುರಸ್ಕಾರವಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಸಮಾವೇಶದಲ್ಲಿ 19 ರಾಷ್ಟ್ರಗಳು ಪಾಲ್ಗೊಳ್ಳುತ್ತಿದ್ದು. ಈ ಪೈಕಿ 10 ರಾಷ್ಟ್ರಗಳೊಂದಿಗೆ ಸುಸ್ಥಿರ ಆರ್ಥಿಕ ಬೆಳವಣಿಗೆಗೆ, ಹೂಡಿಕೆಗೆ ಇರುವ ಅವಕಾಶಗಳು, ಜಾಗತಿಕ ಪೂರೈಕೆ ಸರಪಳಿಯಲ್ಲಿ ಕರ್ನಾಟಕದ ಸ್ಥಾನಮಾನ, ರಾಜ್ಯದಲ್ಲಿ ಮರುಬಳಕೆ ಇಂಧನ ಕ್ಷೇತ್ರದ ಭವಿಷ್ಯ, ಆರೋಗ್ಯ ಸೇವೆ ಮುಂತಾದ ನಿರ್ಣಾಯಕ ಕ್ಷೇತ್ರಗಳನ್ನು ಕುರಿತು ಚರ್ಚಿಸಲಾಗುವುದು.

-ಎಂ.ಬಿ.ಪಾಟೀಲ, ಬೃಹತ್ ಮತ್ತು ಮಧ್ಯಮ ಕೈಗಾರಿಕಾ ಸಚಿವ

ಬಂಡೀಪುರ ಅಭಯಾರಣ್ಯದಲ್ಲಿ ಹುಲಿಗಳ ಪ್ರತ್ಯಕ್ಷ

ಗುಂಡ್ಲುಪೇಟೆ: ತಾಲೂಕಿನ ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶದಲ್ಲಿ ತಾಯಿ ಹುಲಿ ನಾಲ್ಕು ಮರಿಗಳೊಂದಿಗೆ ಕೆರೆಯಲ್ಲಿ ನೀರು ಕುಡಿಯುತ್ತಿರುವ ದೃಶ್ಯ ಕ್ಯಾಮೆರಾದಲ್ಲಿ ಸೆರೆಯಾಗಿದ್ದು, ಜಾಲತಾಣಗಳಲ್ಲಿ ಹರಿದಾಡುತ್ತಿದೆ.

ಬಂಡೀಪುರ ಅಭಯಾರಣ್ಯದ ಸಫಾರಿ ಮಾರ್ಗದಲ್ಲಿ ಮೊದಲಿಗೆ ತಾಯಿ ಹುಲಿ ಕಾಣಿಸಿಕೊಳ್ಳುತ್ತದೆ. ಸಫಾರಿ ವಾಹನ ನಿಲುಗಡೆ ಮಾಡಿ ದೃಶ್ಯವನ್ನು ಸೆರೆ ಹಿಡಿಯಲು ಮುಂದಾಗುತ್ತಿದ್ದಂತೆ ಒಂದರ ಹಿಂದೆ ಒಂದರಂತೆ ನಾಲ್ಕು ಮರಿಗಳು ತಾಯಿಯನ್ನು ಕೂಡಿಕೊಳ್ಳುತ್ತವೆ. ತಾಯಿ ಹುಲಿ ಕೆರೆಗೆ ಇಳಿದು ನೀರು ಕುಡಿಯುತ್ತದೆ.

ಮರಿಗಳು ಒಂದೊಂದಾಗಿ ಇಳಿದು ನೀರು ಕುಡಿ ಯುವ, ಅತ್ತಿತ್ತ ಕಾತರದಿಂದ ನೋಡುವುದು ವಿಡಿಯೊದಲ್ಲಿದೆ. ಸಫಾರಿಗೆ ತೆರಳಿದ ಪ್ರವಾಸಿಗರು ಮೊಬೈಲ್ ಫೋನ್ ಕ್ಯಾಮೆರಾದಲ್ಲಿ ಸೆರೆ ಹಿಡಿದು ಸಾಮಾಜಿಕ ಜಾಲತಾಣದಲ್ಲಿ ಹರಿಬಿಟ್ಟಿದ್ದಾರೆ.

ಬಂಡೀಪುರ ಸಫಾರಿ ವೇಳೆ ವೀಕ್ಷಕರ ಕ್ಯಾಮೆರಾದಲ್ಲಿ ತಾಯಿ ಹುಲಿಮತ್ತು ನಾಲ್ಕು ಮರಿಗಳು ನೀರು ಕುಡಿಯುವ ದೃಶ್ಯ.

ಈಚೆಗೆ ಸಫಾರಿ ಮಾರ್ಗದಲ್ಲಿ 3 ಮರಿಗಳೊಂದಿಗೆ ತಾಯಿ ಹುಲಿ ಕಾಣಿಸಿತ್ತು. ಎರಡು ದಿನದ ಹಿಂದೆ ಮುಂಟೀಪುರ ಮತ್ತು ಮೂಖಹಳ್ಳಿ ಮಾರ್ಗದಲ್ಲಿ 2 ಮರಿಗಳೊಂದಿಗೆ ತಾಯಿ ಹುಲಿ ಕಾಣಿಸಿಕೊಂಡಿದೆ. ಬಂಡೀಪುರದಲ್ಲಿ ಹುಲಿ ಸಂತತಿ ಹೆಚ್ಚಾಗಿದೆ ಎಂದು ವನ್ಯಜೀವಿ ಪ್ರಿಯರು ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಮಗಳನ್ನೇ ಕೊಲೆಗೈದ ತಂದೆ

ಔರಾದ: ಅನ್ಯ ಜಾತಿ ಯುವಕನನ್ನು ಪ್ರೀತಿಸಿ ಮದುವೆಯಾಗುವುದಾಗಿ ಹೇಳಿದ ಮಗಳನ್ನು

ಕೊಲೆ ಮಾಡಿ ತಂದೆ ಪರಾರಿಯಾಗಿದ್ದಾನೆ. ಬೀದರ ಜಿಲ್ಲೆಯ ಔರಾದ ತಾಲೂಕಿನ ಬರ್ಗೆನ ತಾಂಡಾದ ಯುವತಿ ಸೋನಿ (18) ಕೊಲೆಯಾಗಿದ್ದು, ಆಕೆಯನ್ನು ಕೊಲೆ ಮಾಡಿದ ತಂದೆ ಪರಶುರಾಮ ಪರಾರಿಯಾಗಿದ್ದಾನೆ. ಶುಕ್ರವಾರ ಮಧ್ಯಾಹ್ನ ಈ ಘಟನೆ ನಡೆದಿದ್ದು, ಮನೆಯಲ್ಲಿ ಯಾರೂ ಇಲ್ಲದ ವೇಳೆ ಮಗಳ ಮೇಲೆ ಮಾರಾಣಾಂತಿಕ ಹಲ್ಲೆ ಮಾಡಿದ್ದು, ತೀವ್ರ ರಕ್ತಸ್ರಾವದಿಂದ ಸ್ಥಳದಲ್ಲೇ ಮೊನಿಕಾ ಮೃತಪಟ್ಟಿದ್ದಾರೆ. ಪ್ರೀತಿ-ಪ್ರೇಮದಿಂದ ದೂರವಿರುವಂತೆ ಮಗಳಿಗೆ ತಂದೆ ತಿಳುವಳಿಕೆ ಹೇಳಿದ್ದಾನೆ. ಅಲ್ಲದೇ ನಿನಗೆ ಒಳ್ಳೆಯ ಹುಡುಗನನ್ನ ನೋಡಿ ಮದುವೆ ಮಾಡುತ್ತೇನೆ ಎಂದಿದ್ದಾನೆ. ಈ ವೇಳೆ ತಂದೆಯ ಎದುರು ಮಗಳು ಪ್ರೀತಿ ವಿಷಯ ಪ್ರಸ್ತಾಪಿಸಿದ್ದಲ್ಲದೇ ಅವನನ್ನೇ ಮದುವೆ ಆಗುತ್ತೇನೆ ಎಂದು ಗಲಾಟೆ ಮಾಡಿದ್ದಾಳೆ. ಬುದ್ಧಿಮಾತು ಹೇಳಿದರೂ ಕೇಳದ ಹಿನ್ನೆಲೆ ಕೋಪಗೊಂಡು ತಂದೆ ಮಗಳನ್ನು ಕೊಲೆ ಮಾಡಿದ್ದಾನೆ ಎನ್ನಲಾಗಿದೆ. ಮಗಳ ಹತ್ಯೆ ಕುರಿತಂತೆ ತಾಯಿ ಭಾಗುಬಾಯಿ ಸಂತಪೂರ ಪೊಲೀಸ್ ಠಾಣೆಗೆ ದೂರು ನೀಡಿದ್ದಾರೆ. ಪ್ರಕರಣ ದಾಖಲಿಸಿಕೊಂಡ ಪೊಲೀಸರು ಪರಶುರಾಮ ಬಂಧನಕ್ಕೆ ಬಲೆ ಬಿಸಿದ್ದಾರೆ.

ಬುದ್ಧಿ ಹೇಳಿದ ಪತ್ನಿಯನ್ನೇ ಕೊಂದ ಪತಿ

ಚಿತ್ರದುರ್ಗ: ಹಣ-ಆಸ್ತಿ ಕಳೆಯಬೇಡ, ದುಂದುವೆಚ್ಚ ಮಾಡಬೇಡ ಎಂದು ಬುದ್ಧಿ ಹೇಳಿದ ಪತ್ನಿಯನ್ನೇ ಧೂರ್ತ ಪತಿ ಉಸಿರುಗಟ್ಟಿಸಿ ಕೊಲೆಗೈದ ಪ್ರಕರಣ ಚಿತ್ರದುರ್ಗ ತಾಲೂಕಿನ ಮದೇಹಳ್ಳಿಯಲ್ಲಿ ನಡೆದಿದೆ. ಗ್ರಾಮದ ಉಮಾಪತಿ ಶ್ರೀದೇವಿ (48) ಜತೆ ವಿವಾಹವಾಗಿ, ಅನ್ಯೋನ್ಯವಾಗಿದ್ದರು. ಆದರೆ ಉಮಾಪತಿ ತನ್ನ ಜಮೀನು ಮಾರಾಟದಿಂದಾಗಿ ಬಂದ ಹಣವನ್ನೆಲ್ಲಾ ಮನಬಂದಂತೆ ಖರ್ಚು ಮಾಡುತ್ತಾನೆಂಬ ಹಿನ್ನೆಲೆ ಪತ್ನಿ ಶ್ರೀದೇವಿ ಆಗಾಗ್ಗೆ ಎಚ್ಚರಿಸುತ್ತಿದ್ದಳು. ಈ ವಿಚಾರಕ್ಕೆ ಇಬ್ಬರ ಮಧ್ಯೆ ಕಲಹ ನಿರಂತರವಾಗಿತ್ತು. ಉಳಿದ ಜಮೀನನ್ನು ತನ್ನ ಹೆಸರಿಗೆ ಹಾಗೂ ಮಗಳ ಹೆಸರಿಗೆ ಮಾಡಿಕೊಡಿ ಎಂದು ಶ್ರೀದೇವಿ ಒತ್ತಡ ಹೆಚ್ಚಿಸಿದ್ದರಿಂದ ಆಕ್ರೋಶಗೊಂಡ ಉಮಾಪತಿ ಮನೆಯಲ್ಲಿ ಯಾರೂ ಇಲ್ಲದ ವೇಳೆ ಫೆ.7 ರಂದು ಬೆಳಗ್ಗೆ ಶ್ರೀದೇವಿ ಮನೆಯಲ್ಲಿ ಪೂಜೆ ಮಾಡುತ್ತಿದ್ದಾಗ, ಆಕೆಯ ಸೀರೆಯಿಂದ ಕೊರಳಿಗೆ ಸುತ್ತಿ ಉಸಿರುಗಟ್ಟಿಸಿ ಕೊಲೆ ಮಾಡಿದ್ದಾನೆ. ಚಿತ್ರದುರ್ಗದ ಗ್ರಾಮಾಂತರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಗ್ರಾಮಾಂತರ ಠಾಣೆ ಪೊಲೀಸರು ಆರೋಪಿಯನ್ನು ಬಂಧಿಸಿದ್ದಾರೆ.

ಅಕ್ರಮವಾಗಿ ಗ್ಯಾಸ್ ಸಿಲಿಂಡರ್ ಫಿಲ್ಲಿಂಗ್ ಮಾಡುತ್ತಿದ್ದ ಜಾಲ ಪತ್ತೆ

ಕೊರಟಗೆರೆ: ಕೋಳಿ ಶೆಡ್‌ನಲ್ಲಿ ಅಕ್ರಮವಾಗಿ ಗ್ಯಾಸ್ ಸಿಲಿಂಡರ್ ಫಿಲ್ಲಿಂಗ್ ಅಡ್ಡೆಯ ಮೇಲೆ ಕೊರಟಗೆರೆ ಪಿಎಸ್‌ಐ ಚೇತನ್ ಕುಮಾರ್ ನೇತೃತ್ವದ ತಂಡದಿಂದ ದಾಳಿ ಮಾಡಿ 137 ಸಿಲಿಂಡರ್, ಒಂದು ಟಾಟಾ ಇಂಟ್ರಾ ಗೂಡ್ಸ್ ಗಾಡಿ , ಒರ್ವ ಆರೋಪಿಯನ್ನು ಬಂಧಿಸಿರುವ ಘಟನೆ ಶನಿವಾರ ತಡರಾತ್ರಿ ನಡೆದಿದೆ.

ಕೊರಟಗೆರೆ ತಾಲೂಕಿನ ಸಿ.ಎನ್.ದುರ್ಗ ಹೋಬಳಿಯ ಬುಕ್ಕಾಪಟ್ಟಣ ಸಮೀಪ ಬುಕ್ಕಾಪಟ್ಟಣ ಸರ್ವೆ ನಂ98 ರಲ್ಲಿ ಫಾತಿಮಾ ಬಿನ್ ಸೈಯದ್ ಜಮೀಲ್ ಬಾಷ ಎನ್ನುವವರಿಗೆ ಸೇರಿದ ಕೋಳಿ ಫಾರಂ ಶೆಡ್‌ನಲ್ಲಿ ಅಕ್ರಮವಾಗಿ ಸಿಲಿಂಡರ್‌ಗಳನ್ನು ಫಿಲ್ಲಿಂಗ್ ಮಾಡುತ್ತಿರುವುದು ಖಚಿತ ಮಾಹಿತಿ ಆಧರಿಸಿ ಪಿಎಸ್‌ಐ ಚೇತನ್

ಕುಮಾರ್ ಅವರ ತಂಡ ದಾಳಿ ಮಾಡಿ ಬಡವರಿಗೆ ನೀಡುವ ಉಜ್ವಲ್ ಯೋಜನೆಯ ಗೃಹ ಬಳಕೆಯ 75 ಸಿಲಿಂಡರ್ ಹಾಗೂ 62 ಕಮರ್ಷಿಯಲ್ ಸಿಲಿಂಡರ್‌ಗಳನ್ನು ಹಾಗೂ ಗೂಡ್ಸ್ ಗಾಡಿ ಮತ್ತು ಆಕ್ಟೀವಾ ಬೈಕ್ ವಶಪಡಿಸಿಕೊಂಡಿದ್ದಾರೆ.

ಕೋಳಿ ಫಾರಂನಲ್ಲಿ ಬೆಂಗಳೂರಿನ ನಂದಿನಿ ಲೇಔಟ್‌ನ ಲಕ್ಷ್ಮೀ ಭಾರತ್ ಗ್ಯಾಸ್ ಏಜೆನ್ಸಿ ಅವರ ಬಿಲ್‌ಗಳು ಗೂಡ್ಸ್ ಗಾಡಿ ದೊರೆತ್ತಿವೆ. ಇದರ ಜತೆಗೆ ಇಂಡಿಯನ್ ಕಮರ್ಷಿಯಲ್ ಸಿಲಿಂಡರ್‌ಗಳು, ಆಗ್ನಿ ಗ್ಯಾಸ್ ಸಿಲಿಂಡರ್‌ಗಳು ದೊರೆತ್ತಿವೆ. ಅಕ್ರಮವಾಗಿ ಸಿಲಿಂಡರ್ ಫೀಲ್ ಮಾಡುತ್ತಿದ್ದ ಬೆಂಗಳೂರು ಮೂಲದ ಶ್ರೀನಿವಾಸ್ ಮಗನಾದ ರಘು ಎಂಬಾತನನ್ನು ಪೊಲೀಸರು ವಶಕ್ಕೆ ಪಡೆದಿದ್ದಾರೆ. ಇನ್ನೂ ಉಳಿದ ಇಬ್ಬರು ಪರಾರಿಯಾಗಿದ್ದಾರೆ ಎಂದು ತಿಳಿದುಬಂದಿದೆ.

ಹೈಕಮಾಂಡ್ ಕರ್ನಾಟಕದ ಕೈ ವಶ

← ಮೊದಲಪುಟದಿಂದ

ಇವೆರಡನ್ನೂ ಬಿಟ್ಟರೆ ದೇಶದ ಯಾವುದೇ ರಾಜ್ಯದಲ್ಲೂ ಕಾಂಗ್ರೆಸ್ ಆಡಳಿತವಿಲ್ಲದಂತಾಗಿದೆ. ಇದೊಂದು ರೀತಿ ಈ ಹಿಂದೆ ಬಿಜೆಪಿ ನಾಯಕರು ಲೇವಡಿ ಮಾಡಿದಂತೆ ಕಾಂಗ್ರೆಸ್ ಮುಕ್ತ ಎನ್ನುವ ಮಾತಿಗೆ ಪಕ್ಷ ಹತ್ತಿರವಾಗುತ್ತಿದೆ. ಹೀಗಾಗಿ ಪಕ್ಷದ ಹೈಕಮಾಂಡ್ ಈಗ ಎಲ್ಲದಕ್ಕೂ ಕರ್ನಾಟಕದ ನಾಯಕರತ್ತು ನೋಡಬೇಕಾಗಬಹುದು. ಪರೋಕ್ಷವಾಗಿ ರಾಜ್ಯವೇ ಮಿನಿ ಹೈಕಮಾಂಡ್ ರೀತಿಯ ಕೆಲಸ ಮಾಡಬೇಕಾಗಬಹುದು ಎನ್ನುವುದು ಪಕ್ಷದ ಹಿರಿಯ ನಾಯಕರ ನುಡಿ.

ನಿಯಂತ್ರಣ ಖರ್ಗೆ ಅವರಿಗೂ ಕಷ್ಟ: ದಿಲ್ಲಿ ಸೋಲಿನ ಹಿನ್ನೆಲೆಯಲ್ಲಿ ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ್ ಖರ್ಗೆ ಕೂಡ ದಿಲ್ಲಿಯಲ್ಲೇ ಕುಳಿತು ರಾಜ್ಯವನ್ನು ನಿಯಂತ್ರಿಸುವುದಾಗಲಿ, ತಮ್ಮ ಇಚ್ಛೆಯಂತೆ ಆದೇಶಿಸುವುದು ಕೂಡ ಇನ್ನು ಕಷ್ಟವಾಗಬಹುದು ಎನ್ನುತ್ತವೆ ಕೆಪಿಸಿಸಿ ಮೂಲಗಳು.

ಅಂದರೆ, ಅಪಾಯ ಬಂದಾಗಲೆಲ್ಲಾ ಅಹಿಂದಾ ಸಮಾವೇಶಗಳ ಮೂಲಕ ಸ್ಥಾನ ಭದ್ರ ಮಾಡಿಕೊಂಡು ಬಂದ ಸಿದ್ದರಾಮಯ್ಯ ಅವರನ್ನು ಜನಬಲಕ್ಕೆ ಅಲಂಬಿಸುವುದು ಪಕ್ಷಕ್ಕೆ ಅನಿವಾರ್ಯವಾಗಲಿದೆ. ಹಾಗೆಯೇ ಸಂಘಟನೆ ಮತ್ತು ಕಾರ್ಯಕ್ರಮಗಳಿಗೆ ಡಿ.ಕೆ.ಶಿವಕುಮಾರ್ ಅವರ ಬಲ ಇನ್ನೂ ಅವಶ್ಯಕವಾಗಬಹುದು. ಹೀಗಾಗಿ ಖರ್ಗೆ ಅವರೂ ಸೇರಿದಂತೆ ಎಲ್ಲಾ ನಾಯಕರು ಹೆಚ್ಚು ಕರ್ನಾಟಕದವನ್ನು ಅವಲಂಬಿಸಬೇಕಾಗುಬಹುದು ಎಂದು ಪಕ್ಷದ ಹಿರಿಯ ನಾಯಕರು ಹೇಳುತ್ತಾರೆ.

ಕಾಂಗ್ರೆಸ್ ಸೋಲಿಗೆ ಇವಿಎಂ ಕಾರಣ

ದಾವಣಗೆರೆ: ದೆಹಲಿಯಲ್ಲಿ ಕಾಂಗ್ರೆಸ್

ಸೋಲಿಗೆ ಇವಿಎಂ ಕಾರಣ ಎಂದು ಸಂಸದೆ ಪ್ರಿಯಾಂಕಾ ಜಾರಕಿಹೊಳಿ ಆರೋಪಿಸಿದ್ದಾರೆ. ಸುದ್ದಿಗಾರರೊಂದಿಗೆ ದೆಹಲಿ ಚುನಾವಣಾ ಫಲಿತಾಂಶದ ವಿಚಾರವಾಗಿ ಮಾತನಾಡಿ, ಬಿಜೆಪಿಯವರದ್ದು ಗೊತ್ತಿಲ್ಲ, ಇವಿಯಂನ ಗೊಂದಲ ಮಾಡಿಕೊಂಡು ಬಂದಿದ್ದಾರೆ. ಮಹಾರಾಷ್ಟ್ರದಲ್ಲಿ ಕೂಡ ಅದೇ ರೀತಿ ಮಾಡಿ ಗೆದ್ದಿದ್ದಾರೆ ಎಂದರು. ನಮ್ಮ ನಾಯಕರಾದ ರಾಹುಲ್ ಗಾಂಧಿಯವರು ಕೂಡ ಇದೇ ಆರೋಪ ಮಾಡಿದ್ದಾರೆ ಎಂದರು.

ದಿಲ್ಲಿಯಲ್ಲಿ ಕಮಲ ಕಮಾಲ್

← ಮೊದಲಪುಟದಿಂದ

ಕೇಜ್ರಿವಾಲ್ ಅವರ ಐಷಾರಾಮಿ ನಿವಾಸದ ನಿರ್ಮಾಣ, ಹಗರಣ ಗಳ ಮೇಲೆ ಹಗರಣ, ಸರಣಿಯೋಪಾದಿಯಲ್ಲಿ ಸಚಿವರು, ಸಂಸದರ ಬಂಧನ, ಸೆರೆವಾಸ, ಜೈಲಿಗೆ ಹೋದರೂ ಅಧಿಕಾರ ಬಿಟ್ಟುಕೊಡದ ಅರವಿಂದ್ ಕೇಜ್ರಿವಾಲ್ ಹಠ, ದೆಹಲಿಯ ವಿಷಗಾಳಿ, ಕಲುಷಿತ ಯಮುನೆ ಮೊದಲಾದ ಹತ್ತು ಹಲವು ಅಂಶಗಳು ಆಪ್ ಬಗ್ಗೆ ಜನರು ಹತಾಶೆಗೊ ಳ್ಳುವಂತೆ ಮಾಡಿವೆ. ಬಿಜೆಪಿ 'ಡಬಲ್ ಎಂಜಿನ್'ಗೆ ಮಣೆ ಹಾಕಿರುವ ಮತದಾರರು ಕೇಸರಿ ಪಕ್ಷಕ್ಕೆ ಮತ್ತೊಂದು ಅವಕಾಶ ನೀಡಿದ್ದಾರೆ. ಮೊದಲ ಅವಧಿಯಲ್ಲಿ (2015-20) ಜನರು ಎಎಪಿ ಸರಕಾರವನ್ನು, ವಿಭಿನ್ನ ರೀತಿಯ ಅದರ ಕೆಲಸ-ಕಾರ್ಯಗಳನ್ನು ಮೆಚ್ಚಿಕೊಂಡಿದ್ದರು. ಹಾಗಾಗಿಯೇ 2020ರ ಚುನಾವಣೆ ಯಲ್ಲಿ 70 ಕ್ಷೇತ್ರಗಳಲ್ಲಿ 62 ಸ್ಥಾನಗಳನ್ನು ಗೆಲ್ಲಿಸಿ ಭಾರೀ ಬಹುಮತ ನೀಡಿದ್ದರು.

ಗಾಯಕ್ಕೆ ಫೆವಿಕ್ವಿಕ್ ಹಚ್ಚಿದ ನರ್ಸ್ ಅಮಾನತು

ಹಾವೇರಿ: ಬಾಲಕನ ಕೆನ್ನೆಯ ಗಾಯಕ್ಕೆ ಫೆವಿಕ್ವಿಕ್ ಹಚ್ಚಿರುವ ಆರೋಪ ಎದುರಿಸುತ್ತಿರುವ ನರ್ಸ್ ಜ್ಯೋತಿಯನ್ನು ಕರ್ತವ್ಯದಿಂದ ಅಮಾನತು ಮಾಡಿ ಜಿಲ್ಲಾ ಆರೋಗ್ಯಾಧಿಕಾರಿ ಡಾ. ರಾಜೀವ್ ಸುರಗಿಹಳ್ಳಿ ಆದೇಶ ಹೊರಡಿಸಿದ್ದಾರೆ. ಜಿಲ್ಲೆ ಹಾನಗಲ್ ತಾಲೂಕಿನ ಆಡೂರು ಗ್ರಾಮದಲ್ಲಿ ಜನವರಿ 14 ರಂದು ಈ ಘಟನೆ ನಡೆದಿತ್ತು. ಗ್ರಾಮದ 7 ವರ್ಷದ ಬಾಲಕನ ಕೆನ್ನೆಗೆ ಗಾಯವಾಗಿತ್ತು. ಬಾಲಕನ ಪೋಷಕರು ಬಾಲಕನನ್ನ ಆಡೂರು ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕರೆತಂದಿದ್ದರು. ಅಂದು ಕರ್ತವ್ಯದಲ್ಲಿದ್ದ ಜ್ಯೋತಿ ಎಂಬ ನರ್ಸ್ ಗಾಯಕ್ಕೆ ಹೋಲಿಗೆ ಹಾಕುವ ಬದಲು ಫೆವಿಕ್ವಿಕ್ ಹಚ್ಚಿದ್ದರು ಎಂದು ಪೋಷಕರು ಆರೋಪಿಸಿದ್ದರು. ನಂತರ ಬಾಲಕನಿಗೆ ಬೇರೆ ಕಡೆ ಚಿಕಿತ್ಸೆ ನೀಡಲಾಗಿತ್ತು. ಕರ್ತವ್ಯಲೋಪ ಎಸಗಿದ್ದ ನರ್ಸ್ ಜ್ಯೋತಿ ಅವರನ್ನು ಗುತ್ತಲ ಗ್ರಾಮದ ಆರೋಗ್ಯ ಕೇಂದ್ರಕ್ಕೆ ವರ್ಗಾಯಿಸಲಾಗಿತ್ತು. ಗಾಯಕ್ಕೆ ಸ್ಟಿಚ್ ಹಾಕೋ ಬದಲು ಫೆವಿಕ್ವಿಕ್ ಹಾಕಿದ ನರ್ಸಮ್ಮ ಜ್ಯೋತಿಯ ಕಾರ್ಯಕ್ಕೆ ಪೋಷಕರು ಆತಂಕ ವ್ಯಕ್ತಪಡಿಸಿದ್ದರು.

ಉಪನಿರ್ದೇಶಕರ ಕಛೇರಿ
ಜಿಲ್ಲಾ ಕೇಂದ್ರ ಗ್ರಂಥಾಲಯ
4ನೇ ಮುಖ್ಯ ರಸ್ತೆ, ಈಜುಕೊಳದ ರಸ್ತೆ, ಸರಸ್ವತಿಪುರಂ, ಮೈಸೂರು-570 009
e-mail-cldclmys@gmail.com ದೂ: 2425875,2425975

"ಅಲ್ಪಾವಧಿ ಟೆಂಡರ್ ಪ್ರಕಟಣೆ"

ಉಪನಿರ್ದೇಶಕರ ಕಚೇರಿ, ಜಿಲ್ಲಾ ಕೇಂದ್ರ ಗ್ರಂಥಾಲಯ, ಮೈಸೂರು ಕಛೇರಿ ಹಾಗೂ ಗ್ರಂಥಾಲಯಗಳಿಗೆ ಗಣಕಯಂತ್ರ, ಪ್ರಿಂಟರ್ ಹಾಗೂ ಯು.ಪಿ.ಎಸ್ ಸರಬರಾಜು ಮಾಡುವ ಬಗ್ಗೆ ಇ-ಪ್ರೊಕ್ಯೂರ್‌ಮೆಂಟ್ ಮುಖಾಂತರ ಅಲ್ಪಾವಧಿ ಟೆಂಡರ್ ಆಹ್ವಾನಿಸಲಾಗಿದೆ. ಹೆಚ್ಚಿನ ಮಾಹಿತಿಗಾಗಿ "ಇ" ಪ್ರೊಕ್ಯೂರ್‌ಮೆಂಟ್ ಪೋರ್ಟ್‌ಲ್‌ನ್ನು ಸಂಪರ್ಕಿಸುವುದು. ಟೆಂಡರ್ ಖರೀದಿಯ ಮೊತ್ತ ರೂ.50.00 ಲಕ್ಷಗಳು, ಟೆಂಡರ್ ಸಲ್ಲಿಸಲು ಕೊನೆಯ ದಿ: 13.02.2025 ಸಂಜೆ 5.30 ಗಂಟೆ, ಟೆಂಡರ್‌ನ ತಾಂತ್ರಿಕ್ ಬಿಡ್ ತೆರೆಯುವ ದಿ: 15.02.2025 ಬೆಳಿಗ್ಗೆ 11.00 ಗಂಟೆ.

ಸಹಿ/- ಉಪನಿರ್ದೇಶಕರು(ಹೆ.ಪ್ರ)
DIPR/DDMYS/1246/KSMCA/867/2024-25

20 ಸಾಧಕರಿಗೆ ವರ್ಣಶ್ರೀ ಪ್ರಶಸ್ತಿ | ಗೌರವ ಪುರಸ್ಕಾರಕ್ಕೆ ತಲಾ ಮೂವರು ಸಾಧಕರ ಆಯ್ಕೆ

ಆರು ಮಂದಿಗೆ ಲಲಿತಕಲಾ ಅಕಾಡೆಮಿ ಪ್ರಶಸ್ತಿ

ಬೆಂಗಳೂರು: ಕರ್ನಾಟಕ ಲಲಿತಕಲಾ ಅಕಾಡೆಮಿಯ 2021 ಮತ್ತು 2022ನೇ ಸಾಲಿನ ವರ್ಣ ಶ್ರೀ ಪ್ರಶಸ್ತಿ ಹಾಗೂ 2022- 2023ನೇ ಸಾಲಿನ ಗೌರವ ಪ್ರಶಸ್ತಿ, 51-52ನೇ ವಾರ್ಷಿಕ ಕಲಾ ಬಹುಮಾನ ಪ್ರಕಟಗೊಂಡಿದೆ. 2022 ಮತ್ತು 2023ನೇ ಸಾಲಿನ ಗೌರವ ಪ್ರಶಸ್ತಿಗೆ ತಲಾ ಮೂವರು ಸಾಧಕರು ಆಯ್ಕೆಯಾಗಿದ್ದಾರೆ. 2022ನೇ ಸಾಲಿಗೆ ಕಮಲ್ ಅಹಮದ್ (ಗದಗ), ನಿರ್ಮಲಾ ಕುಮಾರಿ (ತುಮಕೂರು), ಬಿ.ಪಿ.ಕಾರ್ತಿಕ್ (ಬೆಂಗಳೂರು) ಮತ್ತು 2023ನೇ ಸಾಲಿನಲ್ಲಿ ನಿಜಲಿಂಗಪ್ಪ ಹಾಲ್ವಿ (ಯಾದಗಿರಿ), ವಿಠಲ ರೆಡ್ಡಿ ಚುಳಕಿ(ಹುಬ್ಬಳ್ಳಿ), ಎಚ್.ಬಾಬೂರಾವ್ (ಕಲಬುರಗಿ) ಆಯ್ಕೆಗೊಂಡಿದ್ದಾರೆ.

ವರ್ಣ ಶ್ರೀ ಪ್ರಶಸ್ತಿ: 2021-22ನೇ ಸಾಲಿನ ವರ್ಣ ಶ್ರೀ ಪ್ರಶಸ್ತಿಗೆ ವೀಣಾ ಶ್ರೀನಿವಾಸನ್ (ಮಂಗಳೂರು), ಪರಮೇಶ ಜೋಳದ (ಬಾಗಲಕೋಟೆ), ಪಿ.ಎ.ಬಿ.ಈಶ್ವರ (ರಾಯಚೂರು), ಕೂಡಲಯ್ಯ ಹಿರೇಮಠ (ಪುಣೆ), ಅಶೋಕ ಕಲ್ಲಶೆಟ್ಟಿ (ತುಮಕೂರು), ನಂದಬಸಪ್ಪ ವಾಡೆ (ವಿಜಯಪುರ),

ಕಮಲ್ ಅಹಮದ್

ಬಾಬೂರಾವ್

ನಿಜಲಿಂಗಪ್ಪ ಹಾಲ್ವಿ

ನಿರ್ಮಲಾ ಕುಮಾರಿ

ಬಿ.ಪಿ ಕಾರ್ತಿಕ್

ವಿಠಲರೆಡ್ಡಿ ಚುಳಕಿ

52ನೇ ವಾರ್ಷಿಕ ಕಲಾ ಬಹುಮಾನ ಪುರಸ್ಕೃತರು

ಡಾ.ರೆಹಮಾನ್ ಪಟೇಲ್- ಮದ್ಯಮಾದಿರಾಗ (ಕಲಾಕೃತಿ), ಕೆ.ಪ್ರಶಾಂತ- ಸಂಸ್ಕೃತಿ ಚಲನೆ, ಎಸ್.ಅರುಳ್ ದೇವನ್- ಅನ್‌ನೋನ್ ಮೆಟಮೊರ್ಫಾಸಿಸ್-1, ಬಿನೆಲ್ ಮರಿಯಾ- ಅನ್ ಹೋಮ, ಎಂ.ಗೌತಮಿ- ಬಿನೆತ್ ದ ಸರ್ಫೇಸ್, ರಮೇಶ್ ಚವ್ಹಾಣ- ಯುನೈಟೆಡ್-2, ಸಂತೋಷ ಪತ್ತಾರ- ಚಂಚಲೆ, ಎನ್.ಚೈತ್ರಾ- ಅನ್ ಟೈಟಲ್ಡ್, ಶಿವರಾಮು- ಆಸರೆ, ಎನ್.ದಯಾನಂದ-ಕಣಜ ಕಲಾಕೃತಿಗಳು ಬಹುಮಾನ ಮತ್ತು ಪ್ರದರ್ಶನಕ್ಕೆ ಆಯ್ಕೆಯಾಗಿವೆ. ಕರ್ನಾಟಕ ಲಲಿತಕಲಾ ಅಕಾಡೆಮಿ ಗೌರವ ಪ್ರಶಸ್ತಿ ತಲಾ 50 ಸಾವಿರ ನಗದು, ವರ್ಣಶ್ರೀ ಪ್ರಶಸ್ತಿ ತಲಾ 25 ಸಾವಿರ ನಗದು ಮತ್ತು ವಾರ್ಷಿಕ ಕಲಾ ಪ್ರದರ್ಶನದ 20 ಉತ್ತಮ ಕಲಾಕೃತಿಗಳಿಗೆ ತಲಾ 25 ಸಾವಿರ ನಗದು ಬಹುಮಾನ ನೀಡಿ ಗೌರವಿಸಲಾಗುವುದು ಎಂದು ಅಕಾಡೆಮಿ ಅಧ್ಯಕ್ಷ ಪ.ಸ. ಕುಮಾರ್ ತಿಳಿಸಿದ್ದಾರೆ.

ಕೆ.ಜಿ.ಲಿಂಗದೇವರು (ರಾಮನಗರ), ಬಿ. ಮಹೇಶ್ (ಮಡಿಕೇರಿ), ಶಕುಂತಲಾ ವೆರ್ಣೇಕರ್ (ಹುಬ್ಬಳ್ಳಿ) ಮತ್ತು ಜಿ. ಮಂಜುನಾಥ(ಬಳ್ಳಾರಿ) ಆಯ್ಕೆಯಾಗಿದ್ದಾರೆ. 2022-23ನೇ ಸಾಲಿನ ವರ್ಣ ಶ್ರೀ ಪ್ರಶಸ್ತಿಗೆ ಪ್ರಕಾಶ್ ನಾಯಕ್ (ಶಿರಸಿ), ಬಸವರಾಜ ಸಿ. ಕುತ್ನಿ(ಗದಗ), ಜಗದೀಶ್ ಕಾಂಬಳೆ (ಕಲಬುರಗಿ), ಟಿ.ಜಯದೇವಣ್ಣ(ಹಾಸನ), ಶೈಲ ದೊತ್ರೆ(ಬಾಗಲಕೋಟೆ), ಸಿ. ಮಹದೇವಸ್ವಾಮಿ (ಚಾಮರಾಜನಗರ), ಮೀನಾಕ್ಷಿ ಸದಲಗಿ(ಬೆಳಗಾವಿ), ಕೆ.ಎಂ. ರವೀಶ್ (ತುಮಕೂರು), ಎಫ್.ವಿ.ಚಿಕ್ಕಮಠ (ಧಾರವಾಡ) ಮತ್ತು ಸಯ್ಯದ್ ಅಸಿಫ್ ಆಲಿ (ಮಂಗಳೂರು) ಅವರು ಆಯ್ಕೆಗೊಂಡಿದ್ದಾರೆ.

ಕಲಾ ಬಹುಮಾನ: 51ನೇ ವಾರ್ಷಿಕ ಕಲಾ ಬಹುಮಾನಕ್ಕೆ ಆಯ್ಕೆಯಾದ ಕಲಾವಿದರು ಮತ್ತು ಕಲಾಕೃತಿಗಳು: ಶಿವಪ್ರಸಾದ-ವಲ್ಡ್ಸ್ ಯು ಲವ್(ಕಲಾಕೃತಿ), ಬಿ.ಎಲ್.ಭಾನು ಪ್ರಕಾಶ್- ಟ್ರಾವೆಲ್ಸ್ ಆ್ಯಂಡ್ ರಿಫ್ಲೆಕ್ಷನ್ ಸೀರಿಸ್-1, ರಾಜೇಂದ್ರ ಕೇದಿಗೆ- ದ ಅನ್ ಡಿಫೈನ್ಸ್, ರೋಷ್ ರವೀಂದ್ರನ್- ಫೆಸೆಟ್ ಸೆಟಲ್ಸ್, ವರ್ಣಂ ನಾರಾಯಣ- ವಿಲೇಜ್/ ಸಿಟಿ, ಅಮೋಘರಾಜ್ ಡಿ.ಬಾಲಿ- ರೀಸ್ಟೈಕಲ್, ಗಿರೀಶ್ ಬಿ.ಕುಲಕರ್ಣಿ- ಮರಳಿ ಗೂಡಿಗೆ, ಪಿ.ನಾಗರಾಜು- ಜೀವನದ ಪ್ರಯಾಣದ ನಡುವೆ ಭಾವೋದ್ರೇಕ, ಹಣಮಂತ ಮಲ್ಲಾಪುರ - ಫಸ್ಟ್ ಜನರೇಷನ್, ಕೃಷ್ಣಾಚಾರಿ- ಜೀವನಕ್ಕಾಗಿ ಕಲಾಕೃತಿಗಳು ಆಯ್ಕೆಯಾಗಿವೆ.

ಟ್ವೀಟೂ-ಖಾರಾ

ಕಾಂಗ್ರೆಸ್,ಕರ್ನಾಟಕ

ಚುನಾವಣಾ ಆಯೋಗದೊಂದಿಗೆ ಬಿಜೆಪಿಯ ಅಕ್ರಮ ಸಕ್ರಮ..! ಮಹಾರಾಷ್ಟ್ರದಲ್ಲಿ 5 ವರ್ಷಗಳಲ್ಲಿ 44 ಲಕ್ಷ ಹೊಸ ಮತದಾರರ ಸೇರ್ಪಡೆಯಾದರೆ, ಕೇವಲ 5 ತಿಂಗಳಲ್ಲಿ 40 ಲಕ್ಷ ಮತದಾರರ ಹೆಸರು ಸೇರ್ಪಡೆ..!

ವಿದ್ಯಾಧರ್, ಬೆಂಗಳೂರು

2014ರಿಂದಲೂ ಸತತ ಅಳುವುದು ನಡೆದೇ ಇದೆ. ಒಂದು ಸಲ ಇವಿಎಂ, ಇನ್ನೊಂದು ಸಲ ಇ.ಸಿ., ಮತ್ತೊಂದು ಸಲ ಮತದಾರರ ಸೇರ್ಪಡೆ ಎಮದು ಅತ್ತದ್ದೇ ಅತ್ತಿದ್ದು. ಸೋಲನ್ನು ಸಹೃದಯತೆಯಿಂದ ಸ್ವೀಕರಿಸಿ ಸೋಲನ್ನು ಸರಿಯಾಗಿ ಪರಾಮರ್ಶಿಸಿ ಗೆಲುವಿನ ಕಡೆಗೆ ಹೆಜ್ಜೆ ಹಾಕುವುದನ್ನು ಕಲಿಯಿರಿ, ಅಳುವುದನ್ನು ನಿಲ್ಲಿಸಿರಿ.

ನಾಡ ಸಮಸ್ಯೆಗೆ ಸಿಎಂ ಪರಿಹಾರ

- **ಸ್ಥಳ : ಬೆಂಗಳೂರು**

ಸಮಸ್ಯೆಯೇನು..?

- ಬೆಂಗಳೂರಿನ ತಲಘಟ್ಟಪುರ ಮೆಟ್ರೋ ಸ್ಟೇಷನ್ ಬಳಿ ರಸ್ತೆಗೆ ಚರಂಡಿ ನೀರು ಹರಿಯುತ್ತಿರುವುದು.
- **ಪರಿಹಾರ:** ಬೆಂಗಳೂರಿನ ತಲಘಟ್ಟಪುರ ಮೆಟ್ರೋ ಸ್ಟೇಷನ್ ಬಳಿ ಚರಂಡಿಯ ಕಾಲುವೆಯನ್ನು ಬಿಬಿಎಂಪಿ ಸಿಬ್ಬಂದಿ ಸ್ವಚ್ಛಗೊಳಿಸಿ ಸರಿಪಡಿಸಿದ್ದಾರೆ.

ಸಮಾಚಾರ ಸಣ್ಣದಲ್ಲ

ಕಾಡಾನೆ ದಾಳಿ: ಮಹಿಳೆ ಸಾವು

ಚಿಕ್ಕಮಗಳೂರು: ಕಾಡಾನೆ ದಾಳಿಗೆ ಎನ್.ಆರ್.ಪುರ ತಾಲೂಕಿನ ಕತ್ತಲೇಕಾನ್ ಎಸ್ಟೇಟ್‌ನಲ್ಲಿ ಕೂಲಿ ಕಾರ್ಮಿಕ ಮಹಿಳೆ ಶನಿವಾರ ಬೆಳಿಗ್ಗೆ ಮೃತಪಟ್ಟಿದ್ದಾರೆ. ವಿಜಯನಗರ ಜಿಲ್ಲೆ ಹರಪನಹಳ್ಳಿ ತಾಲೂಕಿನ ಶಿವಪುರ ಗ್ರಾಮದ ವಿನೋದಾ ಬಾಯಿ ಮೃತಪಟ್ಟವರು. ತಮ್ಮ ಕುಟುಂಬದೊಂದಿಗೆ ಕೂಲಿ ಕೆಲಸಕ್ಕಾಗಿ ವಲಸೆ ಬಂದಿದ್ದರು. ಅರಣ್ಯ ಪ್ರದೇಶದ ಬಳಿ ಇರುವ ಕಾಫಿ ತೋಟದಲ್ಲಿ ಹಣ್ಣು ಕೊಯ್ಯುವಾಗ ಏಕಾಏಕಿ ಕಾಡಾನೆ ದಾಳಿ ನಡೆಸಿದೆ. ವಿನೋದಾ ಬಾಯಿ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ಅರಣ್ಯ ಇಲಾಖೆಯ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದರು.

ವಸತಿ ಶಾಲೆ ವಿದ್ಯಾರ್ಥಿ ಸಾವು: ಇಬ್ಬರು ಸೆರೆ

ದಾವಣಗೆರೆ: ಇಲ್ಲಿನ ವಸತಿ ಶಾಲೆಯೊಂದರಲ್ಲಿ ಬಾಯ್ಲರ್ ಬಿದ್ದು ಬಾಲಕ ಸಾವನ್ನಪ್ಪಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಇಬ್ಬರು ಆರೋಪಿಗಳನ್ನು ಪೊಲೀಸರು ಬಂಧಿಸಿದ್ದಾರೆ. ವಸತಿ ಶಾಲೆಯ ಮುಖ್ಯೋಪಾಧ್ಯಾಯ ಹಾಗೂ ವಾರ್ಡನ್ನನ್ನು ಪೊಲೀಸರು ಬಂಧಿಸಿದ್ದಾರೆ. ಪೋಷಕರ ದೂರಿನ ಮೇರೆಗೆ ಬಂಧಿಸಲಾಗಿದೆ. ಇತ್ತೀಚೆಗೆ ನಗರದ ಮಂಜುನಾಥಸ್ವಾಮಿ ಪರಿಶಿಷ್ಟ ವರ್ಗಗಳ ವಸತಿ ನಿಲಯದಲ್ಲಿ ಬಾಲಕ ರಂಗನಾಥ್ ಮೇಲೆ ಬಾಯ್ಲರ್ ಬಿದ್ದು ಸಾವನ್ನಪ್ಪಿದ್ದ. ಬಾಯ್ಲರ್‌ಗೆ ವಾರ್ಡನ್ ಕಟ್ಟಿಗೆ ಹಾಕಿ ಬರಲು ಹೇಳಿದ್ದರು. ಕಟ್ಟಿಗೆ ಹಾಕಲು ತೆರಳಿದ್ದಾಗ ಈ ಅವಘಡ ನಡೆದಿತ್ತು. ಅವಘಡ ನಡೆದಾಗ ಸರಿಯಾದ ಸಮಯಕ್ಕೆ ಚಿಕಿತ್ಸೆ ಕೊಡಿಸದೇ ಬಾಲಕ ಸಾವನ್ನಪ್ಪಿದ್ದಾನೆ ಎಂದು ಮೃತ ಬಾಲಕನ ಪೋಷಕರು ಆರೋಪಿಸಿದ್ದಾರೆ. ಈ ಸಂಬಂಧ ಬಾಲಕನ ತಂದೆ ರಾಮಪ್ಪ, ಕೆಟಿಜೆ ನಗರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಿಸಿದ್ದರು. ದೂರಿನ ಅನ್ವಯ ಪೊಲೀಸರು ಇಬ್ಬರನ್ನು ಬಂಧಿಸಿ ವಿಚಾರಣೆ ನಡೆಸಿದ್ದಾರೆ.

ದಿಲ್ಲಿಯಲ್ಲಿ ಬಿಜೆಪಿಗೆ ಜನರ ಆಶೀರ್ವಾದ

ಹುಬ್ಬಳ್ಳಿ: ದಿಲ್ಲಿ ಜನರ ಆಶೀರ್ವಾದ ಬಿಜೆಪಿಗೆ ಸಿಕ್ಕಿದೆ. ಕೇಜ್ರಿವಾಲ್ ತಮ್ಮ ಛಾಪು ಕಳೆದುಕೊಂಡಿದ್ದಾರೆ ಎಂದು ಸಂಸದ ಜಗದೀಶ್ ಶೆಟ್ಟರ್ ಹೇಳಿದ್ದಾರೆ. ಸುದ್ದಿಗಾರರೊಂದಿಗೆ ಮಾತನಾಡಿದ ಅವರು, ಅಣ್ಣಾ ಹಜಾರೆ ಹೋರಾಟವನ್ನು ಬಳಸಿಕೊಂಡು ಕೇಜ್ರಿವಾಲ್ ಅಧಿಕಾರದ ಗದ್ದುಗೆ ಏರಿದ್ದರು. ಅವರ ಆಡಳಿತದಲ್ಲಿ ಸಾಕಷ್ಟು ಭ್ರಷ್ಟಾಚಾರ ನಡೆದಿದ್ದು, ಜನರಿಗೆ ನಿರಾಸೆಯಾಗಿದೆ. ಹೀಗಾಗಿ ದಿಲ್ಲಿಯ ಮತದಾರರು ಬಿಜೆಪಿಯ ಕೈ ಹಿಡಿದಿದ್ದಾರೆ ಎಂದರು. ಇಡೀ ರಾಷ್ಟ್ರದಲ್ಲಿ ಕಾಂಗ್ರೆಸ್ ದಿನದಿಂದ ದಿನಕ್ಕೆ ಕುಸಿಯುತ್ತಿದೆ. ತೆಲಂಗಾಣ, ಕರ್ನಾಟಕದಲ್ಲಿ ಮಾತ್ರ ಅಧಿಕಾರದಲ್ಲಿದೆ. ನಮ್ಮ ತಪ್ಪಿನಿಂದ ಕರ್ನಾಟಕದಲ್ಲಿ ಅಧಿಕಾರಕ್ಕೆ ಬಂದಿದೆ. ರಾಹುಲ್ ಗಾಂಧಿ ಇರೋವರೆಗೂ ಕಾಂಗ್ರೆಸ್ ಉದ್ಧಾರ ಆಗಲ್ಲ ಎಂದು ಜಗದೀಶ್ ಶೆಟ್ಟರ್ ಭವಿಷ್ಯ ನುಡಿದರು.

ಹಾರೂಗೇರಿ ಪಿಎಸ್‌ಐ ವಿರುದ್ಧ ಆರಕ್ಷಕನಿಂದಲೇ ಪ್ರತಿಭಟನೆ

ಠಾಣೆ ಮುಂದೆ ಶವವಿಟ್ಟು ಧರಣಿ

ಬೆಳಗಾವಿ: ಹೆತ್ತ ತಂದೆಯ ಶವವನ್ನು ಪೊಲೀಸ್ ಠಾಣೆಯಲ್ಲಿ ಇಟ್ಟು , ಸಾವಿಗೆ ನ್ಯಾಯ ಕೊಡಿಸುವಂತೆ ಪೊಲೀಸ್

ಇನ್ಸ್‌ಪೆಕ್ಟರ್ ಪ್ರತಿಭಟನೆ ನಡೆಸಿರುವ ಘಟನೆ ಶುಕ್ರವಾರ ರಾಯಬಾಗ್ ತಾಲೂಕಿನ ಹಾರೂಗೇರಿಯಲ್ಲಿ ನಡೆದಿದೆ.

ರಾಯಚೂರು ಜಿಲ್ಲೆ ದೇವದುರ್ಗ ಠಾಣೆಯಲ್ಲಿ ಪೊಲೀಸ್ ಇನ್ಸ್‌ಪೆಕ್ಟರ್ ಆಗಿ ಕರ್ತವ್ಯ ನಿರ್ವಹಿಸುತ್ತಿರುವ ಅಶೋಕ ಸದಲಗಿ ತಮ್ಮ ತಂದೆ ಅಣ್ಣಪ್ಪ ಸದಲಗಿ (80) ಮೇಲೆ ಮಾರಣಾಂತಿಕ ಹಲ್ಲೆ ನಡೆಸಿ ಅವರ ಸಾವಿಗೆ ಕಾರಣರಾಗಿರುವ ಹಾರೂಗೇರಿ ಠಾಣೆ ಪಿಎಸ್‌ಐ ಮಾಳಪ್ಪ ಪೂಜಾರಿ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ ಧರಣಿ ನಡೆಸಿದ್ದಾರೆ.

ಕಳೆದ ಜ. 10 ರಂದು ಇನ್ಸ್‌ಪೆಕ್ಟರ್ ಅಶೋಕ ಸದಲಗಿಯ ತಂದೆ ಅಣ್ಣಪ್ಪ ಅವರ ಜಮೀನಿಗೆ ಹಾರೂಗೇರಿಯ ಬಾಬು ನಡೋಣಿ, ಪ್ರತಾಪ್ ಹರೋಲಿ ಹಾಗೂ ವಸಂತ ಚೌಗಲಾ ಎಂಬುವವರು ನುಗ್ಗಿ ಗಲಾಟೆ ಮಾಡಿ ಅಣ್ಣಪ್ಪ ಮೇಲೆ ಹಲ್ಲೆಗೆ ಯತ್ನಿಸಿದ್ದರು. ಈ ಸಂದರ್ಭದಲ್ಲಿ ಮಾಹಿತಿ ನೀಡಿದಾಗ ಹಾರೂಗೇರಿ ಠಾಣೆ ಪೊಲೀಸರು ಎಲ್ಲರನ್ನೂ ಕರೆದೊಯ್ದಿದ್ದರು.

ಈ ವೇಳೆ, ಹಲ್ಲೆ ಮಾಡಿದವರನ್ನು ಬಿಟ್ಟು ಅಣ್ಣಪ್ಪ ಸದಲಗಿಯನ್ನು ಠಾಣೆಯಲ್ಲೇ ಇರಿಸಿಕೊಂಡ ಪಿಎಸ್‌ಐ ಮಾಳಪ್ಪ ಪೂಜಾರಿ ಅಶ್ಲೀಲವಾಗಿ ನಿಂದಿಸಿದ್ದು ಮಾತ್ರವಲ್ಲದೆ ಕಿರುಕುಳ ನೀಡಿದ್ದಾರೆ. ಈ ಸಂದರ್ಭದಲ್ಲಿ ಅಣ್ಣಪ್ಪ ಅವರ ಆರೋಗ್ಯ ಹದಗೆಟ್ಟಿದ್ದು ಇನ್ನೊಬ್ಬ ಪುತ್ರ ಆಸ್ಪತ್ರೆಗೆ ದಾಖಲಿಸಿದ್ದಾನೆ ಎಂದು ಇನ್ಸ್‌ಪೆಕ್ಟರ್ ಅಶೋಕ ಸದಲಗಿ ತಿಳಿಸಿದ್ದಾರೆ.

ಹಲ್ಲೆಗೊಳಗಾದವರ ಮೇಲೆ ಪ್ರಕರಣ: ಅಣ್ಣಪ್ಪ ಜಮೀನಿಗೆ ನುಗ್ಗಿ ಗಲಾಟೆ ಮಾಡಿದವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳದೆ ತಮ್ಮ ತಂದೆಯ ಮೇಲೆ ಜಾತಿ ನಿಂದನೆ ಕೇಸ್ ದಾಖಲಿಸಲಾಗಿದೆ ಎಂದು ಪಿಎಸ್‌ಐ ವಿರುದ್ಧ ಆರೋಪಿಸಲಾಗಿದೆ. ಈ ಘಟನೆಯಲ್ಲಿ ಆಸ್ಪತ್ರೆಗೆ ಸೇರಿದ್ದ ಅಣ್ಣಪ್ಪ ಸದಲಗಿ ಶುಕ್ರವಾರ ಮೃತಪಟ್ಟಿದ್ದು ಇವರ ಪಾರ್ಥಿವ ಶರೀರವನ್ನು ತೆಗೆದುಕೊಂಡು ನೇರವಾಗಿ ಹಾರೂಗೇರಿ ಠಾಣೆಗೆ ಬಂದ ಇನ್ಸ್‌ಪೆಕ್ಟರ್ ಅಶೋಕ ಸದಲಗಿ, ಪಿಎಸ್‌ಐ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳುವಂತೆ ಪಟ್ಟು ಹಿಡಿದಿದ್ದಾರೆ.

ತನ್ನ ತಂದೆ ಸಾವಿಗೆ ನ್ಯಾಯ ಕೊಡಿಸುವಂತೆ ಮೃತದೇಹ ಇಟ್ಟುಕೊಂಡು ಹಾರೂಗೇರಿ ಪೊಲೀಸ್ ಠಾಣೆಯಲ್ಲಿ ಪ್ರತಿಭಟನೆ ನಡೆಸುತ್ತಿರುವ ಇನ್ಸ್‌ಪೆಕ್ಟರ್ ಅಶೋಕ್ ಸದಲಗಿ.

ಒಳಚಿತ್ರ : ಅಣ್ಣಪ್ಪ

> ಪ್ರಕರಣಕ್ಕೆ ಸಂಬಂಧಿಸಿದಂತೆ ಹಾರೂಗೇರಿ ಪೊಲೀಸ್ ಠಾಣೆಯಲ್ಲಿನ ಸಿಸಿಟಿವಿ ಗಮನಿಸಿದ್ದು ಅಣ್ಣಪ್ಪ ಎಂಬುವವರ ಮೇಲೆ ಹಲ್ಲೆ ನಡೆಸಿದ ಯಾವುದೇ ದೃಶ್ಯ ಕಂಡುಬಂದಿಲ್ಲ. ಹಾಗೆಯೆ ಮೃತ ವ್ಯಕ್ತಿ ಹೃದಯ ಸಂಬಂಧಿ ಹಾಗೂ ಗಂಟಲು ಸಂಬಂಧಿಸಿದ ಕಾಯಿಲೆಗೆ ಚಿಕಿತ್ಸೆ ಪಡೆಯುವಾಗ ಮೃತಪಟ್ಟಿದ್ದು, ಪಿಎಸ್‌ಐ ಅವರಿಂದ ಯಾವುದೇ ಹಲ್ಲೆ ನಡೆದಿಲ್ಲ.
>
> -**ಭೀಮಾಶಂಕರ ಗುಳೇದ್**, ಬೆಳಗಾವಿ ಜಿಲ್ಲಾ ಪೊಲೀಸ್ ವರಿಷ್ಠ

ನನ್ನ ತಂದೆಯ ಸಾವಿಗೆ ಪಿಎಸ್‌ಐ ಮಾಳಪ್ಪ ಪೂಜಾರಿ ಕಾರಣ. ಪ್ರಕರಣ ಕುರಿತು ಹಿರಿಯ ಅಧಿಕಾರಿಗಳ ಗಮನಕ್ಕೆ ತಂದರೂ ಪಿಎಸ್‌ಐ ಕಿರುಕುಳ ನೀಡಿದ್ದು ಆತನ ವಿರುದ್ಧ ಪ್ರಕರಣ ದಾಖಲಿಸುವಂತೆ ಪಟ್ಟು ಹಿಡಿದಿದ್ದಾರೆ. ನಂತರ ಸ್ಥಳಕ್ಕೆ ಆಗಮಿಸಿದ ಡಿವೈಎಸ್ಪಿ ಇನ್ಸ್‌ಪೆಕ್ಟರ್ ಅಶೋಕ ಸದಲಗಿ ಅವರ ಮನವೊಲಿಸಿದ್ದು ನಂತರ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಿ ಕುಟುಂಬದವರಿಗೆ ಹಸ್ತಾಂತರ ಮಾಡಿದ್ದಾರೆ.

> ಕಳೆದ 2008 ರಲ್ಲಿ ಖರೀದಿ ಮಾಡಿರುವ ಆಸ್ತಿಯನ್ನು ಮರಳಿ ಪಡೆಯುವ ಉದ್ದೇಶದಿಂದ ಕೆಲವರು ಅನಗತ್ಯ ಕಿರುಕುಳ ನೀಡುತ್ತಿದ್ದಾರೆ. ನಮ್ಮ ತಂದೆ ಮೇಲೆ ಹಲ್ಲೆ ಮಾಡಿದ ಆರೋಪಿಗಳನ್ನು ಬಂಧಿಸದೆ ಹಾರೂಗೇರಿ ಠಾಣೆ ಪಿಎಸ್‌ಐ ಅಣ್ಣಪ್ಪ ಅವರಿಗೇ ಕಿರುಕುಳ ನೀಡಿದ್ದಾರೆ. ಪೊಲೀಸ್ ಠಾಣೆಯ ಸಿಸಿಟಿವಿ ವಿಡಿಯೊ ಕೇಳಿದರೂ ಕೊಟ್ಟಿಲ್ಲ. ಹೆತ್ತ ತಂದೆಯನ್ನು ಕಳೆದುಕೊಂಡು ಮನಸ್ಸಿಗೆ ತುಂಬಾ ದುಃಖವಾಗಿದೆ. ಪೊಲೀಸ್ ಇಲಾಖೆಯಲ್ಲೇ ಇದ್ದು ಕರ್ತವ್ಯ ನಿರ್ವಹಿಸುವ ನನಗೆ ನನ್ನ ತಂದೆಯ ಮೇಲಿನ ಅನ್ಯಾಯ ತಡೆಯಲು ಸಾಧ್ಯವಾಗಿಲ್ಲ. ಈ ಕುರಿತು ಹಿರಿಯ ಅಧಿಕಾರಿಗಳು ನ್ಯಾಯ ಕೊಡಿಸಬೇಕು.
>
> -**ಅಶೋಕ ಸದಲಗಿ**, ಪೊಲೀಸ್ ಇನ್ಸ್‌ಪೆಕ್ಟರ್

ಬಿಜೆಪಿ ಗೆಲುವು ಪ್ರಧಾನಿ ಮೋದಿಗೆ ಸಲ್ಲುತ್ತದೆ: ಸೋಮಣ್ಣ

ಇನ್ನು ಮೂರು ವರ್ಷದಲ್ಲಿ ದೆಹಲಿ ಸಮಗ್ರ ಅಭಿವೃದ್ಧಿ

ತುಮಕೂರು: ಮುಂದಿನ ಮೂರು ವರ್ಷದಲ್ಲಿ ದೆಹಲಿ ಅಭಿವೃದ್ಧಿಯಾಗಲಿದ್ದು ಪ್ರಧಾನಿ ಮೋದಿಯವರು ಅಭಿವೃದ್ಧಿ ಪಥದತ್ತ ಕೊಂಡೊಯ್ಯಲಿದ್ದಾರೆ ಎಂದು ಕೇಂದ್ರ ಸಚಿವ ವಿ .ಸೋಮಣ್ಣ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ದೆಹಲಿ ವಿಧಾನಸಭಾ ಚುನಾವಣೆಯಲ್ಲಿ ನನಗೆ ನಾಗ್ಲೋಯಿ ವಿಧಾನಸಭಾ ಕ್ಷೇತ್ರದ ಉಸ್ತವಾರಿ ವಹಿಸಲಾಗಿತ್ತು, ಗೊತ್ತಿರುವಷ್ಟು ಹಿಂದಿಯಲ್ಲೇ ನೂರಿನ್ನೂರು ಜನರನ್ನು ಸೇರಿಸಿ ಸಭೆ ಮಾಡುತ್ತಾ ದಿನಕ್ಕೆ 8-10 ತಾಸು ಕೆಲಸ ಮಾಡುತ್ತಿದ್ದೆ, ಪುಣ್ಯಕ್ಕೆ ಅಲ್ಲಿ ಬಿಜೆಪಿ ಅಭ್ಯರ್ಥಿ ಮನೋಜ್ ಕುಮಾರ್ ಶೋಕೀನ್ ಗೆದ್ದಿದ್ದಾರೆ ಎಂದರು.

ಬಿಜೆಪಿಯ ಗೆಲುವಿಗೆ ದೊಡ್ಡದಲ್ಲದಿದ್ದರೂ ನನ್ನದು ಚಿಕ್ಕ ಪಾತ್ರವಿದೆ. ಪಕ್ಷದ ಗೆಲುವಿನ ಸಿಂಹಪಾಲು ಪ್ರಧಾನಿ ನರೇಂದ್ರ ಮೋದಿಯವರಿಗೆ ಸಲ್ಲುತ್ತದೆ, ಅವರು ರಾಷ್ಟ್ರದ ರಾಜಧಾನಿಯ ಸ್ವರೂಪವನ್ನೇ ಬದಲಿಸಲಿದ್ದಾರೆ ಎಂದರು.

ಕುಂಭಮೇಳದಲ್ಲಿ ಸಾವಿರಾರು ಮಂದಿ ಪುಣ್ಯಸ್ನಾನ ಮಾಡಿದ್ದಾರೆ. ನಾನು ಹೋಗಿ ನೋಡಿದ್ದೇನೆ. ಸಾವಿರಾರು ಮಂದಿಯಲ್ಲಿ 450-500 ಮಂದಿಗೆ ತೊಂದರೆ ಆಗಿರಬಹುದು ಅದರ ಹೊರೆತು ಯಾವುದೇ ಅವಘಡಗಳು ನಡೆದಿಲ್ಲ. ಕಾಂಗ್ರೆಸ್‌ನವರು ಸಹ ಕುಂಭ ಮೇಳದಲ್ಲಿ ಸ್ನಾನ ಮಾಡಿದ್ದಾರೆ. ನಮಗೆ ಗೊತ್ತಿಲ್ಲದ ರೀತಿ ಹೋಗಿ ಸ್ನಾನ ಮಾಡಿಕೊಂಡು ಬಂದಿದ್ದಾರೆ. ಆದರೆ ನಮ್ಮ ಮುಂದೆ ಟೀಕೆ ಮಾಡುತ್ತಾರೆ ಎಂದರು.

> ಭಾರತೀಯ ರೈಲ್ವೆ ವ್ಯಾಪ್ತಿಯಲ್ಲಿ ಬೃಹತ್ ನೇಮಕಾತಿ ಮಾಡಿಕೊಳ್ಳಲಾಗುತ್ತಿದೆ. ರೈಲ್ವೆ ನೇಮಕಾತಿ ಮಂಡಳಿಯು (ಆರ್‌ಆರ್‌ಬಿ) ಈಗಾಗಲೇ ಸಾವಿರಾರು ಹುದ್ದೆಗಳಿಗೆ ಅರ್ಹರಿಂದ ಅರ್ಜಿ ಆಹ್ವಾನಿಸಲಾಗಿದೆ. ರೈಲ್ವೆ ನೇಮಕಾತಿ ಪರೀಕ್ಷೆಗಳನ್ನು ಕನ್ನಡದಲ್ಲಿ ಬರೆಯಲು ಅವಕಾಶ ಕಲ್ಪಿಸಲಾಗಿದೆ. ಹೀಗಿದ್ದರೂ ಸಹ ಕನ್ನಡಿಗರು ರೈಲ್ವೆ ನೇಮಕಾತಿಯಲ್ಲಿ ಆಸಕ್ತಿ ತೋರುತ್ತಿಲ್ಲ
>
> **ವಿ .ಸೋಮಣ್ಣ** , ಕೇಂದ್ರ ಸಚಿವ

ದೇಶ ಬಿಜೆಪಿಮಯವಾಗಲಿದೆ

ಕೊಪ್ಪಳ: ಮುಂದಿನ ದಿನಗಳಲ್ಲಿ ಕರ್ನಾಟಕ ಸೇರಿ ಇಡೀ ದೇಶ ಬಿಜೆಪಿ ಮಯವಾಗಲಿದೆ ಎಂದು ಶಾಸಕ ಜನಾರ್ದನ ರೆಡ್ಡಿ ಹೇಳಿದರು.

ಜಿಲ್ಲೆಯ ಇರಕಲ್ಲಗಡಾ ಗ್ರಾಮದಲ್ಲಿ ಮಾತನಾಡಿ, ದೆಹಲಿ ವಿಧಾನಸಭೆ ಚುನಾವಣೆ ಯಲ್ಲಿ ಬಿಜೆಪಿ ಗೆಲುವು ವಿಚಾರವಾಗಿ, ಇದು ಪ್ರಧಾನಿ ಮೋದಿ ಅವರ ಜನಪ್ರಿಯತೆ ತೋರಿಸುತ್ತದೆ. ಬರುವ ದಿನದಲ್ಲಿ ಕರ್ನಾಟಕ ಸೇರಿ ಇಡೀ ದೇಶ ಬಿಜೆಪಿ ಮಯವಾಗಲಿದೆ. ಕಾಂಗ್ರೆಸ್ ದೆಹಲಿಯಲ್ಲಿ ಶೂನ್ಯವಾಗಿದೆ. ನಮ್ಮ ರಾಜ್ಯದಲ್ಲಿ ಗ್ಯಾರಂಟಿ ಸುಳ್ಳಿನ ಸರಮಾಲೆ ಮೇಲೆ ಕಾಂಗ್ರೆಸ್ ಪಕ್ಷ ಅಧಿಕಾರಕ್ಕೆ ಬಂದಿದೆ. ಕಾಂಗ್ರೆಸ್ ಪಕ್ಷ ಕರ್ನಾಟಕ ಸೇರಿ ದೇಶದಲ್ಲಿ ಶೂನ್ಯವಾಗಲಿದೆ ಎಂದು ಹೇಳಿದರು.

ಮತದಾರರಿಂದ ಹೀನಾಯ ಸೋಲು: ಗೋವಿಂದ ಕಾರಜೋಳ ಟೀಕೆ

ಸಂವಿಧಾನ ದ್ರೋಹಿ ಅರವಿಂದ ಕೇಜ್ರಿವಾಲ್

ವಿಜಯಪುರ: ಉಚಿತ ಯೋಜನೆ, ಸುಳ್ಳು ಆಶ್ವಾಸನೆಗಳ ಮೂಲಕ ಬಡಜನರ ವೋಟು ಕದ್ದು, ಚುನಾವಣೆ ವ್ಯವಸ್ಥೆಯನ್ನೇ ಬುಡಮೇಲು ಮಾಡುತ್ತಿದ್ದ ಅರವಿಂದ ಕೇಜ್ರಿವಾಲ್‌ಗೆ ದೆಹಲಿ ಮತದಾರರು ಹೀನಾಯ ಸೋಲು ಉಣಿಸಿದ್ದಾರೆ ಎಂದು ಸಂಸದ ಗೋವಿಂದ ಕಾರಜೋಳ ಹೇಳಿದ್ದಾರೆ.

ಸುದ್ದಿಗಾರರೊಂದಿಗೆ ಮಾತನಾಡಿ, ಪ್ರಧಾನಿ ನರೇಂದ್ರ ಮೋದಿ ಅವರ ಜನಪರ ಆಡಳಿತದಿಂದಾಗಿ ದೆಹಲಿ ಚುನಾವಣೆಯಲ್ಲಿ ಬಿಜೆಪಿ ಜಯ ಗಳಿಸಿದೆ. ಈ ಅಭೂತಪೂರ್ವ ಗೆಲುವಿಗೆ ಕಾರಣರಾದ ಪ್ರಧಾನಿಗೆ ಅಭಿನಂದನೆ ಸಲ್ಲಿಸುತ್ತೇನೆ ಎಂದರು.

ಲೂಟಿ ಹೊಡೆದಿದ್ದ ಕೇಜ್ರಿವಾಲ್: 10 ವರ್ಷಗಳ ಕಾಲ ಕೇಜ್ರಿವಾಲ್ ಅವರು ದೆಹಲಿಯಲ್ಲಿ ದುರಾಡಳಿತ ನಡೆಸಿದ್ದರು. ಜೈಲಿಗೆ ಹೋದರೂ ಲಜ್ಜೆಗೆಟ್ಟು ಆಡಳಿತ ನಡೆಸಿದ್ದ ಸಂವಿಧಾನ ದ್ರೋಹಿ. ದೆಹಲಿ ಎಂಬುದು ಒಂದು ಬೃಹತ್ ಮಹಾನಗರ ಪಾಲಿಕೆ ಆಡಳಿತ ಇದ್ದಂತೆ. ಬೇರೆ ರಾಜ್ಯಗಳಿಗೆ ಇರುವಂತೆ ಹೆಚ್ಚಿನ ಜವಾಬ್ದಾರಿ ಇಲ್ಲದ ಸರಕಾರವಾಗಿದೆ. ಅತಿಹೆಚ್ಚು ಆದಾಯ ಸಂಗ್ರಹವಾಗುವ ದೆಹಲಿಯಲ್ಲಿ ಸರಕಾರದ ಖಜಾನೆಯನ್ನು ಲೂಟಿ ಹೊಡೆದ ದೇಶ ಕಂಡ ಹೀನಮನಸ್ಸಿನ ರಾಜಕಾರಣಿಯಾಗಿದ್ದರು ಕೇಜ್ರಿವಾಲ್ ಎಂದು ಸಂಸದರು ಟೀಕಿಸಿದರು.

> ದೆಹಲಿ ಚುನಾವಣೆಯಲ್ಲಿ ಕಾಂಗ್ರೆಸ್ ಮತ್ತೊಮ್ಮೆ ಹೀನಾಯ ಸೋಲು ಕಂಡಿದೆ. ಎಲ್ಲಿಯವರೆಗೆ ರಾಹುಲ್ ಗಾಂಧಿ, ಸೋನಿಯಾ ಗಾಂಧಿ, ಪ್ರಿಯಾಂಕಾ ಗಾಂಧಿ ಸರ್ವಾಧಿಕಾರದಲ್ಲಿ ಕಾಂಗ್ರೆಸ್ ಇರುತ್ತದೆಯೋ ಅಲ್ಲಿಯವರೆಗೆ ಪಕ್ಷ ನಶಿಸಿ ಹೋಗಲಿದೆ. ಪಕ್ಷದ ವ್ಯವಸ್ಥೆ ಒಳಗೆ ಇದ್ದೇವೆ. ಪಕ್ಷ ತಾಯಿ ಇದ್ದಂತೆ. ಪಕ್ಷದ ತೀರ್ಮಾನವೇ ಅಂತಿಮ. ರಾಜ್ಯ ಬಿಜೆಪಿಯನ್ನು ಸರಿಮಾಡುವ ಕೆಲಸ ಶೀಘ್ರ ವರಿಷ್ಠರು ಮಾಡಲಿದ್ದಾರೆ.
>
> -**ಗೋವಿಂದ ಕಾರಜೋಳ**, ಸಂಸದ

ಕೈಕೊಟ್ಟ ಪ್ಯಾರಾಶೂಟ್:ಅಧಿಕಾರಿ ಸಾವು

ಶಿವಮೊಗ್ಗ: ತರಬೇತಿ ವೇಳೆ ಪ್ಯಾರಾಶೂಟ್ ತೆರೆಯದೇ ಮೇಲಿನಿಂದ ಬಿದ್ದು ಸಾವನ್ನಪ್ಪಿದ ಹೊಸನಗರ ತಾಲೂಕು ಸಂಕೂರು ಗ್ರಾಮದ ವಾಯುಪಡೆ ಅಧಿಕಾರಿ ಮಂಜುನಾಥ್ (36) ಅವರ ಪಾರ್ಥಿವ ಶರೀರವನ್ನು ಶನಿವಾರ ರಾತ್ರಿ ಬೆಂಗಳೂರಿಗೆ ತರಲಾಗಿದೆ.

ಮಂಜುನಾಥ್ ಅವರು ಭಾರತೀಯ ವಾಯುಪಡೆಯಲ್ಲಿ ಜ್ಯೂನಿಯರ್ ವಾರಂಟ್ ಆಫೀಸರ್ ಆಗಿ ಕರ್ತವ್ಯ ನಿರ್ವಹಿಸುತ್ತಿದ್ದರು. ಶುಕ್ರವಾರ ಉತ್ತರ ಪ್ರದೇಶದ ಆಗ್ರಾದ ಮಾಲ್ಪುರದಲ್ಲಿರುವ ಪ್ಯಾರಾಟ್ರೂಪರ್ ತರಬೇತಿ ಶಾಲೆಯಲ್ಲಿ ಟ್ರೈನಿಂಗ್ ಪಡೆಯುವಾಗ ಪ್ಯಾರಾಶೂಟ್ ತೆರೆಯದೇ ಬಿದ್ದು ಸಾವನ್ನಪ್ಪಿದ್ದರು.

ಮಂಜುನಾಥ್ ಸೇರಿದಂತೆ ಒಟ್ಟು 12 ಜನ ಯೋಧರು ಪ್ಯಾರಾಶೂಟ್ ಮೂಲಕ ವಿಮಾನದಿಂದ ಹಾರಿದ್ದರು. ಈ ವೇಳೆ, 11 ಜನ ಯೋಧರು ಸುರಕ್ಷಿತವಾಗಿ ಕೆಳಗಿಳಿದಿದ್ದಾರೆ. ಆದರೆ ಮಂಜುನಾಥ್ ಕಾಣದೆ ಇದ್ದಾಗ ಹುಡುಕಾಟ ನಡೆಸಿದಾಗ ಅವರು ಪ್ಯಾರಾಶೂಟ್ ತೆರೆಯದೆ ಬಿದ್ದು ಗಾಯಗೊಂಡಿರುವುದು ಕಂಡುಬಂದಿತ್ತು. ಆಗ್ರಾದ ಸುತೇಂಡಿ ಗ್ರಾಮದ ಬಳಿಯ ಹೊಲದಲ್ಲಿ ಪತ್ತೆಯಾಗಿದ್ದರು. ತಕ್ಷಣ ಅಧಿಕಾರಿಗಳು ಮಂಜುನಾಥ್ ಅವರನ್ನು ಆಸ್ಪತ್ರೆಗೆ ದಾಖಲಿಸಿದ್ದರು. ಆದರೆ ಚಿಕಿತ್ಸೆ ಫಲಕಾರಿಯಾಗದೆ ಅವರು ಮೃತರಾಗಿದ್ದಾರೆ. ಮಂಜುನಾಥ್ ಪಾರ್ಥಿವ ಶರೀರ ಭಾನುವಾರ ಸ್ವಗ್ರಾಮಕ್ಕೆ ಬರಲಿದ್ದು, ಸಕಲ ಸರಕಾರಿ ಗೌರವದೊಂದಿಗೆ ಹುಟ್ಟೂರಿನಲ್ಲಿ ಅಂತ್ಯಕ್ರಿಯೆ ನೆರವೇರಲಿದೆ.

ಸಾಲ ಹಣಕ್ಕೆ ಟ್ರ್ಯಾಕ್ಟರ್ ಕೊಂಡೊಯ್ದ ಆರೋಪಿ

ಕಾರವಾರ: ಮೀಟರ್ ಬಡ್ಡಿಗೆ ಪಡೆದಿದ್ದ 1.20 ಲಕ್ಷ ರು.ಗಳಿಗೆ 12 ಲಕ್ಷ ರು. ಬಡ್ಡಿ ಕಟ್ಟಿದ್ದರೂ ಸಾಲದ ಹಣ ಸಮಯಕ್ಕೆ ಸರಿಯಾಗಿ ಮರಳಿ ಕೊಡಲಿಲ್ಲ ಎಂದು ಜೀವ ಬೆದರಿಕೆ ಹಾಕಿ, ಮನೆಯಲ್ಲಿದ್ದ ಹೊಸ ಟ್ರ್ಯಾಕ್ಟರ್ ಕೊಂಡೊಯ್ದ ಘಟನೆ ಬಗ್ಗೆ ಮುಂಡಗೋಡ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ. ಈ ಸಂಬಂಧ ಆರೋಪಿಯನ್ನು ಪೊಲೀಸರು ಬಂಧಿಸಿದ್ದಾರೆ.

ಘಟನೆ ವಿವರ: ಮುಂಡಗೋಡ ತಾಲೂಕಿನ ಇಂದೂರ ಗ್ರಾಮದ ಮಹೇಶ ದೊಡ್ಡಮನಿ ಎಂಬವರು ಪೊಲೀಸರಿಗೆ ದೂರು ನೀಡಿದ್ದರು. ತಾನು ಎರಡು ವರ್ಷಗಳ ಹಿಂದೆ ಜಹೀರ್ ಶಬೀರ ಶೇಖ್ ಅವರಿಂದ 80 ಸಾವಿರ ಹಾಗೂ ಕರಿಂಖಾನ್ ಖಾನಜಾದೆ ಎಂಬವರಿಂದ 60 ಸಾವಿರ ಎರಡು ತಿಂಗಳಿಗೆ ಕೈಗಡ ಪಡೆದಿದ್ದು, ಸಮಯಕ್ಕೆ ಕಟ್ಟಲು ಸಾಧ್ಯವಾಗಿರಲಿಲ್ಲ. ಆದರೆ, ಪ್ರತಿ ವಾರವೂ ಹನ್ನೊಂದು ಸಾವಿರ ರು. ಬಡ್ಡಿ ನೀಡುತ್ತಿದ್ದು, ಸಾಲ ಪಡೆದಿದ್ದ 1.20 ಲಕ್ಷ ರು.ಗಳಿಗೆ 12 ಲಕ್ಷ ರು. ತುಂಬಿದ್ದೆ. ಆದರೂ ಸಾಲ ಇನ್ನೂ ತೀರಿಲ್ಲ ಎಂದು ತಮ್ಮ ಟ್ರ್ಯಾಕ್ಟರ್ ಕೊಂಡೊಯ್ಯಲಾಗಿದೆ ಎಂದು ದೊಡ್ಡಮನಿ ದೂರಿನಲ್ಲಿ ವಿವರಿಸಿದ್ದಾರೆ.

ವಿಟಿಯು ಘಟಿಕೋತ್ಸವದಲ್ಲಿ ಯುವ ಪದವೀಧರಿಗೆ ರಾಜ್ಯಪಾಲ ಗೆಹ್ಲೋಟ್ ಕರೆ

ವಿಕಸಿತ ಭಾರತ ನಿರ್ಮಾಣದಲ್ಲಿ ಪಾಲ್ಗೊಳ್ಳಿ

ಬೆಳಗಾವಿ: ಪದವೀಧರರು ಸಾಮಾಜಿಕ ಪ್ರಜ್ಞೆಯೊಂದಿಗೆ ಹೊಸ ಕನಸಗಳನ್ನು ಕಾಣುವುದಲ್ಲದೆ ಅವುಗಳನ್ನು ನನಸಾಗುವತ್ತ ದೃಷ್ಟಿಹರಿಸಿ ವಿಕಸಿತ ಮತ್ತು ಆತ್ಮನಿರ್ಭರ ಭಾರತ ನಿರ್ಮಾಣದಲ್ಲಿ ತಮನ್ನು ತೊಡಗಿಸಿಕೊಳ್ಳಬೇಕು ಎಂದು ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಅಭಿಪ್ರಾಯಪಟ್ಟರು.

ಶನಿವಾರ ಬೆಳಗಾವಿಯ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯದ ಡಾ. ಅಬ್ದುಲ್ ಕಲಾಂ ಸಭಾಂಗಣದಲ್ಲಿ ಆಯೋಜಿಸಲಾಗಿದ್ದ ವಿಟಿಯು 24 ನೇ ವಾರ್ಷಿಕ ಘಟಿಕೋತ್ಸವದ ಭಾಗ - 2ರ ಕಾರ್ಯಕ್ರಮ ಉದ್ದೇಶಿಸಿ ಮಾತನಾಡಿ, ಇಂದಿನ ಘಟಿಕೋತ್ಸವದಲ್ಲಿ ವಿದ್ಯಾರ್ಥಿನಿಯರು ಹೆಚ್ಚು ಚಿನ್ನದ ಪದಕ ವಿಜೇತರಾಗಿದ್ದಾರೆ. ಪ್ರತಿ ಕ್ಷೇತ್ರದಲ್ಲೂ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಉನ್ನತ ಹುದ್ದೆ ಅಲಂಕರಿಸಬೇಕು ಎಂದರು.

ಈ ಸಂದರ್ಭದಲ್ಲಿ ಖ್ಯಾತ ವಿಜ್ಞಾನಿ ಹಾಗೂ ಕನ್ಯಾಕುಮಾರಿಯ ನೂರುಲ್ ಇಸ್ಲಾಂ ಸೆಂಟರ್ ಫಾರ್ ಹೈಯರ್ ಎಜುಕೇಶನ್ ಕುಲಪತಿ ಡಾ. ಟೆಸ್ಸಿ ಥಾಮಸ್, ವಿಟಿಯು ಕುಲಪತಿ ಪ್ರೊ. ವಿದ್ಯಾಶಂಕರ್ ಎಸ್, ಕುಲಸಚಿವ ಪ್ರೊ. ಬಿ.ಈ ರಂಗಸ್ವಾಮಿ, ಪ್ರೊ. ಟಿ. ಎನ್. ಶ್ರೀನಿವಾಸ, ವಿಟಿಯು ಡೀನ್ ಪ್ರೊ. ಸದಾಶಿವೆಗೌಡ, ಹಣಕಾಸು ಅಧಿಕಾರಿ ಡಾ ಪ್ರಶಾಂತ ನಾಯಕ್ ಜಿ. , ಕಾರ್ಯಕಾರಿ ಪರಿಷತ್ ಹಾಗೂ ವಿದ್ಯಾವಿಧಾನ ಮಂಡಲ ಸದಸ್ಯರು, ಪೋಷಕರು ಹಾಗೂ ಅನೇಕರು ಉಪಸ್ಥಿತರಿದ್ದರು.

ವಿಟಿಯು 24 ನೇ ವಾರ್ಷಿಕ ಘಟಿಕೋತ್ಸವದ ಭಾಗ - 2 ಕಾರ್ಯಕ್ರಮದಲ್ಲಿ ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಮಾತನಾಡಿದರು.

> ಯುವಕರು ಪರಿಸರ ಸಂರಕ್ಷಣೆಯತ್ತ ಗಮನ ಹರಿಸಬೇಕು. ಒಂದು ರಾಷ್ಟ್ರದ ಅಭಿವೃದ್ಧಿ ಅದರ ತಂತ್ರಜ್ಞಾನ ಪ್ರಗತಿ ಬಹು ಮುಖ್ಯ ಪಾತ್ರ ವಹಿಸುತ್ತದೆ. ಈ ಕುರಿತು ಪ್ರತಿಯೊಬ್ಬರೂ ಉನ್ನತ ಮಾಹಿತಿಯೊಂದಿಗೆ ವಿದ್ಯಾಭ್ಯಾಸ ಮಾಡಬೇಕು. ರಾಷ್ಟ್ರ ನಿರ್ಮಾಣ ಕಾರ್ಯದಲ್ಲಿ ತೊಡಗಬೇಕು.
>
> **ಥಾವರಚಂದ್ ಗೆಹ್ಲೋಟ್**, ರಾಜ್ಯಪಾಲ

ವಿಟಿಯು ಕಾರ್ಯ ಶ್ಲಾಘನೀಯ

ವಿದ್ಯಾರ್ಥಿಗಳ ಸರ್ವಾಂಗೀಣ ಅಭಿವೃದ್ಧಿಗೆ ಹಾಗೂ ಕರ್ನಾಟಕವನ್ನು ಜಾಗತಿಕ ತಾಂತ್ರಿಕ ಶಿಕ್ಷಣ ಕೇಂದ್ರವನ್ನಾಗಿಸಲು ವಿಟಿಯು ಅನುಷ್ಠಾನ ಮಾಡಿದ ಕಾರ್ಯಕ್ರಮಗಳು ಶ್ಲಾಘನೀಯ ಎಂದು ರಾಜ್ಯಪಾಲ ಥಾವರಚಂದ್ ಗೆಹ್ಲೋಟ್ ಹೇಳಿದರು.

ಅರಾಜಕತೆ ಸೃಷ್ಟಿ ಮಾಡುತ್ತಿದ್ದವರಿಗೆ ಕಪಾಳ ಮೋಕ್ಷ: ಪ್ರಲ್ಹಾದ್ ಜೋಶಿ

ನಕಾರಾತ್ಮಕ ವ್ಯಕ್ತಿಗಳಿಗೆ ದೆಹಲಿ ಜನರಿಂದ ಪಾಠ

ಹುಬ್ಬಳ್ಳಿ: ನಕಾರಾತ್ಮಕ ತಂತ್ರಗಳಿಂದ ರಾಜಕೀಯ ಮಾಡುತ್ತಿದ್ದವರಿಗೆ ದೆಹಲಿ ಜನರು ತಕ್ಕ ಪಾಠ ಕಲಿಸಿದ್ದಾರೆ ಎಂದು ಕೇಂದ್ರ ಸಚಿವ ಪ್ರಲ್ಹಾದ್ ಜೋಶಿ ಹೇಳಿದರು.

ಸುದ್ದಿಗಾರರೊಂದಿಗೆ ಮಾತನಾಡಿ, ದೆಹಲಿ ಯಲ್ಲಿ ಪ್ರಧಾನಿ ನೇತೃತ್ವದಲ್ಲಿ ಬಿಜೆಪಿಗೆ ಜನರು ಭರ್ಜರಿ ತೀರ್ಪು ಕೊಟ್ಟಿದ್ದಾರೆ. 48 ಸ್ಥಾನಗಳಲ್ಲಿ ಬಿಜೆಪಿ ಗೆದ್ದಿದೆ. ಪ್ರಧಾನಿ ಮೋದಿ, ಜೆ.ಪಿ ನಡ್ಡಾ, ಅಮಿತ್ ಶಾ, ರಾಜನಾಥ್ ಸಿಂಗ್ ಮತ್ತು ದೆಹಲಿ ಜನತೆಗೆ ಧನ್ಯವಾದಗಳು ಎಂದರು. ನಕಾರಾತ್ಮಕ ತಂತ್ರಗಳ ಮೂಲಕ ರಾಜಕೀಯ ಮಾಡುತ್ತಿದ್ದವರಿಗೆ ದೆಹಲಿ ಜನ ತಕ್ಕ ಪಾಠ ಕಲಿಸಿದ್ದಾರೆ. ದೆಹಲಿಯಲ್ಲಿ ಅರಾಜಕತೆ ಸೃಷ್ಟಿ ಮಾಡುತ್ತಿದ್ದವರಿಗೆ ಕಪಾಳ ಮೋಕ್ಷವಾಗಿದೆ. ನಾವು ಪ್ರಜಾಪ್ರಭುತ್ವವನ್ನು ನಂಬಿದ್ದೇವೆ. ಪ್ರಜಾಪ್ರಭುತ್ವದಲ್ಲಿ ಯಶಸ್ವಿಯಾದ ರಚನಾತ್ಮಕ ಹಾಗೂ ಪ್ರಬಲ ರಾಜಕೀಯ ಪಕ್ಷ ಇರಬೇಕು ಎನ್ನುವುದು ನಮ್ಮ ಅಭಿಲಾಷೆ ಎಂದರು.

> ಕಾಂಗ್ರೆಸ್ ದಿನದಿಂದ ದಿನಕ್ಕೆ ಕುಸಿಯುತ್ತಿದೆ. ಈ ಸ್ಥಿತಿ ಆ ಪಕ್ಷಕ್ಕೆ ಒಳ್ಳೆಯದಲ್ಲ. ಈ ಬಗ್ಗೆ ಕಾಂಗ್ರೆಸ್ ಆತ್ಮಾವಲೋಕನ ಮಾಡಿಕೊಳ್ಳಬೇಕು. ಕರ್ನಾಟಕದಲ್ಲಿ ಕಾಂಗ್ರೆಸ್ ಅಧಿಕಾರದಲ್ಲಿ ಇದೆ ಅಂತ ಅಹಂಕಾರದಲ್ಲಿರುವವರು ಇದನ್ನು ಅರ್ಥ ಮಾಡಿಕೊಳ್ಳಬೇಕು.
>
> -**ಪ್ರಲ್ಹಾದ್ ಜೋಶಿ**, ಕೇಂದ್ರ ಸಚಿವ

ಪ್ರವಾಸೋದ್ಯಮ ನಿಗಮದ ಅಧ್ಯಕ್ಷ ಶ್ರೀನಿವಾಸ್ ವೃತ್ತ ಉದ್ಘಾಟನಾ ಕಾರ್ಯಕ್ರಮದಲ್ಲಿ ಕೆ.ಪಿ.ಅಂಶುಮಂತ್ ಅಭಿಮತ

ನರಸಿಂಹರಾಜಪುರ ಅಭಿವೃದ್ಧಿಗೆ ಶ್ರೀನಿವಾಸ್ ಕೊಡುಗೆ ಅನನ್ಯ

ನರಸಿಂಹರಾಜಪುರ: ಅಧಿಕಾರವಿರಲಿ,ಅಧಿಕಾರವಿಲ್ಲದಿರಲಿ ಹಲವು ದಶಕಗಳಿಂದ ಹುಟ್ಟೂರಿನ ಅಭಿಮಾನದಿಂದ ಊರಿನ ಅಭಿವೃದ್ಧಿಗೆ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ಶ್ರೀನಿವಾಸ್ ಅವರ ಕೊಡುಗೆ ಅನನ್ಯವಾದುದು ಎಂದು ಶಿವಮೊಗ್ಗ ಭದ್ರಾ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಕೆ.ಪಿ.ಅಂಶುಮಂತ್ ಹೇಳಿದರು.

ಪಟ್ಟಣದಲ್ಲಿ ಶುಕ್ರವಾರ ನಡೆದ ಕಾರ್ಯಕ್ರಮದಲ್ಲಿ ಎಂ.ಶ್ರೀನಿವಾಸ್ ವೃತ್ತ ಉದ್ಘಾಟನೆಯನ್ನು ನೆರವೇರಿಸಿ ಮಾತನಾಡಿದರು.

ಸರ್ವಧರ್ಮಗಳಿಗೆ ಬೆಂಬಲ: ವಿಧಾನಪರಿಷತ್ ಸದಸ್ಯರಾಗಿದ್ದಾಗಲೂ ಶ್ರೀನಿವಾಸ್ ಯಾವುದೇ ಸ್ವಾರ್ಥವಿಲ್ಲದೆ ಹಲವು ಅಭಿವೃದ್ಧಿ ಕಾಮಗಾರಿಗಳಿಗೆ ಅನುದಾನ ನೀಡಿದ್ದಾರೆ. ದೇವಸ್ಥಾನ,ಚರ್ಚ್, ಮಸೀದಿಗಳನ್ನು ಅಭಿವೃದ್ಧಿ ಪಡಿಸುವ ಮೂಲಕ ಸರ್ವಧರ್ಮಿಯರ ಧಾರ್ಮಿಕ ಆಚರಣೆಗಳಿಗೆ ಬೆಂಬಲವಾಗಿ ನಿಂತಿದ್ದಾರೆ. ಸಮುದಾಯ ಭವನಗಳನ್ನು ನಿರ್ಮಿಸಿದ್ದಾರೆ. ನರಸಿಂಹರಾಜಪುರ ಅಭಿವೃದ್ಧಿಗೆ ಯಾವುದೇ ಕಾಮಗಾರಿಯನ್ನು ಕೈಗೊಂಡರೂ ಅದನ್ನು ಪೂರ್ಣಗೊಳಿಸುವವರೆಗೂ ಬದ್ಧತೆ ಪ್ರದರ್ಶಿಸುವ ಅವರ ಕಾರ್ಯ ಶ್ಲಾಘನೀಯ ಎಂದರು.

ಕೋವಿಡ್ ಸಂದರ್ಭದಲ್ಲಿ ಸಂಕಷ್ಟದಲ್ಲಿದ್ದ ಇಡೀ ಊರಿನ ಜನರಿಗೆ ಸಹಾಯಹಸ್ತ ಚಾಚಿದ್ದಾರೆ. ಪ್ರವಾಸಿಮಂದಿರ ಅಭಿವೃದ್ಧಿ, ಹೊನ್ನೆಕೂಡಿಗೆ ಸೇತುವೆ ನಿರ್ಮಾಣಕ್ಕೆ ಅನುದಾನ ತರುವ ಮೂಲಕ ಉತ್ತಮ ಕಾರ್ಯ ಮಾಡಿದ್ದಾರೆ. ಪಟ್ಟಣ ಪಂಚಾಯಿತಿ ಆಡಳಿತ ಮಂಡಳಿ, ಪಟ್ಟಣದ ಪ್ರಮುಖ ಸ್ಥಳಗಳಿಗೆ ಮಹನೀಯರ ಹೆಸರನ್ನು ಇಡುವ ಮೂಲಕ ಅವರ ಹೆಸರು ಚಿರಸ್ಥಾಯಿಯಾಗಿ ಉಳಿಯುವಂತೆ ಮಾಡಿದೆ. ಅದರಂತೆ ಊರಿನ ಅಭಿವೃದ್ಧಿ ನಿಸ್ವಾರ್ಥವಾಗಿ ಶ್ರಮಿಸಿದ ಎಂ.ಶ್ರೀನಿವಾಸ್ ಹೆಸರನ್ನು ಅವರು ಹುಟ್ಟಿ ಬೆಳೆದ ಪ್ರದೇಶದ ವ್ಯಾಪ್ತಿಯ ವೃತ್ತಕ್ಕೆ ಇಡುವ ಮೂಲಕ ಅವರ ಹೆಸರನ್ನು ಶಾಶ್ವತವಾಗಿ ನೆನಪಿನಲ್ಲಿಡುವಂತೆ ಮಾಡಿರುವುದು ಸ್ತುತ್ಯರ್ಹ ಕಾರ್ಯ ಎಂದು ಕೆ.ಪಿ.ಅಂಶುಮಂತ್ ನುಡಿದರು.

ರಸ್ತೆ ಅಭಿವೃದ್ಧಿ: ಪಟ್ಟಣ ಪಂಚಾಯಿತಿ ಸದಸ್ಯ ಮುನಾವರ್ ಪಾಷಾ ಮಾತನಾಡಿ, ಪಟ್ಟಣದ ವ್ಯಾಪ್ತಿಯಲ್ಲಿ ರಸ್ತೆ ವಿಸ್ತರಣೆಗೆ ಎಂ.ಶ್ರೀನಿವಾಸ್ ಅವರು 60 ಕೋಟಿ ಅನುದಾನ ಬಿಡುಗಡೆ ಮಾಡಿಸಿಕೊಡುವ ಭರವಸೆ ನೀಡಿದ್ದಾರೆ. ಅಲ್ಲದೆ ಶಾಸಕ ಟಿ.ಡಿ.ರಾಜೇಗೌಡರು, ನರಸಿಂಹರಾಜಪುರದಲ್ಲಿ ಮಿನಿ ವಿಧಾನಸೌಧ ನಿರ್ಮಿಸುವ ಭರವಸೆ ನೀಡಿದ್ದು ಕಾಂಗ್ರೆಸ್ ನೇತೃತ್ವದ ಸರಕಾರದ ಅವಧಿಯಲ್ಲಿಯೇ ಈ ಕಾಮಗಾರಿ ಪೂರ್ಣಗೊಳಿಸಲಾಗುವುದು ಎಂದರು.

ಜಾಮೀಯ ಮಸೀದಿಯ ಕಾರ್ಯದರ್ಶಿ ಸಾದಿಕ್ ಪಾಷಾ, ಪಟ್ಟಣ ಪಂಚಾಯಿತಿ ಸದಸ್ಯ ಮುಕುಂದ ಮಾತನಾಡಿದರು. ಪಟ್ಟಣ ಪಂಚಾಯಿತಿ ಅಧ್ಯಕ್ಷೆ ಸುರಯ್ಯಾ ಬಾನು, ಉಪಾಧ್ಯಕ್ಷೆ ಉಮಾ ಕೇಶವ್, ಸದಸ್ಯರಾದ ಶೋಜಾ, ಕುಮಾರಸ್ವಾಮಿ, ಜುಬೇದಾ, ಸುಬ್ರಹ್ಮಣ್ಯ, ಅಣ್ಣಪ್ಪ,ಮುಖಂಡರಾದ ಶಿವಣ್ಣ, ಅಬೂಬಕರ್, ಉಪೇಂದ್ರ, ಲಕ್ಷ್ಮಣ್ ಶೆಟ್ಟಿ, ಉಪೇಂದ್ರ, ಜೆಡಿಎಸ್ ಮುಖಂಡ ಅಬ್ದುಲ್ ಸುಬಾನ್, ಗ್ರಾಮ ಪಂಚಾಯಿತಿ ಸದಸ್ಯರು, ವಿವಿಧ ಸಂಘ ಸಂಸ್ಥೆಗಳ ಅಧ್ಯಕ್ಷರು, ಸದಸ್ಯರು ಪಾಲ್ಗೊಂಡಿದ್ದರು.

ನರಸಿಂಹರಾಜಪುರದಲ್ಲಿ ರಾಜ್ಯ ಪ್ರವಾಸೋದ್ಯಮ ಅಭಿವೃದ್ಧಿ ನಿಗಮದ ಅಧ್ಯಕ್ಷ ಎಂ.ಶ್ರೀನಿವಾಸ್ ಹೆಸರಿನ ವೃತ್ತದ ಉದ್ಘಾಟನೆ ನೆರವೇರಿತು. ಕೆ.ಪಿ.ಅಂಶುಮಂತ್, ಪ್ರಶಾಂತ್ ಶೆಟ್ಟಿ , ಈ.ಸಿ.ಜೋಯಿಸ್, ಮುನಾವರ್ ಪಾಷಾ, ಸುರಯ್ಯಾ ಬಾನು, ಉಮಾ ಕೇಶವ್ ಮೊದಲಾದವರು ಇದ್ದರು.

ಶ್ರೀನಿವಾಸ್ ಜನಪರ ಕಾರ್ಯ ಸ್ಮರಣೀಯ

ಎಂ.ಶ್ರೀನಿವಾಸ್ ಅಭಿಮಾನಿ ಬಳಗ ಹಾಗೂ ಚೈತನ್ಯ ಯುವಕ ಸಂಘದ ಅಧ್ಯಕ್ಷ ಪ್ರಶಾಂತ್ ಶೆಟ್ಟಿ ಮಾತನಾಡಿ,ಎಂ.ಶ್ರೀನಿವಾಸ್ ಅವರು ಕೋಟೆ ಆಂಜನೇಯಸ್ವಾಮಿ ದೇವಸ್ಥಾನ, ಸಮುದಾಯಭವನ, ಕೋಟೆ ಮಾರಿಕಾಂಬ ದೇವಸ್ಥಾನ, ದರ್ಗಾ, ಅಲ್ ನೂರ್ ಮಸೀದಿ, ಚರ್ಚ್ ಅಭಿವೃದ್ಧಿಗೆ ಸರಕಾರದ ಅನುದಾನ ಕೊಡಿಸಿ, ವೈಯಕ್ತಿಕವಾಗಿಯೂ ಸಹಾಯ ಮಾಡಿದ್ದಾರೆ. ಹೊನ್ನೆಕೂಡಿಗೆ ಗ್ರಾಮಕ್ಕೆ ಸಂಪರ್ಕ ಕಲ್ಪಿಸುವ ಸೇತುವೆಗೆ 35 ಕೋಟಿ ರು. ಅನುದಾನ ಬಿಡುಗಡೆಯಾಗಿದ್ದು, ಕಾಮಗಾರಿ ಪ್ರಗತಿಯಲ್ಲಿದೆ. ಸೇತುವೆಯಿಂದ ಪಟ್ಟಣಕ್ಕೆ ಸಂಪರ್ಕ ಕಲ್ಪಿಸುವ ರಸ್ತೆಗೆ 5 ಕೋಟಿ ರು.ಅನುದಾನ ಬಿಡುಗಡೆ ಮಾಡಿಸಿದ್ದಾರೆ. ನರಸಿಂಹರಾಜಪುರ ರಸ್ತೆ ವಿಸ್ತರಣೆಗೆ 60 ಕೋಟಿ ರು.ಅನುದಾನ ಬಿಡುಗಡೆ ಹಂತದಲ್ಲಿದೆ. ಈ ರೀತಿ ಹುಟ್ಟೂರಿನ ಅಭಿಮಾನದ ಮೇಲೆ ಊರಿನ ಸರ್ವತೋಮುಖ ಅಭಿವೃದ್ಧಿಗೆ ಶ್ರಮಿಸುತ್ತಿರುವ ಅವರ ನಿಸ್ವಾರ್ಥ ಸೇವೆ ಪರಿಗಣಿಸಿ ಪ್ರವಾಸಿಮಂದಿರದ ವೃತ್ತಕ್ಕೆ ಎಂ.ಶ್ರೀನಿವಾಸ್ ವೃತ್ತ ಎಂದು ನಾಮಕರಣ ಮಾಡಲಾಗಿದೆ ಎಂದರು.

> ಭದ್ರಾ ಅಣೆಕಟ್ಟು ನಿರ್ಮಾಣದಿಂದ ಗತವೈಭವ ಕಳೆದುಕೊಂಡಿದ್ದ ಪ್ರವಾಸಿ ಮಂದಿರದ ಪ್ರದೇಶಕ್ಕೆ ಎಂ. ಶ್ರೀನಿವಾಸ್ ಹೆಚ್ಚಿನ ಅನುದಾನ ನೀಡಿ ಹಲವು ಅಭಿವೃದ್ಧಿ ಕಾರ್ಯಗಳನ್ನು ಮಾಡಿ ಗತವೈಭವ ಮರುಕಳಿಸುವಂತೆ ಮಾಡಿದ್ದು ಅವರ ಹೆಸರಿಟ್ಟಿರುವುದು ಸೂಕ್ತವಾಗಿದೆ.
>
> -**ಈ.ಸಿ.ಜೋಯಿ**, ಬಗರ್ ಹುಕುಂ ಸಮಿತಿ ಅಧ್ಯಕ್ಷ

ಸಮಾಚಾರ ಸಣ್ಣದಲ್ಲ

2ನೇ ಮಗುವಿಗೆ ತಂದೆಯಾದ ಕಮಿನ್ಸ್

ಸಿಡ್ನಿ: ಆಸ್ಟ್ರೇಲಿಯಾ ಕ್ರಿಕೆಟ್ ತಂಡದ ನಾಯಕ ಪ್ಯಾಟ್ ಕಮಿನ್ಸ್ ಎರಡನೇ ಮಗುವಿನ ತಂದೆಯಾಗಿದ್ದಾರೆ. ಅವರ ಪತ್ನಿ ಬೆಕಿ ಕಮಿನ್ಸ್ ಹೆಣ್ಣು ಮಗುವಿಗೆ ಜನ್ಮ ನೀಡಿದ್ದು ಈ ವಿಷಯವನ್ನು ಸಾಮಾಜಿಕ ಜಾಲತಾಣದಲ್ಲಿ ಬಹಿರಂಗಪಡಿಸಿದ್ದಾರೆ. ತಮ್ಮ ಮುದ್ದಾದ ಮಗಳ ಫೋಟೋವನ್ನು ಇನ್‌ಸ್ಟಾಗ್ರಾಮ್ ಖಾತೆಯಲ್ಲಿ ಹಂಚಿಕೊಂಡು ಹೆಸರನ್ನು ಕೂಡ ರಿವೀಲ್ ಮಾಡಿದ್ದಾರೆ. 'ನಾವು ಅತ್ಯಂತ ಖುಷಿಯಾಗಿದ್ದೇವೆ. ಇವಳೇ ನಮ್ಮ ಮುದ್ದಾದ ಮಗಳು 'ಇಡಿ' ಎಂದು ಕಮಿನ್ಸ್ ಬರೆದುಕೊಂಡಿದ್ದಾರೆ. ಕಮಿನ್ಸ್ ಮತ್ತು ಬೆಕಿ 2022ರ ಆಗಸ್ಟ್ ನಲ್ಲಿ ವಿವಾಹವಾಗಿದ್ದರು. ಮದುವೆಗೂ ಮುನ್ನವೇ ಡೇಟಿಂಗ್ ನಡೆಸುತ್ತಿದ್ದ ಈ ಜೋಡಿ 2021ರಲ್ಲಿ ಆಲ್ಬಿ ಎಂಬ ಮಗಳಿಗೆ ಜನ್ಮ ನೀಡಿದ್ದರು. ಮಂಡಿರಜ್ಜು ಗಾಯದಿಂದ ಬಳಲುತ್ತಿರುವ ಪ್ಯಾಟ್ ಕಮಿನ್ಸ್ 2025ರ ಚಾಂಪಿಯನ್ಸ್ ಟ್ರೋಫಿಯಿಂದ ಹೊರಗುಳಿದಿದ್ದಾರೆ.

ಟಿ.20 ವಿಜೇತರಿಗೆ ವಜ್ರದುಂಗುರ

ಮುಂಬೈ: 2024ರ ಟಿ20 ವಿಶ್ವಕಪ್ ಗೆದ್ದ ತಂಡದ ಆಟಗಾರರಿಗೆ ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿ ವಿಶೇಷ ಉಂಗುರವನ್ನು ನೀಡಿ ಗೌರವಿಸಿದೆ. ಈ ಉಂಗುರವನ್ನು ಮಂಡಳಿಯು ಶುಕ್ರವಾರ ಅನಾವರಣಗೊಳಿಸಿದ್ದು ಈ ವಜ್ರದ ಉಂಗುರದ ಮೇಲೆ ಚಾಂಪಿಯನ್ಸ್ ರಿಂಗ್, ಇಂಡಿಯಾ ಜೊತೆಗೆ ವಿಶ್ವ ಚಾಂಪಿಯನ್ ಎಂದು ಬರೆಯಲಾಗಿದೆ. ಇದಕ್ಕೂ ಮೊದಲು ವಿಶೇಷ ಪ್ರಶಸ್ತಿಯಾಗಿ 125 ಕೋಟಿ ರು. ನೀಡಲಾಗಿತ್ತು. ಫೆಬ್ರವರಿ 1ರಂದು ನಡೆದ ವಾರ್ಷಿಕ ನಮನ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಬಿಸಿಸಿಐ ಇದನ್ನು ವಿಶ್ವಕಪ್ ವಿಜೇತ ತಂಡದ ಆಟಗಾರರಿಗೆ ನೀಡಿದೆ. ಮಂಡಳಿಯು ಉಂಗುರದ ಮೇಲೆ ಪ್ರತಿಯೊಬ್ಬ ಆಟಗಾರನ ಹೆಸರು ಮತ್ತು ಸಂಖ್ಯೆಯನ್ನು ಮಧ್ಯದಲ್ಲಿ ಅಶೋಕ ಚಕ್ರದೊಂದಿಗೆ ಬರೆಯಲಾದ ವಿಡಿಯೋವನ್ನು ಟ್ವೀಟ್ ಮಾಡಿದೆ. ಕಳೆದ ವರ್ಷ ಬಾರ್ಬಡೋಸ್‌ನಲ್ಲಿ ದಕ್ಷಿಣ ಆಫ್ರಿಕಾ ವಿರುದ್ಧ ನಡೆದ ರೋಮಾಂಚಕ ಫೈನಲ್ ಆಡಿದ 15 ಸದಸ್ಯರ ತಂಡದಿಂದ ಒಂಬತ್ತು ಆಟಗಾರರು ಈ ಕಾರ್ಯಕ್ರಮದಲ್ಲಿ ಹಾಜರಿದ್ದರು. ಆದರೆ ರಣಜಿ ಟ್ರೋಫಿ ಪಂದ್ಯದ ಕಾರಣ ಕೊಹ್ಲಿ ಈ ಕಾರ್ಯಕ್ರಮದಲ್ಲಿ ಭಾಗವಹಿಸಲು ಸಾಧ್ಯವಾಗಲಿಲ್ಲ.

ಒನ್ ವರ್ಲ್ಡ್ ಒನ್ ಫ್ಯಾಮಿಲಿ ಟಿ-20 ಟೂರ್ನಿ: ಭಾರತಕ್ಕೆ 6 ವಿಕೆಟ್‌ಗಳ ಗೆಲುವು

ಲಂಕೆ ವಿರುದ್ಧ ಗೆದ್ದು ಬೀಗಿದ ವೆಂಕಿ ಪಡೆ

ಚಿಕ್ಕಬಳ್ಳಾಪುರ: ಮುದ್ದೇನಹಳ್ಳಿಯ ಸತ್ಯಸಾಯಿ ಗ್ರಾಮದ ಶ್ರೀಸಾಯಿ ಕೃಷ್ಣ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಒನ್ ವರ್ಲ್ಡ್ ಒನ್ ಫ್ಯಾಮಿಲಿ ಎರಡನೇ ಆವೃತ್ತಿಯ ಟಿ-20 ಕ್ರಿಕೆಟ್ ಪಂದ್ಯದಲ್ಲಿ ವೆಂಕಟೇಶ್ ಪ್ರಸಾದ್ ನೇತೃತ್ವದ ಹಿರಿಯರ ಭಾರತ ತಂಡವು 6 ರನ್‌ಗಳಿಂದ ಅರವಿಂದ ಡಿಸಿಲ್ವ ನೇತೃತ್ವದ ಶ್ರೀಲಂಕಾ ತಂಡವನ್ನು ಮಣಿಸಿ ವಿಜಯದ ನಗು ಬೀರಿದೆ.

ಮೊದಲಿಗೆ ಟಾಸ್ ಗೆದ್ದು ಶ್ರೀಲಂಕಾ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಲಂಕಾ ತಂಡದ ಶಿಸ್ತುಬದ್ಧ ಕ್ಷೇತ್ರರಕ್ಷಣೆ, ಮೊನಚಾದ ಬೌಲಿಂಗ್ ನಡುವೆಯೂ ಭಾರತ ತಂಡದ ಹಿರಿಯರು 6 ವಿಕೆಟ್ ನಷ್ಟಕ್ಕೆ 195 ರನ್ ಪೇರಿಸಲು ಯಶಸ್ವಿಯಾದರು.

ವೆಂಕಟೇಶ್ ಪ್ರಸಾದ್ ನೇತೃತ್ವದ ಭಾರತ ತಂಡದಲ್ಲಿ ನಮನ್ ಓಝಾ ಮತ್ತು ಸುಜಿತ್ ಸೋಮಸುಂದರ್ ಜೋಡಿ ಆರಂಭಿಕರಾಗಿ ಬ್ಯಾಟ್ ಮಾಡಿದರು. ಮೊದಲ ಬಾಲನ್ನು ಬೌಂಡರಿಗೆ ಅಟ್ಟುವ ಮೂಲಕ ಆರಂಭದಿಂದಲೇ ಅಬ್ಬರಿಸಿದ ನಮನ್ ಓಝಾ 23ಎಸೆತಗಳಲ್ಲಿ 53 ರನ್ ಗಳಿಸಿ ಉಪಯುಕ್ತ ಕಾಣಿಕೆ ನೀಡಿದರು. ಆದರೆ ರಕ್ಷಣಾತ್ಮಕ ಆಟದ ಮೊರ ಹೋದ ಸುಜಿತ್ ಕೇವಲ 3 ರನ್‌ಗಳಿಗೆ ಚಮಿಂಡವಾಸ್ ಎಸೆತಕ್ಕೆ ಬೌಲ್ಡ್ ಆದರು.

8ನೇ ಓವರ್‌ನಲ್ಲಿ ತಂಡದ ಮೊತ್ತ 79 ಆಗಿದ್ದಾಗ ಬದರಿನಾಥ್ ಔಟಾದರು. ಅವರು 14 ಎಸೆತ 15 ರನ್ ಕಲೆಹಾಕಿದ್ದರು. 29 ಎಸೆತಗಳಲ್ಲಿ 44 ರನ್ ಗಳಿಸಿದ್ದ ಮನೋಜ್ ತಿವಾರಿ ತಂಡದ ಒಟ್ಟು ಮೊತ್ತ 142 ರನ್ ಆಗಿದ್ದಾಗ ಮುತ್ತಯ್ಯ ಮುರಳೀಧರ್‌ಗೆ ವಿಕೆಟ್ ಒಪ್ಪಿಸಿದರು. ಈ ನಡುವೆ ಯೂಸುಫ್ ಪಠಾನ್ ಬೌಂಡರ್ ಸಿಕ್ಸರ್‌ಗಳ ಮೂಲಕ ಪ್ರೇಕ್ಷಕರನ್ನು ರಂಜಿಸಿದರು. ಕೇವಲ 29 ಎಸೆತಗಳಲ್ಲಿ ಪಠಾನ್ ಅರ್ಧಶತಕ ಪೂರೈಸಿದರು. 19 ವೇ ಓವರ್‌ನಲ್ಲಿ ಮೂರು ಎಸೆತಗಳು ಬಾಕಿಯಿರುವಾಗ 31 ಎಸೆತಗಳಲ್ಲಿ 61 ರನ್ ಗಳಿಸಿ ತಿಲಾನ್‌ಗೆ ವಿಕೆಟ್ ಒಪ್ಪಿಸಿದ ಪಠಾನ್ ತಂಡದ ಗರಿಷ್ಠ ಸ್ಕೋರರ್ ಎನಿಸಿದರು. ಈ ವೇಳೆಗೆ ತಂಡದ ಮೊತ್ತ 192 ಆಗಿತ್ತು. ಅಂತಿಮವಾಗಿ ವೆಂಕಿ ಟೀಮ್ 20 ಓವರುಗಳಲ್ಲಿ 6 ವಿಕೆಟ್ ನಷ್ಟಕ್ಕೆ 195 ರನ್ ಗಳಿಸುವ ಮೂಲಕ ಎದುರಾಳಿ ಶ್ರೀಲಂಕಾಗೆ ಸವಾಲಿನ ಮೊತ್ತ ನೀಡಿತು.

ಲಂಕಾ ಪರ ತಿಲಾನ್ ಮತ್ತು ಅಸೆಲಾ ತಲಾ 2 ವಿಕೆಟ್ ಪಡೆದರು. ಮುತ್ತಯ್ಯ ಮುರಳೀಧರನ್, ಚಮಿಂಡವಾಸ್ ತಲಾ ಒಂದು ವಿಕೆಟ್ ಪಡೆದರು.

ಚಿಕ್ಕಬಳ್ಳಾಪುರ ತಾಲೂಕು ಮುದ್ದೇನಹಳ್ಳಿಯಲ್ಲಿ ನಡೆದ ಕ್ರಿಕೆಟ್‌ನಲ್ಲಿ ಗೆಲುವು ಕಂಡ ಭಾರತ ತಂಡದ ನಾಯಕ ವೆಂಕಟೇಶ್ ಪ್ರಸಾದ್ ಟ್ರೋಫಿ ಪಡೆದ ಕ್ಷಣ.

195ರನ್‌ಗಳ ಗುರಿ ಬೆನ್ನತ್ತಿದ ಶ್ರೀಲಂಕಾ ತಂಡ 20 ಓವರ್‌ಗಳಲ್ಲಿ 9 ವಿಕೆಟ್ ನಷ್ಟಕ್ಕೆ 189 ರನ್ ಗಳಿಸಲಷ್ಟೇ ಶಕ್ತವಾಗಿ ಆರು ರನ್‌ಗಳ ಅಂತರದಿಂದ ಸೋಲುನುಭವಿಸಿತು. ಶ್ರೀಲಂಕಾ ತಂಡದಲ್ಲಿ ಉಪುಲ್ ತರಂಗ 21 ಎಸೆತಗಳಲ್ಲಿ 52 ರನ್ ಗಳಿಸಿದರೆ, ಮಿಲಿಂದ 35 ಎಸೆತಗಳಲ್ಲಿ 40, ರೊಮೇಶ್ ಕಲುವಿತರಣ 41 ಎಸೆತಗಳಲ್ಲಿ 66 ರನ್ ಗಳಿಸಿ ಗಮನ ಸೆಳೆದರೂ ತಂಡವನ್ನು ಗೆಲುವಿನತ್ತ ಒಯ್ಯುವಲ್ಲಿ ಸಂಪೂರ್ಣ ವಿಫಲರಾದರು.

6.2 ಓವರುಗಳವರೆಗೆ ಒಂದೂ ವಿಕೆಟ್ ಕಳೆದುಕೊಳ್ಳದೆ ಆಟವಾಡಿದ ಲಂಕಾ, ತಂಡದ ಒಟ್ಟು ಮೊತ್ತ 66 ಆಗಿದ್ದಾಗ ಉಪುಲ್ ತರಂಗ ಮೊದಲ ವಿಕೆಟ್ ಒಪ್ಪಿಸಿದರು. ತಂಡದ ಮೊತ್ತ 2 ವಿಕೆಟ್ ನಷ್ಟಕ್ಕೆ 127 ಆಗಿದ್ದಾಗ ರನ್ ಗಳಿಸಿದ ಲಂಕೆ ಗೆಲುವಿನ ನಿರೀಕ್ಷೆಯಲ್ಲಿತ್ತು. ಆದರೆ ನಂತರ ಬಂದ ಆಟಗಾರರು ನೆಲ ಕಚ್ಚಿ ಆಡುವಲ್ಲಿ ವಿಫಲರಾದರು. ತಂಡದ ಮೊತ್ತ 189 ಆಗುವಷ್ಟರಲ್ಲಿ 8 ವಿಕೆಟ್ ಕಳೆದುಕೊಂಡು ಲಂಕಾ ಪಡೆ ಸೋಲೊಪ್ಪಿಕೊಂಡಿತು. ಭಾರತ ತಂಡದ ನಾಯಕ ವೆಂಕಟೇಶ್ ಪ್ರಸಾದ್ 3 ವಿಕೆಟ್ ಪಡೆದು ಗೆಲುವಿನಲ್ಲಿ ಪ್ರಮುಖ ಪಾತ್ರ ವಹಿಸಿದರು.

ತಾಲೂಕಿನ ಮುದ್ದೇನಹಳ್ಳಿ ಸತ್ಯಸಾಯಿ ಗ್ರಾಮದಲ್ಲಿರುವ ಸಾಯಿ ಕೃಷ್ಣನ್ ಅಂತರಾಷ್ಟ್ರೀಯ ಕ್ರಿಕೆಟ್ ಸ್ಟೇಡಿಯಂನಲ್ಲಿ ಸದ್ಗುರು ಮಧುಸೂಧನ್ ಸಾಯಿ ಮಾನವತೆ ಮತ್ತು ಉಚಿತ ಆರೋಗ್ಯ, ಶಿಕ್ಷಣ, ಮತ್ತು ಪೌಷ್ಟಿಕ ಆಹಾರ ಉಚಿತವಾಗಿ ನೀಡುತ್ತಿರುವ 2024 ರಿಂದ ಒನ್ ಇಂಡಿಯಾ ಒನ್ ಫ್ಯಾಮಿಲಿ ಹೆಸರಿನಲ್ಲಿ ಟಿ 20 ಕ್ರಿಕೆಟ್ ಆಯೋಜಿಸಲಾಗುತ್ತಿದೆ.

ವೆಂಕಟೇಶ್ ಪ್ರಸಾದ್ ತಂಡದಲ್ಲಿ ಇರ್ಫಾನ್ ಪಠಾಣ್, ಯೂಸುಫ್ ಪಠಾಣ್, ನಮನ್ ಓಝಾ, ಬದರೀನಾಥ್, ಅಶೋಕ್ ದಿಂಡಾ, ಪಿಯೂಷ್ ಚಾವ್ಲಾ, ಅಭಿಮನ್ಯು ಮಿಥುನ್, ಸುನಿಲ್ ಜೋಷಿ, ಪಾರ್ಥೀವ್ ಪಟೇಲ್, ಸುಜಿತ್ ಸೋಮಸುಂದರ್, ಮನೋಜ್ ತಿವಾರಿ, ಸ್ಟುವರ್ಟ್ ಬಿನ್ನಿ, ದೊಡ್ಡಗಣೇಶ್ ಮೊದಲಾದವರು ಆಟವಾಡಿದರು.

ಇನ್ನು ಲಂಕಾ ತಂಡದಲ್ಲಿ ನಾಯಕ ಅರವಿಂದ ಡಿ ಸಿಲ್ವಾ, ಮುತ್ತಯ್ಯ ಮುರಳೀಧರನ್, ಚಮಿಂಡವಾಸ್, ಟಿ. ಎಂ.ದಿಲ್ಶಾನ್, ಉಪುಲ್ ತರಂಗ, ತರಂಗ ಪರನಾವಿಟ್ಟನ, ಮಿಲಿಂದ ಶ್ರೀವರ್ಧನ,ಅಸೇಲ ಗುಣವರ್ಧನೆ, ನುವಾನ್ ಝೋಯೆಸಾ, ತಿಲನ್ ತುಷಾರಾ, ರವೀಂದ್ರ ಪುಷ್ಪಕುಮಾರ, ಅಜಂತಾ ಮೆಂಡಿಸ್, ರೋಮೇಶ್ ಕಲುವಿತರಣ,ಮರ್ವನ್ ಅಟಪಟ್ಟು ಸೇರಿ 90ರ ದಶಕದ ಘಟಾನುಘಟಿ ಆಟಗಾರರು ಆಟವಾಡಿದರು.

ಡಿಸಿಎಂ ಡಿ.ಕೆ. ಶಿವಕುಮಾರ್ ಅವರು ಬೆಂಗಳೂರಿನ ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಶನಿವಾರ ನಡೆದ ಸೆಲೆಬ್ರಿಟಿ ಕ್ರಿಕೆಟ್ ಲೀಗ್‌ನಲ್ಲಿ ಕಿಚ್ಚ ಸುದೀಪ್ ನೇತೃತ್ವದ ಕರ್ನಾಟಕ ಬುಲ್ಡೋಜರ್ಸ್ ಹಾಗೂ ಅಕ್ಕಿನೇನಿ ಅಖಿಲ್ ನೇತೃತ್ವದ ತೆಲುಗು ವಾರಿಯರ್ಸ್ ನಡುವಣ ಟಿ20 ಪಂದ್ಯದ ಟಾಸ್ ಹಾಕಿ ಪಂದ್ಯವನ್ನು ವೀಕ್ಷಿಸಿದರು. ಈ ಸಂದರ್ಭದಲ್ಲಿ ತಂಡದ ಮಾಲೀಕರಾದ ಅಶೋಕ್ ಖೇಣಿ ಉಪಸ್ಥಿತರಿದ್ದರು.

9 ಪಂದ್ಯಗಳಲ್ಲಿ 6ನೇ ಶತಕ ಸಿಡಿಸಿ ಫಾರ್ಮ್ ಪ್ರದರ್ಶಿಸಿದ ಕನ್ನಡಿಗ

ರಣಜಿಯಲ್ಲೂ ಕರುಣ್ ಕರಾಮತ್ತು

ನಾಗ್ಪುರ: ಸೈಯದ್ ಮುಷ್ತಾಕ್ ಅಲಿ, ವಿಜಯ್ ಹಜಾರೆ ಟ್ರೋಫಿಯಲ್ಲಿ ಅಮೋಘ ಪ್ರದರ್ಶನ ತೋರಿದ್ದ ಕನ್ನಡಿಗ ಕರುಣ್ ನಾಯರ್ ರಣಜಿ ಟ್ರೋಫಿಯಲ್ಲೂ ಉತ್ತಮ ಪ್ರದರ್ಶನವನ್ನು ಮುಂದುವರಿಸಿದ್ದಾರೆ.

ನಾಗ್ಪುರದ ಸಿವಿಲ್ ಲೈನ್ಸ್‌ನ ವಿಸಿಎ ಕ್ರೀಡಾಂಗಣದಲ್ಲಿ ಶನಿವಾರ ನಡೆದ 2024/25 ರಣಜಿ ಟ್ರೋಫಿ ಕ್ವಾರ್ಟರ್ ಫೈನಲ್‌ನಲ್ಲಿ ಕರುಣ್ ನಾಯರ್ ತಮಿಳುನಾಡು ವಿರುದ್ಧ ಶತಕ ಸಿಡಿಸಿ ಈ ಋತುವಿನ 9ನೇ ಶತಕ ದಾಖಲಿಸಿದರು. ಇವರ ಶತಕದ ನೆರವಿನಿಂದ ಮೊದಲ ದಿನದಾಟದ ಅಂತ್ಯಕ್ಕೆ ವಿದರ್ಭ ತಂಡ ಆರು ವಿಕೆಟ್ ನಷ್ಟಕ್ಕೆ 264 ರನ್ ಗಳಿಸಿತ್ತು. ನಾಯರ್ (100★) ಮತ್ತು ಹರ್ಷ್ ದುಬೆ (19★) ಕ್ರೀಸ್‌ನಲ್ಲಿದ್ದರು.

33 ವರ್ಷದ ಕರ್ನಾಟಕ ಬ್ಯಾಟರ್ 171 ಎಸೆತಗಳಲ್ಲಿ 14 ಬೌಂಡರಿ ಮತ್ತು ಒಂದು ಸಿಕ್ಸರ್ ನೆರವಿನಿಂದ ಶತಕವನ್ನು ಗಳಿಸಿದರು. ಇದು ಈ ಪ್ರಥಮ ದರ್ಜೆ ಋತುವಿನಲ್ಲಿ ಅವರ 4ನೇ ಶತಕ ಮತ್ತು ಅವರ ವೃತ್ತಿಜೀವನದ 22 ನೇ ಶತಕವಾಗಿದೆ. ಒಟ್ಟಾರೆ ಈ ಸೀಸನ್‌ನಲ್ಲಿ ಅವರು 7 ಪಂದ್ಯಗಳಿಂದ 540 ರನ್ ಗಳಿಸಿದ್ದಾರೆ. ತಮಿಳುನಾಡು ವಿರುದ್ಧ ಅಜೇಯ 100, ಗುಜರಾತ್ ವಿರುದ್ಧ 123, ಹೈದರಾಬಾದ್ ವಿರುದ್ಧ 105 ರನ್ ಗಳಿಸಿದ್ದರು. ಕಳೆದ ಒಂಬತ್ತು ಪಂದ್ಯಗಳಲ್ಲಿ ಇದು ಕರುಣ್ ನಾಯರ್ ಅವರ ಆರನೇ ಶತಕವಾಗಿದೆ. ಒಟ್ಟಾರೆ 2024-25ರ ಆವೃತ್ತಿಯಲ್ಲಿ 9ನೇ ಶತಕವಾಗಿದೆ. ಈ ಋತುವಿನಲ್ಲಿ ನಾಯರ್ ಉತ್ತಮ ಫಾರ್ಮ್‌ನಲ್ಲಿದ್ದಾರೆ. ಲಿಸ್ಟ್ ಎ ಸ್ಪರ್ಧೆಯಾದ ವಿಜಯ್ ಹಜಾರೆ ಟ್ರೋಫಿಯಲ್ಲಿ, ನಾಯರ್ ಐದು ಶತಕಗಳನ್ನು ಸಿಡಿಸಿದ್ದರು. ಅವರು 8 ಇನ್ನಿಂಗ್ಸ್‌ಗಳಲ್ಲಿ 752 ರನ್‌ಗಳನ್ನು ಗಳಿಸಿದ್ದರು.

ಇದು ಒಂದು ಆವೃತ್ತಿಯಲ್ಲಿ ಒಬ್ಬ ಬ್ಯಾಟ್ಸ್‌ಮನ್ ಗಳಿಸಿದ ಅತಿ ಹೆಚ್ಚು ರನ್ ಆಗಿತ್ತು. ಅವರು ಔಟಾಗದೆ 5 ಇನ್ನಿಂಗ್ಸ್ ಸೇರಿ 542 ರನ್‌ಗಳನ್ನು ಗಳಿಸಿದ್ದು, ಇದು ಲಿಸ್ಟ್ ಎ ಕ್ರಿಕೆಟ್‌ನಲ್ಲಿ ವಿಶ್ವ ದಾಖಲೆಯಾಗಿದೆ. ಆಟಗಾರ ವಿಜಯ್ ಹಜಾರೆ ಟ್ರೋಫಿಯಲ್ಲಿ ಕರುಣ್ ಚಂಡೀಗಢ ವಿರುದ್ಧ ಅಜೇಯ 163 , ತಮಿಳುನಾಡು ವಿರುದ್ಧ ಅಜೇಯ 111, ಉತ್ತರ ಪ್ರದೇಶ ವಿರುದ್ಧ 112 ಮತ್ತು ರಾಜಸ್ಥಾನ ವಿರುದ್ಧ ಅಜೇಯ 122 ರನ್ ಹಾಗೂ ಜಮ್ಮು ಕಾಶ್ಮೀರ ವಿರುದ್ಧ ಅಜೇಯ 112 ರನ್ ಗಳಿಸಿದ್ದರು.

33 ವರ್ಷದ ಕರ್ನಾಟಕ ಬ್ಯಾಟರ್ 171 ಎಸೆತಗಳಲ್ಲಿ 14 ಬೌಂಡರಿ ಮತ್ತು ಒಂದು ಸಿಕ್ಸರ್ ನೆರವಿನಿಂದ ಶತಕವನ್ನು ಗಳಿಸಿದರು. ಇದು ಈ ಪ್ರಥಮ ದರ್ಜೆ ಋತುವಿನಲ್ಲಿ ಅವರ 4ನೇ ಶತಕ ಮತ್ತು ಅವರ ವೃತ್ತಿಜೀವನದ 22 ನೇ ಶತಕವಾಗಿದೆ. ಒಟ್ಟಾರೆ ಈ ಋತುವಿನಲ್ಲಿ ಅವರು 7 ಪಂದ್ಯಗಳಿಂದ 540 ರನ್ ಗಳಿಸಿದ್ದಾರೆ. ತಮಿಳುನಾಡು ವಿರುದ್ಧ ಅಜೇಯ 100, ಗುಜರಾತ್ ವಿರುದ್ಧ 123, ಹೈದರಾಬಾದ್ ವಿರುದ್ಧ 105 ರನ್ ಗಳಿಸಿದ್ದರು.

ಇನ್ನು ಸೈಯದ್ ಮುಸ್ತಾಕ್ ಅಲಿ ಟ್ರೋಫಿಯಲ್ಲೂ 42ರ ಸರಾಸರಿ ಹಾಗೂ 177ರ ಸ್ಟ್ರೈಕ್ ರೇಟ್‌ನಲ್ಲಿ 255 ರನ್ ಗಳಿಸಿದ್ದರು. ಅದಕ್ಕೂ ಮುನ್ನ ಮಹಾರಾಜ ಟ್ರೋಫಿಯಲ್ಲಿ 12 ಪಂದ್ಯಗಳಲ್ಲಿ 56 ಸರಾಸರಿ, 181ರ ಸ್ಟ್ರೈಕ್ ರೇಟ್‌ನಲ್ಲಿ 560 ರನ್ ಗಳಿಸಿದ್ದರು.

ಒಟ್ಟಾರೆ ದೇಶಿಯ ಕ್ರಿಕೆಟ್‌ನಲ್ಲಿ ಎಲ್ಲಾ ಮಾದರಿಯಲ್ಲೂ ಅದ್ಭುತ ಫಾರ್ಮ್‌ನಲ್ಲಿರುವ ಕರುಣ್ ನಾಯರ್ ಭಾರತ ತಂಡಕ್ಕೆ ಮರಳಲು ತಾವೂ ಸಿದ್ದ, ತಮಗೆ ಅದಕ್ಕೆ ತಕ್ಕ ಸಾಮರ್ಥ್ಯವಿದೆ ಎಂಬುದನ್ನ ಸಾಬೀತುಪಡಿಸುತ್ತಿದ್ದಾರೆ. ಆಯ್ಕೆ ಸಮಿತಿ ಅಧ್ಯಕ್ಷ ಅಜಿತ್ ಅಗರ್ಕರ್ ಚಾಂಪಿಯನ್ಸ್ ಟ್ರೋಫಿಗೆ ತಂಡ ಘೋಷಣೆ ವೇಳೆ ಕರುಣ್ ನಾಯರ್ ಪ್ರದರ್ಶನವನ್ನು ಕೊಂಡಾಡಿ ದ್ದರು. ಆದರೆ ಪ್ರಸ್ತುತ ಟೀಮ್ ಇಂಡಿಯಾ ಚಾಂಪಿಯನ್ಸ್ ಟ್ರೋಫಿಗೆ ತಂಡವನ್ನ ಅಂತಿಮಗೊಳಿಸಿದ್ದು, ದೀರ್ಘಕಾಲದಿಂದ ತಂಡದಲ್ಲಿರುವವರಿಗೆ ಅವಕಾಶ ನೀಡುವುದಾಗಿ ತಿಳಿಸಿದ್ದರು.



ದೊಡ್ಮನೆಗೆ ದೊಡ್ಡವರಿಂದ ಕ್ಲಾಪ್

ಘನತೆಯ ಶೀರ್ಷಿಕೆ ದೊಡ್ಮನೆ ಸೊಸೆ ಚಿತ್ರಕ್ಕೆ ಪದ್ಮಶ್ರೀ ರಾಷ್ಟ್ರ ಪ್ರಶಸ್ತಿ ವಿಜೇತರಾದ ಡಾ.ಗಿರೀಶ್ ಕಾಸರವಳ್ಳಿ ಕ್ಲಾಪ್ ಮಾಡಿದ್ದು ವಿಶೇಷವಾಗಿತ್ತು. ಶುಭ ಗುರುವಾರದಂದು ಶ್ರೀ ವಿಶ್ವ ವಿದ್ಯಾಗಣಪತಿ ದೇವಸ್ಥಾನದಲ್ಲಿ ಅದ್ದೂರಿಯಾಗಿ ಮುಹೂರ್ತ ಸಮಾರಂಭ ನಡೆಯಿತು.

ಸದಭಿರುಚಿಯ ನಿರ್ದೇಶಕ ಆಸ್ಕರ್ ಕೃಷ್ಣ ಕತೆ ಬರೆದು ನಿರ್ದೇಶನ ಮಾಡುತ್ತಿದ್ದಾರೆ. ಹಿರಿಯ ನಿರ್ಮಾಪಕ ಡಾ.ಸುನಿಲ್‌ಕುಮಾರ್. ಆರ್.ಎಂ ಹಿರಿಯ ಪುತ್ರ ತೇಜ್‌ವಿನಯ್. ಎಸ್ ಅವರು ಮಾನ್ಯ ಸಿನಿ ಕ್ರಿಯೇಶನ್ಸ್ ಲಾಂಛನದಡಿಯಲ್ಲಿ ನಿರ್ಮಾಣ ಮಾಡುತ್ತಿರುವುದು ಹೊಸ ಅನುಭವ.

ನಂತರ ಮಾತನಾಡಿದ ಡಾ.ಗಿರೀಶ್ ಕಾಸರವಳ್ಳಿ ಪ್ರಸ್ತುತ ಮಾರುಕಟ್ಟೆ ಉದ್ದೇಶದಿಂದಾಗಿ ಹಿಂಸೆ, ಕ್ರೌರ್ಯ ವಿಜೃಂಭಿಸುತ್ತಿರುವ ಕಾಲದಲ್ಲಿ ಸುಂದರವಾದ ಕುಟುಂಬ ಆಧಾರಿತ ಕಥೆ, ಅಷ್ಟೇ ಅಲ್ಲ ಮನುಷ್ಯ ಸಂಬಂಧಗಳು ಸಮಾಜದ ಇತಿಮಿತಿಗಳು ಯಾವ ರೀತಿ ಪುನರ್ ಅವಿಷ್ಕಾರಗೊಳ್ಳಬೇಕೆಂದು ಹೇಳುತ್ತಿದ್ದಾರೆ, ಇದು ಸಂತೋಷದ ವಿಷಯ. ಒಂದಷ್ಟು ಮಾಹಿತಿಗಳನ್ನು ಕೇಳಿದಾಗ, 70-80ರ ದಶಕದ ಪುಟ್ಟಣ್ಣ ಕಣಗಾಲ್, ದೊರೆ ಭಗವಾನ್, ಸಿದ್ದಲಿಂಗಯ್ಯ ಹಾಗೆಯೇ ಡಾ.ರಾಜ್‌ಕುಮಾರ್ ಸಿನಿಮಾಗಳು ಯಾವ ಮೌಲ್ಯಗಳನ್ನು ಎತ್ತಿ ಹಿಡಿಯುತ್ತಿದ್ದರು, ಅದನ್ನು ಇದರಲ್ಲಿ ಪ್ರತಿಷ್ಠಾಪಿಸುತ್ತಿದ್ದಾರೆ. ಅದಕ್ಕಾಗಿ ವಂದಿಸುತ್ತೇನೆ. ತುಂಬ ಜನಕ್ಕೆ ಹೊಸತನ್ನು ತೋರಿಸಬೇಕಾಗಿದೆ. ಚರ್ವಿತ ಚರ್ವಣ ಬಿಟ್ಟು ನಾವು ಮತ್ತೆ ಹಿನ್ನೋಟದಲ್ಲಿ ನಮ್ಮ ಇರುವಿಕೆಯನ್ನು ಅರ್ಥ ಮಾಡಿಕೊಳ್ಳಲು ಪ್ರಯತ್ನ ಮಾಡಿಸುತ್ತಿರುವುದಕ್ಕೆ ನಿರ್ದೇಶಕರನ್ನು ಅಭಿನಂದಿಸುತ್ತೇನೆ. ಸಂಪ್ರದಾಯ ಕಟ್ಟಳೆಗಳನ್ನು ಹೆಚ್ಚಾಗಿ ಬಳಸಿಕೊಳ್ಳುತ್ತಿರುವುದು ಹೆಮ್ಮೆಯ ವಿಷಯ. ಶುಭವಾಗಲಿ ಎಂದರು.

ನಿರ್ದೇಶಕರು ಮಾತನಾಡಿ ನಾನು ಡಾ. ಗಿರೀಶ್‌ಕಾಸರವಳ್ಳಿ ಚಿತ್ರಗಳನ್ನು ನೋಡಿ ಬೆಳೆದವನು. ಇಂದು ಅವರು ಆಗಮಿಸಿದ್ದು ನಮಗೆ ಹೆಚ್ಚಿನ ಶಕ್ತಿ ಬಂದಿದೆ. ಇದು ನನ್ನ ನಿರ್ದೇಶನದ ಏಳನೆ ಸಿನಿಮಾ. ನಮ್ಮ ಚಿತ್ರರಂಗಕ್ಕೆ ದೊಡ್ಮನೆ ಅಂದರೆ ಅಣ್ಣಾವ್ರ ಕುಟುಂಬ. ನಾನು ಅಣ್ಣಾವ್ರರ ಕಟ್ಟಾಅಭಿಮಾನಿ. ಆದರೆ ಆ ಮನೆಗೂ ಚಿತ್ರದ ಕಥೆಗೂ ಯಾವುದೇ ಸಂಬಂದ ಇರುವುದಿಲ್ಲ. ಎಲ್ಲಾ ಊರಿನಲ್ಲಿ ದೊಡ್ಮನೆ ಇರುತ್ತದೆ. ಒಂದು ಊರಿನಲ್ಲಿ ನಡೆಯುವ ಕಾಲ್ಪನಿಕ ಕಥೆ. ಪ್ರತಿ ಹೆಣ್ಣು ಮಗಳು ಒಂದು ಮನೆಗೆ ಸೊಸೆಯಾಗಿ ಪ್ರವೇಶ ನೀಡುತ್ತಾಳೆ. ಆ ಮನೆಗೆ ಅತಿಥಿಯಾಗಿ ಪ್ರವೇಶಿಸಿ, ಮುಂದೆ ಒಡತಿ ಆಗುತ್ತಾಳೆ. ಸೊಸೆಯ ಅನುದಿನದ ವ್ಯಕ್ತಿತ್ವ ಮತ್ತು ನಡತೆಯು ಇಡೀ ಕುಟುಂಬದ ಗೌರವ ಹಾಗೂ ಘನತೆಯನ್ನು ಕಾಪಾಡುವಲ್ಲಿ ಪ್ರಮುಖ ಪಾತ್ರವಹಿ ಸುತ್ತದೆ. ಆಕೆ ಕಟ್ಟಲೂ ಬಲ್ಲಳು, ಕೆಡವಲೂ ಬಲ್ಲಳು. ಅವಳ ಹಕ್ಕುಗಳು ಮತ್ತು ಕರ್ತವ್ಯಗಳನ್ನು ನಿಭಾಯಿಸುವ ಹೊತ್ತಿನಲ್ಲಿ ಏನಾದರೂ ಘರ್ಷಣೆಗಳು ಬಂದಾಗ ಹೇಗೆ ಸರಿದೂಗಿಸುತ್ತಾಳೆ? ಮತ್ತು ಆ ಮನೆಗೆ ಇರುವ ಘನತೆಯ ವಿಷಯದಲ್ಲಿ ಸೊಸೆಯ ಪಾತ್ರವೇನು? ಎಂಬ ಅಂಶಗಳನ್ನು ಬಳಸಿಕೊಂಡು ಸನ್ನಿವೇಶಗಳನ್ನು ಸೃಷ್ಟಿಸಲಾಗಿದೆ. ನಿಮ್ಮಗಳ ಹಾರೈಕೆ ಬೇಕೆಂದು ಕೋರಿದರು.

ದೊಡ್ಮನೆ ಸೊಸೆಯಾಗಿ ರಾಗಶ್ರೀ ನಾಯಕಿ. ಮಾವನಾಗಿ ಸುಂದರರಾಜ್, ಉಳಿದಂತೆ ಸಚ್ಚಿನ್ ಪುರೋಹಿತ್, ವಂಶಿ, ಶಂಕರಭಟ್, ಲಯಕೋಕಿಲ, ಡಾ.ಮುರಳಿ ಕೊಟ್ಟೂರು, ಮಮತಾಶ್ರೀ ಮುಂತಾದವರು ನಟಿಸುತ್ತಿದ್ದಾರೆ. ನಿತೀಶ್.ವಿ ಸಂಗೀತ, ಮೈಸೂರು ಸೋಮು ಛಾಯಾಗ್ರಹಣ, ಕೌಶಿಕ್ ಕಿರಣ್ ಸಂಕಲನ, ಚಿತ್ರಕಥೆ-ಸಂಭಾಷಣೆಗೆ ವಿನಯ್‌ಕುಮಾರ್ ಪೆನ್ನು ಕೆಲಸ ಮಾಡುತ್ತಿದೆ. ಫೆಬ್ರವರಿ ಮೂರನೇ ವಾರದಿಂದ ಬೆಂಗಳೂರು ಹಾಗೂ ಸುತ್ತಮುತ್ತಲಿನ ಸುಂದರ ತಾಣಗಳಲ್ಲಿ ಚಿತ್ರೀಕರಣ ಆರಂಭಿಸಿ, ಒಂದೇ ಹಂತದಲ್ಲಿ ಮುಗಿಸಿ, ಮೇ ತಿಂಗಳಲ್ಲಿ ಸಿನಿಮಾವನ್ನು ಜನರಿಗೆ ತೋರಿಸಲು ತಂಡವು ಯೋಜನೆ ರೂಪಿಸಿಕೊಂಡಿದೆ.

ಗಿಲ್‌ಕ್ರಿಸ್ಟ್ ದಾಖಲೆ ಮುರಿದ ಅಲೆಕ್ಸ್ ಕೇರಿ

ಗಾಲೆ (ಲಂಕಾ): ಲಂಕಾ ವಿರುದ್ಧ ಮೊದಲನೇ ಟೆಸ್ಟ್ ಪಂದ್ಯದ ಪ್ರಥಮ ಇನಿಂಗ್ಸ್‌ನಲ್ಲಿ ಅತ್ಯುತ್ತಮ ಬ್ಯಾಟಿಂಗ್ ಪ್ರದರ್ಶನ ತೋರಿದ ಆಸ್ಟ್ರೇಲಿಯಾ ತಂಡದ ವಿಕೆಟ್ ಕೀಪರ್-ಬ್ಯಾಟ್ಸ್‌ಮನ್ ಅಲೆಕ್ಸ್ ಕೇರಿ ಅವರು ತಮ್ಮ ತಂಡದ ಮಾಜಿ ವಿಕೆಟ್ ಕೀಪರ್ ಆಡಮ್ ಗಿಲ್‌ಕ್ರಿಸ್ಟ್ ಅವರ ಏಷ್ಯಾ ದಾಖಲೆಯೊಂದನ್ನು ಮುರಿದ್ದಾರೆ. ಇಲ್ಲಿನ ಗಾಲೆ ಇಂಟರ್‌ನ್ಯಾಷನಲ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ಅತ್ಯುತ್ತಮ ಬ್ಯಾಟ್ ಮಾಡಿದ್ದ ಅಲೆಕ್ಸ್ ಕೇರಿ, ಶನಿವಾರ 188 ಎಸೆತಗಳಲ್ಲಿ ಎರಡು ಸಿಕ್ಸರ್ ಹಾಗೂ 15 ಬೌಂಡರಿಗಳೊಂದಿಗೆ 156ರನ್‌ಗಳನ್ನು ಕಲೆ ಹಾಕಿದರು. ಆ ಮೂಲಕ ಆಡಮ್ ಗಿಲ್‌ಕ್ರಿಸ್ಟ್ ಅವರ ದೀರ್ಘಾವಧಿ ಏಷ್ಯಾ ನೆಲದ ಟೆಸ್ಟ್ ದಾಖಲೆಯನ್ನು ಮುರಿದಿದ್ದಾರೆ.

2004ರಲ್ಲಿ ಲಂಕಾದಲ್ಲಿ ಆಡಮ್ ಗಿಲ್‌ಕ್ರಿಸ್ಟ್ 144 ರನ್‌ಗಳನ್ನು ಕಲೆ ಹಾಕಿದ್ದರು. ಇದೀಗ ಅಲೆಕ್ಸ್ ಕೇರಿ ಲಂಕಾದಲ್ಲಿ ನಾಲ್ಕನೇ ಅತಿ ಹೆಚ್ಚು ರನ್ ಗಳಿಸಿದ ಆಸ್ಟ್ರೇಲಿಯಾ ಬ್ಯಾಟ್ಸ್ ಮನ್ ಎನಿಸಿಕೊಂಡಿದ್ದಾರೆ . ಸ್ಟೀವನ್ ಸ್ಮಿತ್ ಹಾಗೂ ಅಲೆಕ್ಸ್ ಕೇರಿ ಶತಕಗಳ ಮೂಲಕ ಆಸ್ಟ್ರೇಲಿಯಾ ತಂಡ ಪ್ರಥಮ ಇನಿಂಗ್ಸ್‌ನಲ್ಲಿ 106.4 ಓವರ್‌ಗಳಲ್ಲಿ 414 ರನ್ ದಾಖಲಿಸಿದೆ. ಈ ಮೂಲಕ ಪ್ರಥಮ ಇನಿಂಗ್ಸ್‌ನಲ್ಲಿ ಪ್ರವಾಸಿ ತಂಡ 157 ರನ್‌ಗಳ ಮುನ್ನಡೆಯನ್ನು ಪಡೆದಿದೆ. ಪ್ರಥಮ ಇನಿಂಗ್ಸ್‌ನಲ್ಲಿ ಲಂಕೆ 257 ರನ್‌ಗಳಿಗೆ ಆಲ್‌ಔಟ್ ಆಗಿತ್ತು. ಎರಡನೇ ಇನ್ನಿಂಗ್ಸ್‌ನಲ್ಲಿ 51 ಓವರ್‌ಗಳಿಗೆ 5 ವಿಕೆಟ್ ನಷ್ಟಕ್ಕೆ 173 ರನ್ ಸಂಕಷ್ಟದಲ್ಲಿದೆ.

ಬುಮ್ರಾ ಫಿಟ್‌ನೆಸ್: ಬಿಸಿಸಿಐಗೆ ವರದಿ

ಬೆಂಗಳೂರು: ಬಾರ್ಡರ್-ಗಾವಸ್ಕರ್ ಟ್ರೋಫಿ ಸರಣಿಯ ಅಂತಿಮ ಟೆಸ್ಟ್ ಪಂದ್ಯದಲ್ಲಿ ಬೆನ್ನುನೋವಿನ ಗಾಯಕ್ಕೆ ತುತ್ತಾಗಿ ಬೆಂಗಳೂರಿನ ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿಯಲ್ಲಿ ಚಿಕಿತ್ಸೆ ಪಡೆಯುತ್ತಿರುವ ವೇಗಿ ಜಸ್‌ಪ್ರೀತ್ ಬುಮ್ರಾ ಅವರ ತಪಾಸಣೆ, ಸ್ಕ್ಯಾನಿಂಗ್ ಪ್ರಕ್ರಿಯೆ ಸಂಪೂರ್ಣ ಮುಗಿದಿದ್ದು ಶನಿವಾರ ಬಿಸಿಸಿಐ ವೈದ್ಯಕೀಯ ತಂಡ ಅವರ ಫಿಟ್‌ನೆಸ್ ವರದಿಯನ್ನು ಪರಿಶೀಲಿಸಿದೆ. ಚಾಂಪಿಯನ್ಸ್ ಟ್ರೋಫಿಗೆ ಬುಮ್ರಾ ಆಯ್ಕೆ ಬಗ್ಗೆ ಶೀಘ್ರದಲ್ಲಿ ಅಂತಿಮ ನಿರ್ಧಾರ ಪ್ರಕಟಿಸುವ ಸಾಧ್ಯತೆ ಇದೆ.

2021ರಲ್ಲಿ ದುಬೈನಲ್ಲಿ ನಡೆದಿದ್ದ ಟಿ20 ವಿಶ್ವಕಪ್ ವೇಳೆಯೂ ಬುಮ್ರಾ ಬೆನ್ನುನೋವಿಗೆ ಸಿಲುಕಿ ಟೂರ್ನಿಗೆ ಅಲಭ್ಯರಾಗಿದ್ದರು. ಈ ವೇಳೆ ಭಾರತ ಲೀಗ್ ಹಂತದಲ್ಲೇ ಮುಗ್ಗರಿಸಿತ್ತು. ಅದರಲ್ಲೂ ಪಾಕಿಸ್ತಾನ ವಿರುದ್ಧ 10 ವಿಕೆಟ್ ಅಂತರದ ಹೀನಾಯ ಸೋಲು ಕಂಡಿತ್ತು. ಈ ಬಾರಿಯೂ ಬುಮ್ರಾ ಇಲ್ಲದಿದ್ದರೆ ಭಾರತಕ್ಕೆ ದೊಡ್ಡ ಹಿನ್ನಡೆಯಾಗುವುದರಲ್ಲಿ ಯಾವುದೇ ಸಂಶಯವಿಲ್ಲ. ಹೀಗಾಗಿ ಭಾರತ ಚಾಂಪಿಯನ್ಸ್ ಟ್ರೋಫಿ ಗೆಲ್ಲಬೇಕಾದರೆ ಬುಮ್ರಾ ಅವರ ಫಿಟ್‌ನೆಸ್ ಅತ್ಯಂತ ಮಹತ್ವದ್ದಾಗಿದೆ.

ಈ ಹಿನ್ನೆಲೆಯಲ್ಲಿ ಬಿಸಿಸಿಐ ಅವರ ಆರೋಗ್ಯದ ಮೇಲೆ ನಿಗಾ ಇರಿಸಿದೆ.

ಒಂದು ವೇಳೆ ಬುಮ್ರಾ ಫಿಟ್ ಆಗದೇ ಹೋದರೆ ಅವರ ಜಾಗದಲ್ಲಿ ವರುಣ್ ಚಕ್ರವರ್ತಿ ಅಥವಾ ಹರ್ಷಿತ್ ರಾಣಾ ಆಡುವ ಸಾಧ್ಯತೆಯಿದೆ. ಚಾಂಪಿಯನ್ಸ್ ಟ್ರೋಫಿ ತಂಡದಲ್ಲಿ ಬದಲಾವಣೆ ಗಳಿದ್ದರೆ ತಿಳಿಸಲು ಫೆ. 12 ಅಂತಿಮ ಗಡುವಾಗಿದೆ. ಭಾರತ ತನ್ನ ಎಲ್ಲ ಪಂದ್ಯಗಳನ್ನು ದುಬೈನಲ್ಲಿ ಆಡಲಿದೆ. ಭಾರತ ಫೈನಲ್ ಪ್ರವೇಶಿಸಿದರೆ ಈ ಪಂದ್ಯವನ್ನು ಕೂಡ ದುಬೈನಲ್ಲೇ ಆಡಲಿದೆ. ಭಾರತ ಫೈನಲ್ ತಲುಪದಿದ್ದರೆ ಫೈನಲ್ ಪಂದ್ಯ ಲಾಹೋರ್‌ನಲ್ಲಿ ನಡೆಯಲಿದೆ.

ಕಟಕ್‌ನಲ್ಲಿಂದು ಎರಡನೇ ಏಕದಿನ ಪಂದ್ಯ

ಕಟಕ್: ಇಂಗ್ಲೆಂಡ್ ವಿರುದ್ಧ ಮೊದಲ ಏಕದಿನ ಪಂದ್ಯ ಗೆದ್ದು 1-0 ಮುನ್ನಡೆ ಸಾಧಿಸಿರುವ ರೋಹಿತ್ ಶರ್ಮ ಪಡೆದ ಭಾನುವಾರ ಕಟಕ್‌ನಲ್ಲಿ ದ್ವಿತೀಯ ಪಂದ್ಯವನ್ನಾಡಲಿದೆ. ಈ ಪಂದ್ಯಕ್ಕೆ ಭಾರತ ತನ್ನ ಆಡುವ ಬಳಗದಲ್ಲಿ 2 ಮಹತ್ವದ ಬದಲಾವಣೆ ಮಾಡುವ ಸಾಧ್ಯತೆ ಇದೆ. ಮಂಡಿ ನೋವಿನಿಂದಾಗಿ ಮೊದಲ ಪಂದ್ಯಕ್ಕೆ ಅಲಭ್ಯರಾಗಿದ್ದ ವಿರಾಟ್ ಕೊಹ್ಲಿ ದ್ವಿತೀಯ ಪಂದ್ಯದಲ್ಲಿ ಕಣಕ್ಕಿಳಿಯಲಿದ್ದಾರೆ. ಹೀಗಾಗಿ ನಾಗ್ಪುರದಲ್ಲಿ ಪದಾರ್ಪಣೆ ಮಾಡಿದ್ದ ಯಶಸ್ವಿ ಜೈಸ್ವಾಲ್ ಅವರನ್ನು ದ್ವಿತೀಯ ಪಂದ್ಯದಿಂದ ಕೈಬಿಡುವ ಸಾಧ್ಯತೆ ಹೆಚ್ಚು.

ಜೈಸ್ವಾಲ್ ಹೊರಗಿಟ್ಟರೆ ರೋಹಿತ್ ಶರ್ಮ ಜತೆ ಎಂದಿನಂತೆ ಶುಭಮನ್ ಗಿಲ್ ಇನಿಂಗ್ಸ್ ಆರಂಭಿಸಲಿದ್ದಾರೆ. ಮೊದಲ ಪಂದ್ಯದಲ್ಲಿ ಗಿಲ್ ಮೂರನೇ ಕ್ರಮಾಂಕದಲ್ಲಿ ಆಡಿದ್ದರು. ಮೊದಲ ಪಂದ್ಯದಲ್ಲಿ ದುಬಾರಿಯಾಗಿದ್ದ ಕುಲ್‌ದೀಪ್ ಯಾದವ್ ಅವರ ಸ್ಥಾನದಲ್ಲಿ ಮಿಸ್ಟರಿ ಖ್ಯಾತಿಯ ಸ್ಪಿನ್ನರ್ ವರುಣ್ ಚಕ್ರವರ್ತಿ ಆಡುವ ಸಾಧ್ಯತೆ ಇದೆ. ವಿಕೆಟ್ ಕೀಪರ್ ಆಗಿ ರಾಹುಲ್ ಅವರೇ ಮುಂದುವರಿಯಲಿದ್ದಾರೆ. ಶ್ರೇಯಸ್ ಅಯ್ಯರ್ ಸಿಕ್ಕ ಅವಕಾಶವನ್ನೂ ಎರಡೂ ಕೈಗಳಿಂದ ಬಾಚಿ ತಮ್ಮ ಬ್ಯಾಟಿಂಗ್ ಸಾಮರ್ಥ್ಯವನ್ನು ಸಾಬೀತುಪಡಿಸಿದ್ದಾರೆ. ಹೀಗಾಗಿ ಅವರನ್ನು ತಂಡದಿಂದ ಕೈಬಿಡುವ ಸಾಧ್ಯತೆ ಇಲ್ಲ.

ಭಾರತವು 2017 ರಲ್ಲಿ ಕಟಕ್‌ನಲ್ಲಿ ಇಂಗ್ಲೆಂಡ್ ವಿರುದ್ಧ 6 ವಿಕೆಟ್‌ಗೆ 381 ರನ್ ಬಾರಿಸಿತ್ತು. ಇದು ಈ ಮೈದಾನದಲ್ಲಿ ಭಾರತ ದಾಖಲಿಸಿದ ಗರಿಷ್ಠ ಮೊತ್ತವಾಗಿದೆ.ಆ ಪಂದ್ಯದಲ್ಲಿ ಯುವರಾಜ್ ಸಿಂಗ್ (127 ಎಸೆತಗಳಲ್ಲಿ 150) ಮತ್ತು ಎಂಎಸ್ ಧೋನಿ (122 ಎಸೆತಗಳಲ್ಲಿ 134) 5ನೇ ವಿಕೆಟ್‌ಗೆ 257 ರನ್‌ಗಳ ಜತೆಯಾಟದೊಂದಿಗೆ ತಮ್ಮ ಕೊನೆಯ ಅಂತಾರಾಷ್ಟ್ರೀಯ ಶತಕಗಳನ್ನು ಗಳಿಸಿದ್ದರು.

ಭಾರತ ಸಂಭಾವ್ಯ ತಂಡ: ರೋಹಿತ್ ಶರ್ಮಾ (ನಾಯಕ), ಶುಭಮನ್ ಗಿಲ್, ವಿರಾಟ್ ಕೊಹ್ಲಿ, ಶ್ರೇಯಸ್ ಅಯ್ಯರ್, ಕೆ.ಎಲ್ ರಾಹುಲ್ (ವಿ.ಕೀ.), ಹಾರ್ದಿಕ್ ಪಾಂಡ್ಯ, ಅಕ್ಷರ್ ಪಟೇಲ್, ವರುಣ್ ಚಕ್ರವರ್ತಿ, ಹರ್ಷಿತ್ ರಾಣಾ, ರವೀಂದ್ರ ಜಡೇಜಾ, ಮೊಹಮ್ಮದ್ ಶಮಿ.

ಕೋಟಿ ಜನರ ಮಹಾಸಂಗಮ!

ಓದುವ ಲೋಕಕ್ಕೆ ಓದುವ ನಿಲ್ದಾಣ
ವಿರಾಮ
ವಿಶ್ವವಾಣಿ
09.02.2025
ಭಾನುವಾರ

ಭಾವ ಭಕ್ತಿಗಳ ಸಮಾಗಮ

ತ್ರಿವೇಣಿ ಸಂಗಮದಲ್ಲಿ ಅಪಾರ ಜನಸಂದಣಿ. ಆದರೆ ಎಲ್ಲರಲ್ಲೂ ಏಕೋಭಾವ. ಸ್ನಾನ ಮಾಡಿ, ಧನ್ಯರಾಗಬೇಕು ಎಂದು. ಅಷ್ಟು ಬಿಟ್ಟರೆ ಬೇರೆ ಭಾವನೆಗಳಿಗೆ ಅಲ್ಲಿ ಜಾಗವಿರಲಿಲ್ಲ. ಆ ರಾಜ್ಯದವರು, ಈ ರಾಜ್ಯದವರು, ಆ ಪಂಥದವರು, ಹಿರಿಯರು, ಕಿರಿಯರು, ಬಡವರು, ಸಿರಿವಂತರು, ವಿವಿಧ ಪದ್ಧತಿ ಪಾಲಿಸುವವರು, ಒಳ ಪಂಗಡದವರು, ಹೆಂಗಸರು, ಗಂಡಸರು, ಮಕ್ಕಳು, ಮುದುಕರು, ಅಂಗವಿಕಲರು, ಸ್ಥಳೀಯರು, ಹೊರಗಿನವರು ಈ ಯಾವ ಅಂತರಗಳೂ ಅಲ್ಲಿ ಕಾಣಲಿಲ್ಲ. ಒಂದು ರೀತಿಯಲ್ಲಿ ಇದು ಭಾವನೆಗಳ ಸಂಗಮ, ಭಾರತದ ವಿವಿಧ ಪ್ರಾಂತ್ಯಗಳವರ ಸಮಾನ ಸಂಗಮ! ಪ್ರಯಾಗ್‌ರಾಜ್‌ನಲ್ಲಿ ಈಗ ನಡೆಯುತ್ತಿರುವ ಮಹಾಕುಂಭಮೇಳದಲ್ಲಿ ಭಾಗವಹಿಸಿ ಬಂದವರ ಅನುಭವ ಇಲ್ಲಿದೆ.

» ರಾಯಲಪಾಡು
ರಾಘವೇಂದ್ರ ಚಿಂತಾಮಣಿ

ಕೋಟಿ ಕೋಟಿ ಜನರು ಆ ನದಿ ಸಂಗಮ ಜಾಗಕ್ಕೆ ಬಂದು ಮಿಂದೇಳುವ ಸಂದರ್ಭ; ಪವಿತ್ರ ದಿನಗಳಲ್ಲಿ ಸ್ನಾನ ಮಾಡಿ ದರೆ ಮೋಕ್ಷ ಸಿಗುವುದೆಂಬ ನಂಬಿಕೆ; ಸಾವಿರಾರು ಸಾಧು ಸನ್ಯಾಸಿ ಗುರುಗಳು ವಾರಗಟ್ಟಲೆ ವಾಸಿಸುವ ಸ್ಥಳ; ತ್ರಿವೇಣಿ ಸಂಗಮದಲ್ಲಿ ಸ್ನಾನ ಮಾಡುವ ಅವಕಾಶ : ಇದೇ ಮಹಾ ಕುಂಭ ಮೇಳ. ಅದರಲ್ಲಿ ಭಾವಗಹಿಸಬೇಕೆಂಬ ಅಭಿ ಲಾಷೆ; ಆದರೆ ನಮ್ಮೂರಿನಿಂದ ಪ್ರಯಾಗರಾಜ್ ಬಹು ದೂರದ ಸ್ಥಳ; ನಮ್ಮ ಜೀವಮಾನದಲ್ಲೊಮ್ಮೆ ಮಾತ್ರ ಬಂದಿರುವ ಮಹಾಕುಂಭಮೇಳವನ್ನು ನೋಡಲೇ ಬೇಕು ಎಂದು ನಿರ್ಧರಿಸಿದೆವು. ಆದರೆ ಹೇಗೆ, ಯಾರ್‍ಯಾರು, ಯಾವಾಗ ಎಂದು ನಿಶ್ಚಯಿಸುವುದು ಆಗಲಿಲ್ಲ.

ಗೆಳೆಯರನ್ನು ಕೇಳಿದೆ; ಯಾರೂ ಹೊರಡಲಿಲ್ಲ. ಕೊನೆಗೆ ನನ್ನ ಪತ್ನಿಯ ಸಹೋದ್ಯೋಗಿ ಗಜೇಂದ್ರ ಅವರು ಹೊರ ಟರು; ಅವರ ಜತೆ ನಾನೂ ಹೊರಟೆ; ತಮ್ಮ ಪತ್ನಿ ಮತ್ತು ಸೋದರನೊಡನೆ ರೆಡ್ ಬಸ್ ಆ್ಯಪ್‌ನಲ್ಲಿ ಅವರು ಪ್ರಯಾಗ್‌ರಾಜ್‌ಗೆ ಟಿಕೆಟ್ ಮಾಡಿಸಿದ್ದರು. ನನ್ನ ಪತ್ನಿಗೆ ಅದೇ ಸಮಯದಲ್ಲಿ ವಿದ್ಯಾರ್ಥಿಗಳ ಪರೀಕ್ಷೆಯ ಉಸ್ತುವಾರಿಯ ಜವಾಬ್ದಾರಿ ಇತ್ತು. ಹೋಗಲು ಇನ್ನೂ 3 ದಿನಗಳಿದ್ದವು. ನನ್ನ ಪತ್ನಿ ಬರಲಿ ಎಂದು ನನ್ನ ಆಸೆ; ಆದರೆ ಅವರು ರಜೆ ಹಾಕುವಂತೆಯೂ ಇರಲಿಲ್ಲ. ಮಾರನೆಯ ದಿನ ಅವರು ಮೀಟಿಂಗ್‌ನಲ್ಲಿ ಇದ್ದವರು ಕರೆ ಮಾಡಿ, 'ರೀ, ಪರೀಕ್ಷೆ ದಿನಾಂಕಗಳು ಫೆಬ್ರವರಿ 7ರವರೆಗೆ ಮುಂದೆ ಹೋಗಿವೆ. ಬಸ್‌ನಲ್ಲಿ ಸೀಟು ಇದ್ದರೆ ನಾನೂ ಬರುತ್ತೇನೆ' ಎಂದರು. ಕೂಡಲೇ ಗಜೇಂದ್ರ ಅವರಿಗೆ ಕರೆ ಮಾಡಿ, ಇನ್ನೊಂದು ಟಿಕೀಟನ್ನು ಬುಕ್ ಮಾಡಿಸಿದೆವು. ಆದ್ದರಿಂದ, ನನ್ನ ಆಸೆಯಂತೆ, ನನ್ನ ಪತ್ನಿಯ ಜೊತೆ ಜನವರಿ 25ರಂದು ಪ್ರಯಾಗರಾಜ್ ಯಾತ್ರೆ ಹೊರಡುವುದು ನಿಶ್ಚಿತವಾಯಿತು.

ಆ ಬಸ್‌ಗೆ ಬೆಂಗಳೂರಿನಲ್ಲಿ ಸಂಜೆ 6 ಗಂಟೆಗೆ ಬೋರ್ಡಿಂಗ್. ನಮಗೆ ಚಿಕ್ಕಬಳ್ಳಾಪುರದಲ್ಲಿ ಬೋರ್ಡಿಂಗ್ ಪಾಯಿಂಟ್; ಅಲ್ಲಿ 10 ಗಂಟೆಗೆ ಬಸ್ ಹತ್ತಬಹುದು ಎಂದಿದ್ದರು. ಆದರೆ ಆ ದಿನ ಸಂಜೆ 6 ಗಂಟೆಗೆ ಏಜೆಂಟ್ ಕರೆ ಮಾಡಿ 8 ಗಂಟೆ ಒಳಗೆ ಚಿಕ್ಕಬಳ್ಳಾಪುರ ಪಾಯಿಂಟ್‌ನಲ್ಲಿ ಹಾಜರಿರಬೇಕೆಂದು ಹೇಳಿಬಿಟ್ಟ. ಹೀಗಾಗಿ ಆತುರಾತುರವಾಗಿ ಎಲ್ಲಾ ತುಂಬಿಕೊಂಡು, ಕೆಲವನ್ನು ಮರೆತು, ಹೊರಟೆವು. ನಾವು ಎಷ್ಟು ತರಾತುರಿಯಲ್ಲಿ ಹೊರಟಿದ್ದೆವು ಎಂದರೆ, ಪ್ರಯಾಗ್ ರಾಜ್‌ನಿಂದ ಹಿಂದಿರುಗುವುದು ಎಂದು, ಹೇಗೆ ಎಂದು ಇನ್ನೂ ನಿರ್ಧಾರ ಆಗಿರಲಿಲ್ಲ!

ಒಂದೂವರೆ ದಿನ ಬಸ್‌ನಲ್ಲಿ

ಸ್ಲೀಪರ್ ಕೋಚ್ ಬಸ್, ಆರಾಮಾಗಿ ಮಲಗಿ ಹೋಗಬಹುದಾದ್ದು. ಒಂದೂವರೆ ದಿನದ ಪ್ರಯಾಣ. ಯಾವ್ಯಾವುದೋ ಊರು, ಪಟ್ಟಣ, ನಗರ, ರಾಜ್ಯಗಳನ್ನು ಹಾದು ಪ್ರಯಾಗರಾಜ್ ತಲುಪಿದೆವು. ಸಂಗಮದಿಂದ ಸುಮಾರು 12 ಕಿ.ಮೀ. ಹಿಂದೆಯೇ ಬಸ್ ನಿಲ್ಲಿಸಲಾಯಿತು. ಅಲ್ಲಿಂದ ಲಗೇಜುಗಳನ್ನು ಹೊತ್ತು, ಎಳೆಯತ್ತಾ ನಗರ ಪ್ರವೇಶ ಮಾಡಿದೆವು. ತಂಗಲು ಸ್ಥಳವೊಂದನ್ನು ಹುಡುಕಬೇಕಿತ್ತು. ರಸ್ತೆ ಬದಿಯಲ್ಲಿ ಅಂಗಡಿಯಲ್ಲಿ ಕುಳಿತಿದ್ದ ಬಾಲಕಿಯೊಬ್ಬಳು 'ಲಗೇಜ್ ಇಟ್ಟು ಸ್ನಾನ ಮಾಡಿಕೊಂಡು ಬರೋದಾದರೆ, ನಮ್ಮ ಮನೆಯಲ್ಲಿ ಇಟ್ಟು ಹೋಗಿ' ಎಂದಳು. ಅಪರಿಚಿತ ಸ್ಥಳ, ಅಪರಿಚಿತ ಮನೆ, ಆದರೆ ಆ ಬಾಲಕಿಯ ಮಾತುಗಳಲ್ಲಿನ ಪ್ರಾಮಾಣಿಕತೆ ಮನಕ್ಕೆ ತಟ್ಟಿ, ಮನೆಯ ಒಳಗೆ ಹೋದೆವು. ಮನೆ ಒಡತಿಯು 'ಮನೆ ಚಿಕ್ಕದು, ನಾನು ಗುಡಿಸಿ, ಸಾರಿಸಿ ಕೊಡ್ತೇನೆ. ಬೇಕಾದರೆ ಶೌಚಾಲಯವನ್ನು ಬಳಸಿಕೊಳ್ಳಿ, ಅಷ್ಟು ದೂರದಿಂದ ಬಂದಿದ್ದೀರಿ. ಇಷ್ಟೇ ನಾವು ನಿಮಗೆ ನೀಡಬಹುದಾದ ನೆರವು' ಎಂದರು. ನಾವು ಧೈರ್ಯ ತಂದುಕೊಂಡು ಅವರು ಹೇಳಿದಂತೆ ಕೇಳಿದೆವು.

ಒಂದು ಮುಳುಗು ಹಾಕಿ ನೋಡಿ!

ಗಂಗಾ ನದಿಗೆ ಸ್ನಾನಕ್ಕೆ ಇಳಿದೆವು. ನೀರಿಗೆ ಇಳಿದ ಮೇಲೆ ದಿನಾ ತಣ್ಣೀರು ಸ್ನಾನ ಅಭ್ಯಾಸ ಮಾಡಿಕೊಂಡಿದ್ದ ಗೆಳೆಯ ಗಜೇಂದ್ರ ಅವರೇ 'ಸಾರ್, ಏನ್ ಸಾರ್ ಫ್ರಿಜ್ ನೀರು ಇದ್ದ ಹಾಗಿದೆ. ಹೇಗೆ ಮುಳುಗೋದು' ಎಂದರು. ನಾವು ಇಳಿದು ನಿಧಾನಕ್ಕೆ ನೀರಿನೊಳಗೆ ಸಾಗಿದೆವು. ಸುತ್ತಲೂ ಸ್ನಾನ ಮಾಡುತ್ತಿದ್ದ ಎಲ್ಲ ರೀತಿಯ ಜನರನ್ನು ನೋಡಿ ಧೈರ್ಯ ತಂದುಕೊಂಡೆವು. ಅಷ್ಟರಲ್ಲಿ ಗಜೇಂದ್ರ ನೀರಲ್ಲಿ ಮುಳುಗಿ ಹತ್ತಿರ ಬಂದು, 'ಸಾರ್ ಒಂದು ಮುಳುಗು ಹಾಕಿ ನೋಡಿ, ನಂತರ ನಿಮಗೆ ಹಾಯೆನಿಸುತ್ತೆ, ಹೊರಗೆ ಬರೋಕೇ ಮನಸಾಗಲ್ಲ' ಎಂದು ಮೂರ್‍ನಾಲ್ಕು ಮುಳುಗು ಹಾಕಿದರು. 'ಜೈ ಶ್ರೀರಾಮ್' ಅಂತ ಜೋರಾಗಿ ಕೂಗಿ, ಮೂಗು ಮುಚ್ಚಿಕೊಂಡು ನಾನು ಮುಳುಗು ಹಾಕಿಯೇಬಿಟ್ಟೆ. ನನ್ನ ಶ್ರೀಮತಿಯವರೂ ಸ್ವಲ್ಪ ಹೊತ್ತು ಅತ್ತಿತ್ತ ನೋಡಿ, ಯೋಚಿಸಿ, ನಂತರ ಮುಳುಗಿದವರು, ಖುಷಿಯಿಂದ ಮತ್ತೆ ಮತ್ತೆ ಮುಳುಗಿದರು. ಮೈ ಕೊರೆಯುವ ಚಳಿ ನೀರು, ಥಂಡಿ ವಾತಾವರಣ. ಆದರೆ ಸ್ನಾನವೇ ನಮ್ಮ ಮುಖ್ಯ ಗಮನವಾಗಿತ್ತು, ಮುಳುಗು ಹಾಕಿ ಎದ್ದ ಮೇಲೆ ಧನ್ಯತೆಯ ಭಾವ! ಮೈ ಮನಗಳು ಹಗುರಾದವೇನೋ ಎಂದನಿಸಿತು.

'ಸಾರ್, ನನಗೆ ಸುಮಾರು ದಿನಗಳಿಂದ ಹೊಟ್ಟೆ ಸರಿಯಿರಲಿಲ್ಲ. ಹಸಿವೆಯೇ ಸರಿಯಾಗಿ ಆಗುತ್ತಿರಲಿಲ್ಲ. ಇಲ್ಲಿ ಮುಳುಗಿ ಎದ್ದ ಮೇಲೆ, ಹೊಟ್ಟೆಯೆಲ್ಲಾ ಖಾಲಿಯಾದಂತೆ ಹಸಿವೆಯಾಗುತ್ತಿದೆ' ಎಂದರು ಗಜೇಂದ್ರ. ಎತ್ತರದ ಅಟ್ಟಣಿಗೆಗಳನ್ನು ಹಾಕಿಕೊಂಡು ದೂರದರ್ಶನ, ಹಾಗೂ ಇತರೆ ವಾಹಿನಿಯವರು ನಮ್ಮ ಸ್ನಾನವನ್ನು ಕ್ಯಾಮೆರಾದಲ್ಲಿ ಸೆರೆ ಹಿಡಿಯುತ್ತಿದ್ದರು. ಆ ಸುತ್ತಲೂ ಕಣ್ಣು ಹಾಯಿಸಿದೆ : ಎಲ್ಲರೂ ಭಕ್ತಿಯಿಂದ ಸ್ನಾನ ಮಾಡುತ್ತಿದ್ದರು, ಗಂಗೆಯಲ್ಲಿ ಮುಳುಗುಹಾಕುತ್ತಿದ್ದರು, ಸ್ನಾನ ಮಾಡಿದ ನಂತರ ಎಲ್ಲರಿಗೂ ಸಂತಸ; ನಮಗಂತೂ ಅಲ್ಲಿ ಭಾರತೀಯತೆಯ ವಿರಾಟ್ ದರ್ಶನ ಆಯಿತು. ಅಲ್ಲಿ ಭೇದ ಭಾವ ಇರಲಿಲ್ಲ; ಆ ಪ್ರಾಂತ್ಯದವರು, ಈ ಪ್ರಾಂತ್ಯದವರು, ಹಿರಿಯರು, ಕಿರಿಯರು, ಬಡವರು, ಸಿರಿವಂತರು ಎಂಬ ವ್ಯತ್ಯಾಸವಿರಲಿಲ್ಲ. ಎಲ್ಲರಿಗೂ ಒಂದೇ ಗುರಿ: ತ್ರಿವೇಣಿ ಸಂಗಮದಲ್ಲಿ ಅಥವಾ ಗಂಗೆಯಲ್ಲಿ ಸ್ನಾನ ಮಾಡುವುದು.

ನಿಧಾನವಾಗಿ ನಡೆಯುತ್ತ ನಾವು ಉಳಿದುಕೊಂಡಿದ್ದ ಮನೆಯತ್ತ ಹೆಜ್ಜೆ ಹಾಕಿದೆವು. ದಾರಿಯುದ್ದಕ್ಕೂ ಉಚಿತ ಪಾನೀಯ ಮತ್ತು ಆಹಾರ ವಿತರಣೆ ನಡೆದಿತ್ತು. ನಮಗೂ ಹೊಟ್ಟೆ ಹಸಿದಿತ್ತು. ಇಸಿದುಕೊಂಡು ತಿಂದು, ಕುಡಿದೆವು. ಕಿಚಡಿ ಬಿಸಿ ಬಿಸಿಯಾಗಿ ಚೆನ್ನಾಗಿತ್ತು. ಚಹ ಕುಡಿದೆವು, ಅದೂ ಚೆನ್ನಾಗಿತ್ತು. ಅಲ್ಲಲ್ಲಿ ಟೆಂಟ್‌ಗಳು, ಶೌಚಾಲಯಗಳ ವ್ಯವಸ್ಥೆ ಮಾಡಲಾಗಿತ್ತು.

ಹೊಸ ಮನೆಗೆ ಆಹ್ವಾನ

ನಾವು ಬರುವಾಗ, ಮನೆಯವರು ಮನೆಯನ್ನು ಗುಡಿಸಿ ಸಾರಿಸಿ ನಮ್ಮ ಲಗೇಜುಗಳನ್ನು ಒಪ್ಪವಾಗಿಟ್ಟಿದ್ದರು. 'ಇನ್ನೊಮ್ಮೆ ಬನ್ನಿ, ಆಗ'ಹೊಸ ಮನೆ ಕಟ್ಟಿರುತ್ತೇವೆ. ನೀವು ಇಲ್ಲಿಯೇ ಉಳಿದುಕೊಳ್ಳಬಹುದು' ಎಂದರು ಆ ತಾಯಿ. ಗಂಡನನ್ನು ಕಳೆದುಕೊಂಡಿದ್ದ ಆಕೆಗೆ ಮೂವರು ಮಕ್ಕಳು. ಹಿರಿಯವಳು ಎಂಟನೆಯ ತರಗತಿಯಲ್ಲಿ ಓದುತ್ತಿದ್ದಳು. ಗಂಡು ಮಕ್ಕಳಿಬ್ಬರಿಗೂ ದೃಷ್ಟಿ ದೋಷವಿತ್ತು. ಆದರೆ ಅವರ ನಡುವಿನ ಬಾಂಧವ್ಯ ಅಸಾಧಾರಣ ಎನಿಸಿತು. ಅವರು ನಮಗೆ ತೋರಿದ ಪ್ರೀತಿ, ವಾತ್ಸಲ್ಯಗಳು ನಮ್ಮಲ್ಲಿ ಬೆರಗನ್ನು ಹುಟ್ಟಿಸಿದವು. ಅವರು ಬಯಸದಿದ್ದರೂ ಅವರಿಗೆ ಒಂದಷ್ಟು ಹಣ ನೀಡಿದೆವು.

ತ್ರಿವೇಣಿ ಸಂಗಮದಲ್ಲಿ ಸ್ನಾನ; ವಿವಿಧ ಪಂಥಗಳ ಜನರು ಸಮಾನರಂತೆ ಮುಳುಗಿ ಎದ್ದ ಅಪೂರ್ವ ದೃಶ್ಯ; ಸ್ನಾನ ಮುಗಿಸಿ ಬಂದ ನಂತರ, ಆ ಪುಟ್ಟ ಮನೆಯ ಒಡತಿ ಮತ್ತು ಮಕ್ಕಳು ತೋರಿದ ಪ್ರೀತಿ, ವಿಶ್ವಾಸ! ಇದೆಂತಹ ಅಪರೂಪದ ಅನುಭವ, ಅನುಭೂತಿ! ಪದಗಳಲ್ಲಿ ವರ್ಣಿಸಲಾಗದಂತಹ ಭಾವನೆಗಳು ನನ್ನ ಮನವನ್ನು ತುಂಬಿಕೊಂಡವು.

ಅಲ್ಲಿಗೆ ಪ್ರಯಾಗರಾಜ್ ಭೇಟಿ ಸಂಪನ್ನಗೊಂಡಿತು. ಆ ಮನೆಯವರಿಗೆ ವಿದಾಯ ಹೇಳಿ ನಡೆಯುತ್ತಾ ಸಾಗಿದೆವು. ನಮ್ಮ ಮುಂದಿನ ಗುರಿ ಅಯೋಧ್ಯೆ. ಮತ್ತೊಮ್ಮೆ ಬಸ್ಸು, ಕಾರುಗಳ ವಿಚಾರಣೆ. ಕಡೆಗೆ ಒಬ್ಬರು ಟ್ಯಾಕ್ಸಿ ತರುವುದಾಗಿ ಹೇಳಿ, ಒಂದು ಸ್ಥಳವನ್ನು ಗುರುತು ಮಾಡಿ ಅಲ್ಲಿಗೆ ಬರಲು ಹೇಳಿದರು. ನಡೆಯುತ್ತಾ ಟ್ಯಾಕ್ಸಿಯವನು ಹೇಳಿದ್ದ ಪ್ರದೇಶವನ್ನು ತಲುಪಿದೆವು. ಸುಮಾರು 4–5 ಗಂಟೆ ಕಳೆದರೂ ಅವನ ಆಗಮನವಾಗಲಿಲ್ಲ. ನಮ್ಮ ಟ್ಯಾಕ್ಸಿಯವನು ತಾನು ಬರಲಾಗುತ್ತಿಲ್ಲ, ಬೇರೆಯವರಿಗೆ ಕಳುಹಿಸುವೆ ಎಂದು ಹೇಳಿದಾಗ ರಾತ್ರಿ 11 ಗಂಟೆ ಕಳೆದಿತ್ತು; ಪ್ರಯಾಗ್‌ರಾಜ್‌ನಲ್ಲಿ ವಿಪರೀತ ಚಳಿ; ಆ ಚಳಿಗೆ ನಡುಗಿ ಹೋಗಿದ್ದೆವು, ಕೂರಲೂ ಸ್ಥಳವಿರದೆ ಒದ್ದಾಡುತ್ತಿದ್ದೆವು. ಕಡೆಗೆ ಅಲ್ಲಿದ್ದ ಪೊಲೀಸರನ್ನು ಕೇಳಿದೆವು: 'ನಿಮ್ಮ ಟ್ಯಾಕ್ಸಿ ಬೆಳಿಗ್ಗೆ ಬರಲಿ ಬಿಡಿ; ನೀವು ಇಲ್ಲಿನ ಒಂದು ಮನೆಯಲ್ಲಿ ಉಳಿದುಕೊಂಡು ಬೆಳಗ್ಗೆ ಹೊರಡಿ' ಎಂದ ಪೊಲೀಸು, ಪಕ್ಕದಲ್ಲಿದ್ದ ಮನೆಯೊಂದರತ್ತ ದಾರಿ ತೋರಿದರು.

ಆ ಮನೆಯವರು ಪ್ರೀತಿಯಿಂದ ಸ್ವಾಗತಿಸಿ, ನಮಗೆ ಬೇಕಾದ ಎಲ್ಲ ನೆರವೂ ನೀಡಿದರು. ಬಿಸಿ ಕಾಫಿ, ನೀರು, ಹಾಸಲು ಹೊದೆಯಲು ರಗ್, ಬಿಸಿಬಿಸಿ ರೊಟ್ಟಿ, ನಾವು ಬಯಸಿದಂತೆ ಅನ್ನ, ತರಕಾರಿ ಹುಳಿ... ಎಲ್ಲ ಸಿಕ್ಕಿತು. ಮುಂಜಾನೆ 4 ಗಂಟೆಗೆ ಟ್ಯಾಕ್ಸಿ ಬಂದಿತ್ತು. ಪ್ರಯಾಣ ಪ್ರಯಾಗದಿಂದ ಅಯೋಧ್ಯೆಯತ್ತ ಸಾಗಿತ್ತು. ಮಾರ್ಗ ದುದ್ದಕ್ಕೂ ಪೋಲಿಸರ ನಿರ್ಬಂಧಗಳು. ಯಾವುದ್ಯಾವುದೋ ಮಾರ್ಗದಲ್ಲಿ ಸಾಗಿ, ಅಯೋಧ್ಯೆಯನ್ನು ತಲುಪಿಸಿದ ಚಾಲಕ 'ಸೀದಾ ಸರಯೂ ನದಿಗೆ ಹೋಗಿ ಸ್ನಾನ ಮಾಡಿ ದೇವಸ್ಥಾನಕ್ಕೆ ಹೋಗಿ ರಾಮಲಲ್ಲಾನ ದರ್ಶನ ಮಾಡಿ ಬನ್ನಿ, ಕಾದಿರುತ್ತೇನೆ. ನಿಮ್ಮನ್ನು ನಂತರ ಕಾಶಿಗೆ ತಲುಪಿಸಿ ನಾನು ವಾಪಸಾಗುತ್ತೇನೆ' ಎಂದ. ಈ ನಡುವೆ, ಇಂಟರ್ನೆಟ್ ಉಪಯೋಗಿಸಿ, ನಾವು ಕಾಶಿಯಿಂದ ಬೆಂಗಳೂರಿಗೆ ವಾಪಸು ಬರಲು ಸ್ಲೀಪರ್ ಬಸ್‌ನಲ್ಲಿ ಟಿಕೇಟುಗಳನ್ನು ಮಾಡಿದ್ದೆವು. ಇಂದಿನ ದಿನಗಳಲ್ಲಿ ಬೆಂಗಳೂರಿನಿಂದ ಕಾಶಿ, ಪ್ರಯಾಗ್‌ರಾಜ್ ಮೊದಲಾದ ಸ್ಥಳಗಳಿಗೆ ಸ್ಲೀಪರ್ ಬಸ್‌ಗಳಿರುವುದು ನಿಜಕ್ಕೂ ವಿಶೇಷ ಎನಿಸಿತು.

ಅಯೋಧ್ಯೆಯ ರಸ್ತೆಗಳೆಲ್ಲಾ ಜಿಗಿಜಿಗಿಗುಡುತ್ತಿದ್ದವು. ಹನುಮಾನ್ ಘಡಿಯತ್ತ ಸಾಗಿದೆವು. ಸುಮಾರು 500 ಮೀಟರು ಕ್ರಮಿಸಲು 2–3 ಗಂಟೆಗಳಾದವು! ದೇವರ ಮುಂದೆ ಹೆಚ್ಚು ಹೊತ್ತು ನಿಲ್ಲಲೂ ಅವಕಾಶವಿರಲಿಲ್ಲ.

ಬಾಲರಾಮನ ಮುಂದೆ ನಿಂತಾಗ

ಅಯೋಧ್ಯೆ ದೇವಸ್ಥಾನದಲ್ಲಿ ವ್ಯವಸ್ಥೆ ಸ್ವಲ್ಪ ಕಷ್ಟಕರವೆನಿಸಿತು. ವಿಪರೀತ ಜನಸಂದಣಿ. ಒಮ್ಮೆ ಅಂತೂ ರಕ್ಷಣಾಪಡೆಯವರು ಎತ್ತರದ ಸ್ಥಾನಗಳನ್ನು ಏರಿ 'ಸಮಾಧಾನವಾಗಿ ಚಲಿಸಿರಿ, ನೂಕು ನುಗ್ಗಲಿಗೆ ಆಸ್ಪದ ಕೊಡಬೇಡಿ' ಎಂದು ಮನವಿ ಮಾಡಲಾರಂಭಿಸಿದರು. ಜನಜಂಗುಳಿ ಹೆಚ್ಚಾಗಿ, ನಮ್ಮನ್ನು ಒತ್ತತೊಡಗಿತು. ನಾವು ಹೆದರಿ ವಾಪಸು ಹೊರಟು ಬಿಡೋಣವೆಂದುಕೊಂಡೆವು. ಆದರೆ ಹೊರಬರಲು ಅದೇ ದಾರಿಯಲ್ಲಿ ಬರಬೇಕಿತ್ತು.

ಸ್ವಲ್ಪ ಸಮಯದ ನಂತರ ಪುನಃ ಜನಪ್ರವಾಹಕ್ಕೆ ಸೇರಿಕೊಂಡೆವು. ಅಂತೂ ಕೊನೆಗೂ ಸುರಕ್ಷಿತವಾಗಿ ರಾಮಲಲ್ಲಾನ ಎದುರು ನಿಂತಿದ್ದೆವು. ಆ ಭಗವಂತನ ಮೋಹಕ ರೂಪವನ್ನು ಕಂಡು, ಅವನ ಅಸಾಧಾರಣ ಗುಣಗಳ ಸ್ಮರಣೆಯಾಗಿ ಭಕ್ತಿಭಾವ ತುಂಬಿ ಬಂದಿತು. ಅದು ಹೇಗೋ ತಿಳಿಯದು.... ನನ್ನ ಮುಂದೆ ಒಂದಷ್ಟು ದೂರ ಜನರೇ ಇರಲಿಲ್ಲ. ನಾನು ಸಾಲು ಸೇರಲು ಮುಂದಕ್ಕೆ ಓಡತೊಡಗಿದೆ. ಹಿಂದೆಯೇ ಇದ್ದ ನನ್ನ ಶ್ರೀಮತಿ 'ರೀ, ನಿಧಾನಕ್ಕೆ ದೇವರನ್ನು ನೋಡುತ್ತಾ ಹೋಗಿ, ಓಡಬೇಡಿ. ಇಲ್ಲಿ ಇಷ್ಟೊಂದು ಸಮಯಾವಕಾಶ ದೊರಕಿರುವುದು ನಮಗೆ ಬಯಸದೆ ದೊರೆತ ಭಾಗ್ಯ!' ಎಂದರು. ನಿಜ ಅಲ್ಲವೆ? ಅಲ್ಲಿಂದ ಮುಂದೆ ನಮ್ಮ ಪ್ರಯಾಣ ಕಾಶಿಯತ್ತ. ಕಾಶಿ ತಲುಪಿಸಿದ ಟ್ಯಾಕ್ಸಿಯವನು 'ಸುತ್ತಿ ಸುತ್ತಿ ಬರಬೇಕಾ ಯಿತು, ವೆಯಿಟಿಂಗ್ ಟೈಮ್ ಜಾಸ್ತಿ ಆಯಿತು' ಎಂದು ಹೇಳಿ, ಮಾತನಾಡಿದ್ದಕ್ಕಿಂತಲೂ ಸ್ವಲ್ಪ ಹೆಚ್ಚಿಗೆ ಹಣ ಕೊಡಲು ಹೇಳಿದ. ಕಾಶಿಯಲ್ಲಿ ಹೋಟಲೊಂದರಲ್ಲಿ ಬಾಡಿಗೆ ರೂಮನ್ನು ಹಿಡಿದೆವು. ಲಗೇಜುಗಳನ್ನು ಅಲ್ಲಿ ಸ್ಥಾಪಿಸಿ, ಕಾಶಿಯ ಗಲ್ಲಿಗಳಲ್ಲಿ ಸಾಗಿದ್ದ ಕ್ಯೂಗಳನ್ನು ಸೇರಿಕೊಂಡು ದೇವಸ್ಥಾನ ಪ್ರವೇಶ ಮಾಡಿದೆವು. ▸▸ ಪುಟ: 3

ಅಪರಿಚಿತರೂ ಇಲ್ಲಿ ಆಪ್ತರು!

» ಶ್ರೀರಂಗರಾಜನ್ ಬೆಂಗಳೂರು

ಫೋನು ರಿಂಗಣಿಸಿತು. ಗೆಳೆಯ ಮುರುಗೇಶನ ಹೆಸರು ಕಾಣಿಸಿತು. 'ಜನವರಿ ಕೊನೇ ವಾರದಲ್ಲಿ ಕೆಲಸ ವೇನಾದರೂ ಇದೆಯಾ?' ಎಂದು ಕೇಳಿದ. 'ರಿಟೈರ್ ಆಗಿ ಮನೆಯಲ್ಲಿ ಕುಳಿತವನಿಗೇನು ಕೆಲಸ?' ಎಂದು ನಗುತ್ತಾ ಹೇಳಿದೆ. 'ನಡಿ, ಹೋಗಿ ಕುಂಭಮೇಳ ನೋಡಿಕೊಂಡು ಬರೋಣ' ಅಂದ. ಮುರುಗೇಶ ಹಾಗೆ! ತಲೆಗೆ ಏನಾದರೂ ಬಂದರೆ ಸಾಕು ಸ್ನೇಹಿತರಿಗೆ ಫೋನ್ ಮಾಡಿ ಯಾವುದಾದರೂ ಊರಿಗೆ ಹೋಗುವ ಪ್ಲಾನ್ ಮಾಡಿಯೇ ಬಿಡುತ್ತಾನೆ. ಕುಂಭಮೇಳದ ಅನುಭವ ಪಡೆದು ಬರೋಣ ಎಂದು ಎಂಟು ಜನ ಗೆಳೆಯರು ಹೊರಟೆವು.

ಜನವರಿ 23ಕ್ಕೆ ಬೆಂಗಳೂರಿನಿಂದ ಹೊರಟು 26ಕ್ಕೆ ವಾಪಸ್ಸು ಬರುವುದೆಂದು ತೀರ್ಮಾನಿಸಿದೆವು. ಸತೀಶ್ ಪಂಡಿತ್ ಎಂಬುವರು ಪ್ರವಾಸದ ವ್ಯವಸ್ಥೆ ಮಾಡಿಕೊಡುತ್ತಾರೆ ಎಂದು ಗೆಳೆಯ ಹೇಳಿದ. ಅವರಿಗೆ ಫೋನ್ ಮಾಡಿ, ಅಯೋಧ್ಯೆ ಮತ್ತು ವಾರಣಾಸಿ ನೋಡಿದ ನಂತರ ಪ್ರಯಾಗ್‌ರಾಜ್‌ಗೆ ಹೋಗುವ ಯೋಜನೆ ತಿಳಿಸಿದೆವು. ಅಯೋಧ್ಯೆಗೆ ಬೆಂಗಳೂರಿನಿಂದ ವಿಮಾನದಲ್ಲಿ ಸುಮಾರು ಎರಡೂವರೆ ಗಂಟೆಗಳ ಪ್ರಯಾಣ. ಅಯೋಧ್ಯೆ ನೋಡಿದ ನಂತರ, ವಾರಣಾಸಿಗೆ ರಸ್ತೆ ಪಯಣ. ಇವೆರಡೂ ಸ್ಥಳಗಳಲ್ಲಿ ಅಪಾರ ಜನಸಂದಣಿ! ಪ್ರಯಾಗ್‌ರಾಜ್ ನೋಡಲು ಬಂದ ಹಲವರು ಇಲ್ಲಿಗೂ ಬಂದಿದ್ದೇ ಇದಕ್ಕೆ ಕಾರಣ.

ಇವೆರಡೂ ತಾಣ ನೋಡಿದ ನಂತರ ಪ್ರಯಾಗರಾಜ್ ಗೆ ನಮ್ಮ ಪ್ರಯಾಣ. ಈ ಮಹಾ ಕುಂಭಮೇಳ ನಮ್ಮ ಸಂಸ್ಕೃತಿಯ, ನಮ್ಮ ಪರಂಪರೆಯ, ಸನಾತನ ಧರ್ಮಾಚರಣೆಯ ಪ್ರತೀಕ. ನಾವು ಹೋಗುವ ಹೊತ್ತಿಗೇ ಸುಮಾರು ಹತ್ತು ಕೋಟಿ ಜನರು ಅಲ್ಲಿಗೆ ಬಂದು ಸಂಗಮದಲ್ಲಿ ಸ್ನಾನಮಾಡಿ, ಪುಣ್ಯಗಳಿಸಿಯಾಗಿತ್ತು.

13 ಜನವರಿ 2025 ರಂದು ಪ್ರಾರಂಭವಾಗಿರುವ ಈ ಮಹಾ ಕುಂಭಮೇಳ 26 ಫೆಬ್ರವರಿ 2025ರ ವರೆಗೆ ನಡೆಯುತ್ತದೆ. ಸುಮಾರು 40 ಚದುರ ಕಿಲೋಮೀಟರ್ ಜಾಗದಲ್ಲಿ ನಡೆಯುವ ಮಹಾ ಕುಂಭಮೇಳ. ಜನರ ಅನುಕೂಲಕ್ಕಾಗಿ ಈ ಜಾಗವನ್ನು 25 ವಲಯಳಾಗಿ ವಿಂಗಡಿಸಿ, ಅದರಲ್ಲಿ ಸುಮಾರು ಒಂದು ಲಕ್ಷ ಎಂಬತ್ತು ಸಾವಿರ ಟೆಂಟುಗಳನ್ನು ನಿರ್ಮಿಸಿ, ರಸ್ತೆಗಳು, ಕರೆಂಟು, ನೀರಿನ ಅನುಕೂಲಗಳನ್ನು ಕಲ್ಪಿಸಿ, ಒಂದು ನಗರವನ್ನೇ ನಿರ್ಮಿಸಿದ್ದಾರೆ. ವಾರಣಾಸಿಯಿಂದ ಪ್ರಯಾಗ್ ರಾಜ್‌ಗೆ ಬಂದಾಗ, ಸಂಗಮದ ಜಾಗಕ್ಕಿಂತ ಸುಮಾರು ಹದಿನೈದು ಕಿಲೋಮೀಟರ್ ದೂರದಲ್ಲೇ ನಮ್ಮ ವಾಹನವನ್ನು ನಿಲ್ಲಿಸಿಬಿಟ್ಟರು. ಎಲ್ಲೆಲ್ಲೂ ಜನ! ಜನಪ್ರವಾಹ ನುಗ್ಗಿ ಹರಿಯುತ್ತಿತ್ತು.

ವಿವಿಧ ಪಂಥಗಳ ಸಂಗಮ

ಕುಟುಂಬದವರು, ವಯಸ್ಸಾದವರು, ಮಕ್ಕಳ ಕೈಹಿಡಿದು ಸಾಮಾನುಗಳನ್ನು ತಲೆಯ ಮೇಲೆ ಇಟ್ಟುಕೊಂಡು ನಡೆದು ಹೋಗುತ್ತಿರುವ ಹೆಂಗಸರು. ಸಂಗಮದೆಡೆ ಸಾಗುತ್ತಿರುವ ಜನಸಾಗರ. ಐದು ಕಿಲೋಮೀಟರ್ ತನಕ ಒಂದು ಆಟೋದಲ್ಲಿ ಪ್ರಯಾಣಿಸಿ ಅಲ್ಲಿಂದ ಇನ್ನೊಂದು ಆಟೋದಲ್ಲಿ ಇನ್ನೈದು ಕಿಲೋಮೀಟರ್ ಬಂದೆವು. ಅಲ್ಲಿಂದ ನಡಿಗೆಯಲ್ಲಿ ಹೊರಟೆವು. ಜನರ ನಡುವೆ ಸಾಗುತ್ತಾ ನದಿಯ ದಂಡೆಗೆ ಬಂದೆವು. ಬೇರೆ ಬೇರೆ ಜಾಗಗಳ, ಬೇರೆ ಬೇರೆ ಪಂಥಗಳ, ವಿವಿಧ ಆಚಾರಗಳ ಜನರೆಲ್ಲ ಒಂದೇ ನಂಬಿಕೆಯಿಂದ ಬಂದು ಸೇರಿರುವ ಮಹಾಸಂಗಮದ ಸ್ಥಳ. ನಾನು, ನೀನು ಎನ್ನುವುದು ಮರೆಯಾಗಿ ನಾವಾಗುವ ಸುಂದರ ತಾಣ ಈ ಪ್ರಯಾಗರಾಜ್. ಇಲ್ಲಿ ಗೊತ್ತಿಲ್ಲದವರು ಗೆಳೆಯರಾಗುತ್ತಾರೆ; ಅಪರಿಚಿತರು ಆಪ್ತರಾಗುತ್ತಾರೆ! ಎಲ್ಲರೂ ಒಟ್ಟಿಗೆ ನದಿಯಲ್ಲಿ ಮುಳುಗೆದ್ದು ಪಾವನರಾಗುತ್ತಾರೆ.

ನದಿಯ ಇಕ್ಕೆಲಗಳಲ್ಲಿಯೂ ಹಗ್ಗಗಳನ್ನು ಕಟ್ಟಿ ಸ್ನಾನಕ್ಕಾಗಿ ವ್ಯವಸ್ಥೆ ಮಾಡಿದ್ದಾರೆ. ಲಕ್ಷಾಂತರ ಜನರು ಎಲ್ಲಿ ಜಾಗ ಸಿಗುತ್ತದೆಯೋ ಅಲ್ಲಿ ಮಿಂದು ಪುನೀತರಾಗುತ್ತಾರೆ. ಎಲ್ಲರೂ ಅಚ್ಚುಕಟ್ಟಾಗಿ ಸ್ನಾನ ಮಾಡಿ, ಸ್ಥಳೀಯ ಸಮಿತಿ ನೀಡುವ ನಿರ್ದೇಶನದಂತೆ ನಡೆದು ಕೊಳ್ಳುತ್ತಾರೆ. ನಾವೆಲ್ಲರೂ ಸಂಗಮದಲ್ಲಿ ಸ್ನಾನ ಮಾಡಬೇಕೆಂಬ ಇಚ್ಛೆಯಿಂದ ದೋಣಿಯೊಂದನ್ನು ಗೊತ್ತುಮಾಡಿಕೊಂಡು ತ್ರಿವೇಣಿ ಸಂಗಮದ ಜಾಗಕ್ಕೆ ಹೋದೆವು. ಅಲ್ಲಿ ಸ್ನಾನಮಾಡಿದೆವು. ಮಹಾಕುಂಭ ಮೇಳ ನಡೆಯುವ ಅವಧಿಯಲ್ಲಿ, ಗಂಗೆ, ಯಮುನೆ ಮತ್ತು ಸರಸ್ವತಿಯರ ಸಂಗಮದಲ್ಲಿನ ಸ್ನಾನ ನಮ್ಮ ಜೀವನದ ಅತ್ಯಂತ ಮಹತ್ವದ ಕ್ಷಣ. ನಮ್ಮ ಭಾಗ್ಯದ ಮತ್ತು ಹೆಮ್ಮೆಯ ಸಮಯ. ಈ ಕ್ಷಣಕ್ಕಾಗಿ ಅನುಭವಿಸಿದ ಎಲ್ಲಾ ಕಷ್ಟಗಳೂ ಮನಸ್ಸಿನಿಂದ ಮಾಯವಾದ ಭಾವ. ಪುನೀತ ಭಾವನೆಯಿಂದ ನೀರಿನಲ್ಲಿ ಮಿಂದು, ಮುಳುಗೆದ್ದು ಬಂದಾಗ ಒಂದು ರೀತಿಯ ವಿನೀತ ಭಾವ. ನಮಾಮಿ ಗಂಗೆ. ಸ್ನಾನ ಮುಗಿಸಿ ಬೇರೆ ಬೇರೆ ವಲಯ ಗಳನ್ನು (ಸೆಕ್ಟರ್) ಮತ್ತು ನಾಗಾ ಸಾಧುಗಳನ್ನು ನೋಡಲು ಹೋದೆವು. ಅದೆಷ್ಟು ನಾಗ ಸಾಧುಗಳು, ಸಾಧುಗಳು, ಸಂನ್ಯಾಸಿ ಗಳು ಇಲ್ಲಿ ಬಂದಿದ್ದಾರೆ! ಇಷ್ಟು ಸಾಧು ಸಂತರು ವರ್ಷದ ಉಳಿದ ದಿನಗಳು ಎಲ್ಲಿರುತ್ತಾರೆ ಎನ್ನುವುದು ಒಂದು ವಿಸ್ಮಯ!

ರುದ್ರಾಕ್ಷಿ ನೀಡಿದ ಸಾಧು

ವಿವಿಧ ವಲಯಗಳ ಡೇರೆಗಳಲ್ಲಿ ವಾಸವಾಗಿರುವ ಸನ್ಯಾಸಿಗಳಲ್ಲಿ ಹಲವರು ಪ್ರವಚನಗಳನ್ನು ನಡೆಸುತ್ತಿರುತ್ತಾರೆ. ಭಕ್ತವೃಂದ ನದಿಗಳಲ್ಲಿ ಮಿಂದು ಬಂದು ಈ ಪ್ರವಚನಗಳಲ್ಲಿ ಭಾಗವಹಿಸುತ್ತಾರೆ. ಮತ್ತೆ ಕೆಲವರು ಅಚ್ಚರಿಯಿಂದ ನಾಗಾ ಸಾಧುಗಳ ಡೇರೆಗಳ ಸುತ್ತಲೂ ಓಡಾಡುತ್ತಾ ಇರುತ್ತಾರೆ. ಕೆಲವೊಮ್ಮೆ ಸಾಧುಗಳು ಹತ್ತಿರ ಕರೆದು ಕೂರಿಸಿ, ಮಾತನಾಡಿಸುತ್ತಾರೆ. ನಾವು ಒಂದೆರಡು ಡೇರೆ ಗಳಿಗೆ ಹೋಗಿ ಅಲ್ಲಿದ್ದ ಸಾಧುಗಳ ದರ್ಶನ ಪಡೆದು, ಅವರನ್ನು ಮಾತನಾಡಿಸಿ ಅವರು ಕೊಟ್ಟ ವಿಭೂತಿ ರುದ್ರಾಕ್ಷಿ ಪಡೆದು ಬಂದವು. ಆದರೆ ಕೆಲವು ಸಾಧುಗಳು ನಮ್ಮನ್ನು ಹತ್ತಿರವೂ ಸೇರಿಸು ವುದಿಲ್ಲ. ಅವರಿಗೆ ಅವರದೇ ಕಟ್ಟಳೆ, ನಿಯಮ, ಪದ್ಧತಿಗಳಿರುತ್ತವೆ. ಈಗ ಪ್ರಯಾಗ್‌ರಾಜ್‌ನಲ್ಲಿ ನಡೆಯುತ್ತಿರುವ ಮಹಾ ಕುಂಭ ಮೇಳವನ್ನು ನಾವು ಕಾಣುತ್ತಿರುವುದೇ ಒಂದು ವಿಸ್ಮಯ. ಕೋಟ್ಯಂತರ ಜನರು ಒಂದೇ ನಂಬಿಕೆಯಿಂದ ಪುಣ್ಯ ನದಿಗಳಲ್ಲಿ ಸ್ನಾನ ಮಾಡಲು ಒಂದೆಡೆ ಸೇರಿ, ಎಲ್ಲರೂ ಒಂದೇ ಕುಟುಂಬ ದವರಂತೆ ಸಂಭ್ರಮಪಟ್ಟು, ನಂತರ ತಮ್ಮ ತಮ್ಮ ಊರುಗಳಿಗೆ ತೆರಳುವುದು ಮತ್ತೊಂದು ವಿಸ್ಮಯ. ಅನೇಕ ವಿಸ್ಮಯಗಳ ಗೊಂಚಲು ಹಾಗೂ ನಮ್ಮ ಜನ್ಮದ ವಿಶೇಷ 'ಮಹಾ ಕುಂಭಮೇಳ'.

ಪುಸ್ತಕ ವಿಮಾನ

ಸಹೃದಯರಲ್ಲಿ ಸದಭಿರುಚಿಯನ್ನು ಸೃಷ್ಟಿಸುವ, ಸಮಾಜದಲ್ಲಿ ಉನ್ನತ ಆದರ್ಶಗಳನ್ನು ಬಿತ್ತುವ ಮಹೋದ್ದೇಶವನ್ನು ತುಂಬಿಕೊಂಡ ಇಲ್ಲಿಯ ಲೇಖನಗಳು ಸಾಹಿತ್ಯವೂ ಔಷಧವಾಗಬಲ್ಲುದು ಎಂಬ ನಂಬಿಕೆಯಿಂದ ಕೂಡಿದೆ.

ವ್ಯಕ್ತಿ ವಿಚಾರಗಳ ಮುಖಾಮುಖಿ

ಸಮ್ಮುಖ
ಲೇ: ಗ.ನಾ.ಭಟ್ಟ
ಪ್ರ: ಮಹಿಮಾ ಪ್ರಕಾಶನ, ಮೈಸೂರು.
ಬೆಲೆ: ರು. 525/-

» ಡಾ. ಕಬ್ಬಿನಾಲೆ ವಸಂತ ಭಾರದ್ವಾಜ

ಐವತ್ತೆಂಟು ವೈವಿಧ್ಯಮಯ ಲೇಖನಗಳ ಸಂಕಲನ ಸಮ್ಮುಖ ಗ.ನಾ.ಭಟ್ಟರ ಲೇಖನಿಯಿಂದ ಮೂಡಿಬಂದ ವ್ಯಕ್ತಿವಿಶೇಷ ಮತ್ತು ವಿಚಾರದೀಪ್ತಿಗಳ ಸಮಾಹಾರವಾಗಿದೆ. ಇವುಗಳಲ್ಲಿ ಹನ್ನೆರಡು ವ್ಯಕ್ತಿಚಿತ್ರಗಳು ಮತ್ತು ಹತ್ತು ಕೃತಿವಿಮರ್ಶೆಗಳು ಸೇರಿವೆ. ಕಲೆ ಮತ್ತು ಸಾಹಿತ್ಯಗಳ ಸೂಕ್ಷ್ಮ ಚಿಂತನೆ, ರಾಷ್ಟ್ರನಿರ್ಮಿತಿಯ ಕುರಿತ ಕಳಕಳಿ, ದಾಂಪತ್ಯ ಮತ್ತು ಸೌಂದರ್ಯಮೀಮಾಂಸೆ, ಜೀವನಮೌಲ್ಯಗಳ ಪ್ರತಿಪಾದನೆ, ಧರ್ಮ ಮತ್ತು ಸಂಸ್ಕೃತಿಗಳ ಹಿರಿಮೆ ಮುಂತಾದ ಮೌಲಿಕಶೋಧ ಇಲ್ಲಿ ಮಡುಗಟ್ಟಿದೆ. ಡಿವಿಜಿ, ಕೆಎಸ್ ನಾರಾಯಣಾಚಾರ್ಯ, ಬನ್ನಂಜೆ ಗೋವಿಂದಾಚಾರ್ಯ, ಸದ್ಗುರು ಜಗ್ಗಿ ವಾಸುದೇವ್, ಕೆ.ಟಿ.ಗಟ್ಟಿ ಮುಂತಾದವರ ಕೊಡುಗೆಗಳನ್ನು ಸಮದರ್ಶಿತ್ವದಿಂದ ವಿಶ್ಲೇಷಿಸುತ್ತಲೇ ಇಷ್ಟಕಾಮ್ಯ, ಸಮರಭೈರವಿ, ಭಾರತ ಯಾತ್ರೆ, ಯಕ್ಷಹಂಸ ಮುಂತಾದ ಇತ್ತೀಚಿನ ಕೃತಿಗಳ ವೈಶಿಷ್ಟ್ಯವನ್ನೂ ಪರಿಚಯಿಸಲಾಗಿದೆ. ಜಯಪ್ರಕಾಶ ನಾರಾಯಣ, ಗುಲ್ಜಾರಿ ಲಾಲ್ ನಂದಾ, ಪಿ.ವಿ.ನರಸಿಂಹ ರಾವ್, ನರೇಂದ್ರ ಮೋದಿಯವರ ದೂರಗಾಮೀ ರಾಷ್ಟ್ರೀಯಚಿಂತನೆಗಳನ್ನು ಸೋದಾಹರಣವಾಗಿ ಇಲ್ಲಿ ಕಟ್ಟಿಕೊಡಲಾಗಿದೆ.

ವಿಪಕ್ಷವೆಂದರೆ ರೆಕ್ಕೆಯಿಲ್ಲದ ಪಕ್ಷಿಗಳು ಎಂದರ್ಥ ಲೇಖನ ಸಮಕಾಲೀನ ರಾಜಕಾರಣವನ್ನು ವಿಡಂಬಿಸಿದರೆ, ಭಾರತಕ್ಕೆ ಎಂತಹ ಸರಕಾರ ಬೇಕು, ರಾಜದಂಡವೆಂದರೆ ವಾಕಿಂಗ್ ಸ್ಟಿಕ್ ಅಲ್ಲ ಎಂಬ ಲೇಖನಗಳು ನಮ್ಮನ್ನು ಚಿಂತನೆಗೆ ಹಚ್ಚುತ್ತವೆ. ತಾಯಿಯೆಂದರೆ ವಂಶ ಬೆಳೆಸುವ ವೃಕ್ಷ, ಹೆಣ್ಣು-ಗಂಡುಗಳ ಸಮಾಗಮವೇ ವಾಮದೇವಯಜ್ಞ, ಒಂದು ಹೆಣ್ಣು ಅಶುದ್ಧವಾದರೆ ಅವಳಿಂದ ಸೃಷ್ಟಿಗೊಂಡವರು ಹೆಚ್ಚು ಅಶುದ್ಧರು ಅಲ್ಲವೆ?, ಈ ದೇಶವನ್ನು ಒಂದು ದಾರದಲ್ಲಿ ಪೋಣಿಸಿರುವುದು ಯಾತ್ರಾರ್ಥಿಗಳ ಹೆಜ್ಜೆಗಳು, ಆತ್ಮವನ್ನು ಗೆಲ್ಲುವುದೇ ನಿಜವಾದ ಜಯ, ಸುಳ್ಳು ಕೂಡಾ ಸೌಂದರ್ಯಕ್ಕೆ ಹೇತುವಾಗಬಹುದು, ಒಂದು ತತ್ವಕ್ಕಾಗಿ ಬದುಕಬೇಕು ಮುಂತಾದ ಮಿಂಚುಮಾತುಗಳು ಓದುಗರಿಗೆ ರಸದೂಟವನ್ನೇ ಬಡಿಸುತ್ತವೆ.

ರಾಮಾಯಣ, ಮಹಾಭಾರತಗಳ ಅಂತರಂಗವನ್ನು ಅನಾವರಣ ಮಾಡುವಲ್ಲಿ ಲೇಖಕರ ಬಹುಶ್ರುತತೆ ಯಶಸ್ವಿಯಾಗಿದೆ. ರಾಮ-ಸೀತೆಯರು ಮದುವೆಯಾಗಿ ಹನ್ನೆರಡು ವರ್ಷ ಅಯೋಧ್ಯೆಯಲ್ಲಿದ್ದರೂ ಸಂಗಮಿಸಿರಲಿಲ್ಲ. ಅರಣ್ಯವಾಸದಲ್ಲೂ ವ್ರತನಿಷ್ಠರಾಗಿದ್ದರು. ಹೀಗೆ ಅವರು ಪರಸ್ಪರ ಸಂಗಮಿಸದೇ ಕಾಲ ಕಳೆದುಹೋಗುತ್ತಿದ್ದು ಸೀತೆ ಶಾಶ್ವತವಾಗಿ ಅಪುತ್ರವತಿಯಾಗಿಯೇ ಇರಬೇಕಾದಂತಹ ಸನ್ನಿವೇಶ ಉಂಟಾದರೆ ಎಂಬ ಆತಂಕ ರಾಮನಿಗೆ ಎಂದು ಹೇಳುತ್ತಾ ದಂಪತಿಗಳಿಗೆ ಜೀವಯೋಗ್ಯತೆ ಮುಖ್ಯ; ದೇಹಯೋಗ್ಯತೆ ಗೌಣ ಎಂದು ರಾಮ-ಸೀತೆಯರ ಇಂದ್ರಿಯನಿಗ್ರಹವನ್ನು ವ್ಯಾಖ್ಯಾನಿಸಿರುವುದು ರಾಮಾಯಣದ ಮಹಾಮೌಲ್ಯವನ್ನು ಎತ್ತಿಹಿಡಿಯುತ್ತದೆ. ವಾಲ್ಮೀಕಿ ನಾರದರಲ್ಲಿ ಕೇಳಿದ ಪ್ರಶ್ನೆ, ಹನುಮಂತನ ವಾಕ್ಪಟುತ್ವ, ಪ್ರಜಾಪಾಲನೆಯೇ ಧರ್ಮವೆನ್ನುವ ಆಂಗೀರಸರ ಮಾತು, ಭಗವದ್ಗೀತೆ, ಶುಕ್ರನೀತಿ ಮುಂತಾದವುಗಳ ಆರ್ಷೇಯವಚನಗಳನ್ನು ಉಲ್ಲೇಖಿಸುವ ಭಾಗಗಳು ರಸಸ್ಯಂದಿಯಾಗಿವೆ. ಸೂಕ್ಷ್ಮಾವಲೋಕನಕ್ಕೆ ಮಾತ್ರ ದಕ್ಕುವ ಇಂತಹ ಸಂಗತಿಗಳನ್ನು ಸಂಸ್ಕೃತಿಸಂವರ್ಧನೆಗೆ ಬಳಸುವ ಲೇಖಕರ ಕೌಶಲ ಗಮನಾರ್ಹ.

ಹೆಣ್ಣನ್ನು ಭೋಗವಸ್ತುವನ್ನಾಗಿ ಶೋಷಿಸುವ ಕಥಾಹಂದರದ 'ದ ಗ್ರೇಟ್ ಇಂಡಿಯನ್ ಕಿಚನ್' ಕನ್ನಡ ಅವತರಣಿಕೆಯ ಸಿನೆಮಾವೊಂದರ ವಿಮರ್ಶೆ ಮೌಲಿಕವಾದುದು. ಪುರುಷಪ್ರಾಧಾನ್ಯದ ವಿರುದ್ಧ ಸಿಡಿದೆದ್ದು ಸ್ವಾವಲಂಬನೆಯ ಬದುಕಿಗೆ ತೆರೆದುಕೊಳ್ಳುವ ಹೆಣ್ಣಿನ ಸಂಕಲ್ಪಶಕ್ತಿಯನ್ನು ಸಿನೆಮಾ ನೋಡದವರಿಗೂ ಮನದಟ್ಟುಮಾಡುವ ರೀತಿ ಮೆಚ್ಚತಕ್ಕದ್ದು. ಹಾಗೆಯೇ ತಾಳಮದ್ದಳೆ ಸಾಗುತ್ತಿರುವ ದಾರಿ ವಸ್ತುನಿಷ್ಠವಾದ ಗಂಭೀರ ಕಲಾವಿಮರ್ಶೆಯಾಗಿ ನಮ್ಮನ್ನು ಕಾಡುತ್ತದೆ. ಪಾತ್ರವಾಗಿ ಗೆಲ್ಲುವ ಬದಲು ವ್ಯಕ್ತಿಯಾಗಿ ಗೆಲ್ಲುವ ಹವಣಿಕೆ ಎಂಬ ಮಾತೊಂದೇ ಸಮಕಾಲೀನ ತಾಳಮದ್ದಳೆಯ ಗತಿಬಿಂಬಕ್ಕೆ ಸಾಕ್ಷಿಯಾಗಿದೆ. ದುಷ್ಟಪಾತ್ರಗಳನ್ನು ಉದಾತ್ತೀಕರಿಸುವ ಕೆಲವು ಕಲಾವಿದರ ಚಟದಿಂದಾಗಿ ವಾಲಿ, ರಾವಣ, ಕೌರವರಂತಹ ಪಾತ್ರಗಳು ಪುರುಷೋತ್ತಮರಾಗಿ ಬಿಡುವುದು ಇಂದಿನ ವಿಪರ್ಯಾಸವೆಂಬ ಲೇಖಕರ ಮಾತನ್ನು ತಾಳಮದ್ದಳೆ ಅರ್ಥಧಾರಿಗಳು ಸರಿಯಾಗಿ ಅರ್ಥಮಾಡಿಕೊಳ್ಳಬೇಕು.

ಇಂದು ಮರೆಯಾದ ಸಾಹಿತ್ಯಪ್ರಕಾರಗಳಲ್ಲಿ ಒಂದಾದ ಅನುಕಥನವನ್ನು ವ್ಯಾಖ್ಯಾನಿಸುತ್ತಾ: 'ಅನುಕಥನವೆಂದರೆ ಮೂಲಕೃತಿಯ ಆಶಯಕ್ಕೆ ಒಂದಿನಿತೂ ಧಕ್ಕೆಬಾರದಂತೆ ಇಂದಿನ ಕಾದಂಬರಿ ಪ್ರಕಾರಕ್ಕೆ ಒಗ್ಗಿಸಿಕೊಳ್ಳುವುದು, ಸಂಭಾಷಣೆ ನೇಯುವುದು, ಸಂವಾದ ಹೆಣೆಯುವುದು, ಮೂಲದ ಯಾವುದೋ ಒಂದು ಎಳೆಯನ್ನು ಎತ್ತಿಕೊಂಡು ಅದಕ್ಕೆ ತಮ್ಮ ಓದಿನ ಅಥವಾ ಬಹುಶ್ರುತತ್ವದ ಫಲವನ್ನು ಧಾರೆಯೆರೆಯುವುದು, ಅಲ್ಲಿಯ ಘಟನೆಗಳನ್ನು ಸನ್ನಿವೇಶಕ್ಕೆ ತಕ್ಕಂತೆ ವಿಸ್ತರಿಸುವುದು ಮತ್ತು ಪ್ರಸ್ತುತೀಕರಿಸುವುದು, ಅನುಭವದ ಸಾರವನ್ನು ಹಂಚಿಕೊಳ್ಳುವುದು ಇವೇ ಮೊದಲಾದವು ಅದರಲ್ಲಿ ಗರ್ಭೀಕೃತವಾಗಿರುತ್ತವೆ' ಎಂದು ಹೇಳಿ ಡಾ.ಪಿ.ಎಸ್.ರಾಮಾನುಜಂ ಅವರ ಅನುಕಥನದ ಮಾದರಿಯನ್ನು ಉಲ್ಲೇಖಿಸಿದ್ದಾರೆ.

ಸಹೃದಯರಲ್ಲಿ ಸದಭಿರುಚಿಯನ್ನು ಸೃಷ್ಟಿಸುವ, ಸಮಾಜದಲ್ಲಿ ಉನ್ನತ ಆದರ್ಶಗಳನ್ನು ಬಿತ್ತುವ ಮಹೋದ್ದೇಶವನ್ನು ತುಂಬಿಕೊಂಡ ಇಲ್ಲಿಯ ಲೇಖನಗಳು ಸಾಹಿತ್ಯವೂ ಔಷಧವಾಗಬಲ್ಲುದು ಎಂಬ ನಂಬಿಕೆಯಿಂದ ಕೂಡಿದೆ, ಸನಾತನಮೌಲ್ಯಗಳ ಮೇಲಿನ ಪ್ರೀತಿ, ಸಂಸ್ಕೃತಿಭಂಜಕರ ಮೇಲಿನ ಸಿಟ್ಟು, ಅಲ್ಲಲ್ಲಿ ಇಣುಕುವ ಅತಿಭಾವುಕತೆ, ಅಲಕ್ಷಿತ ಸಾಧಕರ ಕುರಿತ ಅಭಿಮಾನ ಮುಂತಾದ ಭಾವಲಹರಿಗಳಿಂದ ತುಂಬಿದ ಪುಸ್ತಕವಿದು.

ಮಹಿಳಾ ಚಿಂತನೆಯ ಅಧ್ಯಯನ

» ಪಾರ್ವತಿ ಜಿ.ಐತಾಳ್

ಲಿಂಗ ವ್ಯತ್ಯಾಸದ ಹೆಸರಿನಲ್ಲಿ ಸಮಾಜವು ಅನ್ಯಾಯ, ತಾರತಮ್ಯ ಹಾಗೂ ಅಸಮಾನ ಅವಕಾಶಗಳ ನೆಲೆವೀಡು ಆಗಬಾರದು ಅನ್ನುವುದು ಸ್ತ್ರೀವಾದಿ ಹೋರಾಟದ ಮುಖ್ಯ ಉದ್ದೇಶ. ಈ ಅಸಮಾನತೆಯ ಬೇರುಗಳನ್ನು ಕಿತ್ತೊಗೆದು ಹೊಸದೊಂದು ವ್ಯವಸ್ಥೆಯನ್ನು ಹುಟ್ಟು ಹಾಕುವ ಉದ್ದೇಶವನ್ನಿಟ್ಟುಕೊಂಡು ಕಳೆದ ಶತಮಾನದಿಂದೀಚೆಗೆ ಜಗತ್ತಿನ ಎಲ್ಲ ಮೂಲೆ ಗಳಲ್ಲೂ ಹೋರಾಟಗಳು ನಡೆದಿವೆ. ಸ್ತ್ರೀಪುರುಷರಾದಿಯಾಗಿ ಅನೇಕರು ಈ ಬಗ್ಗೆ ಚಿಂತನೆಗಳನ್ನು ಮಾಡಿದ್ದಾರೆ. ಲೇಖನಗಳನ್ನು ಬರೆದಿದ್ದಾರೆ. ಚರ್ಚೆಗಳನ್ನು ನಡೆಸಿದ್ದಾರೆ. ಇವುಗಳ ಹೊರತಾಗಿ ನಮ್ಮ ಜನಪದರು ಹೋರಾಟದ ಯಾವ ಅರಿವೂ ಇಲ್ಲದೆ ರಚಿಸಿದ ಮೌಖಿಕ ಸಾಹಿತ್ಯಗಳನ್ನು ಬೆಳಕಿಗೆ ತರುವ ಪ್ರಯತ್ನಗಳಾಗಿವೆ. ಅಲ್ಲದೆ ಸ್ತ್ರೀಯರಿಗೆ ಪ್ರಾಮುಖ್ಯ ಕೊಟ್ಟಿದ್ದ ಮಾತೃಮೂಲೀಯ ಪದ್ಧತಿಯ ಬಗ್ಗೆ ಮರು ಚಿಂತನೆಗಳಾಗಿವೆ.

ಪಾಶ್ಚಾತ್ಯರಲ್ಲಿ ಆರಂಭವಾದ ಸ್ತ್ರೀವಾದಿ ಚಳುವಳಿಯು ಭಾರತದಲ್ಲೂ ತನ್ನ ನೆಲೆಗಳನ್ನು ಸ್ಥಾಪಿಕೊಂಡಾಗ ಸ್ತ್ರೀಯರ ಪರವಾಗಿ ದೇಶದಲ್ಲಿ ಒಂದು ಹೊಸ ಜಾಗೃತಿಯ ಅಲೆಯುಂಟಾದದ್ದು ಇಂದು ಇತಿಹಾಸ. ಇದರ ಪರಿಣಾಮವಾಗಿ ಸ್ತ್ರೀಯರ ಪರವಾಗಿ ಅವರ ರಕ್ಷಣೆಗೋಸ್ಕರ ಕಾನೂನುಗಳು ಹುಟ್ಟಿಕೊಂಡವು. ಅವರಿಗೆ ಹತ್ತಾರು ಬಗೆಯಲ್ಲಿ ಸೌಕರ್ಯ-ಸವಲತ್ತುಗಳಿಗಾಗಿ ಸರಕಾರವು ಅವಕಾಶಗಳನ್ನು ರೂಪಿಸಿತು. ಅವುಗಳ ಸದ್ವಿನಿಯೋಗಗಳ ಜತೆಗೇ ದುರ್ವಿನಿಯೋಗವೂ ಅಲ್ಲಲ್ಲಿ ಆಗತೊಡಗಿದವು. ಪರಿಣಾಮವಾಗಿ ಸ್ತ್ರೀಸಮಾನತೆಯ ಬಗ್ಗೆ ಮಾತನಾಡುವವರನ್ನೇ ಸಂದೇಹದ ದೃಷ್ಟಿಯಿಂದ ನೋಡುವ ಪರಿಸ್ಥಿತಿ ಇವತ್ತು ನಿರ್ಮಾಣವಾಗಿದೆ. ಒಂದೆಡೆ ಸಾಂಪ್ರದಾಯಿಕ ನಂಬಿಕೆಗಳಿಂದ ಇನ್ನೂ ಬಿಡುಗಡೆಯಾಗದ ಪಿತೃ ಪ್ರಧಾನ ಸಂಸ್ಕೃತಿಗೆ ಆತುಕೊಂಡ ಸಮಾಜವಾದರೆ, ಇನ್ನೊಂದೆಡೆ ಹೋರಾಟವನ್ನು ಆದಷ್ಟು ಹಿಮ್ಮೆಟ್ಟಿಸಲು ನೋಡುತ್ತಿರುವ ಯಥಾಸ್ಥಿತ ಜನವರ್ಗ- ಹೀಗೆ ಅಡಕತ್ತರಿಯಲ್ಲಿ ಸಿಕ್ಕಿ ಹಾಕಿಕೊಂಡ ಹೋರಾಟ ವರ್ಗ. ಈ ಸಂದರ್ಭದಲ್ಲಿ ಇದುವರೆಗೆ ನಡೆದ ಸ್ತ್ರೀಪರ ಚಿಂತನೆಗಳ ಕೋಶದ ಹಿಂಬದಿಯ ಕಿಟಕಿಗಳನ್ನು ತೆರೆದು ಒಂದು ತಿರುಗು ನೋಟ ಹಾಯಿಸಿ ಎಲ್ಲವನ್ನೂ ದಾಖಲಿಸುವ ಇಂಥ ಒಂದು ಕೃತಿಯ ತುರ್ತು ನಮ್ಮ ಮುಂದಿದೆ. ಅಂತೆಯೇ ಈ ಕೃತಿಯನ್ನು ರಚಿಸುವ ಆಲೋಚನೆ ತಮಗೆ ಹೇಗೆ ಬಂತು ಎಂಬುದನ್ನು ಪ್ರಧಾನ ಸಂಪಾದಕದ್ವಯರು ತಮ್ಮ ಪ್ರಸ್ತಾವನೆಯಲ್ಲಿ ಹೀಗೆ ಹೇಳಿಕೊಳ್ಳುತ್ತಾರೆ:

'ಈ ಸಂಕಲನವನ್ನು ಹೊರತರಲು ಪ್ರಸ್ತುತ ಸಂದರ್ಭದ ಸಾಮಾಜಿಕ/ಸಾಂಸ್ಕೃತಿಕ ಪಲ್ಲಟಗಳು ಪ್ರಮುಖ ಕಾರಣವಾಗಿವೆ. ಇಲ್ಲಿಯವರೆಗೆ ಸಾರ್ವಜನಿಕ ಅವಕಾಶದಲ್ಲಿ ಕಾಪಿಟ್ಟುಕೊಂಡು ಬಂದಿರುವ ಸಮಾನತೆಯ ಅವಕಾಶಗಳು ಇದೀಗ ಪ್ರಶ್ನೆಗೊಳಗಾಗುತ್ತಿವೆ.... ಸಮಾಜ ಅಸೂಕ್ಷ್ಮವಾಗುತ್ತಿದೆ. ಇಂತಹ ಸಂದರ್ಭದಲ್ಲಿ ಜನಪರ ಚಿಂತನೆಗಳನ್ನು ಮರುಸಂಘಟಿಸುವ ಕೆಲಸ ಅನಿವಾರ್ಯವಾಗಿ ಆಗಬೇಕಾಗುತ್ತದೆ.'(ಪು.32-33)

ಈ ಕೃತಿಗೆ ಬಹಳ ದೀರ್ಘವಾದ ಮುನ್ನುಡಿಯನ್ನು ಬರೆದಿರುವ ಚಿಂತಕಿ ಸುಮಾ ಬಿ.ಯು. ಅವರು ಕೃತಿಯ ಆಳ, ವಿಸ್ತಾರ ಮತ್ತು ವ್ಯಾಪ್ತಿಗಳ ಬಗ್ಗೆ ಈ ಮಾತುಗಳನ್ನು ಹೇಳುತ್ತಾರೆ:

'ಇಲ್ಲಿನ ಪ್ರತಿನಿಧಿತ್ವ ಮತ್ತು ಭಿನ್ನತೆಗಳ ಕಥನಗಳು ಸಾಂಸ್ಕೃತಿಕ, ಸಾಮಾಜಿಕ, ಆರ್ಥಿಕ ಹಾಗೂ ರಾಜಕಾರಣದ ಬಹುಮುಮುಖಿ ಸಂಕಥನಗಳನ್ನು ಸೃಷ್ಟಿಸುತ್ತವೆ. ಪ್ರತಿನಿಧಿತ್ವದ ನಿರೂಪಣೆಗಳು ಪ್ಯಾನ್ ಇಂಡಿಯನ್, ವಿಶ್ವಾತ್ಮಕವಾಗುವುದರತ್ತಲೂ ತುಡಿಯುತ್ತವೆ. ಹಾಗೆಯೇ ಅವಿಭಜಿತ ದಕ್ಷಿಣ ಕನ್ನಡದ ವಿಶಿಷ್ಟತೆ ಮತ್ತು ಭಿನ್ನತೆಯ ನಿರೂಪಣೆಗಳು , ಭಾರತದ ಅಥವಾ ಕರ್ನಾಟಕದ ಸಮಕಾಲೀನ ಮಹಿಳಾ ಚಿಂತನೆಗಳ ಹಾಗೂ ಬದುಕುಗಳ ಬಹಳ ಮುಖ್ಯವಾದ ಸಮಸ್ಯೆ ಮತ್ತು ಸವಾಲುಗಳನ್ನು ಅರಿವಿಗೆ ದಕ್ಕಿಸಿಕೊಳ್ಳುತ್ತಲೇ ಹೊಸ ದಾರಿಗಳನ್ನು ಶೋಧಿಸುತ್ತವೆ ಇಲ್ಲವೇ ಪ್ರಶ್ನೆ ಮತ್ತು ಆತಂಕಗಳನ್ನು ಮುಂದಿಡುತ್ತವೆ'(ಪು.10)

57 ಮಂದಿ ಲೇಖಕಿಯರು ಮತ್ತು ಲೇಖಕರುಗಳ ಬರಹಗಳಿಂದ ಸಮೃದ್ಧವಾದ ಈ ಬೃಹತ್ ಕೃತಿಯ ಹಿಂದೆ ಇಬ್ಬರು ಪ್ರಧಾನ ಸಂಪಾದಕರು ಮತ್ತು ಎಂಟು ಮಂದಿ ಸಂಪಾದಕರುಗಳನ್ನೊಳಗೊಂಡಂತೆ ಹಲವರ ಶ್ರಮವಿದೆ. ಮತ್ತು ಇದು ಪರೋಕ್ಷವಾಗಿ ಪ್ರಾದೇಶಿಕ ಮಟ್ಟದಲ್ಲಿ ಅಲ್ಲಲ್ಲಿ ಎಲ್ಲೆಡೆ ಇಂಥ ಕೃತಿಗಳು ಬರಬೇಕಾದ ಅಗತ್ಯವನ್ನೂ ಹೇಳುತ್ತದೆ.



ಅವಿಭಜಿತ ದಕ್ಷಿಣ ಕನ್ನಡದ ಮಹಿಳಾ ಚಿಂತನೆ
ಸಂ : ಸತೀಶ ಚಿತ್ರಾಪು, ಸೋಮಶೇಖರ ಹಾಸನಡ್ಕ
ಪ್ರ : ಆಕೃತಿ ಆಶಯ ಪಬ್ಲಿಕೇಷನ್ಸ್
ಬೆಲೆ : ರು.630/-

ಜನಸಾಮಾನ್ಯರು ಕಾನೂನುಬದ್ಧವಾಗಿ ಹಣವನ್ನು ಗಳಿಸುವುದು ಹೇಗೆ ಮತ್ತು ಉಳಿಸುವುದು ಹೇಗೆ ಎಂದು ತಿಳಿಸುವ ಉತ್ತಮ ಪುಸ್ತಕವಿದು.

ಸಿರಿವಂತಿಕೆಗೆ 100% ಸೂತ್ರಗಳು!

» ನಾರಾಯಣ ಯಾಜಿ

ಆರ್ಥಿಕ ವಿಷಯಗಳಲ್ಲಿ ತಜ್ಞರಾದ ಕೇಶವ ಪ್ರಸಾದ ಬಿ. ಅವರ ಕೃತಿ 'ಸಿರಿವಂತಿಕೆಗೆ 100% ಸೂತ್ರಗಳು' ಸಾಮಾನ್ಯರೂ ಸಹ ಆರ್ಥಿಕತೆಯ ಮೂಲಭೂತ ಅಂಶಗಳನ್ನು ತಿಳಿದುಕೊಳ್ಳುವಲ್ಲಿ ಸಹಕಾರಿಯಾಗಿದೆ. ಇಲ್ಲಿರುವ ಸಲಹೆಗಳು ಕ್ಯಾಪ್ಸೂಲ್ ರೂಪದಲ್ಲಿವೆ ಎನ್ನುವುದಕ್ಕಿಂತ ಇವೆಲ್ಲವೂ ಜೀವನದ ಭದ್ರತೆಗಾಗಿರುವ ಫೈನ್ ಟ್ಯೂನಿಂಗ್ ಎಂದರೆ ಹೆಚ್ಚು ಅರ್ಥಪೂರ್ಣವಾಗುವುದು.

ಅಕಾಡೆಮಿಕ್ ವಲಯದಲ್ಲಿ ಆರ್ಥಿಕ ಸೂತ್ರಗಳನ್ನು ಹೇಳುವ ಉಪದೇಶಗಳೆಲ್ಲವೂ ಸಾಹಿತ್ಯಿಕ ರೂಪದಲ್ಲಿ ಮೊದಲು ಜನಪ್ರಿಯವಾಗಿ ಬಂದಿರುವುದುಯಂಡಮೂರಿ ವೀರೇಂದ್ರನಾಥ್ ಅವರ 'ದುಡ್ಡು ದುಡ್ಡು' ಕಾದಂಬರಿಯ ಮೂಲಕ. ಶ್ರೀಮಂತರಾಗುವುದು ಇಷ್ಟು ಸುಲಭವಾ ಎನಿಸುವಷ್ಟು ನವಿರಾಗಿ ಆ ಕೃತಿಯನ್ನು ಬರೆದಿದ್ದಾರೆ. ಕಾನೂನಿನ ಮಾರ್ಗದಲ್ಲಿ ಅದನ್ನು ತಿರುಚಿ ಹಣಗಳಿಸುವುದನ್ನು ಹೇಳಿದ ಆ ಕಾದಂಬರಿ ಮಾರಾಟದಲ್ಲಿ ಒಂದು ದಾಖಲೆಯನ್ನೇ ಮಾಡಿದೆ. ಅದಾದ ಮೇಲೆ ಹರ್ಷದ್ ಮೆಹ್ತಾನ ಹಗರಣದಿಂದ ಹಣದ ಬೆನ್ನಹಿಡಿದವರ ಸಂಪತ್ತು ಕರಗಿಹೋದದ್ದೇನೂ ಕಡಿಮೆಯಲ್ಲ. ಕೇಶವ ಪ್ರಸಾದ ಅವರ ಕೃತಿ ನೇರವಾಗಿ ವಿಷಯಗಳನ್ನು ತಿಳಿಸುವಲ್ಲಿ ಸಹಕಾರಿಯಾಗಿದೆ.

ಲೇಖಕರು ಕೃತಿಯ ಪ್ರವೇಶದಲ್ಲಿಯೇ ಸಿರಿವಂತರಾಗುವುದು ಎನ್ನುವುದು ಯಾವುದೇ ವಿಧವಾದ ಅಪರಾಧವಲ್ಲ, ಭಾರತೀಯ ಜೀವನ ವಿಧಾನದಲ್ಲಿ ಧರ್ಮ, ಅರ್ಥ, ಕಾಮ ಮತ್ತು ಮೋಕ್ಷಗಳೆಂಬ ನಾಲ್ಕುವಿಧವಾದ ಬದುಕನ್ನು ಗ್ರಹಸ್ಥಾಶ್ರಮ ಸ್ವೀಕರಿಸುವ ಹೊತ್ತಿನಲ್ಲಿಯೇ ಕೈಗೊಳ್ಳಬೇಕು ಎನ್ನುವುದನ್ನು ಸ್ಪಷ್ಟಪಡಿಸುತ್ತಾರೆ. ಹಣ ಗಳಿಸಬೇಕೆಂದು ಅಡ್ಡದಾರಿ ಹಿಡಿಯಬೇಕೆನ್ನುವ ಮನೋಭಾವ ಅಕಸ್ಮಾತ ಇದ್ದವರು, 'ಸಿರಿವಂತಿಕೆಯ 100% ಸೂತ್ರಗಳು' ಓದಿದರೆ, ಅಡ್ಡದಾರಿ ಬಿಟ್ಟು, ತೆರಿಗೆ ಕಟ್ಟಿ, ಯಾವ ವಂಚನೆಯನ್ನು ಮಾಡದೆಯೂ ಸಿರಿವಂತರಾಗಬಹುದೆನ್ನುವ ಸರಳ ತತ್ವವನ್ನು ತಿಳಿದುಕೊಳ್ಳಬಹುದು.

ಸಿರಿವಂತರಾಗಲು ಅವರು ಆಯ್ದುಕೊಂಡ ವಿಭಾಗಗಳನ್ನು ಗಮನಿಸಿದರೆ ಅಚ್ಚರಿಯಾಗುತ್ತದೆ. ಸಣ್ಣಉಳಿತಾಯದಿಂದ ಹಿಡಿದು ಶೇರು ಮಾರುಕಟ್ಟೆಯ ವರೆಗಿನ ಎಲ್ಲಾ ರಂಗದ ಪ್ರಾಥಮಿಕ ಪರಿಚಯ ಇಲ್ಲಿದೆ. ಸಿರಿವಂತಿಕೆಯೆನ್ನುವುದು ಮೌಲ್ಯದ ಮೇಲೆ ನಿರ್ಧಾರವಾಗುತ್ತದೆ. ಸಿರಿವಂತರಾಗಲು ಎರಡು ಮಾರ್ಗಗಳು ಮುಖ್ಯ. ಮೊದಲನೆಯದು ಗಳಿಕೆ, ಎರಡನೆಯದು ಉಳಿಕೆ. ಗಳಿಕೆಯಲ್ಲಿ ವೆಚ್ಚವನ್ನು ಕಳೆದು ಉಳಿದಿರುವದರಿಂದ ಸಂಪತ್ತಿನ ಕೋಟೆಯನ್ನು ಕಟ್ಟಬಹುದು.



ಸಿರಿವಂತಿಕೆಗೆ 100% ಸೂತ್ರಗಳು
ಲೇ: ಬಿ. ಕೇಶವ ಪ್ರಸಾದ್
ಪ್ರ: ಸ್ನೇಹ ಬುಕ್ ಹೌಸ್
9845031335

ಈ ಕೃತಿ ವ್ಯಾಪಕವಾಗಿ ಮಧ್ಯಮ ವರ್ಗ ಮತ್ತು ಸಾಮಾನ್ಯ ಜನರಿಗೆ ಉಪಯುಕ್ತವಾಗಿದೆ. ಸ್ನೇಹ ಬುಕ್ ಹೌಸಿನ ಪರಮಶಿವಪ್ಪ ಅವರು ಅಚ್ಚುಕಟ್ಟಾಗಿ ಅಗತ್ಯವಿರುವ ಚಿತ್ರಗಳೊಂದಿಗೆ ಈ ಕೃತಿಯನ್ನು ಹೊರತಂಡಿದ್ದಾರೆ. ಇದು ಕನ್ನಡದಲ್ಲಿ ಆರ್ಥಿಕ ಶಿಕ್ಷಣವನ್ನು ನೀಡುವ ಅತ್ಯುತ್ತಮ ಕೃತಿಗಳಲ್ಲೊಂದಾಗಿದೆ.

ಅನನ್ಯ ಪ್ರತಿಭೆಯ ಅನಾವರಣ

» ಎನ್. ನಿಖಿತಾ ಅಡವೀಶಯ್ಯ

ಕ್ರಿಕೆಟ್ ಅಂಕಿ ಅಂಶ ತಜ್ಞರೆಂದು ಹೆಸರು ಮಾಡಿರುವ ಚನ್ನಗಿರಿ ಕೇಶವಮೂರ್ತಿಯವರು ಕಾದಂಬರಿಗಳನ್ನೂ ರಚಿಸಿದ್ದಾರೆ; ಅವರ ಬಹುಮುಖ ಪ್ರತಿಭೆಯನ್ನು ಪರಿಚಯ ಮಾಡಿಕೊಡುವ ಪುಸ್ತಕವಿದು.

ಪ್ರಸಿದ್ಧ ಅಂಕಿ ಅಂಶ ತಜ್ಞರಾದ ಚನ್ನಗಿರಿ ಕೇಶವಮೂರ್ತಿ ಅವರ ಜೀವನ ಸಾಧನೆ ಕುರಿತ 'ಸಾಹಿತ್ಯವೇ ಹಸಿರು ಕ್ರಿಕೆಟೇ ಉಸಿರು' ಪುಸ್ತಕ ಇದಾಗಿದೆ. ಇವರ ಬದುಕು, ಸಾಹಿತ್ಯ, ಕ್ರಿಕೆಟ್‌ನ ಯಶೋಗಾಥೆಯೇ ಇಲ್ಲಿನ ಜೀವಾಳ. ಕೇಶವಮೂರ್ತಿ ಜೀವನ ವೃತ್ತಾಂತವನ್ನು ಸಂಬಂಧಿಕರು, ಸ್ನೇಹಿತರು, ಮಾಧ್ಯಮ ಮಿತ್ರರನ್ನು ಸಂಪರ್ಕಿಸಿ, ಅವರು ಕಂಡಂತೆ ಮೂರು ಭಾಗಗಳಲ್ಲಿ ಕಟ್ಟಿಕೊಡಲಾಗಿದೆ; ಈ ಕೆಲಸ ಮಾಡಿದವರು ಕಗ್ಗೆರೆ ಪ್ರಕಾಶ್. ಹಾಗೆಯೇ ಕ್ರಿಕೆಟ್ ದಿಗ್ಗಜರ ಜೊತೆಗಿನ ಒಡನಾಟದ ಬರಹಗಳು ಕುತೂಹಲಕರವಾಗಿವೆ. ಸಚಿನ್ ತೆಂಡೂಲ್ಕರ್, ಅನಿಲ್ ಕುಂಬ್ಳೆ, ರಾಹುಲ್ ದ್ರಾವಿಡ್, ಬ್ರಿಜೇಶ್ ಪಟೇಲ್, ಸುನಿಲ್ ಜೋಷಿ ಹಾಗೂ ಇನ್ನಿತರ ವಿಶ್ವದ ಕ್ರಿಕೆಟ್ ದಿಗ್ಗಜರ ಒಡನಾಟವನ್ನು ಪರಿಚಯಿಸುವ ಆಸಕ್ತಿಕರ ಲೇಖನಗಳು ಈ ಕೃತಿಯಲ್ಲಿವೆ. ಟ್ರಾಫಿಕ್ ಪೊಲೀಸ್, ನಲವತ್ತು ವರ್ಷದಿಂದ ಮನೆಕೆಲಸ ಮಾಡಿಕೊಂಡಿರುವ ಬೈರಮ್ಮ ಕೂಡ ಪುಸ್ತಕದಲ್ಲಿ ಬರೆದಿರುವುದು ವಿಶೇಷವಾಗಿದೆ.

ಸಿಕೆಎಂ ಕನ್ನಡದ ಪತ್ತೇದಾರಿ, ಸಾಮಾಜಿಕ ಕಾದಂಬರಿ ಬರೆಯುವ ಮೂಲಕ 1963 ರಲ್ಲಿ ಕನ್ನಡ ಸಾರಸ್ವತ ಲೋಕಕ್ಕೆ ಪದಾರ್ಪಣೆ ಮಾಡಿದರು. ಇದುವರೆಗೂ 25ಕ್ಕೂ ಹೆಚ್ಚು ಪುಸ್ತಕಗಳನ್ನು ಬರೆದಿದ್ದಾರೆ. ಇವರ 'ನಾನೊಬ್ಬ ಕನ್ನಡದ ಸೇವಕ' ಎಂಬ ವಿನಮ್ರ ಮಾತುಗಳು, ಅಕ್ಷರಶಃ ನಿಜ. ಏಕೆಂದರೆ 85ರ ಈ ವಯಸ್ಸಿನಲ್ಲೂ ಕನ್ನಡದ ಮನಸ್ಸುಗಳಿಗೆ ತುಡಿಯುತ್ತಾರೆ, ಮಿಡಿಯುತ್ತಾರೆ.

ತಮ್ಮ 24ನೇ ವರ್ಷಕ್ಕೆ 'ವಿಲ್ಲಿನ ರಹಸ್ಯ' ಎಂಬ ಮೊದಲ ಪತ್ತೇದಾರಿ ನಾಟಕ, ನಂತರ ಪತ್ತೇದಾರಿ ಕಾದಂಬರಿಗಳನ್ನು ಬರೆಯುತ್ತಾರೆ. ಆಮೇಲೆ ಸಾಮಾಜಿಕ ಕಾದಂಬರಿಗಳನ್ನೂ ರಚಿಸುತ್ತಾರೆ. ಆರು ದಶಕಗಳಿಗೂ ಮೀರಿ ಚಕೇಮೂ ಅವರ ಸಾಹಿತ್ಯ ಸೇವೆ ಮುಂದುವರಿದಿದೆ. ಇವರ ಭಾಷೆ, ಶೈಲಿ, ನಿರೂಪಣಾ ವಿಧಾನ ಪುಸ್ತಕಗಳನ್ನು ಲವಲವಿಕೆಯಿಂದ ಓದಿಸಿಕೊಳ್ಳುತ್ತವೆ. ಹಿರಿಯ ತಲೆಮಾರಿನ ಓದುಗರಿಗೆ ಇವರ ಪುಸ್ತಕಗಳು ಚಿರಪರಿಚಿತವಾಗಿವೆ.

ಕ್ರಿಕೆಟ್ ಪುಸ್ತಕಗಳ ರಚನೆಯಲ್ಲೂ ಇವರದು ಅಪಾರ ಆಸಕ್ತಿ. ಇವರು ರಚಿಸಿದ 'ಭಾರತೀಯ ಕ್ರಿಕೆಟ್ ಇತಿಹಾಸ' ಪುಸ್ತಕವು ಕನ್ನಡದಲ್ಲಿ ಕ್ರಿಕೆಟ್ ಬಗ್ಗೆ ಬಂದ ಪ್ರಥಮ ಕೃತಿ. ಭಾರತದ ಕ್ರಿಕೆಟ್ ನಾಯಕರು, ವಿಶ್ವ ಕ್ರಿಕೆಟ್‌ನಲ್ಲಿ ಕರ್ನಾಟಕದ ಆಟಗಾರರು, ಭಾರತ ರತ್ನ ಸಚಿನ್ ತೆಂಡೂಲ್ಕರ್, ಇರಾನಿ ಕಪ್ ಪುಸ್ತಕಗಳು ಕ್ರಿಕೆಟ್ ಸಾಹಿತ್ಯದಲ್ಲಿ ದಾಖಲಾರ್ಹವಾಗಿವೆ.

ಇವರು ವಿಶ್ವದ ಪ್ರಮುಖ ಕ್ರಿಕೆಟ್ ಆಟಗಾರರ ಹಾಗೂ ಪತ್ರಿಕೆಗಳ ಗಮನ ಸೆಳೆದಿರುವ ಕನ್ನಡದ ಶ್ರೇಷ್ಠ ಕ್ರಿಕೆಟ್ ಸಂಖ್ಯಾಶಾಸ್ತ್ರಜ್ಞರೂ ಆಗಿದ್ದಾರೆ. ಕ್ರಿಕೆಟ್ ಕ್ಷೇತ್ರದಲ್ಲೂ 50ಕ್ಕೂ ಹೆಚ್ಚು ವರ್ಷಗಳ ಕಾಲ ಅಂಕಿ ಅಂಶ ತಜ್ಞರಾಗಿ ಸೇವೆ ಸಲ್ಲಿಸುತ್ತಾ ಬಂದಿದ್ದಾರೆ. ಕೇಂದ್ರ ಸರ್ಕಾರದ ಬೆಂಗಳೂರಿನ ಕಾಫಿ ಬೋರ್ಡ್‌ನಲ್ಲಿ ಉಪ ಕಾರ್ಯದರ್ಶಿಯಾಗಿ ನಿವೃತ್ತರಾದ ನಂತರ, ಪ್ರವೃತ್ತಿಯಲ್ಲಿ ಇಂದಿಗೂ ಇವರು ಸಕ್ರಿಯರು. ಇಂಥ ದಾಖಲಾರ್ಹ ಅಪರೂಪ ಮಾಹಿತಿಗಳು ಕಗ್ಗೆರೆ ಪ್ರಕಾಶ್ ಸಂಪಾದಕತ್ವದ 'ಸಾಹಿತ್ಯವೇ ಹಸಿರು ಕ್ರಿಕೆಟೇ ಉಸಿರು' ಪುಸ್ತಕ ಓದುತ್ತಾ ಹೋದಂತೆ ಗಮನ ಸೆಳೆಯುತ್ತವೆ. ಅಷ್ಟೇ ಅಲ್ಲ, ಸುಲಿತವಾಗಿ ಓದಿಸಿಕೊಂಡು ಹೋಗುವುದು ಈ ಪುಸ್ತಕದ ಗುಣ. ಕೇಶವಮೂರ್ತಿ ಸಾಹಿತ್ಯ, ಕ್ರಿಕೆಟ್, ಇತರೆ ಅಪರೂಪದ ಆಸಕ್ತಿದಾಯಕ ವಿಷಯಗಳ ಮೇಲೆ ಬೆಳಕು ಚೆಲ್ಲಿದ್ದಾರೆ.

ಎಲೆಮರೆಕಾಯಿಯಂತೆ ಕೇಶವಮೂರ್ತಿಯವರು ಮಾಡಿರುವ ಸಾಧನೆಗಳು ನಮಗಷ್ಟೇ ಅಲ್ಲ, ಮುಂದಿನ ತಲೆಮಾರಿಗೂ ಸ್ಫೂರ್ತಿದಾಯಕವಾಗಿವೆ. ಒಬ್ಬ ವ್ಯಕ್ತಿ ಕ್ರಿಕೆಟ್, ಸಾಹಿತ್ಯ, ಸಾಮಾಜಿಕ ಕ್ಷೇತ್ರದಲ್ಲೂ ತೊಡಗಿಸಿಕೊಂಡು ಮೌನವಾಗಿ ಇಷ್ಟೆಲ್ಲ ಕಾಯಕ ಮಾಡಿರುವುದು ಸಮಾಜಕ್ಕೆ ಮಾದರಿಯೇ ಎನ್ನಬಹುದು.



ಸಾಹಿತ್ಯವೇ ಹಸಿರು ಕ್ರಿಕೆಟೇ ಉಸಿರು
ಸಂ : ಕಗ್ಗೆರೆ ಪ್ರಕಾಶ್
ಪ್ರ : ಕಗ್ಗೆರೆ ಪ್ರಕಾಶನ ಬೆಂಗಳೂರು
9663412986, ಬೆಲೆ : ರು.300/-

ವಿಶ್ವವಾಣಿ ಅಂಕಿತ ಟಾಪ್ ಟೆನ್



1
ವಾತಾಪಿ..
(ಇಮ್ಮಡಿ ಪುಲಕೇಶಿಯ ರೋಚಕ ಚರಿತ್ರೆ)
ಲೇ: ಸಂತೋಷಕುಮಾರ ಮೆಹೆಂದಳೆ
ಪ್ರ: ಸಾಹಿತ್ಯಲೋಕ ಪಬ್ಲಿಕೇಷನ್ಸ್, ಬೆಂಗಳೂರು
ಬೆಲೆ : ರೂ 449/-



2
ಕನಕಾಂಗಿ ಕಲ್ಯಾಣ
(ಕುಂವೀ ಹೊಸ ಕಥಾಸಂಕಲನ)
ಲೇ: ಕುಂವೀ
ಪ್ರ: ಸಪ್ನ ಬುಕ್ ಹೌಸ್, ಬೆಂಗಳೂರು
ಬೆಲೆ : ರೂ 195/-



3
ಪ್ರೇಮವೆಂಬ ಅವರ್ಗೀಯ ವ್ಯಂಜನ
(ಹೀಗೊಂದಿಷ್ಟು ಪ್ರೇಮದ ಕೊರೆತಗಳು)
ಲೇ: ಮೌನೇಶ ಬಡಿಗೇರ
ಪ್ರ: ಟೆಕ್‌ಫಿಜ್, ಬೆಂಗಳೂರು
ಬೆಲೆ : ರೂ 90/-



4
ಪದಮಣಿ ದರ್ಪಣ
(ಜನಪ್ರಿಯ ಅಂಕಣ ಬರಹಗಳು)
ಲೇ: ವಿಶ್ವೇಶ್ವರ ಭಟ್
ಪ್ರ: ಸಪ್ನ ಬುಕ್ ಹೌಸ್, ಬೆಂಗಳೂರು
ಬೆಲೆ : ರೂ 195/-



5
ಅತಿಮಾನುಷ
(ಶ್! ಸದ್ದು ಕಪಾಟಿನಿಂದ ಬರುತ್ತಿದೆ! ಕಾಡುವ ಕಾದಂಬರಿ)
ಲೇ: ಗುರುರಾಜ ಕೊಡ್ಕಣಿ, ಯಲ್ಲಾಪುರ
ಪ್ರ: ಅಂಕಿತ ಪುಸ್ತಕ, ಬೆಂಗಳೂರು
ಬೆಲೆ : ರೂ 250/-

6
ಲವ್ಲಿ ಬಟ್ ಲೋನ್ಲಿ
(ಅಭಿನಯ ಶಾರದೆಯ ಜೀವನಗಾಥೆ)
ಲೇ: ಕೆ.ಸದಾಶಿವ ಶೆಣೈ
ಪ್ರ: ಸೌರವ್ ಪ್ರಕಾಶನ, ಬೆಂಗಳೂರು



7
ನೆಲದಾಳದ ನೀರು
(ಅಂತರ್ಜಲ ಕುರಿತ ಸಮಗ್ರ ಅಧ್ಯಯನ)
ಲೇ:ಶ್ರೀಧರ ಹೆಗಡೆ ಬಿದ್ರಕಾನ್
ಪ್ರ: ಅಭಿನವ, ಬೆಂಗಳೂರು
ಬೆಲೆ : ರೂ 700/-



8
ಚಿಕ್ಕಮಂಗಳೂರಿನಲ್ಲಿ ಬಂಗಾರದ ಮನುಷ್ಯ-ಡಾ.ರಾಜ್
(ಸಿನೆಮಾ ಕುರಿತ ಲೇಖನಗಳು)
ಲೇ: ದೊಡ್ಡಮನೆ ಆನಂದ್
ಪ್ರ: ಅಭಿರುಚಿ ಪ್ರಕಾಶನ, ಮೈಸೂರು
ಬೆಲೆ : ರೂ 120/-

9
ಸೋತವನ ಸಾವಿರ ಕಥೆಗಳು
(ಇದು ಗೆಲ್ಲಲು ಹೊರಟವನ ಭಗವದ್ಗೀತೆ)
ಲೇ: ರನ್ನರಾಜ
ಪ್ರ: ಸುವರ್ಣದೇಶ ಪಬ್ಲಿಕೇಷನ್ಸ್, ಬೆಂಗಳೂರು
ಬೆಲೆ : ರೂ 240/-



10
ಲೈಫ್ 360
(ವ್ಯಕ್ತಿತ್ವ ವಿಕಸನ ಕುರಿತ ಬರಹಗಳು)
ಲೇ: ಎಸ್.ಡಿ. ಕುಮಾರ್, ಅನಂತಕುಣಿಗಲ್
ಪ್ರ: ವೀರಲೋಕ, ಬೆಂಗಳೂರು
ಬೆಲೆ : ರೂ 250/-

ಮಾಹಿತಿ: ಅಂಕಿತಪುಸ್ತಕ, 53, ಗಾಂಧಿಬಜಾರ್ ಮುಖ್ಯರಸ್ತೆ, ಬಸವನಗುಡಿ, ಬೆಂಗಳೂರು-560004. ದೂರವಾಣಿ: 26617100/26617755
ಮೊಬೈಲ್ ನಂ: 9019190502

ಕಾವ್ಯ ಶೋಧಕ ಆದರ್ಶ ಪರಿಚಾರಕ

ಪ್ರತಿವರ್ಷ, ಜನವರಿ 31 ರಂದು ವರಕವಿ ದ. ರಾ. ಬೇಂದ್ರೆಯವರ ಹುಟ್ಟುಹಬ್ಬವನ್ನು ನಾಡೋಜ ಡಾ. ಜಿ.ಕೃಷ್ಣಪ್ಪನವರು ತಮ್ಮ ಮನೆಯದೇ ಸಮಾರಂಭವೇನೋ ಎಂಬಂತೆ ಆಯೋಜಿಸುತ್ತಿದ್ದರು. ಆ ದಿನ ಕೃಷ್ಣಪ್ಪನವರ ಉತ್ಸಾಹ ಗರಿಗೆದರಿರುತ್ತಿತ್ತು.

» ಕೆ.ಎನ್.ಮಹಾಬಲ

ನನಗೆ ಆಗಾಗ್ಗೆ ಬರುತ್ತಿದ್ದ ಒಂದು ದೂರವಾಣಿ ಕರೆ 'ನಮಸ್ಕಾರ ಸಾರ್ ಚೆನ್ನಾಗಿದ್ದೀರಾ, ನಾನು ಕೃಷ್ಣಪ್ಪ ಎಂದು ಆರಂಭವಾಗುತ್ತಿತ್ತು.

ನಾನು 'ಹೇಳಿ ಬೇಂದ್ರೆಯವರೇ ಏನು ಸಮಾಚಾರ?' ಎನ್ನುತ್ತಿದ್ದೆ. ನಾನು ನಾಡೋಜ ಬೇಂದ್ರೆ ಕೃಷ್ಣಪ್ಪನವರ ಹೆಸರನ್ನು 'ಬೇಂದ್ರೆ' ಎಂದೇ ನನ್ನ ದೂರವಾಣಿಯಲ್ಲಿ ಉಳಿಸಿಕೊಂಡಿದ್ದೆ. ಉಭಯಕುಶಲೋಪರಿಯ ನಂತರ ತಮ್ಮದೊಂದು ಲೇಖನ ಇಂಥ ಪತ್ರಿಕೆಯಲ್ಲಿ ಬಂದಿದೆ. ಓದಿ ಅಭಿಪ್ರಾಯ ಹೇಳಿ ಎಂದೋ, 'ನಿಮ್ಮ ತಂದೆ ಕೆ ಎಸ್ ನ ಅವರ ಬಗ್ಗೆ ಈ ಪತ್ರಿಕೆಯಲ್ಲಿ ಲೇಖನ ಬಂದಿದೆ, ನೀವೂ ಓದಿರಬಹುದು' ಎಂದೋ ತಮ್ಮ ಮೆಲುದನಿಯಲ್ಲಿ ಹೇಳುತ್ತಿದ್ದರು. ಇತ್ತೀಚಿಗೆ ಪ್ರಜಾವಾಣಿಯಲ್ಲಿ ಬರುತ್ತಿರುವ ಅವರ ಕುವೆಂಪು ಪದಸೃಷ್ಟಿ ಅಂಕಣದ ಬಗ್ಗೆಯೂ ನಮ್ಮ ಚರ್ಚೆಯಾಗುತ್ತಿತ್ತು.

ಹೀಗೆಂದು ಕೃಷ್ಣಪ್ಪನವರ ದೂರವಾಣಿ ಮಾತುಗಳು ತಮ್ಮ ಬರವಣಿಗೆಗಳ ಸ್ವಪ್ರಚಾರ ಧಾಟಿಯದ್ದು ಮಾತ್ರವೇ ಆಗಿರಲಿಲ್ಲ. ಯಾರಾದರೂ ಕವಿ, ಸಾಹಿತಿಗಳು ಅವರಿಗೆ ತಮ್ಮ ಕೃತಿಗಳನ್ನು ಕಳುಹಿಸಿದಾಗ ತ್ವರಿತವಾಗಿ ಪತ್ರಮುಖೇನ ಅಥವಾ ದೂರವಾಣಿಯ ಮೂಲಕ ಕೃಷ್ಣಪ್ಪನವರ ಅಭಿಪ್ರಾಯ ತಲುಪುತ್ತಿತ್ತು. ಕೃತಿಯ ಇತ್ಯಾತ್ಮಕ ಅಂಶಗಳ ಜತೆಗೆ ತಮಗೆ ಅನಿಸಿಕೆಯ ಕಟುವಿಮರ್ಶೆಯನ್ನು ದಾಖಲಿಸಲೂ ಅವರು ಹಿಂಜರಿಯುತ್ತಿರಲಿಲ್ಲ. ನನ್ನ 'ಕೃತಿ ಬೊಗಸೆ ತುಂಬಾ ಹೂವು' ಕೃತಿ ತಲುಪಿದ ಅರ್ಧದಿನದಲ್ಲಿ ಅಲ್ಲಿರುವ ಕವನಗಳ ಬಗ್ಗೆ ತಮ್ಮ ಮನದಾಳದ ಮಾತುಗಳಲ್ಲಿ ದೂರವಾಣಿಯಲ್ಲೇ ತಿಳಿಸಿದ್ದರು. ಒಟ್ಟಾರೆ ಕವನಗಳ ಬಗ್ಗೆ ಒಳ್ಳೆಯ ಮಾತನ್ನೇ ಆಡಿ ನನ್ನ ಕವನಗಳಲ್ಲಿ ಅಧ್ಯಾತ್ಮಿಕ ನೋಟ ಇಲ್ಲವೆಂದು ಗುರುತಿಸಿದ್ದರು.

'ಕೃಷ್ಣಪ್ಪನವರು ಬೇಂದ್ರೆಯವರನ್ನು ಆವಾಹಿಸಿಕೊಂಡುಬಿಟ್ಟಿದ್ದಾರೆ. ಹಾಗಾಗಿ ಅವರಿಗೆ ಬೇಂದ್ರೆ ಕಾವ್ಯದ ಅರ್ಥಾನುಸಂಧಾನ ಬಿಟ್ಟರೆ ಬೇರೆ ಕವಿಗಳ ಕಾವ್ಯಾಧ್ಯಯನ ಕಷ್ಟಸಾಧ್ಯ' ಎಂದು ಹಲವರು ಕುಟುಕಿದಾಗ ಕೃಷ್ಣಪ್ಪನವರ ಉತ್ತರ ನಸುನಗೆ ಹಾಗೂ ಮೌನ ಅಷ್ಟೇ. ಆದರೆ ಅನತಿಕಾಲದಲ್ಲೇ ಹರಿಹರ, ರಾಘವಾಂಕ, ಲಕ್ಷ್ಮೀಶ, ಕುವೆಂಪುರವರ ಸಾಹಿತ್ಯವನ್ನು ಕುರಿತ ಹಲವಾರು ವಿದ್ವತ್ ಭರಿತ ಕೃತಿಗಳನ್ನು ಹೊರತಂದು ಸಾಹಿತ್ಯ ವಲಯಕ್ಕೆ ತಮ್ಮ ಅಧ್ಯಯನದ ಆಳವನ್ನು ಪರಿಚಯಿಸಿದರು.

ಕೃಷ್ಣಪ್ಪನವರು ಬೋಧಕೇತರ ನಾನ್ ಅಕೆಡೆಮಿಕ್ ವಲಯದ ಸಾಹಿತಿ ಎಂದೇ ಭಾವಿತರಾದವರು. ಹಿಂದುಳಿದ ವರ್ಗದ, ಬಡತನದ ಕುಟುಂಬದಿಂದ ಬಂದವರು. ಓದಿದ್ದು ಆಟೊಮೊಬೈಲ್ ಡಿಪ್ಲೋಮೋ ಪದವಿ. ರಸ್ತೆ ಸಾರಿಗೆ ಇಲಾಖೆಯಲ್ಲಿ ವಾಹನಗಳ ಪರಿವೀಕ್ಷಕರಾಗಿ ನೇಮಕಗೊಂಡು ಸಹಾಯಕ ಸಾರಿಗೆ ಅಧಿಕಾರಿಯಾಗಿ ನಿವೃತ್ತರಾದವರು. ಸೇವೆಯ ಲ್ಲಿದ್ದಾಗಲೇ ಬಿ ಎ ಹಾಗೂ ಎಂ ಎ ಪದವಿ. ಜತೆಗೆ ಬೇಂದ್ರೆ ಸಾಹಿತ್ಯದಲ್ಲಿ ಆಸಕ್ತಿ ಬೆಳೆಸಿಕೊಂಡು ಡಾ.ಎಚ್.ಎಸ್ ಹರಿಶಂಕರ ಅವರ ಮಾರ್ಗದರ್ಶನದಲ್ಲಿ 'ಬೇಂದ್ರೆ ಸಾಹಿತ್ಯದಲ್ಲಿ ಸ್ತ್ರೀ' ಎಂಬ ವಿಷಯ ಕುರಿತು ಡಾಕ್ಟರೇಟ್ ಪದವಿಯನ್ನೂ ಪಡೆದರು.

ಮೇಜಿನ ಮೇಲೆ ಬೇಂದ್ರೆ ಮೂರ್ತಿ

ಸಾರಿಗೆ ಕಚೇರಿಯಲ್ಲಿ ಅವರ ಮೇಜಿನ ಮೇಲೆ ಬೇಂದ್ರೆಯವರ ಒಂದು ಚಿಕ್ಕಮೂರ್ತಿಯೂ ಇರುತ್ತಿದ್ದು, ಅವರನ್ನು ಕಾಣಲು ಬಂದವರು ಎತ್ತಣ ಆರ್ ಟಿ ಓ ಎತ್ತಣ ಬೇಂದ್ರೆ ಎಂದು ಸೋಜಿಗ ಪಡುವಂತಿತ್ತು.

ಕೃಷ್ಣಪ್ಪನವರು ಪ್ರಬುದ್ಧರಿಗಷ್ಟೇ ಅಲ್ಲದೆ ಹೈಸ್ಕೂಲು ವಿದ್ಯಾರ್ಥಿಗಳಲ್ಲೂ ಬೇಂದ್ರೆ ಕಾವ್ಯಾಸಕ್ತಿ ಮೂಡಿಸುವ ಯತ್ನ ಮಾಡಿ ಸಫಲರೂ ಆಗಿದ್ದರು. ಕರ್ನಾಟಕದ ಉದ್ದಗಲ ಸಂಚರಿಸಿ ಐನೂರಕ್ಕೂ ಹೆಚ್ಚು ಶಾಲೆಗಳಲ್ಲಿ ಬೇಂದ್ರೆ ಕಾವ್ಯ ಗಾಯನ, ವಾಚನ ಸ್ಪರ್ಧೆ ಏರ್ಪಡಿಸಿ, ಬಹುಮಾನಿತ ವಿದ್ಯಾರ್ಥಿಗಳಿಗೆ ತಮ್ಮ ಸ್ವಂತ ಹಣದಿಂದ ಬೇಂದ್ರೆ ರಚಿಸಿದ ಪುಸ್ತಕಗಳನ್ನು ಬಹುಮಾನವಾಗಿ ನೀಡುತ್ತಿದ್ದರು. ಮೊದಲು ಬೇಂದ್ರೆಯವರು ಕೆಲವು ಜನಜನಿತ ಕವನಗಳ ನೆರಳಚ್ಚು ಪ್ರತಿಗಳನ್ನು ಶಾಲೆಯ ಮುಖ್ಯಸ್ಥರಿಗೆ ಕಳುಹಿಸಿ, ವಿದ್ಯಾರ್ಥಿಗಳಿಗೆ ಆ ಕವನಗಳ ಗಾಯನ, ವಾಚನಗಳ ತಾಲೀಮು ನೀಡಲು ಕೋರುತ್ತಿದ್ದರು. ಒಂದು ಗೊತ್ತಾದ ದಿನ ಶಾಲೆಯಲ್ಲಿ ಕಾರ್ಯಕ್ರಮ ಏರ್ಪಡಿಸಿ ತಾವೇ ಅಲ್ಲಿ ಖುದ್ದಾಗಿ ಹಾಜರಿದ್ದು ವಿದ್ಯಾರ್ಥಿಗಳ ಗಾಯನ, ವಾಚನ ಆಲಿಸಿ ಮೊದಲು ನಾಲ್ಕು ಸ್ಥಾನ ಪಡೆದವರಿಗೆ ಬೇಂದ್ರೆಯವರ ಪುಸ್ತಕವನ್ನು ಬಹುಮಾನವಾಗಿ ನೀಡುತ್ತಿದ್ದರು. ಅದೇ ಸಂದರ್ಭದಲ್ಲಿ ಬೇಂದ್ರೆ ಕಾವ್ಯ ಕುರಿತು ವಿದ್ಯಾರ್ಥಿಗಳಿಗೆ ಒಂದು ಪುಟ್ಟ ಉಪನ್ಯಾಸ ನೀಡುತ್ತಿದ್ದರು.

ಕಂಸಾಳೆ ನೃತ್ಯ ಅಳವಡಿಕೆ

ಒಮ್ಮೆ ನಮ್ಮ ಮನೆ ಹತ್ತಿರದ ಸರಕಾರಿ ಶಾಲೆಯಲ್ಲಿ ನಡೆದ ಅಂಥ ಒಂದು ಕಾರ್ಯಕ್ರಮಕ್ಕೆ ನಾನೂ ಹೋಗಿ ಅಲ್ಲಿನ ಕಲಾಪ ವೀಕ್ಷಿಸಿ ಸಂತಸಪಟ್ಟಿದ್ದೆ. ಹುಡುಗರಿಗೆ 'ಕ್ಕಿ ಹಾರುತಿದೆ ನೋಡಿದಿರಾ?' ಕವನ ಹಾಡಿ ತೋರಿಸಿವಾಗ ತಮ್ಮ ಎಪ್ಪತ್ತರ ವಯಸ್ಸನ್ನೂ ಮರೆತು ಕೈಬೀಸುತ್ತ ಕುಣಿದರು. ಹಲವಾರು ಬೇಂದ್ರೆ ಗೀತೆಗಳನ್ನೂ ಕಂಸಾಳೆ ನೃತ್ಯಕ್ಕೂ ಅಳವಡಿಸುವ ಸಾಹಸ ಮಾಡಿದ್ದಾರೆ.

ಕೃಷ್ಣಪ್ಪನವರು ಬೇಂದ್ರೆ ಕಾವ್ಯ ಪ್ರಸಾರಕ್ಕೆ ಸುಸಂಘಟಿತ ರೂಪ ನೀಡಿ, ದ ರಾ ಬೇಂದ್ರೆ ಕಾವ್ಯ ಕೂಟ ಎಂಬ ನೋಂದಾಯಿತ ಸಂಸ್ಥೆಯನ್ನು ಸ್ಥಾಪಿಸಿದ್ದಾರೆ. ಇದರ ಮೂಲಕ ಸಮಾನಮನಸ್ಕ ಉತ್ಸಾಹಿ ಸದಸ್ಯರನ್ನು ಬೇಂದ್ರೆ ಕಾವ್ಯದತ್ತ ಆಸಕ್ತಿ ಹೊಂದಲು ಪ್ರೇರೇಪಿಸಿದ್ದಾರೆ. ಯಾವುದೇ ಸದಸ್ಯತ್ವ ಶುಲ್ಕವಿಲ್ಲ. ಧನಸಹಾಯಕ್ಕಾಗಿ ಯಾರನ್ನೂ ಗೋಗರೆಯುವುದಿಲ್ಲ. ಆಸಕ್ತರು ನೀಡಿದಷ್ಟು ಮಾತ್ರ ಸ್ವೀಕರಿಸುತ್ತಾರೆ.

ನಮ್ಮ ಮನೆಯಲ್ಲಿ ನಡೆದ ಎಚ್ಚೆಸ್ಕೆ ಸ್ಮರಣೆಯ ಸಾಹಿತ್ಯ ದಾಸೋಹದಲ್ಲಿ ಭಾಗವಹಿಸಿ ತಾವು ಮೈಸೂರಿನ ಆರ್ ಟಿ ಓ ಕಚೇರಿಯಲ್ಲಿ ಸೇವೆ ಸಲ್ಲಿಸುತ್ತಿದ್ದಾಗ ಎಚ್ಚೆಸ್ಕೆಯವರು ನಿಕಟವಾಗಿ ಪರಿಚಯವಾದದ್ದನ್ನು ಸ್ಮರಿಸಿದ್ದರು. (ಪ್ರಾಚಾರ್ಯರು ಸುಧಾ ವಾರಪತ್ರಿಕೆಯ ವ್ಯಕ್ತಿ ವಿಷಯ ಅಂಕಣದಲ್ಲಿ, ಕೃಷ್ಣಪ್ಪನವರನ್ನು ಪರಿಚಯಿಸಿದ್ದಾರೆ). ಅಲ್ಲದೆ ಎರಡು ಬಾರಿ ನಮ್ಮ ಬ್ಯಾಂಕಿನ ಸ್ಥಳೀಯ ಪ್ರಧಾನ ಕಚೇರಿ ಕನ್ನಡಸಂಘದ ತಿಂಗಳ ಬೆಳಕು ಕಾರ್ಯಕ್ರಮ ಮತ್ತು ಸಸಕಸ ವೇದಿಕೆಯ 'ಎಚ್ಚೆಸ್ಕೆ ಬೆಳಕು' ಕಾರ್ಯಕ್ರಮಗಳಲ್ಲಿ ಭಾಗವಹಿಸಿ ಬೇಂದ್ರೆ ಕಾವ್ಯದ ಬಗ್ಗೆ ಸೊಗಸಾದ ಉಪನ್ಯಾಸ ನೀಡಿದ್ದರು.

ಬೇಂದ್ರೆ ಕಾವ್ಯ ಪ್ರಸಾರಕ್ಕಾಗಿ ದಣಿವರಿಯದೆ ನಾಡಿನ ಉದ್ದಗಲ ಪ್ರವಾಸ ಮಾಡುತ್ತಿದ್ದ ಕೃಷ್ಣಪ್ಪನವರು ಕೋವಿಡ್ ದಾಳಿಗೆ ತುತ್ತಾಗಿ ಉತ್ತಮ ಚಿಕಿತ್ಸೆಯಿಂದ ಗುಣಮುಖರಾದರೂ ನಂತರದ ದಿನಗಳಲ್ಲಿ ನಿತ್ರಾಣರಾದರು. ಅದಕ್ಕೆ ಮುನ್ನ ಹೃದಯದ ಬೈಪಾಸ್ ಚಿಕಿತ್ಸೆಗೆ ಒಳಗಾಗಿದ್ದರು. ಹೊರಗಿನ ಓಡಾಟ ಬಹುಪಾಲು ನಿಲ್ಲಿಸಿಯೇ ಬಿಟ್ಟಿದ್ದರು. ಆದರೆ ಅವರ ಬರವಣಿಗೆಯ ಲೇಖನಿ ಮಾತ್ರ ಕೊನೆಯವರೆಗೂ ಕ್ರಿಯಾಶೀಲವಾಗಿತ್ತು. ಕುವೆಂಪು ಕಾವ್ಯದ ಪದಸೃಷ್ಟಿಯ ಬಗ್ಗೆ ಶೋಧ ನಡೆಸಿದ್ದರು.

ನಮ್ಮ ತಂದೆ ಕೆ ಎಸ್ ನ ಅವರ ಕೆಲವು ಸಂಕೀರ್ಣ ಕವನಗಳ ಬಗ್ಗೆ ವ್ಯಾಖ್ಯಾನಿಸುವ ಯೋಜನೆಯೊಂದನ್ನು ಅವರು ಹೊಂದಿದ್ದು, ಅದಕ್ಕೆ ನನ್ನ ಸಹಕಾರವನ್ನೂ ಕೋರಿದ್ದರು. ಆದರೆ ಅನಾರೋಗ್ಯವನ್ನು ಜಯಿಸಲಾಗದೆ ಬೇಂದ್ರೆ ಜನ್ಮದಿನ ಇನ್ನೂ ಮೂರು ದಿನ ಇರುವಾಗಲೇ ಜನವರಿ 28 ರಂದು ಕಾಲವಾದರು.

ಪ್ರತಿವರ್ಷ, ಜನವರಿ 31 ರಂದು ವರಕವಿ ದ ರಾ ಬೇಂದ್ರೆಯವರ ಹುಟ್ಟುಹಬ್ಬವನ್ನು ನಾಡೋಜ ಡಾ. ಜಿ. ಕೃಷ್ಣಪ್ಪನವರು ತಮ್ಮ ಮನೆಯದೇ ಸಮಾರಂಭ ವೇನೋ ಎಂಬಂತೆ ಆಯೋಜಿಸುತ್ತಿದ್ದರು. ಆ ದಿನ ಕೃಷ್ಣಪ್ಪನವರ ಉತ್ಸಾಹ ಗರಿಗೆದರಿರುತ್ತಿತ್ತು. ಎಲ್ಲ ಕಾವ್ಯಾಭಿಮಾನಿಗಳಿಗೆ ಅಂಚೆಯಲ್ಲಿ ಆಹ್ವಾನ. ತಲುಪಿದ್ದನ್ನು ಖಾತರಿ ಪಡಿಸಿಕೊಳ್ಳುವಂತೆ ದೂರವಾಣಿಯಲ್ಲೂ ಆಹ್ವಾನಿಸುವ ಸೌಜನ್ಯ ಹಾಗೂ ಶಿಸ್ತು. ಸಾಯಂಕಾಲ 4.30 ರ ಹೊತ್ತಿಗೆ ತಾವೇ ಸಭಾಂಗಣದ ಬಾಗಿಲಲ್ಲಿ ನಿಂತು ಬಂದವರನ್ನು ಸಂತಸದಿಂದ ಆಹ್ವಾನಿಸುವ ಸಂಭ್ರಮ.

ಈ ಬಾರಿಯೂ ಜನವರಿ 31 ರ ಸಾಯಂಕಾಲ, 'ಬೇಂದ್ರೆ ನಮನ' ಕಾರ್ಯಕ್ರಮ ಉದಯಭಾನು ಕಲಾಸಂಘದ ಸಭಾಂಗಣದಲ್ಲಿ ಸ್ಮರಣೀಯವಾಗಿ ನಡೆಯಿತು. ಎಲ್ಲ ವ್ಯವಸ್ಥೆಯನ್ನು ಸ್ವಯಂ ಕೃಷ್ಣಪ್ಪನವರೇ ಮುತುವರ್ಜಿ ವಹಿಸಿ ಮಾಡಿದ್ದರು. ಆದರೆ ಈ ಸಂದರ್ಭವು, ಬೇಂದ್ರೆ ಕೃಷ್ಣಪ್ಪನವರಿಗೆ ಶ್ರದ್ಧಾಂಜಲಿ ಅರ್ಪಿಸುವ ಕಾರ್ಯಕ್ರಮವೂ ಆದುದು ಮಾತ್ರ ದುಃಖ ತರುವ ಸನ್ನಿವೇಶವಾಗಿತ್ತು. (ಈ ಬರಹದ ಲೇಖಕರು ಕವಿ ಕೆ.ಎಸ್.ನ. ಅವರ ಪುತ್ರರು).

ಹಳ್ಳಿಯ ಜನರು ಬಯಲಕಡೆ ಹೋಗುವಾಗ ಉಗ್ಮಣ್ಣು ಹಿಡಿದುಕೊಂಡು ಹೋಗುವುದೇಕೆ?

ಉಗ್ಮಣ್ಣು ರಹಸ್ಯ

ಈ ಪದ್ಧತಿ ಬಹಳ ಹಿಂದಿನಿಂದ ನಮ್ಮ ಹಳ್ಳಿಗಳಲ್ಲಿ ಹಾಸುಹೊಕ್ಕಾಗಿತ್ತು. ಇದರ ಬಗ್ಗೆ ಹಳ್ಳಿಗರಲ್ಲಿ ಒಂದು ಸಹಜತೆ ಕೂಡ ಇತ್ತು. ಎಲ್ಲರೂ ಪಾಲಿಸುತ್ತಿದ್ದರು. ಕ್ರಮೇಣ ಹಳ್ಳಿಗಳು ನವ ನಾಗರಿಕತೆ ಬಗ್ಗೆ ತಲೆ ತಿರುಗಿಸಿ ನೋಡಿದ ಮೇಲೆ ಇದೆಲ್ಲ ಮರೆಯಾಯ್ತು ಅಂತ ಕಾಣಿಸುತ್ತೆ.

ಸುಲಲಿತ ಪ್ರಬಂಧ

» ರೇಖಾ ಬಿ.ಎಸ್., ಬೆಂಗಳೂರು

ನಾನು ಚಿಕ್ಕಂದಿನಲ್ಲಿ ವಾಸಿಸುತ್ತಿದ್ದ ಶಿವಮೊಗ್ಗ, ಚಿತ್ರದುರ್ಗ ಜಿಲ್ಲೆಗಳ ಬಹುತೇಕ ಹಳ್ಳಿಗಳಲ್ಲಿ ಬಹುಜನರು ಪಾಲಿಸುತ್ತಿದ್ದದ್ದನ್ನು ಕಣ್ಣಾರೆ ಕಂಡಿದ್ದೇನೆ! ಸಾಮಾನ್ಯವಾಗಿ ಎಲ್ಲರ ಮನೆಯ ಹಿತ್ತಲಿನಲ್ಲಿ ನೀರಿನ ಒಂದು ಬಾನಿ ಹಾಗೂ ಚೊಂಬು, ಒಂದು ಉಗ್ಮಣ್ಣು ಮಡಕೆ, ಅದರಲ್ಲೊಂದು ತೆಂಗಿನ ಕರಟ, ಅವುಗಳ ಮುಂದೆ ಒಂದು ಚಪ್ಪಡಿಕಲ್ಲು ಇರೋದು. ಉಗ್ಮಣ್ಣು ಅಂದರೆ ಉಗ್ಗು-ಮಣ್ಣು. ನಾವಿದ್ದ ಹಳ್ಳಿ ಕಡೆ ಉಗ್ಗೋದು ಅಂದರೆ ತೂರುವುದು, ಎಸೆಯುವುದು ಎಂದರ್ಥ, ಜಾತ್ರೆಯಲ್ಲಿ ತೇರಿನ ಮೇಲೆ ಬಾಳೆಹಣ್ಣು, ಹೂವು ಉಗ್ಗೋದು ಅಂತೀವಿ. ಉಗ್ಮಣ್ಣು ಮಡಿಕೆಯಲ್ಲಿ ಗಾಳಿಸಿದ ತೆಳು ಮರಳು-ಮಣ್ಣು, ನೀರೊಲೆಯೊಳಗಿನ ಕುಳ್ಳಿನ ಬೂದಿಯ ಮಿಶ್ರಣ. ಕುಳ್ಳು ಅಂದರೆ ಸಗಣಿಯ ಬೆರಣಿ, ನೀರೊಲೆ ಅಂದರೆ ಬಚ್ಚಲಿನ ನೀರು ಕಾಯಿಸುವ ದೊಡ್ಡ ಒಲೆ.

ನೀರ್ಕಡೀಕೆ(ಬಹಿರ್ದೆಸೆ)ಗಾಗಿ ಕೆರೆದಂಡೆ ಕಡೆ ಹೋಗೋರೆಲ್ಲಾ ಸಾಮಾನ್ಯವಾಗಿ ಒಂದು ಕೈಯಲ್ಲಿ ನೀರಿನ ತಂಬಿಗೆ, ಇನ್ನೊಂದು ಕೈಯಲ್ಲಿ ಸ್ವಲ್ಪ ಉಗ್ಮಣ್ಣನ್ನು ಮುತ್ತುಗದ ಎಲೆಯಲ್ಲಿ ಹಾಕಿ ಮಡಿಚಿಕೊಂಡು ಹೋಗೋರು.

ಮೊದಲಿಗೆ ನನಗೆ ಎಷ್ಟೊಂದು ಜನ ತಂಬಿಗೆ ತೊಗೊಂಡು ಒಂದೇಕಡೆ ಯಾಕೆ ಹೋಗ್ತಾರೆ ಅನ್ನೋದು ಗೊತ್ತಿರಲಿಲ್ಲ, ಆಮೇಲೆ ಗೊತ್ತಾಯಿತು. ಆದರೆ ಇವರೆಲ್ಲ ಮಣ್ಣನ್ನೂ ಯಾಕೆ ತೊಗೊಂಡು ಹೋಗ್ತಾರೆ ಅನ್ನೋ ಕುತೂಹಲವಿತ್ತು. ಅಮ್ಮ-ಅಪ್ಪನನ್ನು ಕೇಳಿದರೆ ಅವರಿಗೆ ಈ ಬಗ್ಗೆ ಏನೂ ಗೊತ್ತಿರಲಿಲ್ಲ. ನನ್ನನ್ನು ಈಬಗ್ಗೆ ಮಾತಾಡಲು ಅಷ್ಟೇನೂ ಪ್ರೋತ್ಸಾಹ ಕೊಟ್ಟಿರಲಿಲ್ಲ. (ನನ್ನ ತಂದೆತಾಯಿ, ಅಂದಿನ ಕಾಲಕ್ಕೆ ಬೆಂಗಳೂರಿನಲ್ಲಿ ಕಾಲೇಜು ಪದವಿ ಪಡೆದಿದ್ದವರು, ತಂದೆ ಬ್ಯಾಂಕ್ ನೌಕರಿ ವರ್ಗಾವಣೆಯಿಂದಾಗಿ ಬೇರೆಬೇರೆ ಊರುಗಳಲ್ಲಿ ಕೆಲಸ ಮಾಡಬೇಕಿತ್ತು).

ಇಸವಿ 1972-73 ಅನ್ನಿಸುತ್ತೆ; ನನಗಾಗ ವಯಸ್ಸು ಸುಮಾರು ನಾಲ್ಕು. ಅಪ್ಪ ಆ ಹಳ್ಳಿಯಲ್ಲಿದ್ದ ಏಕೈಕ ಬ್ಯಾಂಕ್

ನ ಮ್ಯಾನೇಜರ್, ಆದ್ದರಿಂದ ಅಲ್ಲಿ ನಾವು ಬಾಡಿಗೆಗಿದ್ದ ಮನೆಯ ಮಾಲೀಕ, ಬಹಳ ಹೆಚ್ಚುಗಾರಿಕೆಯಿಂದ ಮನೆಯ ಹಿತ್ತಲದಲ್ಲಿಯೇ ಕಕ್ಕಸು ಮನೆ ಕಟ್ಟಿಸಿಕೊಟ್ಟಿದ್ದರು. ಅದರಲ್ಲಿ ನಮ್ಮಮ್ಮ ಯಾವಾಗಲೂ ಒಂದು ದೊಡ್ಡ ಕಬ್ಬಿಣದ ಬಕೆಟ್‌ನಲ್ಲಿ ನೀರು ಮತ್ತು ಒಂದು ಚೊಂಬು ಇಟ್ಟಿರುತ್ತಿದ್ದರು. ನಾನು ನೋಡಿದಂತೆ, ನನ್ನ ಗೆಳತಿಯರ ಯಾರ ಮನೆಹಿತ್ತಲಲ್ಲೂ ಸಂಡಾಸಮನೆ ಇರಲಿಲ್ಲ. ಅವರೆಲ್ಲರೂ ಬಹಿರ್ದೆಸೆಗಾಗಿ ಹೊರಗೆ ಹೋಗುತ್ತಿದ್ದರು. ಮನೆಗೆ ಬಂದಮೇಲೆ ಚಪ್ಪಡಿಕಲ್ಲಿನ ಮೇಲೆ ನಿಂತು ಮನೆಯಲ್ಲಿರುವವರ ಕೈಯಿಂದ ಮತ್ತೆ ತಮ್ಮ ಕೈಗೆ ಉಗ್ಮಣ್ಣು ಹಾಕಿಸಿಕೊಂಡು ಕೈ ಉಜ್ಜಿಕೊಂಡು ನೀರಿನಲ್ಲಿ ಕೈಕಾಲು ತೊಳೆದುಕೊಂಡು ಮನೆಯೊಳಗೆ ಹೋಗುತ್ತಿದ್ದರು. ಇದನ್ನೆಲ್ಲ ಕೌತುಕದಿಂದ ನೋಡುತ್ತಿದ್ದ ನನಗೆ, ನಮ್ಮಮ್ಮ ಮನೆಯಲ್ಲಿ ನನಗೆ ಸೋಪು ಹಾಕಿ ಕೈತೊಳ್ಕೊ ಅನ್ನೋದು ಬೇಜಾರಿನ ಸಂಗತಿಯಾಗಿತ್ತು. ನಮ್ಮ ಮನೆಯಲ್ಲೂ ಒಂದು ಉಗ್ಮಣ್ಣು ಮಡಕೆ ಇಡಬೇಕೆಂಬ ನನ್ನ ಆಸೆಗೆ ನಮ್ಮಮ್ಮ ಯಾವುದೇ ಪ್ರತಿಕ್ರಿಯೆಯನ್ನೇ ತೋರಿಸಿರಲಿಲ್ಲ.

ನಾವು ಗೆಳತಿಯರೆಲ್ಲ ಯಾವಾಗಲೂ ಒಟ್ಟಿಗೆ ಒಂದು ತಂಡದಲ್ಲಿ ಇರುತ್ತಿದ್ದೆವು. ಆದರೆ ನೀರ್ಕಡೀಕೆಗೆ ಹೋಗುವಾಗ ಮಾತ್ರ ಅವರೆಲ್ಲ ಒಂದು ಗುಂಪು ಮತ್ತು ನಾನು ಮಾತ್ರ ಒಂಟಿ ಗೂಬೆಯ ಥರ ಮನೆಯಲ್ಲಿ ಇರಬೇಕಾಗೋದು. 'ನಿಂಗೇನು? ನಿಮ್ಮ ಹಟ್ಟಿನಾಗೆ ಸಂಡಾಸ ಐತಲ್ಲ ವೋಗು, ನಮ್ಮ ಜತಿಗ ಬಬ್ಯಾಡ' ಅನ್ನೋರು. ನನಗೆ ತುಂಬ ಬೇಸರ ಆಗೋದು. ನಮ್ಮನೇಲಿ ಇರೋ ಸಂಡಾಸಖಾನೆಯಿಂದಲೇ ಈ ಕತೆಯಾಗಿದೆ, ಇದಕ್ಕೊಂದು ಗತಿ ಕಾಣಿಸಬೇಕು ಅಂತ ನನ್ನ ಅತ್ಯಾಪ್ತ ಗೆಳತಿ ನಂದಾಳಿಗೆ ಹೇಳಿದೆ. ಅವಳು ಕೊಟ್ಟ ಸಲಹೆಯಂತೆ ನಾನೂ ಅವಳೂ ಸೇರಿ ನಮ್ಮನೆಯ ಸಂಡಾಸದ ಬೇಸಿನ್ ಒಳಗೆ ಕಲ್ಲುಗಳು, ಹಿತ್ತಲ ಗಿಡಗಳಲ್ಲಿದ್ದ ಚಪೇಕಾಯಿ, ದಾಳಿಂಬೆ ಎಲ್ಲವನ್ನೂ ಸಾಕಷ್ಟು ಸಂಖ್ಯೆಯಲ್ಲಿ ಕಿತ್ತು ತುಂಬಿಸಿ ಬಂದೆವು.

ಮಹದಾನಂದ

ನನಗೆ ಆನಂದವೋ ಆನಂದ, ನಾಳೆಯಿಂದ ನಾನು ನಮ್ಮ ತಂಡದ ಜೊತೆಗೆ ಬೆಳಗಿನ ಯಾತ್ರೆ ಮಾಡುತ್ತೇನೆಂದು! ಆದರೆ ನಮ್ಮಮ್ಮ ಅವತ್ತೇ ಸಾಯಂಕಾಲ ಯಾರೋ ನೀರ್ದೋಟಿಯನ್ನು ಕರೆಸಿ ಕಸವೆಲ್ಲ ತೆಗೆಸಿ ಶುಚಿ ಮಾಡಿಸಿ ನನ್ನ ಯಾತ್ರೆಯ ಕನಸನ್ನು ಕಮರಿಸಿದ್ದರು. ಆಮೇಲೆ ಒಂದೆರಡು ಬಾರಿ ಪದೇ ಪದೇ ಸಂಡಾಸದಲ್ಲಿ ಕಲ್ಲು ಬೀಳತೊಡಗಿದ ಮೇಲೆ ಅದರ ಬಾಗಿಲಿಗೆ ಬೀಗ ತಗುಲಿಸಿದರು!

ಒಮ್ಮೆ ನಮ್ಮ ಗೆಳತಿಯರಿಗೆ, ನೀವೆಲ್ಲಾ ನೀರ್ಕಡೀಕೆಗೆ ಹೋಗುವಾಗ ಉಗ್ಮಣ್ಣು ಯಾಕೆ ತೊಗೊಂಡು ಹೋಗ್ತೀರಿ ಅಂತ ಕೇಳಿದ್ದಕ್ಕೆ, ಎಲ್ಲರೂ ಕೇಕೆ ಹಾಕಿ ಬಿದ್ದೂಬಿದ್ದೂ ನಕ್ಕಿದ್ದರು. 'ನೀನೂ ಒಂದಿನ ನಮ್ಮ ಜೊತೆ ತಂಬಿಗೆ ಹಿಡ್ಕೊಂಡು ಬಾ, ಗೊತ್ತಾಗತ್ತೆ' ಅಂತ ನಗುತ್ತಲೇ ಹೇಳಿದ್ದರು. ಅಂತೂ ಉಗ್ಮಣ್ಣು ಉಪಯೋಗ ಗೊತ್ತಿಲ್ಲದ ನಾನು ಅವರುಗಳ ದೃಷ್ಟಿಯಲ್ಲಿ ಕೇವಲಳಾದೆ. ಸುಮಾರು ದಿನ ಅದರ ಬಗ್ಗೆ ತಲೆ ಕೆಡಿಸಿಕೊಂಡಿದ್ದೆ. ಆಮೇಲೆ ಒಂದು ದಿನ ನಮ್ಮಮ್ಮನ ಬಳಿ ಬಂದು, 'ಇನ್ಮೇಲೆ ನನ್ನ ಗೆಳತಿಯರೆಲ್ಲ ಒಟ್ಟಿಗೆ ನೀರ್ಕಡೀಕೆಗೆ ಹೋಗುವಾಗ ನಾನೂ ತಂಬಿಗೆ ತೊಗೊಂಡು ಹೋಗ್ತೀನಿ' ಅಂತ ನನ್ನ ತೀರ್ಮಾನವನ್ನು ಘೋಷಿಸಿದೆ!

ಹೌಹಾರಿದ ಅಮ್ಮ

ಬೆಂಗಳೂರಿನ ಮಹಾರಾಣಿಸ್ ಕಾಲೇಜ್‌ನಲ್ಲಿ ಬಿ.ಎ. ಮಾಡಿದ್ದ ನಮ್ಮಮ್ಮ ಇದನ್ನು ಕೇಳಿ ಹೌಹಾರಿದರು. 'ಬಿಲ್ಕುಲ್ ಆಗೊಲ್ಲ, ಅವರೆಲ್ಲ ಇದೇ ಹಳ್ಳಿಯವರು. ನಾವೆಲ್ಲ ಹಾಗೆ ಹೋಗಕೂಡದು, ಸಾಧ್ಯವಿಲ್ಲ' ಎಂದರು. ನಾನು ಜಗ್ಗಲಿಲ್ಲ. 'ಹೋಗೇ ಹೋಗ್ತೀನಿ!' ಎಂದೆ. ನನ್ನ ಹಠ ಗೊತ್ತಿದ್ದ ನಮ್ಮಮ್ಮ ಹಗಲಿರುಳು ನೆರಳಂತೆ ನನ್ನ ತಲೆ (ಅಂಡು?) ಕಾಯ್ದರು. ಎಲ್ಲಿ ಅವರ ಜೊತೆ ಹೋಗ್ಬಿಡ್ತಿನೋ ಅಂತ. ನನ್ನದೂ ಹಠ, ಅಮ್ಮ ನನ್ನನ್ನು ಹೊರಗೆ ಹೋಗಕ್ಕೆ ಬಿಡಲಿಲ್ಲ ಅಂತ, ಮೂರು ದಿನ ನಾನು ಕೂಡ ಮನೆಸಂಡಾಸಲ್ಲೂ ಕಕ್ಕ ಮಾಡಲೇಇಲ್ಲ. ಹಾಗೇ ತಡೆದುಕೊಂಡು ಕುಳಿತೆ. ನಾಲ್ಕನೆಯ ದಿನ ಇಡೀ ಮನೆಯಲ್ಲಿ ಗಬ್ಬುನಾತದ ಹೂಸು, ಊದುಕಡ್ಡಿ ಥರ ಬಿಟ್ಟುಕೊಂಡು ಓಡಾಡಿದೆ. ಜೊತೆಗೆ ಹೊಟ್ಟೆನೋವು ಬೇರೆ. ಮುಖ ಕಿವುಚುತ್ತಿದ್ದೆ.

ಕೊನೆಗೆ ನಮ್ಮಪ್ಪ ನನ್ನನ್ನು ಕರೆದು ಅನುನಯದಿಂದ ತಿಳಿಹೇಳಿದರು. ಅದನ್ನು ಕೇಳದೇ ನಾನು ನನ್ನ ವಾದವನ್ನೇ ಮುಂದುವರೆಸಿದಾಗ ಕೊನೆಗೆ ಬ್ರಹ್ಮಾಸ್ತ್ರ ಪ್ರಯೋಗಿಸಿದರು: 'ನೀನು ಹೀಗೆ ಹಠ ಹಿಡಿದರೆ, ನಾನು ಬ್ಯಾಂಕ್‌ನವರಿಗೆ ಹೇಳಿ ಇಲ್ಲಿಂದ ವರ್ಗ ಮಾಡಿಸಿಕೊಂಡು ಬೇರೆಡೆ ಹೋಗಿಬಿಡುತ್ತೇನೆ, ಆಗ ನಿನ್ನ ಗೆಳೆಯರೆಲ್ಲರನ್ನೂ ಬಿಟ್ಟು ಬರಬೇಕಾಗುತ್ತದೆ' ಎಂದರು.

ಊದುಕಡ್ಡಿ ಸುಬ್ರಾಯರು

ನಾನು ಅವಾಕ್ಕಾದೆ. ಯಃಕಶ್ಚಿತ್ ಉಗ್ಮಣ್ಣಿನ ರಹಸ್ಯ ತಿಳಿಯುವುದಕ್ಕಾಗಿ ನನ್ನ ಗೆಳತಿಯರಿಂದ ದೂರವಾಗುವ ಶಿಕ್ಷೆ ನನಗೆ ಬೇಕಿರಲಿಲ್ಲ. ಕಣ್ಣಲ್ಲಿ ಗಂಗಾಭವಾನಿ ಶುರುವಾಯಿತು. 'ಸರಿ, ಈಗ ಹೇಳು ನಾನೇನು ಮಾಡಲಿ?' ಅಂತ ಅಪ್ಪ ಕೇಳಿದರು. ನಾನು ಮುಖ ದುಮ್ಮಿಸಿಕೊಂಡು ಹಿತ್ತಲಿನ ಕಕ್ಕಸುಮನೆಗೆ ಹೋಗಿ ಡಭಾರನೆ ಬಾಗಿಲು ಹಾಕಿಕೊಂಡೆ. ನಮ್ಮಮ್ಮ-ಅಪ್ಪ ಜೋರಾಗಿ ನಕ್ಕ ಸದ್ದು ಕಾದ ಸೀಸದಂತೆ ನನ್ನ ಕಿವಿಮೇಲೆ ಬಿತ್ತು. ಆಮೇಲೆ ಈ ವಿಷಯವನ್ನು ಬೆಂಗಳೂರಿನಲ್ಲಿದ್ದ ನಮ್ಮ ನೆಂಟರೆಲ್ಲರಿಗೂ ಅಮ್ಮ ರಸವತ್ತಾಗಿ ಹೇಳಿದರು. ಸುಮಾರು ದಿನ ಮನೆಯಲ್ಲಿ ಎಲ್ಲರೂ ನನ್ನನ್ನು ನೋಡಿದರೆ 'ಊದುಕಡ್ಡಿ ಸುಬ್ರಾಯರು' ಬಂದರು ಅನ್ನೋರು. ಆಮೇಲೆ ಎಲ್ಲರೂ ಒಂದೆಡೆ ಸೇರಿ ಗೌಜಿಗದ್ದಲ ಇದ್ದಾಗ ಯಾರೇ ಹೂಸು ಬಿಟ್ಟರೂ ನನ್ನತ್ತಲೇ ಬೆಟ್ಟು ತೋರಿಸಿ ಈಗ ಬಿಟ್ಟಿದ್ದು ಇವಳೇ ಇರಬೇಕು ಮೂರು ದಿನ ತಡೆದವಳು ಎನ್ನುತ್ತಿದ್ದರು! ಇಷ್ಟೆಲ್ಲ ಅವಮಾನವನ್ನು ನಾನು ಹಲ್ಕಚ್ಚಿ ತಡೆದಿದ್ದೆ, ನನಗೆ ಉಗ್ಮಣ್ಣು-ರಹಸ್ಯ ತಿಳಿಯಲೇಬೇಕಿತ್ತು.

ಕೊನೆಗೂ ಬಯಲಾಯಿತು

ಹೀಗಿರುವಾಗ ಈ ರಹಸ್ಯವೂ ತಂತಾನೇ ಬಿಚ್ಚಿಕೊಂಡಿತು! ಒಂದಿನ ನನ್ನ ಗೆಳತಿಯ ತಮ್ಮ ಒಂದೂವರೆ ವರ್ಷದವನು ಹಿತ್ತಿಲಲ್ಲೇ ಎರಡಕ್ಕೆ ಹೋದ. ಆಗ ಅವರಮ್ಮ ಬಂದು ಅವನನ್ನು ತಮ್ಮ ಕಾಲುಗಳ ಮೇಲೆ ಆನಿಸಿಕೊಂಡು ನಿಲ್ಲಿಸಿಕೊಂಡರು. ಅವನ ಅಂಡಿನ ಮೇಲೆ 'ಉಗ್ಮಣ್ಣು' ಉಗ್ಗಿದರು. ಬತ್ತದ ಹುಲ್ಲಿನಿಂದ ಅದನ್ನೊರೆಸಿ ನೀರಿನಲ್ಲಿ ತೊಳೆದರು. ನಂತರ ಕೆಳಗಿದ್ದ ಕಕ್ಕದ ಮೇಲೆ ಮತ್ತಷ್ಟು ಮಣ್ಣು ಹಾಕಿ, ಹುಲ್ಲಿನಿಂದ ಬಾಚಿ ತಿಪ್ಪೆಗೆಸೆದರು. ಅಲ್ಲೇ ಕುಳಿತು ಬಿಸಿಲುಕಾಯಿಸುತ್ತಿದ್ದ ಕೊಟ್ರಜ್ಜಿಯನ್ನು 'ಉಗ್ಮಣ್ಣು ಯಾಕ ಹಾಕಾದಜ್ಜಿ?' ಅಂತ ಕೇಳಿದ್ದಕ್ಕೆ ಅಜ್ಜಿ ಹೇಳ್ತು: 'ಅಲ್ ಕಣ್ ಮಗಾ... ಕಕ್ಕದಾಗೆ ಕೊಳೆ ಇರಕಿಲ್ವ, ಅದ್ನ ಬರೇ ನೀರ್ನಾಗೆ ತೊಳದ್ರೆ ಓತದಾ? ಓಗಾಕಿಲ್ಲ, ಅದೇ ಕೈನಾಗೆ ಅಡ್ಗೆ ಮಾಡದು, ಉಣ್ಣದು ಮಾಡುದ್ರೆ, ಮತ್ತೆ ಕಕ್ಕದಾಗಿನ ಕೊಳೆ ನಮ್ಮ ಒಳೀಕೆ ಸೇರ್ಕತದೇ. ಅದೇ ಉಗ್ಮಣ್ಣು ವಳ್ಳೆ 'ಕೊಳೆತಿನಿ' ಅಲ್ಲುವಾ, ಈ ಮಣ್ಣು ನೋಡಕಳವ... ಸತ್ತ ಮನುಸರನ್ನೇ ತಿನ್ಕತದೇ, ಇನ್ನು ಕಕ್ಕದಾಗೆ ಇರೋ ಕೊಳೆ ಬಿಡ್ತದಾ? ಅದ್ಕೇಯ ಮೊದ್ಲು ಉಗ್ಮಣ್ಣು ಆಕಿ ಆಮ್ಯಾಕೆ ನೀರ್ ಆಕದು.'

ಓಹೋ, ಇದಾ ವಿಷಯ! ಉಗ್ಮಣ್ಣು ಈ ರೀತಿ ಉಪಯೋಗಿಸಬೇಕು ಎನ್ನುವ ಬ್ರಹ್ಮಜ್ಞಾನ ಆವತ್ತು ಗೊತ್ತಾಗೋಯ್ತು! 'ತಿಳಿಯೋತನಕ ಬ್ರಹ್ಮವಿದ್ಯೆ, ಆಮೇಲೆ ಕೋತಿವಿದ್ಯೆ' ಅಂತಾರಲ್ಲ ಹಾಗೆ! ಮೊದಲೇ ಕಕ್ಕಮಾಡಿ ಕೊಳೆಯಾದ ಜಾಗಕ್ಕೆ ಮಣ್ಣು ಉಗ್ಗಿಕೊಂಡು ಮತ್ತಷ್ಟು ಕೊಳೆ ಯಾಕೆ ಮಾಡುವುದು ಎಂಬ ನನ್ನ ಪ್ರಶ್ನೆಗೆ ಅಷ್ಟುದಿನ ಉತ್ತರ ತಿಳಿದಿರಲಿಲ್ಲ. ಆಮೇಲೆ ಈ ವಿಷಯವೂ ಮನದಂಗಳದಿಂದ ಮಾಸಿತ್ತು. ಮೊನ್ನೆ 'ತಿಳಿರುತೋರಣ' ಅಂಕಣದಲ್ಲಿ ಬ್ರಾಹ್ಮ ಮುಹೂರ್ತ ಶುಚಿತ್ವ ಸಂಹಿತೆಯಲ್ಲಿ ಮೃದಾಚಮ್ಯ... ವಿವರಣೆಯನ್ನೋದಿದಾಗ ಇದೆಲ್ಲವೂ ನೆನಪುಗಳ ಮೆರವಣಿಗೆಯಂತೆ ಸಾಗಿತು.

ಹನ್ನೊಂದರ ಬಾಲೆಯ ಪ್ರವಾಸಕಥನ

ಕಾಶ್ಮೀರವನ್ನು ನೋಡಿದ ಬಾಲಕಿಯು, ಪುಸ್ತಕ ರೂಪದಲ್ಲಿ ಪ್ರವಾಸ ಕಥನವನ್ನು ಬರೆದಿದ್ದು ವಿಶೇಷ ಎನಿಸಿದೆ.

» ಡಾ.ಸಂಗಣ್ಣ ಎಂ.ಸಿಂಗೆ, ಆನೂರ

ಕು.ನಮೃತಾ ಕತ್ತಿ ಐದನೇ ತರಗತಿಯಲ್ಲಿ ಓದುತ್ತಿರುವ ಹನ್ನೊಂದರ ಬಾಲೆ. ಸಣ್ಣ ವಯಸ್ಸಿನಲ್ಲಿ ಅನುಭವಿಸಿದ ಗಳಿಗೆಯನ್ನು ವಯಸ್ಸಿಗೆ ಬಂದು ಬರೆಯಲು ಸಾಧ್ಯವೆನಿಸಿದಾಗ ಕೃತಿ ರೂಪದಲ್ಲಿ ಬರೆದಿಡುವುದನ್ನು ನೋಡಿದ್ದೇನೆ. ಯಾಕೆಂದರೆ ಕನ್ನಡ ಮಾಧ್ಯಮದ ಐದನೇ ತರಗತಿಯ ಹನ್ನೊಂದರ ಬಾಲೆ ಸಾಹಿತ್ಯ ರಚಿಸುವಷ್ಟು ಸಾಮಾರ್ಥ್ಯವಿರುವುದಿಲ್ಲೆಂದು ಊಹಿಸಿರುತ್ತಾರೆ. ಆದರೆ ಅಗಾಧ ಪ್ರತಿಭೆಯ ನಮೃತಾ ಇಲ್ಲಿ ಅದೆಲ್ಲವನ್ನು ಸುಳ್ಳಾಗಿಸಿ ತನ್ನ ವಯಸ್ಸಿಗೂ ಮೀರಿದ ಈ ಪ್ರಯತ್ನದಿಂದ ಪ್ರವಾಸ ಕಥನವೊಂದು ಬರೆದು, ಕನ್ನಡದ ಮಟ್ಟಿಗೆ ಪುಟ್ಟ ದಾಖಲೆ ಬರೆದಿದ್ದಾಳೆ. 'ನಾನೂ ಕಾಶ್ಮೀರಕ್ಕೆ ಹೋಗಿದ್ದೆ' ಪ್ರವಾಸ ಕಥನವು, ಬಾಲೆಯಬ್ಬಳ ದೃಷ್ಟಿಯಲ್ಲಿ ಕಾಶ್ಮೀರವನ್ನು ಓದುಗರಿಗೆ ಪರಿಚಯಿಸುತ್ತದೆ.

ಬಾಲಕಿ ನಮೃತಾ ಕತ್ತಿ ತಾನು ಕೈಗೊಂಡ ಪ್ರವಾಸದ ಗಳಿಗೆಯಲ್ಲಿ ಆಟಿಕೆ ಸಾಮಾನುಗಳು ಖರೀದಿಸಿ ಆಟವಾಡುವ ವಯಸ್ಸಿನವಳು, ಸಾಮಾನ್ಯವಾಗಿ ಚಿಕ್ಕ ಮಕ್ಕಳು ತಂದೆ-ತಾಯಿಯೊಂದಿಗೆ ಮನೆಯಿಂದ ಹೊರಗಡೆ ಹೋದಾಗೆಲ್ಲ ತಿಂಡಿ ತಿನಿಸುಗಳು ಹೆಚ್ಚೆಂದರೆ ಉಡಲು ಬಟ್ಟೆ, ಆಟದ ಸಾಮಾನುಗಳು ಖರೀದಿಸುವುದು ಕಂಡಿದ್ದೇವೆ. ಆದರೆ ನಮೃತಾಳು ವಯಸ್ಸಿನಲ್ಲಿ ತುಂಬಾ ಚಿಕ್ಕವಳು. ಇವಳು ನೋಡಿದೆಲ್ಲ ಮಸ್ತಕದಲ್ಲಿಟ್ಟು ಸಾಹಿತ್ಯಿಕವಾಗಿ ಬಲಿತಾಗ ಕೃತಿ ರೂಪದಲ್ಲಿ ಬರೆಯಬಹುದಿತ್ತು. ಪ್ರಾಥಮಿಕ ಹಂತದಲ್ಲೆ ಪ್ರವಾಸ ಕಥನದಂತ ಮೌಲಿಕ ಕೃತಿ ರಚಿಸಿ ನಾನು ತಿಳಿದಿರುವಂತೆ ಕನ್ನಡದಲ್ಲಿ ಪ್ರಥಮ ಮಕ್ಕಳ ಪ್ರವಾಸ ಕಥನವೊಂದು ರಚಿಸಿ ಸಾಹಿತ್ಯ ಲೋಕದಲ್ಲಿ ಸ್ಥಾನ ಪಡೆದಿದ್ದಾಳೆ. ನಲವತ್ತೆರಡು ಜನರಿರುವ ಪ್ರವಾಸಿಗರಲ್ಲಿ ಬಹುತೇಕ ನಿವೃತ್ತ ನೌಕರರು ಜೊತೆಗೆ ಹಿರಿಯ ನಾಗರಿಕರಿರುವ ತಂಡದಲ್ಲಿ ನಮೃತಾಳೆ ಚಿಕ್ಕವಳು. ಮಾರ್ಚ್ ಮೂರರಂದು ವಿಜಯಪುರದಿಂದ ಟೂರಿಸ್ಟ್ ಬಸ್ ಮೂಲಕ ಮೊದಲಿಗೆ ಇಲ್ಲಿಂದ 884 ಕಿ.ಮೀ ದೂರವಿರುವ ಉಜ್ಜೈನಿ ಕಡೆಗೆ ಪ್ರಯಾಣ ಬೆಳೆಸಿದರು. ಮಹಾರಾಷ್ಟ್ರ ರಾಜ್ಯದ ಮೂಲಕ ಹಾದು ಎರಡು ಹಗಲು ಒಂದು ರಾತ್ರಿಯ ಬಳಿಕ ಉಜ್ಜೈನಿ ತಲುಪಿ, ಅಲ್ಲಿನ ಮಹಾಕಾಲೇಶ್ವರ ಜ್ಯೋತಿರ್ಲಿಂಗ ದರ್ಶನ ಇವರ ಮೊದಲ ದರ್ಶನ. ಪಂಚ ನದಿಗಳ ಬೀಡು ಪಂಜಾಬನ ಅಮೃತಸರ, ಜಲಿಯನ್ ವಾಲಾಬಾಗ್, ಭಾರತ ಪಾಕಿಸ್ತಾನ ಬೇರ್ಪಡಿಸುವ ಗಡಿರೇಖೆ, ಜಮ್ಮು ಗಡಿ, ದೇಶದ ಕೊನೆಯ ಹಳ್ಳಿ ಅಟ್ಟಾರಿ, ಜಮ್ಮು ಕಾಶ್ಮೀರ ಇಲ್ಲೆಲ್ಲಾ ಸುತ್ತಾಡಿದಳು.

ವೈಷ್ಣೋದೇವಿ, ತ್ರಿಕೂಟ ಪರ್ವತದ ಮೇಲಿರುವ ಮಹಾಕಾಳಿ, ಮಹಾಸರಸ್ವತಿ, ಮಹಾಲಕ್ಷ್ಮೀ ಶಕ್ತಿ ಪೀಠಗಳು, ಲೇಖಕಿ ಕಾಟಾರಾದ ದಣಿವು ಹಂಚಿಕೊಳ್ಳುತ್ತಿರುವುದು ನಿಜಕ್ಕೂ ಗಾಬರಿಯುಂಟು ಮಾಡುತ್ತದೆ. ವೈಷ್ಣೋದೇವಿ ಜನ್ಮಸ್ಥಳ ಖಂಡೋಲಿ ನಾಗ್ರೋಟ, ಕಾಶ್ಮೀರದ ಶ್ರೀ ನಗರ, ದಾಲ್ ಸರೋವರ, ಸೇರಿ ಅನೇಕ ಐತಿಹಾಸಿ ಪರಂಪರೆಯ ವಿಕ್ಷಿಸಿದ ಅನುಭವ ಕೃತಿಯಲ್ಲಿ ಹಿಡಿದಿಟ್ಟಿದ್ದಾರೆ.

ಬಾಲಕಿ ನಮೃತಾ ಕತ್ತಿ ಮೂಲತಃ ವಿಜಯಪುರ ಜಿಲ್ಲೆಯವಳು. ತನ್ನ ಪ್ರವಾಸ ಸಮಯದಲ್ಲಿ ಜಮ್ಮು ರಾಜ್ಯದಲ್ಲಿರುವ ವಿಜಯಪುರ ನಗರವನ್ನು ನೋಡಿ, ತಮ್ಮ ತವರು ಜಿಲ್ಲೆಯ ಹೆಸರಿನ ಊರು ಇಲ್ಲಿಯೂ ಇದೆಯೆಂದು ತಿಳಿದು ಖುಷಿ ಪಡುವ ಬಗೆ ತನ್ನ ತವರು ಜಿಲ್ಲೆಯ ಐತಿಹಾಸಿಕತೆಯನ್ನು ನೆನೆದು ಲೇಖಕಿ ಪ್ರವಾಸದ ಇಚ್ಛಾಶಕ್ತಿ ಹೆಚ್ಚಿಸಿಕೊಳ್ಳುತ್ತಾಳೆ. ಇನ್ನೂ ಹರಿಯಾಣ ಕುರುಕ್ಷೇತ್ರದಲ್ಲಿ ನಡೆದ ಮಹಾಭಾರತದ ಯುದ್ಧಭೂಮಿಯ ಮಾಹಿತಿ ಸಮಗ್ರವಾಗಿ ವಿಸ್ತರಿಸಿದ್ದಾರೆ. ಮಹಾಭಾರತದಲ್ಲಿ ನಡೆದ ಪ್ರತಿ ಸನ್ನಿವೇಶ ಮತ್ತು ಸಂಘರ್ಷಗಳನ್ನು ಅರ್ಥ ಪೂರ್ಣವಾಗಿ ಚಿತ್ರಿಸಿದ್ದಾರೆ. ಕುರುಕ್ಷೇತ್ರದ ಕುರಿತಾಗಿ ಅನೇಕರಿಗೆ ಕೂತುಹಲವಿದೆ. ಮಹಾಭಾರತಕ್ಕೆ ಸಂಬಂಧಿಸಿದಂತೆ ಸಾಲು ಸಾಲಾಗಿರುವ ದೇವಾಸ್ಥಾನಗಳು ನೋಡಿದಾಗಲ್ಲೆಲ್ಲಾ ಟಿವಿಯಲ್ಲಿ ವಿಕ್ಷೀಸಿದ ಮಹಾಭಾರತದ ಸನ್ನಿವೇಶಗಳು ನೆನಪಿಗೆ ತರುತ್ತಿದ್ದವು ಎಂದು ನೆನಪಿಸಿದ್ದಾರೆ.

ಕು.ನಮೃತಾ ದಿನವಿಡಿ ಸಂಚರಿಸುತ್ತ ವೀಕ್ಷಿಸಿ ಯೋಜನೆಯಂತೆ ಮುಂದಿನ ಸ್ಥಳ ವಿಕ್ಷಣೆಗೆ ಹೋಗುವಾಗಲೂ ಕೂಡಾ ಬಸ್ ಕಟಕಿಯ ಪಕ್ಕದಲ್ಲಿ ಕುಳಿತು ದೊರದಿಂದಲೇ ವಿಕ್ಷೀಸುತ್ತಿರುವುದನ್ನು ಹೇಳಿದ ಲೇಖಕಿಯ ಅನುಭವವು ಆಶಾದಾಯಕವಾಗಿದೆ. ಅಷ್ಟೇ ಅಲ್ಲ ವಿಕ್ಷಿಸಿದ ಪ್ರತಿ ಸ್ಥಳಗಳೆದರಿಗೆ ನಿಂತಿರುವ ಪೋಟೊಗಳು, ಕಲ್ಪನೆಗೂ ಮೀರಿ ಪರಿಚಯ ಮಾಡಿಕೊಳ್ಳುವದು ಬಾಲಲೇಖಕಿಯ ಕ್ರೀಯಾಶೀಲತೆ ಎದ್ದು ಕಾಣುತ್ತದೆ. ಪ್ರವಾಸದ ಸಮಯದಲ್ಲಿ ಬೆಟ್ಟಗುಡ್ಡಗಳು ಹತ್ತಲು ಹತ್ತಾರು ಕಿಮೀ ಕಾಲ್ನಡಿಗೆ ಮೂಲಕ ಚಲಿಸಿರುವುದು ನಿಜಕ್ಕೂ ನಮೃತಾಳಲ್ಲಿ ಪ್ರವಾಸ ದಿನಗಳು ಸಾರ್ಥಕ ಪಡಿಸಿಕೊಂಡಿದ್ದಾಳೆ.

ಕು.ನಮೃತಾ ಕತ್ತಿ ಅವರ ಪ್ರತಿಭೆ, ತರ್ಕಬದ್ಧ ತೀರ್ಮಾನ, ವಿಶ್ಲೇಷಣೆ ಸಾಮಾಥ್ರ್ಯ ಕೃತಿಯಲ್ಲಿ ಸಮೃದ್ಧವಾಗಿ ಮೈತಾಳಿದೆ. ಇಳಿ ವಯಸ್ಸಿನ ಹಿರಿಯ ನಾಗರಿಕರೊಂದಿಗೆ ಹದಿನಾಲ್ಕು ದಿನಗಳ ಪ್ರವಾಸದಲ್ಲಿ ಹನ್ನೊಂದರ ಎಳೆ ವಯಸ್ಸಿನ ನಮೃತಾ ಕತ್ತಿ ಅವರು ಪ್ರಯಾಸದ ಪ್ರವಾಸವಾಗುತ್ತದೆ. ಕೃತಿಯಲ್ಲಿ ನಮೃತಾಳ ಸುವಿಚಾರಗಳಿವೆ. ಈ ಪ್ರವಾಸಕಥನವು, ಬಾಲಕಿಯೊಬ್ಬಳು ಬರೆದ ಮೊದಲ ಕನ್ನಡದ ಪ್ರವಾಸಕಥನ ಎಂಬ ವಿಚಾರದಿಂದ ಗಮನ ಸೆಳೆಯುತ್ತದೆ.

ಪರ್ವತಮಲ್ಲೈ ಚಾರಣ

» ಕಳಸೇಶ್ವರ

ಪರ್ವತಮಲ್ಲೈ ಎಂದಾಕ್ಷಣ ಇದು ದ್ವಿರುಕ್ತಿ ಪದವೊ, ಡಬಲ್ ಪಾಸಿಟೀವೊ ಗೊತ್ತಾಗ್ಲಿಲ್ಲ. ಮತ್ತೆ ತಿಳಿಯಿತು ಇದು ಪರ್ವತಗಳ ರಾಜ. ಪುರಾಣದಲ್ಲಿ ಪಾರ್ವತೀದೇವಿ ಈ ಸ್ಥಳದಲ್ಲಿ ತಪಸ್ಸು ಮಾಡಿದಳೆಂಬ ಪ್ರತೀತಿ ಇರುವುದರಿಂದ ಇದು ಪಾರ್ವತಿಮಲ್ಲೈ ಆಗಿ, ಪರ್ವತೀ ಆಗಿ ಆಡುಭಾಷೆಯ ರೂಪಾಂತರದಿಂದ ಪರ್ವತಮಲ್ಲೈ ಆಗಿರುವ ಸಾಧ್ಯತೆ ಇದೆ.

50ಕ್ಕೂ ಮಿಕ್ಕಿದ ನಮ್ಮ ಯುವಜನ ಚಾರಣ ಸಂಸ್ಥೆಯ ತಂಡ ತಮಿಳುನಾಡಿನ ವೆಲ್ಲೂರು ಕೋಟೆ, ಜಲಕಂಠೇಶ್ವರ ದೇವಸ್ಥಾನ, ಕನಕಲಕ್ಷ್ಮಿ ದೇವಸ್ಥಾನ ದರ್ಶನ ಮುಗಿಸಿ ಮರುದಿನ ಬೆಳಿಗ್ಗೆ ಪರ್ವತ ಮಲ್ಲೈ ಕಡೆಗೆ ನಮ್ಮ ಚಾರಣ ತಂಡ ಸಾಗಿತು. ಬೆಳಗಿನ ತಣ್ಣಗಿನ ವಾತಾವರಣ ದಾರಿಯುದ್ದಕ್ಕೂ ಹಸಿರಿನ ದೃಶ್ಯ, ಆಗ ತಾನೇ ಉದಯಿಸುತ್ತಿದ್ದ ಸೂರ್ಯನ ನೋಟ ಮನಕ್ಕೆ ಮುದ ನೀಡುವಂತಿತ್ತು.

ರಾಮಾಯಣದ ಯುದ್ಧ ಕಾಲದಲ್ಲಿ ಲಕ್ಷ್ಮಣ ಮೂರ್ಛೆ ಹೋದಾಗ, ಆಂಜನೇಯ ಸಂಜೀವಿನಿಯನ್ನು ತರುವ ಉದ್ದೇಶದಿಂದ ಇಡೀ ಪರ್ವತವನ್ನೇ ಹೊತ್ತು ತರುವಾಗ ಅದರ ಒಂದು ಭಾಗವು ಬಿದ್ದು ನಿರ್ಮಿತವಾದುದೇ ಈ ಪರ್ವತ ಮಲ್ಲೈ ಎಂಬ ನಂಬಿಕೆ. ಸಂಜೀವಿನಿ ಪರ್ವತದ ಒಂದು ಭಾಗವೆಂದೇ ನಂಬಿರುವ ಈ ಪರ್ವತದಲ್ಲಿ ನೂರಕ್ಕೂ ಹೆಚ್ಚು ಔಷಧೀಯ ಸಸ್ಯಗಳಿದ್ದು, ಮೂಲನಿವಾಸಿಗಳು ಅದನ್ನು ಕಾಪಾಡುತ್ತಿದ್ದಾರೆ ಮತ್ತು ಇದಕ್ಕೆ ಸ್ಥಳೀಯ ಅರಣ್ಯ ಇಲಾಖೆಯ ಸಹಯೋಗವಿದೆ.

ತಮಿಳುನಾಡಿನ ತಿರುವಣ್ಣಾಮಲ್ಲೈ ಜಿಲ್ಲೆಯ ಪೋಲೂರು ಗ್ರಾಮದಿಂದ ಮುಂದೆ ಸಾಗುವಾಗ ಬೆಟ್ಟದ ತಪ್ಪಲಿನ ಗ್ರಾಮ



ತೆನ್ಮತಿಮಂಗಲಂ ಗ್ರಾಮದಿಂದ ಪ್ರಾರಂಭವಾಗುತ್ತದೆ ನಮ್ಮ ಚಾರಣ. ಇಲ್ಲಿಂದ ವಾಹನಗಳ ಪಾರ್ಕಿಂಗ್ ವ್ಯವಸ್ಥೆ ಇದೆ. ಕೆಲ ಮೂಲ ಸೌಕರ್ಯಗಳು ಲಭ್ಯ. ಚಾರಣ ಆರಂಭ ಸ್ಥಳದಲ್ಲೇ ಅರಣ್ಯ ಇಲಾಖೆ ಚೆಕ್ ಪೋಸ್ಟ್‌ನಲ್ಲಿ ಪ್ಲಾಸ್ಟಿಕ್ ತೆಗೆದುಕೊಂಡು ಹೋಗುವುದನ್ನು ನಿಷೇಧಿಸುತ್ತಾರೆ. ಆದರೂ ಮುಂದೆ ಸಾಗಿದಂತೆ ಬಿಸಾಡಿದ ಪ್ಲಾಸ್ಟಿಕ್ ರಾಶಿ ಅಲ್ಲಲ್ಲಿ ಕಣ್ಣಿಗೆ ರಾಚುವಂತಿರುತ್ತದೆ. ಸಾಲದ್ದಕ್ಕೆ ಬಂಡೆಗಳ ಮೇಲೆಲ್ಲ ಚಿತ್ರ ವಿಚಿತ್ರ ಬರಹಗಳ ರಾಶಿ. ಯಾರೇ ಎಷ್ಟೇ ತಪಾಸಣೆ ಮಾಡಿ ನಿರ್ಬಂಧ ಹೇರಿದರೂ ನಮ್ಮ ಜನಗಳ ಮನ ಪರಿವರ್ತನೆಯಾಗದೇ ಪರಿಸರ ಕಾಪಾಡುವುದು ಹೇಗೆಂಬುದು ಯಕ್ಷಪ್ರಶ್ನೆಯೇ.

ಬೆಟ್ಟದ ತಪ್ಪಲಿನ ಗ್ರಾಮದಿಂದ ನಮ್ಮ ಚಾರಣ ಆರಂಭವಾಗುವಾಗ ಬೆಳಗಿನ ಒಂಭತ್ತು ಗಂಟೆ. ಸುಮಾರು 4,500 ಅಡಿ ಎತ್ತರದ ಬೆಟ್ಟ; ಸುಮಾರು 14 ಕಿ.ಮೀ.ಚಾರಣ. ಒಂದೂವರೆ ಕಿಲೋಮೀಟರ್ ಕಚ್ಚಾರಸ್ತೆಯಲ್ಲಿ ನಡೆದ ನಂತರ ಮೆಟ್ಟಿಲುಗಳು ಆರಂಭ. ಸುಮಾರು 1,300 ನೀಟಾದ ಮೆಟ್ಟಿಲುಗಳನ್ನು ಹತ್ತುವಾಗ ಇಷ್ಟು ಸುಲಭವೇ ಚಾರಣ ಎಂಬ ಅನಿಸಿಕೆ ಮನದಲ್ಲಿ. ಆದರೆ ಮೆಟ್ಟಿಲುಗಳು ಮುಗಿದ ನಂತರ ಬೆಟ್ಟದ ಅಂಚಿನಲ್ಲಿ ಸಾಗುವ ಒರಟು ಹಾದಿ. ಕಲ್ಲು ಬಂಡೆಗಳೇ ಮೆಟ್ಟಿಲುಗಳು. ನಡುನಡುವೆ ಸಣ್ಣ ಅಂಗಡಿಗಳು, ಜಾಸ್ತಿ ಆಯ್ಕೆಗಳಿಲ್ಲ. ನೀರಿನ ಬಾಟಲ್, ಕುರುಕಲು ತಿಂಡಿ, ಮಜ್ಜಿಗೆ. ನಾವು ಬೆಟ್ಟದ ಮೇಲೇರುತ್ತಿದ್ದಂತೆ ಇಂತಹ ವಸ್ತುಗಳೋ ಬೆಲೆಯೂ ಏರುತ್ತದೆ. ಜತೆಗೆ, ಕೋತಿಗಳ ಕಾಟ!

ಕಬ್ಬಿಣದ ಮೆಟ್ಟಿಲುಗಳು: ಮುಂದೆ ಮುಂದೆ ಸಾಗುತ್ತಿದ್ದಂತೆ ತೀವ್ರ ಏರುಗತಿ, ಕೆಲವೆಡೆ ಬಂಡೆಗಳ ಮೇಲೆ ಹತ್ತಿ ಸಾಗುವ ಹಾದಿ. ಕಬ್ಬಿಣದ ಮೆಟ್ಟಿಲುಗಳ ಮೇಲೆ ಸರ್ಕಸ್ ಮಾಡುತ್ತ ಸಾಗಬೇಕು, ಜಾರಿದರೂ ಕೈಗೇನೂ ಸಿಗುವುದಿಲ್ಲ ಹಿಡಿದುಕೊಳ್ಳಲು. ಇನ್ನೂ ಕೆಲವು ಕಡೆ ಬಂಡೆಯನ್ನು ಕೊರೆದು ಅದರಲ್ಲಿ ಕಬ್ಬಿಣದ ಸರಳುಗಳನ್ನು ಹಾಕಿ ಗಟ್ಟಿಪಡಿಸಿರುತ್ತಾರೆ. ಅದೂ ಕೂಡ ಕೆಲವೆಡೆ ಸುಸ್ಥಿತಿಯಲ್ಲಿರುವುದಿಲ್ಲ. ಅದಕ್ಕೆ ಜೋಡಿಸಿದ ಕಬ್ಬಿಣದ ಸರಪಳಿ ಮತ್ತು ಸೈಕಲ್ ಚೈನ್‌ಗಳು ಕೈಗೆ ಸ್ವಲ್ಪ ಬಲ ನೀಡುತ್ತವೆ.

ಇಷ್ಟೆಲ್ಲ ಕಷ್ಟಗಳನ್ನು ಮೀರಿ ಮೇಲೆ ಗಮ್ಯ ಸ್ಥಾನವನ್ನ ತಲುಪಿದಾಗ ಧನ್ಯತಾಭಾವ. ಮೇಲಿರುವ ಗುಡಿಗಳಲ್ಲಿ ಎಲ್ಲಾ ಕಡೆ ಶಿವಲಿಂಗಗಳು. ಗುಡಿಗಳಿಗೆ ಯಾವುದೇ ಬಾಗಿಲುಗಳಿಲ್ಲ, ಯಾರೇ ಅರ್ಚಕರಿರುವುದಿಲ್ಲ. ಭಕ್ತರು ತಮ್ಮ ಮನ ತೋಚಿದಂತೆ ವಿಭೂತಿ ಎಳೆದು, ಪೂಜೆ ಮಾಡಿ, ಅದೇ ವಿಭೂತಿಯನ್ನು ಪ್ರಸಾದವೆಂದು ತಿಳಿದು ತೆಗೆದುಕೊಂಡು ಹೋಗುತ್ತಾರೆ. ಬೆಳಿಗ್ಗೆ ಬೇಗನೇ ಚಾರಣ ಪ್ರಾರಂಭಿಸಿದರೆ ತೀವ್ರ ಬಿಸಿಲೇರುವ ಮುಂಚೆ ಪರ್ವತ ತುದಿ ತಲುಪಬಹುದು. ಇಲ್ಲಿ ಚಾರಣಿಗರಿಗಿಂತ ಭಕ್ತರೇ ಜಾಸ್ತಿ ಬರುತ್ತಾರೆ. ಕೆಲವರಂತೂ ನಾವು ಸಂಜೆ ಇಳಿಯುವ ಸಮಯದಲ್ಲಿ ಮೇಲೇರುತ್ತಿದ್ದರು. ಈಶ್ವರ ಹಿಮಾಲಯದಿಂದ ದಕ್ಷಿಣಕ್ಕಿಟ್ಟ ಮೊದಲ ಹೆಜ್ಜೆಯೇ ಈ ಪರ್ವತಮಲ್ಲೈ ಎಂಬ ನಂಬಿಕೆ. ಪಾರ್ವತಿ ಶಿವನನ್ನು ಕುರಿತು ತಪಸ್ಸು ಮಾಡಿದ ಸ್ಥಳ. ಬೆಟ್ಟ ಏರಲು ಒಟ್ಟು 3 ಗಂಟೆಯ ಸಮಯ ಬೇಕು; ಅಷ್ಟೆತ್ತರದ



ಈ ಬೆಟ್ಟವನ್ನೇರಲು ಮೂರು ಗಂಟೆಯ ಸಮಯ ಬೇಕು; ಇಲ್ಲಿ ಚಾರಣಿಗರಿಗಿಂತ ಹೆಚ್ಚು ಭಕ್ತರೇ ಬೆಟ್ಟ ಹತ್ತುತ್ತಿರುತ್ತಾರೆ!

ಪರ್ವತ ತುದಿಗೆ ಅಷ್ಟೆಲ್ಲ ಸಾಮಗ್ರಿಗಳನ್ನ ಹೊತ್ತುಕೊಂಡು ಹೋಗಿ ಅಲ್ಲಿ ಕಟ್ಟಡ ರಚನೆ ಮಾಡಿರುವುದೇ ವಿಶೇಷ ಸಂಗತಿ.

ಎಲ್ಲಾ ಚಾರಣಿಗರು ಹೊರಟ ಜಾಗಕ್ಕೆ ವಾಪಸಾಗುವಾಗ ಸಂಜೆಯ ಆರು ಗಂಟೆ ಸಮೀಪಿಸುತ್ತಿತ್ತು. ಮುಂದೆ ತಿರುವಣ್ಣಾಮಲ್ಲೈನ ಅರುಣಾಚಲೇಶ್ವರ ದರ್ಶನ ಪಡೆದು ಊಟ ಮುಗಿಸಿ, ಊರಿಗೆ ವಾಪಸು ಹೊರಡುವಾಗ ರಾತ್ರಿಯಾಗಿತ್ತು.

ಕೋಟಿ ಜನರ ಮಹಾಸಂಗಮ!

◀◀ ಮೊದಲ ಪುಟದಿಂದ

ನಾವು ಒಯ್ದಿದ್ದ ಹಾಲನ್ನು ದೇವರ ನೆತ್ತಿಗೆ ಬೀಳುವಂತೆ ಅಳವಡಿಸಿದ್ದ ಕೊಳವೆಯೊಂದರ ಮೂಲಕ ಹಾಯಿಸಿ ಅಭಿಷೇಕ ಮಾಡಿದೆವು! ನಂತರ ವಿಶಾಲಾಕ್ಷಿ, ಅನ್ನಪೂರ್ಣೇಶ್ವರಿ ಮಂದಿರಗಳನ್ನು ಸಂದರ್ಶಿಸಿದೆವು. ಪಕ್ಕದಲ್ಲೇ ಇರುವ ಅನ್ನಪೂರ್ಣ ಪ್ರಸಾದ ಮಂದಿರದಲ್ಲಿ ಸೊಗಸಾದ ಇಡ್ಲಿ, ವಡೆ, ಚಟ್ನಿ, ಸಾಂಬಾರುಗಳನ್ನು ಹೊಟ್ಟೆ ತುಂಬಾ ಸೇವಿಸಿದೆವು. ಮಧ್ಯಾಹ್ನ ಅಲ್ಲಿ ಊಟಪ್ರಸಾದ ವ್ಯವಸ್ಥೆಯೂ ಇತ್ತು. ಅದೊಂದು ವಿಶಿಷ್ಟ ಅನುಭವ!

ಆ ನಂತರ ಘಾಟ್‌ಗಳಿಗೆ ಭೇಟಿ ಮಾಡಿ, ದೋಣಿ ವಿಹಾರ, ಗಂಗಾಸ್ನಾನ, ಗಂಗಾರತಿ ನೋಡುವುದು ನಮ್ಮ ಉದ್ದೇಶವಾಗಿತ್ತು. ಅಷ್ಟರಲ್ಲಿ ನಮ್ಮ ಶ್ರೀಮತಿ ರುಕ್ಮಿಣಿ, ತಮ್ಮ ಬಾಲ್ಯದ ಗೆಳತಿಯೊಬ್ಬರು ಕಾಶಿಯಲ್ಲಿ ನೆಲೆಸಿದ್ದವರಿಗೆ, ಕರೆ ಮಾಡಿದರು. ಅವರ ಮನೆ ಹರಿಶ್ಚಂದ್ರ ಘಾಟ್ ಪಕ್ಕದಲ್ಲೇ ಇತ್ತು. ಆ ದಾರಿಯಲ್ಲಿ ಕನ್ನಡದಲ್ಲಿಯೇ ನಾಮಫಲಕ ಹಾಕಿದ್ದ ಜಂಗಮವಾಡಿ ಮಠವನ್ನು ಕಂಡೆವು. ನಾವು ಹೋಗಿದ್ದ ಮನೆ ಸುಮಾರು 250 ವರ್ಷ ಹಳೆಯದು. ಮೈಸೂರಿನಿಂದ ಅಲ್ಲಿಗೆ ಹೋಗಿ ನೆಲೆಸಿದ್ದ ಆ ಕುಟುಂಬದ ಐದನೆಯ ತಲೆಮಾರು ಅಲ್ಲಿ ವಾಸಿಸಿದ್ದರು. ವಿಶ್ವನಾಥನ ಪೂಜಾರಿಗಳಲ್ಲಿ ಒಬ್ಬರು. ಅವರ ಮನೆಗೆ ಎಂ.ವಿ. ಸೀತಾರಾಮಯ್ಯನವರು ಮಗಳು ಸುನಂದಾಳನ್ನು ಕೊಟ್ಟಿದ್ದಾರೆ. ಈಗ ಅವರಿಲ್ಲ, ಇಲ್ಲ, ಅವರ ಮಕ್ಕಳು ಇದ್ದಾರೆ. 'ತಾಯಿಗೆ ತಕ್ಕ ಮಗ' ಸಿನಿಮಾ ಶೂಟಿಂಗ್ ಸಮಯದಲ್ಲಿ ರಾಜಕುಮಾರ್ ಅವರ ಮನೆಯಲ್ಲಿ ಉಳಿದಿದ್ದರಂತೆ. ಈಗಲೂ ಕನ್ನಡದ ಸಾಹಿತಿಗಳು, ಕಲಾವಿದರು ಭೇಟಿ ಮಾಡುತ್ತಾರೆ ಎಂದರು ಪ್ರಸನ್ನಕುಮಾರ್ ಶರ್ಮ. ಅವರ ಮನೆಯ ಹಿಂಭಾಗವೇ ಹರಿಯುತ್ತಿದ್ದ ಗಂಗಾ ನದಿಯಲ್ಲಿನ ಘಾಟ್‌ಗಳನ್ನು ನೋಡಿದೆವು. ಗಂಗಾ ಆರತಿಗೆ ಇನ್ನೂ ಸಮಯವಿತ್ತು. ಅದಕ್ಕೆ ಕಾದು ಕುಳಿತರೆ, ಆ ರಾತ್ರಿ ಬುಕ್ ಮಾಡಿದ್ದ ಬಸ್ ತಪ್ಪಿ ಹೋಗುವುದೆಂಬ ಭೀತಿಯಿಂದ ಬೇಗನೆ ಮರಳಿದೆವು. ಸೈಕಲ್ ರಿಕ್ಷಾದವ ಒಬ್ಬ ನಾವು ಉಳಿದುಕೊಂಡಿದ್ದ ಹೋಟಲ್‌ನವರೆಗೂ ಬರುವುದಾಗಿ ಒಪ್ಪಿಕೊಂಡ. ನಮ್ಮ ಅಜಾಗರೂಕತೆಯಿಂದ ಹೋಟಲಿನ ವಿಳಾಸವಾಗಲಿ, ಮೊಬೈಲ್ ಸಂಖ್ಯೆಯಾಗಲಿ ಪಡೆದುಕೊಂಡಿರಲಿಲ್ಲ, ಕಾಲಭೈರವೇಶ್ವರ ದೇವಸ್ಥಾನದ ಸಮೀಪ ಎಂದು ಗೊತ್ತಿತ್ತು. ರಿಕ್ಷಾ ಹೊರಟಿತು; ಎಲ್ಲೆಲ್ಲೂ ಜನ; ಅವರ ನಡುವೆ ಸ್ಥಳ ಮಾಡಿಕೊಂಡು, ಆತ ಸೈಕಲ್ ತುಳಿದಂತೆ ಆ ರಿಕ್ಷಾ ತುಳಿಯಬೇಕು! ರಿಕ್ಷಾದವನಿಗೆ ನೆರವಾಗಲು ಗಜೇಂದ್ರ ಮತ್ತು ಅವರ ಸಹೋದರ ಶ್ರೀರಾಮ ತಾವೂ ಇಳಿದು ರಿಕ್ಷಾ ತಳ್ಳುತ್ತಿದ್ದರು. ಮುಂದೆ ಕುಳಿತಿದ್ದ ನಾನು 'ಬಾಜು ಬಾಜು' ಎಂದು ಕೂಗುತ್ತಿದ್ದೆ. ನನ್ನ ಶ್ರೀಮತಿ ದೇವರ ಸ್ಮರಣೆ ಮಾಡುತ್ತಿದ್ದರು. ವಾರಣಾಸಿಯಲ್ಲಿ ವಾಹನಗಳ ಓಡಾಟದ ಶೈಲಿ ನನಗೆ ಬಹಳ ಅಚ್ಚರಿಯ ವಿಷಯ ಎನಿಸಿತು. ತೀರಾ ಸನಿಹದಲ್ಲೇ ಹಾದು ಹೋಗುವ ವಿವಿಧ ರೀತಿಯ ವಾಹನಗಳು, ಜನರು! ಇನ್ನೇನು ಆ್ಯಕ್ಸಿಡೆಂಟ್ ಆಗಿಯೇಬಿಡುತ್ತದೆ ಎನಿಸುವ ಸನ್ನಿವೇಶ! ಆದರೆ ಯಾವುದೇ ಅಸಹನೆ, ಬೇಸರ, ಬೈಗುಳಗಳ ಸುಳಿವಿಲ್ಲದೆ ಪರಸ್ಪರ ನಿಂತು, ವಾಹನ ತಿರುಗಿಸಿಕೊಂಡು ಮುನ್ನಡೆಯುವ ಅಲ್ಲಿನ ಜನರು, ವಾಹನ ಚಾಲಕರು ನನಗೊಂದು ಬೆರಗನ್ನೇ ತಂದರು! ರಿಕ್ಷಾದವನು ನಮ್ಮನ್ನು ಗಮ್ಯಕ್ಕೆ ತಲುಪಿಸಿದ. ನಾವು ಬಂದಿದ್ದ ಟ್ರಾವೆಲ್ ಪಾಯಿಂಟ್ ಹೆಸರಿನ ಸ್ಲೀಪರ್ ಬಸ್ಸಿನಲ್ಲೇ ಮರುಪಯಣ. ಇದರಲ್ಲಿ ವಿಶೇಷವಾಗಿ ಬಸ್ ಒಳಗೇ ಮೂತ್ರಾಲಯದ ವ್ಯವಸ್ಥೆಯನ್ನು ಕಲ್ಪಿಸಿದ್ದರು. ಸುಮಾರು 40 ಗಂಟೆಗಳ ಪ್ರಯಾಣದ ನಂತರ, ಚಿಕ್ಕಬಳ್ಳಾಪುರ ತಲುಪಿದೆವು. ಅಲ್ಲಿಂದ ಸಾರಿಗೆ ಬಸ್‌ನಲ್ಲಿ ಮನೆ ತಲುಪುವಾಗ ರಾತ್ರಿ 11 ಆಗಿತ್ತು! ಅಂತೂ ಅಭೂತಪೂರ್ವ ಎನಿಸಿರುವ ಮಹಾ ಕುಂಭಮೇಳದಲ್ಲಿ ನಾವೂ ಭಾಗವಹಿಸಿ ಧನ್ಯರಾದೆವು ಎಂಬ ಭಾವ ಎದೆಯನ್ನು ತುಂಬಿತ್ತು!

ನಮ್ಮಿಬ್ಬರ ನಡುವೆ ಕೆಲಸದವಳು ಬಂದರೆ ಏನು ಮಾಡಬೇಕು?

ನಿರಂಜನ ಕೌಶಿಕ, ಮೈಸೂರು

● **ಭಟ್ರೇ, ನನ್ನ ಹೆಂಡತಿಗೆ ಮನೆಗೆಲಸಕ್ಕೆ ಸಹಾಯವಾಗಲಿ ಎಂದು ನಮ್ಮ ಊರಿನಿಂದ ಒಬ್ಬಳನ್ನು ನೇಮಿಸಿಕೊಂಡೆ. ಅವಳು ಯಾವ ಘಳಿಗೆಯಲ್ಲಿ ಕಾಲಿಟ್ಟಳೋ ಏನೋ, ನಮ್ಮಿಬ್ಬರ ಮಧ್ಯೆ ಆಗಾಗ ಜಗಳವಾಗುತ್ತಿದೆ. ನನ್ನ ಪತ್ನಿಗೆ ಏನೋ ಸಂದೇಹ. ಮನೆಗೆಲಸದವಳ ಜತೆ ನಾನು ಸಂಬಂಧ ಇಟ್ಟುಕೊಂಡಿರಬಹುದಾ ಎಂದು ಸಂಶಯ ಪಿಶಾಚಿ ಅವಳ ತಲೆಯೊಳಗೆ ಹೊಕ್ಕಿದೆ. ಮನೆಗೆಲಸದವಳನ್ನು ಕೆಟ್ಟದಾಗಿ ನಡೆಸಿಕೊಳ್ಳುತ್ತಾಳೆ. ಅವಳು ಕೆಲಸ ಬಿಟ್ಟು ಹೋದರೆ, ನನ್ನ ಪತ್ನಿಗೆ ತೊಂದರೆಯಾಗಬಹುದು ಎಂದು ನಾನು ಕೆಲಸದವಳನ್ನು ಸಂತೈಸಿದರೆ, 'ನಾನು ಅವಳನ್ನು ಬಿಟ್ಟು ಇರಬಲ್ಲೆ, ಆದರೆ ನೀವು ಅವಳನ್ನು ಬಿಟ್ಟು ಇರಲಾರಿರಿ' ಎಂದು ಜರೆಯುತ್ತಾಳೆ. ನನಗೂ, ಕೆಲಸದಾಕೆಗೂ ಯಾವ ಸಂಬಂಧವೂ ಇಲ್ಲ ಎಂಬುದನ್ನು ಎಲ್ಲಿ ಬೇಕಾದರೂ ಪ್ರಮಾಣ ಮಾಡಿ ಹೇಳಬಲ್ಲೆ. ನನ್ನ ಹೆಂಡತಿಯನ್ನು ಹೇಗೆ ಸಮಾಧಾನಪಡಿಸಬೇಕು? ದಯವಿಟ್ಟು ಮಾರ್ಗದರ್ಶನ ನೀಡಿ.**

- ನಿರಂಜನ ಅವರೇ, ಮನೆಗೆಲಸದವಳನ್ನು ಸಹಿಸಿಕೊಳ್ಳುವ ಹೆಂಡತಿಯರು ಹುಟ್ಟಿಲ್ಲ. ಒಂದು ವೇಳೆ ಹುಟ್ಟಿದರೂ ಅವರು ಭೂಮಿಯ ಮೇಲೆ ಇಲ್ಲ. ಮನೆಗೆಲಸದವಳು ಬಂದರೆ, ಹೆಚ್ಚಿನ ಕೆಲಸದ ಹೊರೆ ಬೀಳುವುದು ಮನೆಯಾಕೆಗೆ. ಅವಳು ಮನೆಗೆಲಸದವಳ ಮೇಲೂ ಕಣ್ಣಿಡಬೇಕು, ಗಂಡನ ಮೇಲೂ ಕಣ್ಣಿಡಬೇಕು. ಇಬ್ಬರ ಮಧ್ಯೆ ಏನೋ ಸಂಬಂಧ ಏರ್ಪಡಬಹುದಾ ಎಂಬ ಸಂದೇಹ ಅವಳ ಮನಸ್ಸಿನಲ್ಲಿ ಸದಾ ಹೊಗೆಯಾಡುತ್ತಲೇ ಇರುತ್ತದೆ. ಮನೆಗೆಲಸದವಳು ಸಿಗದಿದ್ದರೆ, ಅವಳು ಸಿಕ್ಕಿಲ್ಲ ಎಂಬುದಷ್ಟೇ ಚಿಂತೆ. ಸಿಕ್ಕರೆ ಹಲವು ಸಮಸ್ಯೆಗಳು ಹುಟ್ಟಿಕೊಳ್ಳಲಾರಂಭಿಸುತ್ತವೆ. ಅದರಲ್ಲೂ ನೀವು ಅಪ್ಪಿತಪ್ಪಿ ಮನೆಗೆಲಸದವಳ ಪರ ಮಾತಾಡಿಬಿಟ್ಟರೆ ಮುಗೀತ್.

ಸಾಮಾನ್ಯವಾಗಿ ಎಲ್ಲ ಗಂಡಸರೂ ಅದೇ ತಪ್ಪನ್ನು ಮಾಡುತ್ತಾರೆ. ಮನೆಗೆಲಸದವಳು ಬಿಟ್ಟು ಹೋಗದಿರಲಿ ಮತ್ತು ಹೆಂಡತಿಗೆ ಸಹಾಯವಾಗಲಿ ಎಂಬ ಕಾರಣಕ್ಕೆ, ಮನೆಯಾಕೆಯ ಮುಂದೆ ಮನೆಗೆಲಸದವಳ ಬಗ್ಗೆ ಅನುಕಂಪ ತೋರುತ್ತಾರೆ ಅಥವಾ ಹೊಗಳುತ್ತಾರೆ. ಗಂಡಸರು ಮಾಡುವ ದೊಡ್ಡ ತಪ್ಪೇ ಅದು. ಒಮ್ಮೆ ಮನೆಗೆಲಸದವಳನ್ನು ಹೊಗಳಿದರೆ ಅಥವಾ ಅವಳನ್ನು ವಹಿಸಿಕೊಂಡು ಮಾತಾಡಿದರೆ, ಸಂಶಯ ಪಿಶಾಚಿ ಒಳ ಹೊಕ್ಕಿತು ಎಂದೇ ಅರ್ಥ. ಅದನ್ನು ಇನ್ನೆಂದೂ ಓಡಿಸಲಾಗುವುದಿಲ್ಲ. ಮನೆಗೆಲಸದವಳನ್ನು ಓಡಿಸಿದ ನಂತರವೇ ಸಂಶಯ ಪಿಶಾಚಿಯೂ ನಿರ್ಗಮಿಸಬಹುದು. ಅಲ್ಲಿ ತನಕ ದುಸಮುಸ ಸಾಮಾನ್ಯ.

ನಿರಂಜನ ಅವರೇ, ನೀವೂ ಅಂಥದೇ ಪ್ರಮಾದವನ್ನು ಮಾಡಿರಬೇಕು. ಎಲ್ಲ ಪತ್ನಿಯರೂ ಮನೆಗೆಲಸದವಳನ್ನು 'ಮನೆಗೆಲಸದವಳು' ಎಂದು ಭಾವಿಸುವುದಿಲ್ಲ. ತಮ್ಮ ಸವತಿ ಎಂದೇ ಭಾವಿಸುತ್ತಾರೆ. ಇದು ಪತ್ನಿಯರ ಮೆಂಟಾಲಿಟಿ. ಇದಿಲ್ಲದಿದ್ದರೆ ಅವರು ಪತ್ನಿಯರಾಗುವುದಿಲ್ಲ. ಅದಕ್ಕೆ ಅಪವಾದ ಇದ್ದಿರಬಹುದು ಮತ್ತು ಅವರ ಸಂಖ್ಯೆ ಬಹಳ ಕಮ್ಮಿಯಿದ್ದೀತು. ಮನೆಗೆಲಸದವಳು ಮಾಡಿದ ಕೆಲಸವನ್ನು ಮನೆಯಾಕೆ ಹೊಗಳಬಹುದು. ಆದರೆ ಗಂಡನಾದವನು ಹೊಗಳಲೇಬಾರದು. ಅಪ್ಪಿತಪ್ಪಿ ಹೊಗಳಿದರೆ ಕೆಲಸ ಕೆಟ್ಟಿತು ಅಂತಾನೆ ಅರ್ಥ. ಇಷ್ಟೂ ಸಾಲದೆಂಬಂತೆ, ನೀವೇನಾದರೂ ಮನೆಗೆಲಸದವಳನ್ನು ವಾರೆಗಣ್ಣಿನಿಂದ ನೋಡಿದ್ದನ್ನು ಹೆಂಡತಿ ನೋಡಿ, ನೀವು ರೆಡ್ ಹ್ಯಾಂಡೆಡ್ ಆಗಿ ಸಿಕ್ಕಿ ಬಿದ್ದರೆ, ನೀವು ಈ ಜನ್ಮದಲ್ಲಿ ಆ 'ಪಾಪ'ದಿಂದ ಮುಕ್ತರಾಗಲು ಸಾಧ್ಯವಿಲ್ಲ!

ನಿಮಗೆ ಮಾನಸಿಕ ನೆಮ್ಮದಿ ಬೇಕು ಅಂದ್ರೆ ಮನೆಗೆಲಸದವಳನ್ನು ಮನೆಗೆ ಕಳಿಸಿ, ಆ 'ಪಾತ್ರ'ವನ್ನು ನೀವೇ ಅಭಿನಯಿಸುವುದು ಒಳ್ಳೆಯದು. ಅಷ್ಟಕ್ಕೂ ನಿಮ್ಮ ಮನೆಗೆಲಸ ಮಾಡುವುದು ಒಂದು ತಾಸಿನ ಕೆಲಸ. ಆದರೆ ಮಾನಸಿಕ ನೆಮ್ಮದಿ ಇಡೀ ದಿನ ಮತ್ತು ಇಡೀ ಜೀವನ ಇರುವಂಥದ್ದು. ಯಾವುದು ಬೇಕು ಎಂಬುದನ್ನು ನಿರ್ಧರಿಸಿ.

Ask the Editor

● ವಿಶ್ವೇಶ್ವರ ಭಟ್

ಸತಾಯಿಸುವ ಪ್ರಶ್ನೆಗಳಿಗೆ ಸಂತೈಸುವ ಉತ್ತರ

ಯಾವುದೇ ವಿಷಯದ ಬಗ್ಗೆ ಏನು ಪ್ರಶ್ನೆಯನ್ನಾದರೂ ಕೇಳಿ

asktheeditorvv@gmail.com

ಕೆ. ಚಂದ್ರಹಾಸ ಭಟ್, ರಾಮಕುಂಜ

● **ನೀವು ನಿಮ್ಮ ಲೇಖನ/ಅಂಕಣಗಳಲ್ಲಿ ಆಗಾಗ 'ಯೋಗಿ ದುರ್ಲಭಜೀ' ಅವರನ್ನು ಪ್ರಸ್ತಾಪಿಸುತ್ತೀರಿ. ನಿಮ್ಮ ಬರಹಗಳಲ್ಲಿ ಬಿಟ್ಟರೆ ನಾನು ಅವರ ಹೆಸರನ್ನು ಕೇಳಿಲ್ಲ, ನೋಡಿಲ್ಲ, ಓದಿಲ್ಲ. ಬೇರೆ ಯಾರೂ ಅವರ ಬಗ್ಗೆ ಪ್ರಸ್ತಾಪಿಸಿದ್ದು ನನ್ನ ಗಮನಕ್ಕೆ ಬಂದಿಲ್ಲ. ಈ ಯೋಗಿ ದುರ್ಲಭಜೀ ಯಾರು? ಅವರು ಎಲ್ಲಿ ಇರುತ್ತಾರೆ? ಅವರ ಬಗ್ಗೆ ತಿಳಿಯುವ ಕುತೂಹಲ. ಪ್ಲೀಸ್ ತಿಳಿಸಿ.**

- ಚಂದ್ರಹಾಸ ಭಟ್ ಅವರೇ, 'ಯೋಗಿ ದುರ್ಲಭಜೀ' ಅವರು ಇರುವುದು ಸುಳ್ಳಾಗಿದ್ದರೆ, ನಾನು ನಿಮ್ಮ ಪ್ರಶ್ನೆಗೆ ಉತ್ತರಿಸದೇ, ನಿಮ್ಮ ಈ ಇಮೇಲ್‌ನ್ನು ಡಿಲೀಟ್ ಮಾಡಿಬಿಡುತ್ತಿದ್ದೆ. ಅಷ್ಟರಮಟ್ಟಿಗೆ ಅವರ ಇರುವಿಕೆಯನ್ನು ಒಪ್ಪಿಕೊಳ್ಳುತ್ತೀರಿ ಎಂದು ಭಾವಿಸಿದ್ದೇನೆ. ಇರಲಿ. ನಾನು ಯೋಗಿಜೀ ಬದುಕಿನ ಬಗ್ಗೆ ಒಂದೆರಡು ಬಾರಿ ಪ್ರಸ್ತಾಪಿಸಿ ದ್ದುಂಟು. ಅದನ್ನು ನೀವು ಓದದೇ ಹೋಗಿರಬಹುದು. ಯೋಗಿಜೀ ನನಗೂ ಅರ್ಥವಾಗದ ಒಂದು ನಿಗೂಢ ವ್ಯಕ್ತಿತ್ವ. ಅವರು ಹೀಗೇ ಎಂದು ನಿರ್ಧರಿಸಲು ನನಗೂ ಸಾಧ್ಯವಾಗಿಲ್ಲ. ಅವರು ಒಂದು ವರ್ಷದ ಹಿಂದೆ ಹೇಳಿದ ಮಾತುಗಳನ್ನು ನಾನು ಪ್ರಸ್ತಾಪಿಸಿದರೆ, ಅವೆಲ್ಲ ಅಪ್ರಸ್ತುತ ವಿಚಾರ ಅಂತಾರೆ.

'ಯೋಗಿಜೀ ನೀವೇ ಹೇಳಿದ ಮಾತುಗಳಿವು' ಎಂದು ನಾನು ನೆನಪಿಸಿದರೆ, 'ಒಂದು ವರ್ಷದಲ್ಲಿ ಏನೆಲ್ಲಾ ಬದಲಾವಣೆಗಳಾಗಿವೆ ಗೊತ್ತಾ? ನಮ್ಮ ವಿಚಾರಗಳನ್ನು ನಾವು ಮೀರುವುದೇ ಬದಲಾವಣೆ' ಅಂತಾರೆ. 'ನಮ್ಮ ಅಭಿಪ್ರಾಯಗಳಿಗೆ ಯಾವತ್ತೂ ಜೋತು ಬೀಳಬಾರದು' ಅಂತಾರೆ. 'ನಮಗೆ ನಾವೇ ಪ್ರಶ್ನಾರ್ಥಕವಾಗಿ ಬದುಕಬೇಕು' ಎಂದು ಪ್ರತಿಪಾದಿಸುತ್ತಾರೆ. ನನಗೆ ಯೋಗಿಜೀ ಇಷ್ಟವಾಗುವುದೇ ಅವರ unpredictable ನಿಲುವುಗಳಿಗಾಗಿ.

ಈ ತನಕ ನಾನು ಅವರ ಖಾಸಗಿ ಬದುಕಿನ ಬಗ್ಗೆ ಹೆಚ್ಚು ಕೆದಕಲು ಹೋಗಿಲ್ಲ. ಅವರು ಒಂದು ವಾರಕ್ಕಿಂತ ಹೆಚ್ಚು ಕಾಲ ಒಂದೇ ಜಾಗದಲ್ಲಿ ಇರುವುದಿಲ್ಲ ಎಂದಷ್ಟೇ ಗೊತ್ತು. ಅವರು ವರ್ಷದಲ್ಲಿ ಆರೇಳು ತಿಂಗಳು ಮೌನವ್ರತದಲ್ಲಿರುತ್ತಾರೆ. ಯೋಗಿ ಅಂತ ಹೆಸರಿಟ್ಟುಕೊಂಡರೂ ಅವರು ಖಾವಿ, ಕೇಸರಿ ಧರಿಸುವುದಿಲ್ಲ. ಅವರು ಜೀನ್ಸ್ ಧರಿಸುತ್ತಾರೆ ಎಂದು ಕೇಳಿದ್ದೇನೆ. ಅವರು ವಜ್ರ, ಗ್ರಾನೈಟ್, ಮಾರ್ಬಲ್ ವ್ಯಾಪಾರ ಮಾಡುತ್ತಾರೆ ಎಂಬುದು ಗೊತ್ತು. ಅವರು ಕೋಟಿ ಕೋಟಿ ಗಳಿಸುತ್ತಾರೆ ಮತ್ತು ಅವನ್ನೆಲ್ಲ ದಾನ ಮಾಡಿಬಿಡುತ್ತಾರೆ.

ನಂತರ ಕೆಲ ಕಾಲ ಹಣವಿಲ್ಲದೇ ಬದುಕು ಸಾಗಿಸುತ್ತಾರೆ. ಮತ್ತೆ ತಮ್ಮ ಉದ್ಯೋಗ ಆರಂಭಿಸಿ, ಹಣ ಗಳಿಸಿ, ಪುನಃ ಗಳಿಸಿದ್ದನ್ನೆಲ್ಲ ಕೊಟ್ಟುಬಿಡುತ್ತಾರೆ. ಅವರ ಜೀವನ ಇದೇ ರೀತಿ ಸಾಗಿ ಬಂದಿದೆ. ಗಳಿಸಿದ್ದನ್ನೆಲ್ಲ ಕೂಡಿಡುವುದಿಲ್ಲ. ಅಲ್ಲಿಗೇ ಖರ್ಚು ಮಾಡಿ ಬರಿದಾಗುತ್ತಾರೆ. ಈ ಕಾರಣದಿಂದ ಅವರಿಗೆ ಯೋಗಿ ಎಂಬ ಹೆಸರು ಬಂದಿದೆಯಾ? ಬಂದಿದ್ದಿರಬಹುದು.

ನಾನಾಗಿ ಅವರಿಗೆ ಫೋನ್ ಮಾಡಿದರೆ ಜಪ್ಪಯ್ಯ ಅಂದರೂ ಎತ್ತುವುದಿಲ್ಲ. ಅವರು ಕರೆ ಮಾಡಿದಾಗ ಮಾತಾಡಬೇಕು. ಅವರು ಯಾವ ನಂಬರನ್ನೂ ಒಂದು ತಿಂಗಳಿಗಿಂತ ಹೆಚ್ಚು ಕಾಲ ಬಳಸುವುದಿಲ್ಲ. ಕೆಲ ಕಾಲ ಮೊಬೈಲ್‌ನ್ನು ಸಹ ಎಸೆದುಬಿಡುತ್ತಾರೆ. ಅವರಿಗೆ ಪತ್ನಿ - ಮಕ್ಕಳು ಇದ್ದಾರಾ ಎಂದು ಕೇಳಲು ನಾನು ಹೋಗಿಲ್ಲ. ಯಾಕೆಂದರೆ ಇಂಥವರ ಜತೆ ಯಾವ ಹೆಂಗಸು ತಾನೇ ಸಂಸಾರ ಮಾಡುತ್ತಾಳೆ?

ಕೆಲ ಸಲ ಫೋನ್ ಮಾಡಿ ಗಂಟೆಗಟ್ಟಲೆ ಮಾತಾಡುತ್ತಾರೆ. There's a fine line between genius and insanity. I have erased this line ಎಂದು ಆಗಾಗ ಹೇಳುತ್ತಾರೆ. ಫೋನ್ ಇಡುವಾಗ ಹುಚ್ಚರ ಮಾತುಗಳನ್ನು ಕೇಳಿ ಮರೆತುಬಿಡಬೇಕು ಅಂತಾರೆ. 'ನಿಮ್ಮನ್ನು ಯಾವಾಗ ಭೇಟಿ ಮಾಡುವುದು?' ಯೋಗಿಜೀ ಅಂತ ಕೇಳಿದರೆ, 'ಕಾಲ ಕೂಡಿ ಬಂದರೆ, ಬೇಡ ಅಂದರೂ ಭೇಟಿ ಆಗುತ್ತೇವೆ' ಅಂತಾರೆ.

ಯೋಗಿಜೀ ಬಗ್ಗೆ ಇನ್ನೇನಾದರೂ ಮಾಹಿತಿ ಬೇಕಿದ್ದರೆ ದಯವಿಟ್ಟು ಕೇಳಿ, ಹೇಳುತ್ತೇನೆ.

ಸಂಗೀತಾ ಭೂಷಣ, (ಇಮೇಲ್ ಮೂಲಕ)

● **ಸಂಪಾದಕರೇ, ನನ್ನ ಮೊಬೈಲ್ ಗೀಳು ವಿಪರೀತವಾಯ್ತು ಅಂತ ನನಗೆ ಮನದಟ್ಟಾಗಿದೆ. ಆದರೂ ಮೊಬೈಲ್ ಬಿಟ್ಟು ಇರಲಾಗುತ್ತಿಲ್ಲ. ನನ್ನ ಈ ಹುಚ್ಚನ್ನು ನಿಲ್ಲಿಸುವುದು ಹೇಗೆ? ನೀವು ನೀಡುವ ಸಲಹೆ ನನ್ನ ಬದುಕನ್ನು ಬದಲಿಸಬಹುದು. ದಯವಿಟ್ಟು ಹೇಳಿ ಪುಣ್ಯ ಕಟ್ಟಿಕೊಳ್ಳಿ.**

- ಸಂಗೀತಾ ಅವರೇ, ನಿಮ್ಮ ಮುಂದೆ ಎರಡು ಆಯ್ಕೆಗಳಿವೆ. ಮೊದಲನೆಯದು, ಈಗಿನ ಸ್ಮಾರ್ಟ್‌ಫೋನನ್ನು ನೀರಿನಲ್ಲಿ ಮುಳುಗಿಸಿಬಿಡುವುದು! (ನಿಮ್ಮ ಬದುಕು ಮುಳುಗುವುದಕ್ಕಿಂತ ಸ್ಮಾರ್ಟ್‌ಫೋನ್ ಮುಳುಗುವುದೇ ವಾಸಿ) ಮತ್ತು ಎರಡನೆಯದು, ಮೊಬೈಲ್ ಇಲ್ಲದೇ ಬದುಕಲು ಸಾಧ್ಯವಿಲ್ಲ ಎಂದು ತೀರ್ಮಾನಿಸಿದರೆ, 1149 ರುಪಾಯಿ ಬೆಲೆ ಬಾಳುವ ನೋಕಿಯಾ105 ಕ್ಲಾಸಿಕ್ ಬೇಸಿಕ್ ಸೆಟ್ಟನ್ನು ಇಟ್ಟುಕೊಳ್ಳುವುದು.

ಇವನ್ನು ಬಿಟ್ಟು ಬೇರೆ ಮಾರ್ಗೋಪಾಯಗಳಿಲ್ಲ, ಇದ್ದರೂ ಅವು ಪರಿಣಾಮಕಾರಿಯಲ್ಲ.ಟ್ರೈ ಮಾಡಿ ನೋಡಿ.

ಭರತ ಶೇಷಾದ್ರಿ, (ಇಮೇಲ್ ಮೂಲಕ)

● **ಭಟ್ರೇ, ನಾನು ಕಳೆದ ಎರಡು ತಿಂಗಳಿನಿಂದ 'ವಿಶ್ವವಾಣಿ'ಯಲ್ಲಿ ಜಪಾನ್ ಬಗ್ಗೆ ನಿಮ್ಮ ಲೇಖನಗಳನ್ನು ಓದುತ್ತಿರುವೆ. ನೀವು ಆ ದೇಶದಲ್ಲಿದ್ದುದು ಕೇವಲ ಒಂದು ವಾರ. ಅಷ್ಟು ಅಲ್ಪಕಾಲದಲ್ಲಿ ಸುಮಾರು ಇನ್ನೂರು ಪುಟಗಳ ಒಂದು ಪುಸ್ತಕಕ್ಕಾಗುವಷ್ಟು ಬರೆದಿದ್ದು ನನಗಂತೂ ಸೋಜಿಗವೇ. ನೀವು ಒಂದು ದೇಶವನ್ನು ನೋಡುವ ಪರಿಯೇ ನನಗೆ ಸೋಜಿಗ. ಇವೆಲ್ಲ ನಿಮಗೆ ಸಾಧ್ಯವಾಗಿದ್ದು ಹೇಗೆ? ದಯವಿಟ್ಟು ತಿಳಿಸಿಕೊಡಿ.**

- ಭರತ್ ಅವರೇ, ನಾವು ಯಾವುದೇ ದೇಶಕ್ಕೆ ಹೋದಾಗ, ಆ ದೇಶವನ್ನು ನೋಡುತ್ತೇವೆ. ಅದರಲ್ಲಿ ಹೆಚ್ಚುಗಾರಿಕೆಯೇನೂ ಇಲ್ಲ. ಆದರೆ ಆ ದೇಶಕ್ಕೆ ಹೋಗುವುದಕ್ಕಿಂತ ಮುನ್ನವೇ 'ನೋಡುವ' ಪ್ರಯತ್ನ ಮಾಡಬೇಕು. ಅಂದರೆ ಒಂದು ದೇಶಕ್ಕೆ ಹೋಗುವುದಕ್ಕಿಂತ ಒಂದು ತಿಂಗಳ ಮುನ್ನವೇ ಆ ದೇಶದ ಬಗ್ಗೆ ತಿಳಿದುಕೊಳ್ಳಲಾರಂಭಿಸಬೇಕು. ಲಭ್ಯವಿರುವ ಪುಸ್ತಕಗಳನ್ನು ಓದಬೇಕು. ಸಾಂದರ್ಭಿಕ ಲೇಖನಗಳನ್ನು ಓದಿಕೊಳ್ಳಬೇಕು. ಸಾಧ್ಯವಾದಷ್ಟು ಮಾಹಿತಿಯನ್ನು ಸಂಗ್ರಹಿಸಬೇಕು.

ಆ ದೇಶದ ಕುರಿತಾದ ಯೂಟ್ಯೂಬ್ ವಿಡಿಯೋಗಳನ್ನು ನೋಡಬೇಕು. ಈ ವಿಷಯದಲ್ಲಿ ಇಂಟರ್ನೆಟ್ ಒಂದನ್ನೇ ಅವಲಂಬಿಸಬಾರದು. ಅಲ್ಲಿಗಿಂತ ಹೆಚ್ಚು ಮಾಹಿತಿ ಸಿಗುವುದು ಆ ದೇಶದ ಕುರಿತಾದ, ಬೇರೆ ಬೇರೆ ಲೇಖಕರ ಪುಸ್ತಕಗಳಲ್ಲಿ. ಈಗಿನ ದಿನಗಳಲ್ಲಿ ಮಾಹಿತಿಯನ್ನು ಸಂಗ್ರಹಿಸುವುದು ಕಷ್ಟವಲ್ಲ. ಆದರೆ ಅವುಗಳನ್ನು ಓದಿ, ಮನನ ಮಾಡಿಕೊಳ್ಳುವುದು, ಅದನ್ನು ಅಂತರಶಿಸ್ತೀಯವಾಗಿ ಜೋಡಿಸುವುದು ಸವಾಲಿನ ಕೆಲಸ. ನಾವು ನೋಡಲು ಹೋಗುವ ದೇಶಕ್ಕೆ ಈಗಾಗಲೇ ಭೇಟಿ ನೀಡಿ ಬಂದ ಒಂದಿಬ್ಬರ ಜತೆ ಒಂದೆರಡು ಗಂಟೆ ಮಾತಿಗೆ ಕೂತರೆ ಅವರು ನೂರಾರು ಹೊಳಹುಗಳನ್ನು ಮತ್ತು ಸ್ಟೋರಿ ಐಡಿಯಾಗಳನ್ನು ಕೊಡುತ್ತಾರೆ. ಅವನ್ನೆಲ್ಲ ಮೆಂಟಲ್ ನೋಟ್ಸ್ ಮಾಡಿಕೊಳ್ಳಬೇಕು. ಆಗ ಸದರಿ ದೇಶದ ಬಗ್ಗೆ ಒಂದಷ್ಟು ಐಡಿಯಾಗಳು ಸಿಗುತ್ತವೆ. ನಮಗೆ ಗೊತ್ತಿಲ್ಲದ ಚಿತ್ರಣ ಮೂಡಲಾರಂಭಿಸುತ್ತಾ ಹೋಗುತ್ತದೆ.

ಯಾರಾದರೂ ಉತ್ತಮ ಸಾಹಿತಿಗಳು, ಪ್ರವಾಸಿ ಲೇಖಕರು, ಚಿಂತಕರು ಆ ದೇಶದ ಬಗ್ಗೆ ಬರೆದ ಪುಸ್ತಕ ಅಥವಾ ಲೇಖನಗಳನ್ನು ಓದಿಕೊಂಡರೆ, ನಮ್ಮ ಗ್ರಹಿಕೆ ಇನ್ನಷ್ಟು ಸುಲಭವಾಗುತ್ತದೆ. ಒಂದು ದೇಶದೊಳಗೆ ಪ್ರವೇಶ ಪಡೆಯುವುದು ಸರಳವಾಗುತ್ತದೆ. ಅಷ್ಟರೊಳಗೆ ನಮ್ಮ ತಲೆಯಲ್ಲಿ ನಾವು ಭೇಟಿ ನೀಡಲಿರುವ ದೇಶದ ಬಗ್ಗೆ ಒಂದು ಬೃಹತ್ ಭೂಮಿಕೆ ಸಿದ್ಧವಾಗಿರುತ್ತದೆ. ಇವು ಒಂದು ದೇಶಕ್ಕೆ ಹೋಗುವುದಕ್ಕಿಂತ ಮುನ್ನ ಮಾಡಿಕೊಳ್ಳಲೇಬೇಕಾದ ಕಸರತ್ತು.

ಇದಾದ ಬಳಿಕ, ಆ ದೇಶದಲ್ಲಿ ಕಾಲಿಡುತ್ತಿದ್ದಂತೆ, ನಮ್ಮ ಗ್ರಹಿಕೆ ಓದಿದ್ದಕ್ಕೂ, ನೋಡಿದ್ದಕ್ಕೂ ತಾಳೆ ಹಾಕಲು ಶುರು ಮಾಡುತ್ತದೆ. ಈ ಹುಡುಕಾಟದಲ್ಲಿ ನಮಗೆ ಹತ್ತಾರು ಹೊಸ ಹೊಸ ವಿಷಯಗಳು ಕಾಣಿಸಿಕೊಳ್ಳತೊಡಗುತ್ತವೆ. ನಾವು ಅಲ್ಲಿಗೆ ಬರುವುದಕ್ಕಿಂತ ಮುನ್ನ ಓದಿದ, ಕೇಳಿದ ಸಂಗತಿಗಳೆಲ್ಲ ನಮ್ಮ ಕಣ್ಣ ಮುಂದೆ ಸಾಕ್ಷ್ಯಗಳಾಗಿ ಗೋಚರಿಸಲಾರಂಭಿಸುತ್ತವೆ. ಅವು ಇನ್ನೂ ಅನೇಕ ಸಂಗತಿಗಳ ಪರಿಚಯ, ದರ್ಶನ ಮಾಡಿಸುತ್ತವೆ.

ಇದು ಒಂಥರಾ ನೆಟ್ ಪ್ರಾಕ್ಟೀಸ್ ಮಾಡಿದ ಮತ್ತು ಮಾಡದ ಆಟಗಾರರ ಮಧ್ಯೆ ಇರುವ ಅಗಾಧ ಅಂತರದಂತೆ. ಏನೂ ಸಿದ್ಧತೆ ಮಾಡಿಕೊಳ್ಳದೇ ದಿಢೀರ್ ಹೋದರೆ, ನಮಗೆ ಎಲ್ಲವನ್ನೂ ಗ್ರಹಿಸಲು ಸಾಧ್ಯವಾಗದೇ ಹೋಗಬಹುದು. ಅದೇ ನಮ್ಮ ಕಣ್ಣು, ಮನಸ್ಸಿಗೆ ಮೊದಲೇ ತರಬೇತಿ ನೀಡಿದರೆ, ಅದು ವರ್ತಿಸುವ ರೀತಿಯೇ ಬೇರೆ.

ನಾನು ಜಪಾನಿಗೆ ಹೋಗುವ ಒಂದು ತಿಂಗಳ ಮುನ್ನ ಇದನ್ನೇ ಮಾಡಿದ್ದು. ನಾನು ಮೊದಲೇ ಮಾಡಿಕೊಂಡ ಟಿಪ್ಪಣಿಗೆ ಅಲ್ಲಿ ನೋಡಿದ್ದನ್ನು ಸಮೀಕರಿಸುವ ಮತ್ತು ಮಾಹಿತಿ ಸಂಗ್ರಹಿಸುವ ಕೆಲಸವನ್ನು ಮಾಡಿದೆ. ಜಪಾನಿನಲ್ಲಿ ಅನೇಕ ವರ್ಷಗಳ ಕಾಲ ಇದ್ದವರ ಸಂಪರ್ಕ, ಸಂಬಂಧ ಬೆಳೆಸಿದೆ. ಅಲ್ಲಿಂದ ಬಂದ ಬಳಿಕ ಅವರ ಜತೆ ನನಗೆ ಬೇಕಾದ ಮಾಹಿತಿ ಪಡೆದೆ. ಅಷ್ಟೇ ಅಲ್ಲ, ಜಪಾನಿನಿಂದ ಬರುವಾಗ ಮತ್ತೆಲ್ಲೂ ಸಿಗದ, ಅಲ್ಲಿ ಮಾತ್ರ ಸಿಗುವ ಕೆಲವು ಪುಸ್ತಕಗಳನ್ನು ಖರೀದಿಸಿ ತೆಗೆದುಕೊಂಡು ಬಂದೆ. ಹೋಗುವ ಮುನ್ನವೇ ಜಪಾನ್ ನನ್ನ ತಲೆಯಲ್ಲಿ ಬೀಜವಾಗಿದ್ದು, ಬರುವ ಹೊತ್ತಿಗೆ ಹೆಮ್ಮರವಾಗಿ ಅರಳಿತ್ತು. ನಂತರ ಬರೆಯುವುದಷ್ಟೇ ಬಾಕಿ ಉಳಿದಿತ್ತು. ಆ ಕೆಲಸವನ್ನು ನಂತರ ಮಾಡಿದೆ, ಅಷ್ಟೇ.

ಇದನ್ನು ಯಾರು ಬೇಕಾದರೋ ಮಾಡಬಹುದು. ಆದರೆ ಈ ಪಟ್ಟುಗಳನ್ನು ಬಿಡಬಾರದು.

ವೀರೇಶ ಕಮತಗಿ, ಅಡಗೂರು

● **ಸಂಪಾದಕರೇ, ನಮ್ಮ ಪತ್ರಕರ್ತ ಸ್ನೇಹಿತರು ನಿಮ್ಮಲ್ಲಿರುವ ಪೆನ್ನುಗಳ ಬಗ್ಗೆ ಚರ್ಚಿಸುತ್ತಾರೆ. ನಿಮ್ಮಲ್ಲಿ ಅಪರೂಪದ ಪೆನ್ನುಗಳ ಸಂಗ್ರಹ ಇದೆಯಂತೆ, ಹೌದಾ? ನೀವು ಇನ್ನೂ ಕಂಪ್ಯೂಟರ್ ಬಳಸದೇ, ಪೆನ್ನಿನಲ್ಲಿಯೇ ಬರೆಯುತ್ತೀರಂತೆ. ನಿಮ್ಮ ಪೆನ್ನು ಸಂಗ್ರಹದ ಬಗ್ಗೆ ಹೇಳಬಹುದಾ?**

-ವೀರೇಶ ಅವರೇ, ನಾನು ಪೆನ್ನುಗಳ ಆರಾಧಕ, ಸಂಗ್ರಹಕನಲ್ಲ. ಒಂದು ಉತ್ತಮ ಪೆನ್ನಿಗೆ ಎಷ್ಟು ದೂರ ಬೇಕಾದರೂ ಹೋಗಬಲ್ಲೆ. ಸುಂದರ ಯುವತಿಯನ್ನು ಒಲಿಸಿಕೊಳ್ಳಲು ಪ್ರಯತ್ನಿಸುವ ಪ್ರಿಯಕರನಂತೆ, ಪೆನ್ನಿನ ವಿಷಯದಲ್ಲಿ ನಾನೂ ಹಾಗೆ. ನನ್ನಲ್ಲಿ ನೀವು ಅಂದುಕೊಂಡ ಪೆನ್ನಿನ ದೊಡ್ಡ ಸಂಗ್ರಹವೇನೂ ಇಲ್ಲ. ಹಿರಿಯ ಪತ್ರಕರ್ತರಾದ ಈಶ್ವರ ದೈತೋಟ ಅವರ ಬಳಿ ಪೆನ್ನುಗಳ ಉತ್ತಮ ಸಂಗ್ರಹವಿದೆ ಮತ್ತು ಅವರು ಆ ಹವ್ಯಾಸಕ್ಕಾಗಿ ಲಿಮ್ಕಾ ಬುಕ್ ಆಫ್ ರೆಕಾರ್ಡ್ಸ್‌ನಲ್ಲೂ ದಾಖಲಾಗಿದ್ದಾರೆ. ಅವರ ಬಳಿ ವೈವಿಧ್ಯಮಯ ಪೆನ್ನುಗಳ ಸಂಗ್ರಹವಿದೆ ಎಂದು ಕೇಳಿದ್ದೇನೆ.

ನನ್ನಲ್ಲಿ ಸಂಖ್ಯಾ ದೃಷ್ಟಿಯಿಂದ ಹೆಚ್ಚು ಪೆನ್ನುಗಳಿಲ್ಲ. ಆದರೆ ಇರುವ ಪೆನ್ನುಗಳೆಲ್ಲವೂ ಅಪರೂಪದ್ದೇ. ಅವೆಲ್ಲ ಒಂದೊಂದು ಕಥೆಯನ್ನು ಹೇಳುತ್ತವೆ. ನನ್ನಲ್ಲಿ ಮೊಂಟ್ ಬ್ಲಾಂಕ್ (ಇದನ್ನು ಬೇರೆ ಮೊಂಟ್ ಬ್ಲಾ ಅಂತ ಉಚ್ಚರಿಸುತ್ತಾರೆ) ಕಂಪನಿಯದ್ದೊಂದೇ ಅನೇಕ ಲಿಮಿಟೆಡ್ ಎಡಿಷನ್ ಪೆನ್ನುಗಳಿವೆ. ಅಮೆರಿಕ ಅಧ್ಯಕ್ಷರಾಗಿದ್ದ ದಿವಂಗತ ಜಾನ್ ಎಫ್ ಕೆನಡಿ, ಖ್ಯಾತ ತಾರೆ ಮರ್ಲಿನ್ ಮನ್ರೋ, ಖ್ಯಾತ ಲೇಖಕಿ ಜೇನ್ ಆಸ್ಟಿನ್, ಪ್ರಸಿದ್ಧ ಪಿಯಾನೋ ವಾದಕ ಬೀಥೋವನ್, ಖ್ಯಾತ ನಟ ಚಾರ್ಲಿ ಚಾಪ್ಲಿನ್, ಪ್ರಸಿದ್ಧ ಸ್ಕಾಟಿಷ್ ಕಾದಂಬರಿಕಾರ-ಕವಿ ರಾಬರ್ಟ್ ಲೂಯಿ ಸ್ಟೀವನ್ಸನ್, ಗುಸ್ತಾವ್ ಕ್ಲಿಂತ್, ಖ್ಯಾತ ಗಾಯಕ ಎಲ್ವಿಸ್ ಪ್ರೆಸ್ಲಿ.... ಹೀಗೆ ಇನ್ನೂ ಹಲವರ ನೆನಪಿನಲ್ಲಿ ಬಿಡುಗಡೆ ಮಾಡಿದ ನಿಯಮಿತ ಆವೃತ್ತಿಯ (ಲಿಮಿಟೆಡ್ ಎಡಿಷನ್), ಯಾವ ಕಾಲಕ್ಕೂ ಸಲ್ಲುವ, ಆಂಟಿಕ್ ಮೌಲ್ಯವುಳ್ಳ ಪೆನ್ನುಗಳಿವೆ.

ಹಾಗೆ ನನ್ನ ಬಳಿ ಕ್ರಾಸ್, ಪಾರ್ಕರ್, ಶೇಅಫರ್, ಅರೋರಾ, ಲಾಮಿ, ಪೇಪರ್ ಮೇಟ್, ಮೊಂಟೆಗ್ರಪ್ಪ, ಪೆಲಿಕನ್ ಮುಂತಾದ ಪ್ರಸಿದ್ಧ ಬ್ರ್ಯಾಂಡುಗಳ ಉತ್ತಮ ಪೆನ್ನುಗಳಿವೆ. ಇವನ್ನು ಸಂಗ್ರಹ ಎನ್ನುವುದಕ್ಕಿಂತ ಆಸ್ತಿ ಎನ್ನಬಹುದು. ಈ ಎಲ್ಲ ಪೆನ್ನುಗಳ ಹಿಂದೆ ಒಂದೊಂದು ಅದ್ಭುತ ಕತೆ ಇದೆ. ಈ ಪೆನ್ನುಗಳ ವಿನ್ಯಾಸ ಮತ್ತು ಮಾಟದ ಬಗ್ಗೆ ಗಂಟೆಗಟ್ಟಲೆ ಮಾತಾಡಬಹುದು.

ಇಷ್ಟಾಗಿಯೂ ನಾನು ಬರೆಯುವುದು ಐವತ್ತು ರುಪಾಯಿ ಬೆಲೆಯ ಪೈಲಟ್ ವಿ-10 ಪೆನ್ನಿನಲ್ಲಿ. ಒಮ್ಮೆಗೆ ಐವತ್ತು-ಅರವತ್ತು ಪೆನ್ನುಗಳನ್ನು ಖರೀದಿಸುತ್ತೇನೆ. ಬರೆದು ಖಾಲಿಯಾದ ಪೆನ್ನುಗಳನ್ನು ನಾನು ಎಸೆಯದೇ ಕಾಪಿಟ್ಟಿದ್ದೇನೆ. ಅಂಥ ಸುಮಾರು ಮೂರು ಸಾವಿರ ಪೆನ್ನುಗಳಿವೆ. ಕೆಲವು ಪೆನ್ನುಗಳು ಮನೆ ಬದಲಿಸುವಾಗ ಕಾಣೆಯಾದವು, ಇನ್ನು ಕೆಲವನ್ನು ನನ್ನ ಪತ್ನಿ ಗೊತ್ತಾಗದೇ (ಹೇಗೂ ಬರೆದು ಖಾಲಿಯಾದ ಪೆನ್ನುಗಳೆಂದು) ಎಸೆದುಬಿಟ್ಟಳು!

ಅಷ್ಟಕ್ಕೂ One book, one pen and one teacher can change the world ಎಂದು ನಂಬಿರುವವನು ನಾನು. ಪೆನ್ನು ಯಾವುದಾದರೇನು, ರೀಫಿಲ್ಲಿನಿಂದಲೂ ಬರೆಯಬಹುದು ಎಂದು ಯಾರಾದರೂ ವಾದಿಸಿದರೆ, ನನ್ನ ತಕರಾರು ಇಲ್ಲ.